# ಸಾಹಿತ್ಯ ಸೌರಭ–೫

## ಪತ್ರಿಕೆ–೫

## ಶಬ್ದಮಣಿದರ್ಪಣ, ಕನ್ನಡ ಭಾಷೆಯ ಸ್ವರೂಪ ಮತ್ತು ಗದ್ಯ ಸೌರಭ

**ಬಿ.ಎ.ಐದನೆಯ ಸೆಮಿಸ್ಟರ್ ಸಿ.ಬಿ.ಸಿ.ಎಸ್. ಕನ್ನಡ ಪಠ್ಯ**

**೨೦೧೮–೧೯ನೇ ಶೈಕ್ಷಣಿಕ ವರ್ಷದಿಂದ ಅನುಷ್ಠಾನಗೊಳಿಸಲು ನಿಗದಿಗೊಳಿಸಿದ ಸಿಬಿಸಿಎಸ್ ಹೊಸಪಠ್ಯ**


ಪ್ರಧಾನ ಸಂಪಾದಕರು

**ಪ್ರೊ. ಅಣ್ಣಮ್ಮ**

ಅಧ್ಯಕ್ಷರು, ಕನ್ನಡ ಅಧ್ಯಯನ ಮಂಡಳಿ

ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಸಂಪಾದಕರು

**ಡಾ. ಎ. ರಘುರಾಂ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ

ಮಹಾರಾಣಿ ಮಹಿಳಾ ಕಾಲೇಜು

ಬೆಂಗಳೂರು – ೧

**ಡಾ. ಮಂಜುಳ ಬಿ. ಎಸ್.**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ

ಶ್ರೀ ಸಿದ್ಧಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜು

ತುಮಕೂರು



**ಪ್ರಸಾರಾಂಗ**

**ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು**

**ಸಾಹಿತ್ಯ ಸೌರಭ–೫**
**ಶಬ್ದಮಣಿದರ್ಪಣ, ಕನ್ನಡ ಭಾಷೆಯ ಸ್ವರೂಪ ಮತ್ತು ಗದ್ಯ ಸೌರಭ**
**ಬಿ.ಎ.ಐದನೆಯ ಸೆಮಿಸ್ಟರ್ ಸಿ.ಬಿ.ಸಿ.ಎಸ್. ಕನ್ನಡ ಪಠ್ಯ**

ಪ್ರಧಾನ ಸಂಪಾದಕರು
**ಪ್ರೊ. ಅಣ್ಣಮ್ಮ**
ಅಧ್ಯಕ್ಷರು, ಕನ್ನಡ ಅಧ್ಯಯನ ಮಂಡಳಿ
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಸಂಪಾದಕರು
**ಡಾ. ಎ. ರಘುರಾಂ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮಹಾರಾಣಿ ಮಹಿಳಾ ಕಾಲೇಜು
ಬೆಂಗಳೂರು – ೧

**ಡಾ. ಮಂಜುಳ ಬಿ. ಎಸ್.**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಶ್ರೀ ಸಿದ್ಧಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜು
ತುಮಕೂರು

ಪ್ರಕಾಶಕರು : **ಪ್ರಸಾರಾಂಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು**

ಪ್ರಥಮ ಮುದ್ರಣ :೨೦೧೮

ಪುಟಗಳು : x + ೧೨೮ = ೧೩೮

ಹಕ್ಕುಗಳು : **ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು**

ಬಳಸಿದ ಕಾಗದ : ೬೦ ಜಿ.ಎಸ್.ಎಮ್

ಬೆಲೆ : ರೂ. /–

ಛಾಯಾಕ್ಷರ ಜೋಡಣೆ : **ಶ್ರೀಧರ್**

ಮುಖಪುಟ ವಿನ್ಯಾಸ :

ಮುದ್ರಣ :

# ಕುಲಪತಿಗಳ ಮಾತು

ತುಮಕೂರು ವಿಶ್ವವಿದ್ಯಾನಿಲಯವು ಹಲವು ಪ್ರಥಮಗಳತ್ತ ದಾಪುಗಾಲಿಟ್ಟಿದೆ. ಪ್ರಸ್ತುತ ೨೦೧೬–೧೭ನೇ ಶೈಕ್ಷಣಿಕ ವರ್ಷದಿಂದ ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕ ವಿದ್ಯಾರ್ಥಿಗಳಿಗೆ ಆಯ್ಕೆ ಆಧಾರಿತ ಕ್ರೆಡಿಟ್ ಪದ್ಧತಿಯನ್ನು ಅಳವಡಿಸಿಕೊಂಡು, ಪಠ್ಯಪುಸ್ತಕ ರಚನೆಗೆ ಚಾಲನೆ ನೀಡಲಾಗಿದೆ. ಸರ್ಕಾರದಿಂದ ಸಿಬಿಸಿಎಸ್ ಶಿಕ್ಷಣ ಪದ್ಧತಿಗೆ ಅನುಮೋದನೆಯೂ ದೊರೆತಿದೆ. ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಎಲ್ಲ ಸ್ನಾತಕ ವಿಷಯಗಳ ಪಠ್ಯಗಳನ್ನು ಅಧ್ಯಾಪಕರು ಉತ್ಸಾಹದಿಂದ, ಶ್ರಮಪಟ್ಟು ರಚಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರು, ಮಂಡಲಿಯ ಅಧ್ಯಕ್ಷರಾದ ಪ್ರೊ. ಅಣ್ಣಮ್ಮನವರ ಪ್ರಧಾನ ಸಂಪಾದಕತ್ವದಲ್ಲಿ ಪಠ್ಯಪುಸ್ತಕಗಳನ್ನು ಡಾ. ಎ. ರಘುರಾಂ ಮತ್ತು ಡಾ. ಮಂಜುಳ ಬಿ.ಎಸ್. ಬಹಳ ನೈಪುಣ್ಯದಿಂದ ಸಿದ್ಧಪಡಿಸಿಕೊಟ್ಟಿದ್ದಾರೆ.

ಇಲ್ಲಿ ಸಂಕಲನವಾದ ಎಲ್ಲ ಲೇಖನಗಳೂ ಸಕಾಲಿಕವಾಗಿದ್ದು, ವಿದ್ಯಾರ್ಥಿಗಳು ಸತತ ಅಭ್ಯಾಸ ನಿರತರಾಗಲು ಪ್ರೇರೇಪಿಸುವಂತಿವೆ. ಹಾಗಾಗಿ ಈ ಪುಸ್ತಕಗಳು ವಿದ್ಯಾರ್ಥಿಗಳಿಗೆ ಹೆಚ್ಚು ಉಪಯುಕ್ತವಾಗಿವೆ ಎನ್ನುವ ನಂಬಿಕೆ ನನ್ನದು. ಈ ಪಠ್ಯಗಳನ್ನು ಸಕಾಲಕ್ಕೆ ಸಿದ್ಧಪಡಿಸಲು ನೆರವಾದ ಎಲ್ಲ ಅಧ್ಯಾಪಕರಿಗೂ ತುಮಕೂರು ವಿಶ್ವವಿದ್ಯಾನಿಲಯ ಆಭಾರಿಯಾಗಿದೆ.

**ಪ್ರೊ. ವೈ. ಎಸ್. ಸಿದ್ಧೇಗೌಡ**
ಕುಲಪತಿಗಳು
ತುಮಕೂರು ವಿಶ್ವವಿದ್ಯಾನಿಲಯ

## ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

## ಕನ್ನಡ ಅಧ್ಯಯನ ಮಂಡಳಿ

ಡಾ. ಅಣ್ಣಮ್ಮ – ಅಧ್ಯಕ್ಷರು

ಡಾ. ಮಂಜುಳ ಬಿ. ಎಸ್. – ಸದಸ್ಯರು

ಶ್ರೀ ಟಿ. ಎಸ್. ಕಾಂತರಾಜಯ್ಯ – ಸದಸ್ಯರು

ಡಾ. ಎ. ರಘುರಾಂ – ಸದಸ್ಯರು

ಡಾ. ಗೀತಾ ವಸಂತ – ಸದಸ್ಯರು

# ಅಧ್ಯಕ್ಷರ ನುಡಿ

ಕನ್ನಡ ಭಾಷೆಗೆ ಸುಮಾರು ೨೦೦೦ ವರ್ಷಗಳ ಇತಿಹಾಸವಿದೆ. ಕನ್ನಡ ಸಾಹಿತ್ಯವನ್ನು ಅಭ್ಯಸಿಸಿದ ಎಲ್ಲರೂ ಕವಿರಾಜ ಮಾರ್ಗವನ್ನು ಪ್ರಥಮ ಕಾವ್ಯವೆಂದು ಒಪ್ಪಿದ್ದಾರೆ. ಆದಿ ಕವಿ ಪಂಪನಿಂದ ಆರಂಭವಾದ ಕನ್ನಡ ಸಾಹಿತ್ಯ ಹಾಗೂ ಮಧ್ಯಕಾಲೀನ ಕನ್ನಡ ಸಾಹಿತ್ಯದವರೆಗೂ ಒಂದೇ ರೀತಿ, ಶೈಲಿಯಿದ್ದದ್ದು ನಿಧಾನವಾಗಿ ಪ್ರವಹಿಸಿ ಇಂದು ಕನ್ನಡ ಸಾಹಿತ್ಯ ವಿಶ್ವಮಟ್ಟದಲ್ಲಿ ಮಾನ್ಯತೆ ಗಳಿಸಿದೆ. ಶಾಸ್ತ್ರೀಯ ಭಾಷೆಯ ಸ್ಥಾನಮಾನ ಗಳಿಸಿಕೊಂಡಿದೆ.

ಪ್ರಾದೇಶಿಕ ಭಾಷೆಯಾಗಿಯೂ ಮನ್ನಣೆ ಪಡೆದು ಬೆಳೆಯುತ್ತಿರುವ ಕನ್ನಡ ಭಾಷೆಯ ಸಾಹಿತ್ಯ, ವಿಚಾರ, ವಿಮರ್ಶೆಯಿಂದ ಸಮೃದ್ಧವಾಗಿ ಕಥೆ, ಕಾದಂಬರಿ, ಕವನ, ನಾಟಕ, ಕಥನಕವನ, ಕಿರುಕಾದಂಬರಿ ಹೀಗೆ ಎಲ್ಲ ಪ್ರಕಾರಗಳಲ್ಲಿಯೂ ನಿರಂತರ ಬೆಳವಣಿಗೆಯನ್ನು ಪಡೆದು ಸಾಗಿದೆ. ಆಧುನಿಕೋತ್ತರ ಪ್ರಸ್ತುತ ಯುಗದಲ್ಲಿ ಕನ್ನಡ ಭಾಷೆಗೆ ಗಣಕ ಯಂತ್ರದ ಮೂಲಕವೂ ಸಾಕಷ್ಟು ಕೊಡುಗೆ ಸಿಕ್ಕಿದೆ. 'ಗೂಗಲ್' (ವೆಬ್‌ಸೈಟ್‌ನಲ್ಲಿ) ಜಾಲತಾಣದಲ್ಲಿಯೂ ಕನ್ನಡಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಅನೇಕ ವಿಷಯಗಳನ್ನು ಪಡೆದುಕೊಳ್ಳಬಹುದಾಗಿದೆ. ಇಷ್ಟೆಲ್ಲ ಹೆಮ್ಮೆಯಿಂದ ಮೈದುಂಬಿ ಪ್ರವಹಿಸುತ್ತಿರುವ ಕನ್ನಡ ಸಾಹಿತ್ಯ ಎಂಟು ಜ್ಞಾನಪೀಠ ಪ್ರಶಸ್ತಿಯ ಗರಿಯನ್ನು ತನ್ನ ಮುಡಿಗೇರಿಸಿಕೊಂಡಿದೆ. ಕನ್ನಡಮ್ಮ ಎನ್ನುವುದು ಬರಿಯ ಮಾತಾಗದೆ, ಸಾಧನೆಯ ಶಿಖರವಾಗಿದೆ.

೨೦೧೬–೧೭ನೇ ಶೈಕ್ಷಣಿಕ ವರ್ಷಕ್ಕೆ ತುಮಕೂರು ವಿಶ್ವವಿದ್ಯಾನಿಲಯದ ಪದವಿ ವಿದ್ಯಾರ್ಥಿಗಳಿಗೆ ಆಯ್ಕೆ ಆಧಾರಿತ ಕ್ರೆಡಿಟ್ ಪದ್ಧತಿ (Choice Based Credit system)ಯನ್ನು ಅಳವಡಿಸಿಕೊಳ್ಳುವ ಮೂಲಕ ತುಮಕೂರು ವಿ.ವಿ. ಶೈಕ್ಷಣಿಕ ಸುಧಾರಣೆ ತರುತ್ತಿರುವುದು ಹೆಮ್ಮೆಯ ವಿಚಾರವಾಗಿದೆ. ಸರ್ಕಾರದಿಂದ ಸಿ.ಬಿ.ಸಿ.ಎಸ್. ಶಿಕ್ಷಣ ಪದ್ಧತಿಗೆ ಅನುಮೋದನೆ ದೊರೆತದ್ದು ಸಹ ಸಂತಸದ ಸಂಗತಿಯೇ. ಆಯ್ಕೆ ಆಧಾರಿತ ಕ್ರೆಡಿಟ್ ಪದ್ಧತಿಗೆ ಅನುಗುಣವಾಗಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಕಲಿಕೆಯ ಅವಕಾಶಗಳನ್ನು ಕಲ್ಪಿಸಿಕೊಡುವ ಸಲುವಾಗಿ ಎಲ್ಲ ವಿಷಯಗಳ ಸ್ನಾತಕ ಪಠ್ಯಕ್ರಮಗಳನ್ನು ನನ್ನ ನೇತೃತ್ವದಲ್ಲಿ ಅಧ್ಯಯನ ಮಂಡಳಿಯ ಸದಸ್ಯರು ಆಯ್ಕೆಮಾಡಿದ್ದಾರೆ.

ಈ ಹಂತದಲ್ಲಿ ನನಗೆ ದೊರಕಿದ ಆದೇಶದಂತೆ, ಸಮಿತಿಯ ಸಹಕಾರ ಪಡೆದು, ಅನೇಕ ಸಭೆ ನಡೆಸಿ, ಚರ್ಚಿಸಿ ಸದಸ್ಯರ ತೀರ್ಮಾನದಂತೆ ಪ್ರಥಮ, ದ್ವಿತೀಯ, ತೃತೀಯ, ಚತುರ್ಥ, ಪಂಚಮ ಸೆಮಿಸ್ಟರ್‌ನ ಬಿ.ಎ. ಐಚ್ಛಿಕ ಬಿ.ಎ., ಬಿ.ಎಸ್ಸಿ., ಬಿ.ಕಾಂ, ಬಿ.ಬಿ.ಎಂ, ಬಿ.ಎಫ್.ಎ, ಬಿ.ವಿ.ಎ., ಪಠ್ಯಗಳನ್ನು ಶ್ರಮವಹಿಸಿ ಆಲೋಚನೆ ಮಾಡುವುದರ ಮೂಲಕ ಕಾರ್ಯರೂಪಕ್ಕೆ ತಂದಿದ್ದೇವೆ.

ಈ ಪಠ್ಯ ೨೦೧೮–೧೯ನೇ ಸಾಲಿಗೆ ಚಾಲನೆಗೆ ಬರುತ್ತದೆ. ಈ ಸದವಕಾಶದಲ್ಲಿ ಭಾಗಿಗಳಾದ ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞಳಾಗಿದ್ದೇನೆ.

ಈ ಪಠ್ಯಪುಸ್ತಕದ ಯಶೋಗಾಥೆಯ ಹಿಂದೆ ನಮ್ಮ ತುಮಕೂರು ವಿಶ್ವವಿದ್ಯಾನಿಲಯದ ಸನ್ಮಾನ್ಯ ಕುಲಪತಿಗಳೂ, ಸಾಹಿತಿಯೂ ಆಗಿರುವ ಪ್ರೊ. ವೈ. ಎಸ್. ಸಿದ್ಧೇಗೌಡ ಅವರ ಕಾಳಜಿ ಎದ್ದುಕಾಣುತ್ತದೆ. ಬಹು ತಾಳ್ಮೆಯಿಂದ, ಕಾಳಜಿಯಿಂದ ಅಧ್ಯಾಪಕರನ್ನು ಆಹ್ವಾನಿಸಿ, ಪಠ್ಯಕ್ರಮದ ಬಗ್ಗೆ ಚರ್ಚಿಸಿ, ಸಮಾಲೋಚಿಸಿ, ಹೆಚ್ಚಿನ ಅರಿವು ಮೂಡಿಸಿದ್ದಾರೆ. ಪ್ರತಿ ಹಂತದಲ್ಲಿಯೂ ನಮ್ಮನ್ನು ತಿದ್ದಿ, ನಮ್ಮ ಕೆಲಸವನ್ನು ಶ್ಲಾಘಿಸಿದ್ದಾರೆ. ಎಲ್ಲ ಪಠ್ಯ ಪುಸ್ತಕಗಳು ಸಕಾಲಕ್ಕೆ ಮುದ್ರಣವಾಗಿ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳ ಕೈಸೇರುವಂತೆ ಮಾಡಿದ ಸನ್ಮಾನ್ಯ ಕುಲಪತಿಗಳಾದ ಪ್ರೊ. ವೈ. ಎಸ್. ಸಿದ್ಧೇಗೌಡ ಅವರಿಗೆ ಅನಂತ ಕೃತಜ್ಞತೆಗಳು.

ಈ ಸಂದರ್ಭದಲ್ಲಿ ನಮಗೆ ಸೂಕ್ತವಾದ ಮಾರ್ಗದರ್ಶನ ಮಾಡಿ, ಪಠ್ಯಪುಸ್ತಕ ಪ್ರಕಟಿಸಲು ಪ್ರೋತ್ಸಾಹಕೊಟ್ಟು ನೆರವಾದ ಸನ್ಮಾನ್ಯ ಕುಲಸಚಿವರಾದ ಪ್ರೊ. ಬಿ. ಎಸ್. ಗುಂಜಾಳ ಅವರ ಸಹಕಾರ ಅವಿಸ್ಮರಣೀಯ. ಅವರಿಗೆ ಅಧ್ಯಯನ ಮಂಡಳಿ ಪರವಾಗಿ ಕೃತಜ್ಞತೆಗಳು.

ಸಿಬಿಸಿಎಸ್ ಪಠ್ಯಕ್ರಮ ರೂಪಿಸುವ ಸಂದರ್ಭದಲ್ಲಿ ಹಾಜರಿದ್ದು, ಸಕ್ರಿಯವಾಗಿ ಕೆಲಸದಲ್ಲಿ ತೊಡಗಿಸಿಕೊಂಡಿದ್ದ ಸ್ನಾತಕ ಅಧ್ಯಯನ ಮಂಡಳಿಯ ಎಲ್ಲ ಅಧ್ಯಾಪಕರಿಗೂ, ಕರಡು ತಿದ್ದಿದ ಡಾ. ನಟರಾಜರವರಿಗೂ ಪಠ್ಯಪುಸ್ತಕವನ್ನು ಅಂದವಾಗಿ ಅಕ್ಷರೀಕರಣ ಮಾಡಿದ ಶ್ರೀಯುತ ಆರ್. ಎಸ್. ಶ್ರೀಧರ್ ಅವರಿಗೂ ನನ್ನ ನಮನಗಳು.

**ಪ್ರೊ. ಅಣ್ಣಮ್ಮ**
ಅಧ್ಯಕ್ಷರು, ಕನ್ನಡ ಅಧ್ಯಯನ ಮಂಡಳಿ
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

# ಪ್ರಸ್ತಾವನೆ

ಐದನೆಯ ಸೆಮಿಸ್ಟರ್ ಐಚ್ಛಿಕ ವಿದ್ಯಾರ್ಥಿಗಳಿಗಾಗಿ ಸಿದ್ಧಪಡಿಸಿದ ಪಠ್ಯಪುಸ್ತಕವಿದು. ಪತ್ರಿಕೆ–೫ 'ಶಬ್ದಮಣಿದರ್ಪಣ, ಕನ್ನಡ ಭಾಷೆಯ ಸ್ವರೂಪ ಮತ್ತು ಗದ್ಯ ಸೌರಭ' ಎನ್ನುವ ಶೀರ್ಷಿಕೆಯನ್ನು ಹೊಂದಿದೆ. ಕೇಶಿರಾಜನ 'ಶಬ್ದಮಣಿದರ್ಪಣ' ಪ್ರಾಚೀನ ಕನ್ನಡ ವ್ಯಾಕರಣಗಳಲ್ಲೊಂದು. ಪ್ರಾಚೀನ ವ್ಯಾಕರಣ ಪರಂಪರೆಯ ಲೇಖನವು ಕನ್ನಡ ವ್ಯಾಕರಣ ಪರಂಪರೆಯನ್ನು ಸಂಕ್ಷಿಪ್ತವಾಗಿ ಪರಿಚಯಿಸುತ್ತದೆ. ಇದು ಕೇಶಿರಾಜನ 'ಶಬ್ದಮಣಿದರ್ಪಣ'ಕ್ಕೆ ಪೂರಕ ಅಧ್ಯಯನವಾಗಿದೆ. ಇಲ್ಲಿ ಸಂಗ್ರಹಿಸಿರುವ ಶಬ್ದಮಣಿದರ್ಪಣ ಸೂತ್ರಗಳನ್ನು ಡಾ. ಡಿ.ಎಲ್. ನರಸಿಂಹಾಚಾರ್ ಅವರು ಸಂಪಾದಿಸಿರುವ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ. 'ಕನ್ನಡ ಭಾಷೆಯ ಸ್ವರೂಪ' ಎನ್ನುವ ಭಾಗದಲ್ಲಿ ಭಾಷೆಗೆ ಸಂಬಂಧಿಸಿದ ಕೆಲವು ಸಿದ್ಧಾಂತಗಳನ್ನು ಪರಿಚಯಿಸುವ ಉದ್ದೇಶವಿದೆ. 'ಗದ್ಯ ಸೌರಭ' ಎನ್ನುವ ಭಾಗದಲ್ಲಿ ಕೆಲವು ಪ್ರಾಚೀನ ಕತೆಗಳನ್ನು ಸಂಗ್ರಹಿಸಲಾಗಿದೆ. ವಿದ್ಯಾರ್ಥಿಗಳು ಈ ಮೂಲಕ ಕನ್ನಡ ಭಾಷೆ ಮತ್ತು ವ್ಯಾಕರಣದ ಬಗ್ಗೆ ಸಾಕಷ್ಟು ತಿಳಿವಳಿಕೆಯನ್ನು ಪಡೆಯುತ್ತಾರೆ ಎನ್ನುವ ನಂಬಿಕೆ ನಮ್ಮದು. ಈಗಾಗಲೇ ಕಾವ್ಯ ಸೌರಭ–೧, ಕಾವ್ಯ ಸೌರಭ–೨, ಕಾವ್ಯ ಸೌರಭ–೩, ಕಾವ್ಯ ಸೌರಭ–೪ ಪುಸ್ತಕಗಳ ಮೂಲಕ ಸಾಕಷ್ಟು ತಿಳಿವಳಿಕೆಯನ್ನು ಪಡೆದಿದ್ದಾರೆ. ಸಂಶೋಧನಾತ್ಮಕ ನಡೆಯನ್ನು ರೂಪಿಸಿಕೊಳ್ಳಲು ಇದು ಸಹಾಯ ಮಾಡಬೇಕೆಂದು ನಮ್ಮ ಆಶಯ. ಅಧ್ಯಾಪಕರು, ವಿದ್ಯಾರ್ಥಿಗಳು, ಈ ದಿಸೆಯಲ್ಲಿ ನಮ್ಮ ಆಲೋಚನೆಗಳನ್ನು ಗಟ್ಟಿಗೊಳಿಸಲು ಸಹಕರಿಸುತ್ತಾರೆ ಎಂದು ನಂಬಿದ್ದೇವೆ.

ಈ ಪಠ್ಯ ಪುಸ್ತಕವನ್ನು ಸಿದ್ಧಪಡಿಸಲು ನಮಗೆ ಅವಕಾಶ ನೀಡಿದ ಮಾನ್ಯ ಕುಲಪತಿಗಳಿಗೆ, ಕುಲಸಚಿವರಿಗೆ, ಕನ್ನಡ ಅಧ್ಯಯನ ಮಂಡಳಿಯ ಅಧ್ಯಕ್ಷರು, ಸದಸ್ಯರು, ಕಮ್ಮಟದಲ್ಲಿ ಪಾಲ್ಗೊಂಡು ಸೂಕ್ತ ಸಲಹೆಗಳನ್ನು ನೀಡಿದ ಅಧ್ಯಾಪಕರಿಗೆ, ಈ ಪಠ್ಯವನ್ನು ಅಭ್ಯಾಸ ಮಾಡಲು ತೊಡಗುವ ವಿದ್ಯಾರ್ಥಿಗಳಿಗೆ ನಮ್ಮ ಕೃತಜ್ಞತೆಗಳು.

**ಡಾ. ಎ. ರಘುರಾಂ**
**ಡಾ. ಬಿ. ಎಸ್. ಮಂಜುಳ**
ಸಂಪಾದಕರು

**ತುಮಕೂರು ವಿಶ್ವವಿದ್ಯಾನಿಲಯ**
**ಬಿ.ಎ. ಐದನೆಯ ಸೆಮಿಸ್ಟರ್ ಐಚ್ಛಿಕ ಕನ್ನಡ ಪಠ್ಯ**
**೨೦೧೮–೧೯ನೇ ಶೈಕ್ಷಣಿಕ ವರ್ಷದಿಂದ ಅನುಷ್ಠಾನಗೊಳಿಸಲು ನಿಗದಿಗೊಳಿಸಿದ**
**ಸಿಬಿಸಿಎಸ್ ಹೊಸಪಠ್ಯ**

## ಸಾಹಿತ್ಯಸೌರಭ–೫
## ಪತ್ರಿಕೆ–೫
## ಶಬ್ದಮಣಿದರ್ಪಣ, ಕನ್ನಡ ಭಾಷೆಯ ಸ್ವರೂಪ ಮತ್ತು ಗದ್ಯ ಸೌರಭ

**ಪತ್ರಿಕೆ–೫** **೭೫ ಗಂಟೆಗಳು**

# ಪರಿವಿಡಿ

**ಭಾಗ–೧**

**ಶಬ್ದಮಣಿದರ್ಪಣ (ಆಯ್ದ ಸೂತ್ರಗಳು) ೩೦ ಗಂಟೆಗಳು ೩೫ ಅಂಕಗಳು**
**(ವಾರಕ್ಕೆ ೨ ಗಂಟೆ)**

೧. ಶಬ್ದಮಣಿದರ್ಪಣ (ಆಯ್ದ ಸೂತ್ರಗಳು) ೧–೨೫

**ಭಾಗ–೨**
**ಕನ್ನಡ ಭಾಷೆಯ ಸ್ವರೂಪ**

**೩೦ ಗಂಟೆಗಳು ೩೫ ಅಂಕಗಳು**
(ವಾರಕ್ಕೆ ೨ ಗಂಟೆ)

೧. ಭಾಷೆ ಎಂದರೇನು? ಸ್ವರೂಪ ಲಕ್ಷಣಗಳು ೨೬
೨. ಭಾಷಾ ವರ್ಗೀಕರಣದ ಮೂಲತತ್ತ್ವಗಳು:
ಐತಿಹಾಸಿಕ, ಜನಾಂಗಿಕ, ಭೌಗೋಳಿಕ, ವಾಂಶಿಕ,
ರಾಚನಿಕ, ವರ್ಗೀಕರಣ. ೪೦
೩. ವ್ಯಕ್ತಿ ಭಾಷೆ ಮತ್ತು ಉಪ ಭಾಷೆ ಇವುಗಳ ಪರಸ್ಪರ ಸಂಬಂಧ ೭೭
೪. ಭಾಷೆಯ ಬೆಳವಣಿಗೆ : ಭಾಷಾ ವ್ಯತ್ಯಾಸ ೮೮

## ಭಾಗ–೩
# ಗದ್ಯ ಸೌರಭ

**೧೫ ಗಂಟೆಗಳು** **೨೦ ಅಂಕಗಳು** (ವಾರಕ್ಕೆ ೧ ಗಂಟೆ)


೧. ಕಾರ್ತೀಕ ಋಷಿಯ ಕತೆ ೧೦೪

೨. ಶ್ರೀಮತಿ ಸ್ವಯಂವರ ೧೦೮

೩. ಎರಡು ಗಿಳಿಗಳ ಕಥೆ ೧೧೩

ಟಿಪ್ಪಣಿಗಳು ೧೨೦


**ಅನುಬಂಧಗಳು**


೧. ಮಾದರಿ ಪ್ರಶ್ನೆಪತ್ರಿಕೆ ಸ್ವರೂಪ ೧೨೫

೨. ಪಠ್ಯ ಬೋಧನಾ ಅವಧಿ, ಪರೀಕ್ಷಾ ಅವಧಿ ಮತ್ತು ಅಂಕಗಳು ೧೨೭

೩. ಪರಾಮರ್ಶನ ಗ್ರಂಥಗಳು ೧೨೮

ಕೇಶಿರಾಜನ

# ಶಬ್ದಮಣಿದರ್ಪಣಂ

ಆಯ್ದ ಭಾಗಗಳು

**ಸಂಪಾದಕರು: ಡಾ. ಡಿ.ಎಲ್. ನರಸಿಂಹಾಚಾರ್**

ಸೂತ್ರಂ॥ **ಶ್ರೀವಾಗ್ದೇವಿಗೆ ಶಬ್ದಿ**
**ನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳು**
**ದ್ಭಾವಿಪ ನಿರ್ಮಳಮೂರ್ತಿಗಿ**
**ಳಾವಂದ್ಯೆಗೆ ಶಾಸ್ತ್ರ ಮುಖದೊಳವನತನಪ್ಪೆಂ** ೧

ಟೀಕು ॥ ಆ ಆ ಇಂದ್ರಿಯದ–ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣಂಗಳೆಂಬ ಸರ್ವೇಂದ್ರಿಯಂಗಳ; ವಿಷಯಮಂ–ಶಬ್ದ, ಸ್ಪರ್ಶ, ರೂಪ, ರಸ, ಗಂಧಂಗಳೆಂಬ ಸಮಸ್ತ ವಿಷಯಂಗಳಂ; ಶ್ರೋತ್ರದೊಳ್–ಶ್ರೋತ್ರೇಂದ್ರಿಯಮೊಂದಱಲ್ಲಿಯೆ; ಶಬ್ದದಿಂ–ಶಬ್ದದಿಂದ; ಉದ್ಭಾವಿಪ–ಅಭಿವ್ಯಕ್ತಮಾಗಿ ಅಱೆಯಿಸುವ; ನಿರ್ಮಲಮೂರ್ತಿಗೆ–ವಿಮಲ ಸ್ವರೂಪಿಯಾದ; ಇಳಾವಂದ್ಯೆಗೆ–ಭೂಜನದಿಂದೆ ವಂದಿಸಿಕೊಂಬಳಾದ; ಶ್ರೀ–ಐಶ್ವರ್ಯೋಪಲಕ್ಷಿತೆಯಾದ; ವಾಗ್ದೇವಿಗೆ–ವಾಕ್ಕೆಂಬ ದೇವಿಗೆ; ಶಾಸ್ತ್ರಮುಖದೊಳ್–ಶಬ್ದಶಾಸ್ತ್ರ ಪ್ರಾರಂಭದಲ್ಲಿ; ಅವನತಂ–ನಮಸ್ಕರಿಸುವಾತಂ; ಅಪ್ಪೆಂ–ಆಗುವೆಂ.

ವೃತ್ತಿ–ಕಾಂತಿಯೆಂಬ ಗುಣದೊಳನ್ವಿತೆಯಪ್ಪ ವಾಕ್ಕೆಂಬ ದೇವಿಗೆ ಪಂಚೇದ್ರಿಯಂಗಳ ವಿಷಯಮಪ್ಪ ಶಬ್ದಸ್ಪರ್ಶರೂಪರಸಗಂಧಂಗಳೊಳ್ಪಂ ಶ್ರೋತ್ರೇಂದ್ರಿಯಮೊಂದಱೊಳೆ ಶಬ್ದಮುಖದಿನಭಿವ್ಯಕ್ತಿಯಂ ಮಾಟ್ಪ ವಿಮಳಸ್ವರೂಪೆಗೆ ಭುವನಸ್ತುತೆಗೆ ಶಾಸ್ತ್ರಮುಖದೊಳ್ ನಮಸ್ಕರಿಸುವೆಂ.

ಸೂತ್ರಂ ॥ **ಕವಿಸುಮನೋಭಾಣನ ಯಾ**
**ದವಕಟಕಾಚಾರ್ಯನೆಸೆವ ದೌಹಿತ್ರನೆನಾಂ**
**ಕವಿಕೇಶವನೆಂ ಯೋಗಿ**
**ಪ್ರವರ ಚಿದಾನಂದ ಮಲ್ಲಿಕಾರ್ಜುನ ಸುತನೆಂ** ೨

ಸೂತ್ರಂ ॥ **ಗುಣಮಮರೆ ಶಬ್ದಮಣಿದ**
**ರ್ಪಣನಾಮಮನಿಟ್ಟು ನೆಱೆಯೆ ಕರ್ಣಾಟಕ ಲ**

**ಕ್ಷಣಶಬ್ದ ಶಾಸ್ತ್ರಮಂ ಲಾ**
**ಕ್ಷಣಿಕರ್ ಪೇಟೆಂದು ಬೆಸಸೆ ಬಗೆವುಗೆ ಪೇೞ್ವಂ** ೩

ಟೀಕು ॥ ಯಾದವ–ಯದುಕುಲದ ಕ್ಷತ್ರಿಯರ; ಕಟಕ–ಸಮೂಹಕ್ಕೆ; ಆಚಾರ್ಯರ–ಗುರುವಾದ; ಕವಿಸುಮನೋಬಾಣನ–ಸುಮನೋಬಾಣನೆಂಬ ಕವೀಶ್ವರನ; ಎಸೆವ ದೌಹಿತ್ರನೆಂ–ಶೋಭಿಸುವ ಮಗಳ ಮಗನಾದ; ಯೋಗಿ–ಯೋಗಿಗಳಲ್ಲಿ; ಪ್ರವರ–ಅತ್ಯಂತ ಶ್ರೇಷ್ಠನಾದ; ಚಿದಾನಂದ ಮಲ್ಲಿಕಾರ್ಜುನ–ಜ್ಞಾನಾನಂದಮುಳ್ಳ ಮಲ್ಲಿಕಾರ್ಜುನನ; ಸುತನೆಂ–ಮಗನಾದ; ಆಂ–ಶಾಸ್ತ್ರಕಾರನಾದ ನಾಂ; ಕವಿ ಕೇಶವನೆಂ–ಕೇಶಿರಾಜ ಕವೀಶ್ವರಂ.

ಟೀಕು ॥ ಗುಣಂ–ಶಬ್ದಸಾಮರ್ಥ್ಯವೆಂಬ ಪೆಸರಂ; ಇಟ್ಟು–ಕೊಟ್ಟು; ಶಬ್ದಮಣಿದರ್ಪಣನಾಮಮಂ–ಶಬ್ದಮಣಿದರ್ಪಣವೆಂಬ ಪೆಸರು; ಇಟ್ಟು–ಕೊಟ್ಟು; ನೆಱೆಯೆ–ಪೆರ್ಚುಗೆಯಾಗೆ; ಕರ್ಣಾಟಕ–ಕನ್ನಡಕ್ಕೆ; ಲಕ್ಷಣ–ಲಕ್ಷಣವಾದ; ಶಬ್ದ ಶಾಸ್ತ್ರಮಂ–ವ್ಯಾಕರಣಶಾಸ್ತ್ರಮಂ; ಲಾಕ್ಷಣಿಕರ್–ಲಕ್ಷಣಾಚಾರ್ಯರು; ಪೇಟೆಂದು–ಹೇಳೆಂದು; ಬೆಸಸೆ–ನಿರೂಪಿಸೆ; ಬಗೆವುಗೆ–ಮನಂಬುಗೆ; ಪೇೞ್ವೆಂ–ಹೇಳ್ವೆಂ.

ವೃತ್ತಿ –ಯಾದವಕಟಕೋಪಾಧ್ಯಾಯನಪ್ಪ ಸುಮನೋಬಾಣನ ಮಗಳ ಮಗನೆಂ ಯೋಗವಲ್ಲಭನಪ್ಪ ಮಲ್ಲಿಕಾರ್ಜುನದೇವಸುತನೆನಾಂ ಕೇಶಿರಾಜ ಕವಿಯೆನಾಂ ಶಬ್ದ ಸಾಮರ್ಥ್ಯಮಮರೆ ವಿಸ್ತರದಿಂ ಕರ್ಣಾಟಕ ವ್ಯಾಕರಣಮಂ ಶಬ್ದಮಣಿದರ್ಪಣವೆಸರನಿಟ್ಟು ಲಕ್ಷಣಾ ಚಾರ್ಯರ್ ಪೇಟೆಂದು ಬೆಸಸೆ ಬಗೆಗೆ ಬರ್ಪಂತು ಮನಂಬುಗೆ ಪೇೞ್ವೆಂ.

ಸೂತ್ರಂ ॥ **ಅವಧರಿಪುದು ವಿಬುಧರ್ ದೋ**
**ಷವಿದಱೊಳೇನಾನುಮುಳ್ೞೊಡಂ ಪ್ರಿಯದಿಂ ತಿ**
**ರ್ದುವುದು ಗುಣಯುಕ್ತಮುಂ ದೋ**
**ಷವಿದೂರಮುಮಾಗೆ ಮೆಚ್ಚಿ ಕೈಕೊಳ್ವುದಿದಂ** ೪

ಟೀಕು ॥ ಇದಂ–ಈ ಶಬ್ದಮಣಿದರ್ಪವಂ; ವಿಬುಧರ್–ವಿದ್ವಾಂಸರ್; ಅವದರಿಪುದು–ಕೇಳ್ವುದು; ಇದಱೊಳ್–ಈ ಶಬ್ದಮಣಿದರ್ಪಣದಲ್ಲಿ; ದೋಷಂ–ಅಷ್ಟಾದಶ ದೋಷಂ; ಏನಾನುಂ–ಎತ್ತಾನುಂ; ಉಳ್ೞೊಡಂ–ಉಂಟಾದೊಡೆಯುಂ; ಪ್ರಿಯದಿಂ–ಪ್ರೀತಿಯಿಂದೆ; ತಿರ್ದುವುದು–ನೇರಿತ್ತಂ ಮಾಡುವುದು; ಗುಣಯುಕ್ತಮುಂ–ಶಬ್ದಸಾಮರ್ಥ್ಯವೆಂಬ ಗುಣದೊಡನೆ ಕೂಡಿದುದುಂ; ದೋಷವಿದೂರಮುಂ–ದೋಷರಹಿತಮಾದುದುಂ; ಆಗ–ಆಗಲಾಗಿ; ಮೆಚ್ಚಿ–ಒಡಂಬಟ್ಟು; ಕೈಕೊಳ್ಳುವುದು–ಅಂಗೀಕರಿಸುವುದು.

ವೃತ್ತಿ– ಶಬ್ದಮಣಿದರ್ಪಣದೊಳೇನಾನುಂದೋಷಮುಳ್ಳೊಡಂ ವಿದ್ವಾಂಸರ ವಧರಿಸಿ ಕೇಳ್ದು ಕರುಣದಿಂ ಮನಃಪ್ರೀತಿವೆರಸಿ ತಿರ್ದುವುದು : ಗುಣಾನ್ವಿತಮುಂ ನಿರ್ದೋಷಮುಮಾಗೆ ಮೆಚ್ಚಿ ಸ್ವೀಕರಿಸುವುದು.

ಸೂತ್ರಂ ॥ **ಗಜಗನ ಗುಣನಂದಿಯ ಮನ**
**ಸಿಜನಸಗನ ಚಂದ್ರಭಟ್ಟ ಗುಣವರ್ಮ ಶ್ರೀ**
**ವಿಜಯರ [1]ಪೊನ್ನನ ಪಂಪನ[1]**
**ಸುಜನೋತ್ತಂಸನ ಸುಮಾರ್ಗಮಿದಜೊಳೆ ಲಕ್ಷ್ಯಂ** ೫

ಟೀಕು ॥ ಗಜಗನ–ಗಜಗನೆಂಬ ಕವೀಶ್ವರನ; ಗುಣನಂದಿಯ–ಗುಣನಂದಿಯೆಂಬ ಕವೀಶ್ವರನ; ಮನಸಿಜನ–ಮನಸಿಜನೆಂಬ ಕವೀಶ್ವರನ; ಅಸಗನ–ಅಸಗನೆಂಬ ಕವೀಶ್ವರನ; ಚಂದ್ರಭಟ್ಟ ಗುಣವರ್ಮ ಶ್ರೀವಿಜಯರ–ಚಂದ್ರಭಟ್ಟನೆಂಬ ಗುಣವರ್ಮನೆಂಬ ಶ್ರೀವಿಜಯ ನೆಂಬೀ ಕವೀಶ್ವರರ; [2]ಹೊ[2]ನ್ನನ–ಹೊನ್ನನೆಂಬ ಕವೀಶ್ವರನ [3]ಹಂ[3]ಪನ–ಹಂಪನೆಂಬ ಕವೀಶ್ವರನ; ಸುಜನೋತ್ತಂಸನ–ಸುಜನೋತ್ತಂಸನೆಂಬ ಕವೀಶ್ವರನ; ಸುಮಾರ್ಗಂ–ಲೇಸಾದ ಕಾವ್ಯಮಾರ್ಗಂ; ಇದಜೊಳೆ–ಈ ಶಬ್ದಮಣಿದರ್ಪಣದಲ್ಲಿಯೆ; ಲಕ್ಷ್ಯಂ–ಉದಾಹರಣೆಗಳ್ ಕುಱುಪಾಗಿರ್ಪವು.

ವೃತ್ತಿ– ಈ ಕವಿಗಳಾದಿಯಾಗಿ ಮತ್ತಂ ಪಲಂಬರ್ ಪ್ರಸಿದ್ಧ ಕವಿಗಳುದಾಹರಣಂಗಳು ಮಿದಜೊಳೊಳವು.

ಸೂತ್ರಂ ॥ **ಕ್ರಮದಿಂದೆ ಸಂಧಿ ನಾಮಂ**
**ಸಮಾಸಮಾ ತದ್ಧಿತಂ ಪೊದಳ್ದಾಖ್ಯಾತಂ**
**ಸಮುದಿತ ಧಾತುವಪಭ್ರಂ**
**ಶಮವ್ಯಯಂ ಸಂಧಿ ಶಬ್ದಮಣಿದರ್ಪಣದೊಳ್** ೬

ಟೀಕು ॥ ಶಬ್ದಮಣಿದರ್ಪಣದೊಳ್–ಶಬ್ದಮಣಿದರ್ಪಣದಲ್ಲಿ; ಕ್ರಮದಿಂದ–ತರುವಾಯಿಂದೆ; ಸಂಧಿ–ಸಂಧಿಪ್ರಕರಣಮೆಂದು; ನಾಮಂ–ನಾಮಪ್ರಕರಣಮೆಂದು; ಸಮಾಸಂ–ಸಮಾಸಪ್ರಕರಣಮೆಂದು; ಆ ತದ್ಧಿತಂ–ಆ ಪ್ರಸಿದ್ಧವಾದ ತದ್ಧಿತಪ್ರಕರಣಮೆಂದು; ಪೊದಳ್ದ–ಪ್ರಸಿದ್ದಿ ಪಡೆದ; ಆಖ್ಯಾತಂ–ಆಖ್ಯಾತಪ್ರಕರಣಮೆಂದು; ಪ್ರಮುದಿತ ಧಾತು–ವಿಶೇಷವಾಗಿ ಸಂತೋಷಿಸಲ್ಪಟ್ಟ ಧಾತುಪ್ರಕರಣಮೆಂದು; ಅಪಭ್ರಂಶಂ–ಅಪಭ್ರಂಶ ಪ್ರಕರಣಮೆಂದು; ಅವ್ಯಯಂ–ಅವ್ಯಯಪ್ರಕರಣಮೆಂದು; ಸಂಧಿ–ಸಂಧಿಗಳೆಂಟು.

ವೃತ್ತಿ– ತಱುವಾಯಿಂ ಸಂಧಿಯೆಂದುಂ ನಾಮಮೆಂದುಂ ಸಮಾಸಮೆಂದುಂ ತದ್ಧಿತಮೆಂದುಂ ಆಖ್ಯಾತಮೆಂದುಂ ಧಾತುಮೆಂದುಂ ಅಪಭ್ರಂಶಮೆಂದುಂ ಅವ್ಯಯಮೆಂದುಂ ಸಂಧಿಯೆಂಟಕ್ಕುಂ.

ಸೂತ್ರಂ ॥ **ಅನುಕೂಲಪವನನಿಂ ಜೀ**
**ವನಿಷ್ಟದಿಂ ನಾಭಿಮೂಲದೊಳ್ ಕಹಳೆಯ ಪಾಂ**
**ಗಿನವೊಲ್ ಶಬ್ದದ್ರವ್ಯಂ**
**ಜನಿಯಿಸುಗುಂ ಶ್ವೇತಮದಱ ಕಾರ್ಯಂ ಶಬ್ದಂ** ೯

ಟೀಕು ॥ ಜೀವನ–ಜೀವಾತ್ಮನ; ಇಷ್ಟದಿಂ–ಇಚ್ಛೆಯಿಂದೆ; ಅನುಕೂಲ ಪವನನಿಂ–ಜೀವನೊಡನೆ ಅನುಕೂಲವಾದ ಪ್ರಾಣಮಾರುತನಿಂದ; ನಾಭಿಮೂಲದಿಂ–ನಾಭಿಯ ಮೊದಲಲ್ಲಿ; ಕಹಳೆಯ ಪಾಂಗಿನವೊಲ್–ನೆಗಪಿದ ಕಹಳೆಯಾಕಾರದ ಹಾಗೆ; ಶಬ್ದದ್ರವ್ಯಂ–ಶಬ್ದವೆಂಬ ದ್ರವ್ಯಂ; ಶ್ವೇತಂ–ಧವಳವರ್ಣಮಾಗಿ; ಜನಿಯಿಸುಗುಂ–ಪುಟ್ಟುವುದು; ಅದಱ–ಆ ಶಬ್ದದ್ರವ್ಯದ; ಕಾರ್ಯಂ–ಪ್ರಯೋಜನಂ, ಶಬ್ದಂ–ಶಬ್ದಮಕ್ಕುಂ.

ವಿಚಾರಂ–ಶಬ್ದದ್ರವ್ಯಮೆಂದೊಡೆ ಘಟಕ್ಕೆ ಮೃತ್ತಿಕೆಯೆಂತಂತೆ ಅಕ್ಷರಾತ್ಮಕವಾದ ಶಬ್ದಂಗಳ್ ಪುಟ್ಟುವುದರ್ಕೆ ಉಪಾದಾನಕಾರಣವಾದ ವಸ್ತುವೆಂದಱಿವುದು. ಶಬ್ದಕ್ಕೆ ದ್ರವ್ಯತ್ವ ಮಂ ಜೈನರ್ ಪೇಳ್ದಪರ್.

ವೃತ್ತಿ–ಪವನನ ಬೆಂಬಲೆಯಿಂ ಜೀವನಿಷ್ಟದಿಂ ನಾಭಿಯ ಮೊದಲಲ್ಲಿ ನೆಗಪಿದಕಹಳೆಯಾಕಾರದಿಂ ಶಬ್ದಮೆಂಬ ದ್ರವ್ಯಂ ಧವಲವರ್ಣಮಾಗಿ ಪುಟ್ಟುಗುಂ; ಅದಱ ಕಾರ್ಯಂ ಶಬ್ದಮೆಂಬುದು.

ಸೂತ್ರಂ ॥ **ವ್ಯಾಕರಣದಿಂದೆ ಪದಮಾ**
**ವ್ಯಾಕರಣದ ಪದದಿನರ್ಥಮರ್ಥದೆ ತತ್ವಾ**
**ಲೋಕಂ ತತ್ವಾಲೋಕದಿ**
**ನಾಕಾಂಕ್ಷಿಪ ಮುಕ್ತಿಯಕ್ಕುಮಿದೆ ಬುಧರ್ಗೆ ಫಲಂ** ೧೦

ಟೀಕು ॥ ವ್ಯಾಕರಣದಿಂದ–ಶಬ್ದಶಾಸ್ತ್ರದಿಂದ; ಪದಂ–ಪದಸಿದ್ದಿ ಅಪ್ಪುದು; ಆ ವ್ಯಾಕರಣದ–ಆ ಶಬ್ದಶಾಸ್ತ್ರದ; ಪದದಿಂ–ಪದಸಿದ್ಧಿಯಿಂದ; ಅರ್ಥಂ–ಅರ್ಥವಿಚಾರಂ ಅಪ್ಪುದು; ಅರ್ಥದೇ–ಅರ್ಥವಿಚಾರದಿಂದೆ; ತತ್ವಾಲೋಕಂ–ತತ್ವಜ್ಞಾನಂ ಅಪ್ಪುದು; ತತ್ವಾಲೋಕದಿಂ–ತತ್ವಜ್ಞಾನದಿಂದೆ; ಆಕಾಂಕ್ಷಿಪ ಮುಕ್ತಿ–ಬಯಸಲ್ ತಕ್ಕ ಮೋಕ್ಷಂ ಅಪ್ಪುದು; ಇದೆ–ಆ ಮೋಕ್ಷವೆ; ಬುಧರ್ಗೆ–ವಿದ್ವಾಂಸರ್ಗೆ; ಫಲಂ–ಸತ್ಫಲಂ; ಅಕ್ಕುಂ–ಅಪ್ಪುದು.

ವೃತ್ತಿ– ವ್ಯಾಕರಣದಿಂ ಪದಸಿದ್ಧಿಯಕ್ಕುಂ, ಪದಸಿದ್ಧಿಯಿಂದರ್ಥಜ್ಞಾನಮಕ್ಕುಂ, ಅರ್ಥ ಜ್ಞಾನದಿಂ ತತ್ವವಿಚಾರಮಕ್ಕುಂ, ತತ್ವಜ್ಞಾನದಿಂ ಮುಕ್ತಿದೊರೆಕೊಳ್ಗುಂ : ವಿಬುಧರ್ಗದು ಕಾರಣದಿಂ ವ್ಯಾಕರಣಮುಪಾದೇಯಂ.

# ೧. ಸಂಧಿಪ್ರಕರಣಂ

ಸೂತ್ರಂ ॥ **ಅಕ್ಕರಮುಂ ವರ್ಣಮುಮೆಂ**
**ದಕ್ಕುಂ ಶುದ್ಧಾಕ್ಷರಕ್ಕೆ ನಾಮಂ ಬರೆಪಂ**
**ಬೊಕ್ಕುಚ್ಚರಿಸಲ್ಬಾರದು**
**ವಕ್ಕರಮಲ್ತವು ಘನಸ್ವನಾದಿ ಧ್ವನಿಗಳ್ ೧೨**

ಟೀಕು ॥ ಅಕ್ಕರಮುಂ–ಅಕ್ಕರಮೆಂದುಂ; ವರ್ಣಮುಂ–ವರ್ಣಮೆಂದುಂ; ಶುದ್ಧಾಕ್ಷರಕ್ಕೆ–ಶುದ್ಧವಾದ ಅಕ್ಷರಂಗಳ್ಗೆ; ನಾಮಂ–ಪೆಸರ್; ಅಕ್ಕುಂ–ಅಪ್ಪುದು ಬರೆಪಂ ಬೊಕ್ಕು–ಬರೆವುದಂ ಪೊಕ್ಕು; ಉಚ್ಚರಿಸಲ್ ಬಾರದುವು–ಉಚ್ಚಾರಣೆಗೆ ಬಾರದುವು; ಅಕ್ಕರಂಗಳ್–ಅಕ್ಷರಂಗಳ್; ಅಲ್ತು–ಅಲ್ಲ; ಅವು–ತಾವು; ಘನ–ಮೇಘದ; ಸ್ವನ–ಧ್ವನಿ; ಆದಿ–ಮೊದಲಾದ; ಧ್ವನಿಗಳ್–ಪಲವು ತೆಱದ ಧ್ವನಿಗಳ್ ಅಪ್ಪುವು.

ವೃತ್ತಿ–ಅಕ್ಷರಮೆಂದುಂ ವರ್ಣಮೆಂದುಂ ಶುದ್ಧಾಕ್ಷರಕ್ಕೆ ಪರ್ಯಾಯನಾಮಂ; ಬರೆಯಲುಮುಚ್ಚರಿಸಲ್ಬಾರದುವಕ್ಷರಂಗಳಲ್ಲವು ಮೊೞಗು ಮೊದಲಾದ ಪಲತೆಱದ ಧ್ವನಿಗಳ್.

ಸೂತ್ರಂ ॥ **ವ್ಯವಹರಿಪುವೆರಡು ರೂಪಿಂ**
**ದವಕ್ಕರಂ ಶ್ರಾವಣಂ ಸ್ವನೈಕಾಕಾರಂ**
**ವಿವಿಧಾಕಾರಂ ಲಿಪಿಭೇ**
**ದ ವೃತ್ತಿಯಿಂ ಚಾಕ್ಷುಷಂ ಪುರಾತನಮತದಿಂ ೧೩**

ಟೀಕು ॥ ಪುರಾತನಮತದಿಂದೆ–ಪೂರ್ವದ ಕವಿಗಳ ಮತದಿಂದೆ; ಅಕ್ಕರಂ–ಅಕ್ಷರಂಗಳ್; ಅವು–ತಾಂ; ಎರಡು ರೂಪಿಂದೆ–ಶ್ರಾವಣ ಚಾಕ್ಷುಷವೆಂಬೆರಡುತೆಱದಾಕಾರ ದಿಂದೆ; ವ್ಯವಹರಿಪುವು–ವರ್ತಿಪುವು; ಸ್ವನೈಕಾಕಾರಂ–ಧ್ವನಿಯೊಂದೆಱೌಕಾರವನುಳ್ಳುದು; ಶ್ರಾವಣಂ–ಶ್ರಾವಣವೆನಿಪುದು; ಲಿಪಿ–ಲಿಪಿಗಳ; ಭೇದ–ಭೇದದ; ವೃತ್ತಿಯಿಂ–ವರ್ತನೆಯಿಂದೆ; ವಿವಿಧಾಕಾರಂ–ನಾನಾಪ್ರಕಾರವಾದ ಆಕಾರವನ್ನುಳ್ಳುದು; ಚಾಕ್ಷುಷಂ–ಚಾಕ್ಷುಷವೆನಿಸುವುದು; ಶ್ರಾವಣವೆಂದೊಡೆ ಕಿವಿಯಲ್ಲಿ ಕೇಳ್ವುದು; ಚಾಕ್ಷುಷವೆಂದೊಡೆ ಕಣ್ಣೊಳ್ಕಾಣ್ಬುದೆಂದಱಿವುದು.

ವೃತ್ತಿ–ಎರಡು ತೆಱದಾಕಾರದಿಂದಕ್ಕರಂ ವರ್ತಿಸುಗುಂ; ಶಬ್ದೈಕಾಕಾರದಿಂ ಕಿವಿಗೆ, ವಿಷಯಮಾದಕ್ಕರಮಂ ಶ್ರಾವಣಮೆಂಬುದು; ಲಿಪಿಭೇದದಿಂ ಪಲವಾಕಾರಮಾಗಿ ಕಣ್ಗೆ ತೋರ್ಪಕ್ಷರಮಂ ಚಾಕ್ಷುಷಮೆಂಬುದು; ಇದನಾದಿ ಮಾರ್ಗದಿನಱಿವುದು.

ಸೂತ್ರಂ ॥ **ಕುಳದ ನಿಯಾಮದೊಳೆಂದುಂ**
**ಕ್ಷಳಕ್ಕೆ ಲಾಕ್ಷರವಿಕಲ್ಪಮಿಲ್ಲ ವಿಕಲ್ಪಂ**
**ಕ್ಷಳನಲ್ಲದಿಲ್ಲ ಸಂಸ್ಕೃತ**
**ದೊಳಾ ಲಕಾರಕ್ಕೆ ಪೇೞ್ದೆನದಱಿಂ ಕ್ಷಳನಂ** ೧೫

ಟೀಕು ॥ ಕುಳದ–ಕುಳಳಕಾರದ; ನಿಯಾಮದೊಳ್–ಪ್ರಾಸಿನಲ್ಲಿ; ಕ್ಷಳಕ್ಕೆ–ಕ್ಷಳಳಕಾರಕ್ಕೆ; ಲಾಕ್ಷರವಿಕಲ್ಪಂ–ಲಕಾರದ ವಿಕಲ್ಪಂ; ಎಂದುಂ–ಆವಾಗಳುಂ; ಇಲ್ಲ–ಉಂಟಾಗದು; ವಿಕಲ್ಪಂ–ಕುಳಪ್ರಾಸಿಂಗೆ ವಿಕಲ್ಪಂ; ಕ್ಷಳನಲ್ಲದೆ–ಕ್ಷಳಳಕಾರಮಲ್ಲದೆ; ಇಲ್ಲ–ಲಕಾರದ ವಿಕಲ್ಪಮಿಲ್ಲ; ಅದಱಿಂ–ಅದು ಕಾರಣದಿಂದ; ಸಂಸ್ಕೃತದೊಳ್–ಸಂಸ್ಕೃತದಲ್ಲಿ ಆ ಲಕಾರಕ್ಕೆ–ಆ ಸಂಸ್ಕೃತದಲ್ಲಿರ್ದ ಲಕಾರಕ್ಕೆ; ಕ್ಷಳನಂ–ಕ್ಷಳನೆಂಬ ಳಕಾರಮಂ; ಪೇೞ್ದೆಂ–ಹೇಳ್ದೆಂ.

ವಿಚಾರಂ–ಕುಳಮೆಂದೊಡೆ ಕನ್ನಡ ಶಬ್ದದಲ್ಲಿ ಇರ್ದ ಳಕಾರಂ; ಕ್ಷಳಮೆಂದೊಡೆ ಸಂಸ್ಕೃತದಲ್ಲಿ 'ಲಳಯೋರ್ ಅಭೇದಃ' ಎಂದು ಉಂಟಾಗಿ ಲಕಾರ ಳಕಾರಂಗಳ್ಗೆ ಭೇದವಿಲ್ಲದ ಳಕಾರಮೆಂದಱಿವುದು.

ವೃತ್ತಿ–ಕುಳಪ್ರಾಸಮಾಗಿ ಪೇೞ್ದ ಕನ್ನಡಗಬ್ಬಂ ಕ್ಷಳನಂ ಸೆಱೆಗೆಯ್ವುದಾಗಿ ಲಕಾರಮಂ ವಿಕಲ್ಪಂ ಮಾಡಬಾರದು; ಲಕಾರ ಪ್ರಾಸಮಾಗಿ ಪೇೞ್ದ ಕನ್ನಡಗಬ್ಬದೊಳ್ ಕ್ಷಳನಂ ವಿಕಲ್ಪದಿ ನಿರಿಸಲ್ಬಾರದಾಗಿಯದುವುಮಾಗದು; ಕ್ಷಳನೆಂಬುದಿಲ್ಲದೆ ಸಂಸ್ಕೃತ ಪದದ ಲಕಾರಕ್ಕೆ ವಿಕಲ್ಪಮಂ ಪೇೞಲ್ಬಾರದಾಗಿ ಕ್ಷಳನನಿದಱೊಳೆ ಬೆರಸಿ ಪೇೞ್ದೆಂ.

ಕುಳಕ್ಷಳ ಪ್ರಾಸ ಪ್ರಯೋಗಂ :

ಕಿೞಿಱೆ ಹಯಂಗಳ್ ಗರ್ಜಿಸೆ
ಜಳದ ನಿಭಂಗಳ್ ಗಜಂಗಳ್... (೧)

ಲಕಾರಕ್ಕೆ ಕ್ಷಳನನಿರಿಸಲ್ಬಾರದುದಕ್ಕೆ ಪ್ರಯೋಗಂ :

ಓಲಗದೊಳೊರ್ಮೆ ನತನರ
ಪಾಲಕ ಚೂಡಾಮಣಿದ್ಯುತಿಪ್ಲುತ ಚರಣಂ... (೨)

ಸೂತ್ರಂ॥ **ಬಿಂದುನುಸ್ವಾರಂ ತಾ**
**ನೆಂದಕ್ಕುಂ ಸೊನ್ನೆ ಮುತ್ತುವೋಲ್ ವೃತ್ತತೆಯಿಂ**
**ಸಂದಿರ್ಪುದಂತದಡಕಿ**
**ಲ್ಪೊಂದಿರೆ ಮಣಿಗೊಪ್ಪುವೋಲ್ ವಿಸರ್ಗಮೆನಿಕ್ಕುಂ** ೨೧

ಟೀಕು ॥ ಬಿಂದುಂ–ಬಿಂದುವೆಂದೂ; ಅನುಸ್ವಾರಂ–ಅನುಸ್ವಾರವೆಂದೂ; ಸೊನ್ನೆ–ಸೊನ್ನೆ; ತಾಂ–ತಾಂ; ಅಕ್ಕುಂ–ಅಪ್ಪುದು; ವೃತ್ತತೆಯಿಂ–ಬಟ್ಟಿತ್ತಾಗಿರ್ಪುದೆಂದೆ;

ಮುತ್ತುವೋಲ್–ಮುತ್ತಿನ ಮಣಿಯ ಹಾಗೆ; ಸಂದಿರ್ಪುದು–ಸಲುವಳಿಯಾಗಿರ್ಪುದು; ಅಂತು–ಹಾಗೆ; ಅದು–ಆ ಸೊನ್ನೆ; ಅಡಕಿಲ್ವೊಂದಿರೆ–ಒಂದಱಮೇಲೊಂದಿರೆ; ಮಣಿಗೊಪ್ಪವೋಲ್–ಮಣಿಗೊಪ್ಪಿನ ಹಾಗೆ; ವಿಸರ್ಗಂ–ವಿಸರ್ಜನೀಯಂ; ಎನಿಕ್ಕುಂ–ಎನಿಸುವುದು.

ವೃತ್ತಿ–ಬಿಂದುವೆಂದುಂ ಅನುಸ್ವಾರವೆಂದುಂ ಸೊನ್ನೆಗೆ ಪೆಸರ್; ಬಿಡುಮುತ್ತಂ ಪೋಲ್ತು, [3]ಬಟ್ಟಿತ್ತಾಗಿರ್ಪುದಱಿಂ ಶೂನ್ಯಶಬ್ದದಪಭ್ರಂಶಮಾಗಿಯುಂ ಕನ್ನಡದೊಳ್ ಸೊನ್ನೆಯೆಂದಾಯ್ತು; ಬಿಂದುವಿನಂತಿರ್ಪುದಱಿಂ ಬಿಂದುವೆಂದಾಯ್ತು; ಬಿಂದುಸ್ವರೂಪಂ– ಂ ಬಿಂದು ಪ್ರಯೋಗಂ–

ಅಂದೊಳಂ, ಅಂದುಗೆ.

ಅಂಬಿಕೆ ಬೆರ್ಚಿ ಬೆಳ್ವಳಿಸೆ... (೧)

ಬಂದಂ ಫಲ್ಗುಣನಿಲ್ಲಿ ಸಂದೆಯಮಣಂ ತಾನಿಲ್ಲ... (೨)

ಮಣಿಗೊಪ್ಪುವಿನಂತಿರಾಯೆರಡು ಸೊನ್ನೆಯುಮಡಕಿಲಾಗಿ ನಿಲೆ ವಿಸರ್ಗಮೆನಿಸುಗುಂ; ವಿಸರ್ಜನೀಯಮೆಂದೀ ವಿಸರ್ಗಕ್ಕೆ ಪೆಸರ್; ವಿಸರ್ಗ ಸ್ವರೂಪಂ.

ವಿಸರ್ಗ ಪ್ರಯೋಗಂ– (೩)

ಅಃ ಸಂದೆಯಮಿಲ್ಲ ಮೆಚ್ಚಿದಂ.

ಸೂತ್ರಂ॥ **ಪ್ರಕಟತರ ವ್ಯಂಜನ ಸಂ**
**ಜ್ಞೆ ಕಕಾರದಿನಾ ಳಕಾರಪರ್ಯಂತಂ ಪಂ**
**ಚಕ ಪಂಚಕಂಗಳಿಂ ಪಂ**
**ಚಕಮಕ್ಕುಂ ವರ್ಗಮಂತ್ಯವರ್ಣಮವರ್ಗಂ** **೨೩**

ಟೀಕು ॥ ಕಕಾರದಿಂ–ಕಕಾರದಿಂದ; ಆ ಳಕಾರಪರ್ಯಂತಂ–ಆ ಳಕಾರಪರ್ಯಂತವಾಗಿ; ಪ್ರಕಟಿತರ–ಪ್ರಸಿದ್ಧವಾದ; ವ್ಯಂಜನಸಂಜ್ಞೆ–ವ್ಯಂಜನಾಕ್ಷರಗಳೆಂಬ ಸಂಜ್ಞೆಅಪ್ಪುದು; ಪಂಚಕ ಪಂಚಕಂಗಳಿಂ–ಐದೈದಕ್ಷರಂಗಳಿಂದೆ ವರ್ಗಂ–ವರ್ಗಸಂಜ್ಞೆ; ಪಂಚಕಂ–ಐದು ವರ್ಗಂ; ಅಕ್ಕುಂ–ಅಪ್ಪುವು; ಅಂತ್ಯವರ್ಣಂ–ಕಡೆಯಣೊಂಬತ್ತಕ್ಷರಂಗಳ್; ಅವರ್ಗಂ–ಅವರ್ಗಾಕ್ಷರಂಗಳ್ ಅಪ್ಪುವು.

ವೃತ್ತಿ–ಕಕಾರಂ ಮೊದಲಾಗಿ ಳಕಾರ ಪರ್ಯಂತಂ ವರ್ತಿಸುವ ವರ್ಣಂಗಳ್ ವ್ಯಂಜನ ಸಂಜ್ಞೆಯಂ ಪ್ರತ್ಯೇಕಂ ಪಡೆಗುಂ– ಕ್ ಖ್ ಗ್ ಘ್ ಙ್; ಚ್ ಛ್ ಜ್ ಝ್ ಞ್; ಟ್ ಠ್ ಡ್ ಢ್ ಣ್; ತ್ ಥ್ ದ್ ಧ್ ನ್; ಪ್ ಫ್ ಬ್ ಭ್ ಮ್; ಯ್ ರ್ ಲ್ ವ್ ಶ್ ಷ್ ಸ್ ಹ್ ಳ್ ಎಂಬಿವು; ಆ ವ್ಯಂಜನಂಗಳೊಳೆ ಕಕಾರಂ ಮೊದಲಾಗಿ ಮಕಾರ ಪರ್ಯಂತಮಯ್ದುಯ್ದು ವರ್ಣಮೊಂದೊಂದು ವರ್ಗಮಾಗೆ ವರ್ಗಮಯ್ದಕ್ಕುಂ–

ಕ್ ಖ್ ಗ್ ಘ್ ಙ್, ಚ್ ಛ್ ಜ್ ಝ್ ಞ್, ಟ್ ಠ್ ಡ್ ಢ್ ಣ್, ತ್ ಥ್ ದ್ ಧ್ ನ್, ಪ್ ಫ್ ಬ್ ಭ್ ಮ್–ಎಂಬಿವು; ಅವರ್ಗಂಗಳಾವುವೆಂದೊಡೆ–ಯ್ ರ್ ಲ್ ವ್ ಶ್ ಷ್ ಸ್ ಹ್ ಳ್ ಎಂಬಿವು.

ಸೂತ್ರಂ॥ **ವರ್ಗದ್ವಿತೀಯವರ್ಣಂ**
**ವರ್ಗಚತುರ್ಥಾಕ್ಷರಂ ಮಹಾಪ್ರಾಣಮವಂ**
**ಮಾರ್ಗವಿದರ್ ಸಂಖ್ಯೆಯೊಳಂ**
**ಭೋರ್ಗರೆವನುಕೃತಿಯೊಳಂ ಪ್ರಯೋಗಿಸುತಿರ್ಪರ್ ೨೪**

ಟೀಕು ॥ ವರ್ಗ–ವರ್ಗಂಗಳ; ದ್ವಿತೀಯವರ್ಣಂ–ಖ್ ಛ್ ಠ್ ಥ್ ಫ್ ಎಂಬೆರಡನೆಯ ಅಕ್ಷರಂಗಳುಂ; ವರ್ಗ–ವರ್ಗಂಗಳ; ಚತುರ್ಥಾಕ್ಷರಂ–ಘ್ ಝ್ ಢ್ ಧ್ ಭ್ ಎಂಬ ನಾಲ್ಕನೆಯ ಅಕ್ಷರಗಳುಂ; ಮಹಾಪ್ರಾಣಂ–ಮಹಾಪ್ರಾಣಾಕ್ಷರಂಗಳೆನಿಸುವುವು; ಅವಂ–ಆ ಮಹಾಪ್ರಾಣಾಕ್ಷರಂಗಳಂ; ಮಾರ್ಗವಿದರ್–(ಕನ್ನಡದ) ಕವಿಮಾರ್ಗಮಂ ಬಲ್ಲವರ್; ಸಂಖ್ಯೆಯೊಳಂ–ಸಂಖ್ಯಾವಾಚಿಗಳಲ್ಲಿಯುಂ; ಭೋರ್ಗರೆವ–ಧ್ವನಿಗೆಯ್ವ; ಅನುಕೃತಿಯೊಳಂ–ಅನುಕರಣಶಬ್ದಂಗಳಲ್ಲಿಯುಂ; ಪ್ರಯೋಗಿಸುತಿರ್ಪರ್–ಪ್ರಯೋಗವಂ ಮಾಡುತಿರ್ಪರ್.

ವಿಚಾರಂ–ವರ್ಗದೆರಡನೆಯ ನಾಲ್ಕನೆಯ ಅಕ್ಷರಂಗಳ್ ಮಹಾಪ್ರಾಣಂಗಳಾದಲ್ಲಿ ವರ್ಗದೊಂದನೆಯ ಮೂಱನೆಯ ಕ್, ಚ್, ಟ್, ತ್, ಪ್, ಗ್, ಜ್, ಡ್, ದ್, ಬ್–ಎಂಬಿವು ಅಲ್ಪಪ್ರಾಣಂಗಳೆಂದಱಿವುದು.

ವೃತ್ತಿ–ವರ್ಗದೆರಡನೆಯುಕ್ಕರಂಗಳುಂ ನಾಲ್ಕನೆಯುಕ್ಕರಂಗಳುಂ ಮಹಾಪ್ರಾಣಂಗಳೆನಿಸುಗುಂ–ಖ್ ಛ್ ಠ್ ಥ್ ಫ್; ಘ್ ಝ್ ಢ್ ಧ್ ಭ್ : ಇವಂ ಸಂಖ್ಯೆಯೊಳಂ ಅನುಕರಣದೊಳಂ ಮಾರ್ಗವಿದರ್ ಪ್ರಯೋಗಿಸುವ್.

ಅಲ್ಲಿ ಸಂಖ್ಯೆಗೆ ಪ್ರಯೋಗಂ–ಇರ್ಛಾಸಿರಂ, ಎಣ್ಛಾಸಿರಂ, ನೂರ್ಛಾಸಿರಂ.

ಪದಿನೆಣ್ಛಾಸಿರಲೋಹವಕ್ಕರೆಯ ಜಾತ್ಯಶ್ವಂಗಳಿರ್ಛಾಸಿರಂ....(೧) ಇವು ಮೊದಲಾದುವನಱಿವುದು.

ಅನುಕರಣೆಗೆ–ಖಣಿಲೆನೆ, ಛುಮ್ಮೆನೆ, ಪಠಿಲೆನೆ, ಥೊಪ್ಪೆನೆ, ಫೊಟ್ಟೆನೆ, ಘಟಿಲೆನೆ, ಝುಲುಮ್ಮೆನೆ, ದುಢುಮ್ಮೆನೆ, ಧಳಮ್ಮೆನೆ, ಭೋರೆನೆ.

ಸೂತ್ರಂ ॥ **ಒಳವು ಮಹಾಪ್ರಾಣಂಗಳ್**
**ವಿಳಸತ್ಕರ್ಣಾಟ ಭಾಷೆಯೊಳ್ ಕೆಲವು ನಿಜೋ**
**ಜ್ವಳಮಾಗಿ ವರ್ಗದಂತ್ಯಂ**
**ಗಳನಱಿಯನುನಾಸಿಕಾಖ್ಯೆಯಂ ತಳೆದಿರ್ಕುಂ ೨೫**

ಟೀಕು ॥ ವಿಳಸತ್–ಒಪ್ಪಲ್ಪಟ್ಟ; ಕರ್ಣಾಟ–ಕನ್ನಡದ; ಭಾಷೆಯೊಳ್–ಭಾಷೆಯಲ್ಲಿ; ಮಹಾಪ್ರಾಣಂಗಳ್–ಮಹಾಪ್ರಾಣಂಗಳಾದ; ಕೆಲವು–ಕೆಲವು ಶಬ್ದಂಗಳ್, ನಿಜ–ನಿಜದಿಂ; ಉಜ್ವಳಂ–ಪ್ರಕಾಶಿಪುವು; ಆಗಿ–ಆಗಿ; ಒಳವು–ಉಂಟು; ವರ್ಗದ–ವರ್ಗಂಗಳ; ಅಂತ್ಯಂಗಳಂ–ಙ್, ಞ್, ಣ್, ನ್, ಮ್, ಎಂಬ ಅಂತ್ಯಾಕ್ಷರಂಗಳುಂ; ಅಱೆ–ತಿಳಿ; ಅನುನಾಸಿಕ ಆಖ್ಯೆಯಂ–ಅನುನಾಸಿಕವೆಂಬ ಪೆಸರಂ; ತಳೆದು–ಧರಿಸಿ; ಇರ್ಕುಂ–ಇರ್ಪುವು.

ವಿಚಾರಂ–ಅನುನಾಸಿಕವೆಂದೊಡೆ ಮುಖನಾಸಿಕದೊಡನೆ ಕೂಡಿ ಉಚ್ಚರಿಪುದು.

ವೃತ್ತಿ–ಕನ್ನಡದೊಳ್ ಸ್ವಭಾವದಿಂ ಮಹಾಪ್ರಾಣಂಗಳೊಳವಾವುವೆನೆ:

ವರ್ಗದ್ವಿತೀಯಕ್ಕೆ–ವಕ್ಖಾಣಂ, ದೆಕ್ಖಾಣಂ, ಪಕ್ಖಾಳಂ, ಅಕ್ಖಡಂ, ಖೊಪ್ಪರಂ, ಖಾಣಂ, ಖಾರಿಗೆ; ಛಲ್ಲಿಮಾಡಿದಂ, ಛಪ್ಪಿಸಿದಂ, ಎಕ್ಕಛಾಯಂ; ಠಾವು, ಠಾಣಂ, ಠಕ್ಕಿಸಿದಂ, ಠಾಣಿಸಿದಂ; ಥಟ್ಟು, ಥಾಪಣೆ, ಸುತ್ಥಣೆಯಂ, ಮತ್ಥಪಟ್ಟಿಗೆ, ಕಥಾಯಿ; ಫಳೆಯಕಾಱಂ, ಫಳಾವುಗಂ, ಫೇಳಿ, ಅಫಳಿಯಂ.

ವರ್ಗಚತುರ್ಥಕ್ಕೆ–ಘಟೆಯಂ, ಘೋಱೆಗೆ, ಘಾರಿಗೆ, ಘೋಸಂ; ಝಳಂ, ಝಳಕಂ, ಝಲ್ಲಱೆ, ಝಾಳಿಸಿತ್ತು. ಝಲ್ಲಿ, ಝುಂಕೆ; ಢಂಕಣಿ, ಢೊಕ್ಕರಂ, ಅಢಾಣಂ, ವೇಢೆಯಂ, ಢಗೆ; ಧಳಂ, ಧಾಳಿ, ಧಾರೆ, ಧವಡಂ, ಧಗಲೆ; ಭಂಗಾರಂ, ಭಂಡಾರಂ, ಭರಿಕ್ಕೆ, ಭಲ್ಲೆಯಂ, ಭಾವಂ.

ಕಂಭಕ್ಕಂ ಭಾಸೆಗಂ ವಿಕಲ್ಪಂ.

ವರ್ಗಂಗಳಯ್ದನೆಯಕ್ಕರಂಗಳ್ ಅನುನಾಸಿಕಂಗಳಾವುವೆಂದೊಡೆ– ಙ್ ಞ್ ಣ್ ನ್ ಮಂಗಳ್.

ಪ್ರಯೋಗಂ–

ಬಿಜ್ಜಮೆತ್ತೆಸೆವಞ್ಚೆಯ
ಸಜ್ಜುಳಮುಂ ತೊಣ್ಣುಗೆಡೆವ ಶುಕಸಾರಿಕೆಯುಂ
ಸೋಜ್ಜೆ ಬಲವನ್ನು ತೀಡುವ
ತೆಙ್ಕಣ ಗಾಳಿಯುಮವೇಂ ಮನಜ್ಗೊಳಿಸಿದುವೋ (೧)

ಸೂತ್ರಂ॥ **ಸಮಸಂದಿರ್ದXಕಮುದು**
**ಮುಮೊಂದಿದ ಬಿಂದುವುಂ ವಿಸರ್ಗಮುಮೆಂದ**
**ಕ್ಕುಮಿವೆಯ್ದೆ ಯೋಗವಾಹಂ**
**ಕ್ರಮದಿಂ ಕಪಯುಗಲಮಿವಱೊಳನುಬಂಧಂಗಳ್ ೨೭**

ಟೀಕು ॥ ಸಮಸಂದು–ಸಮಾನವಾಗಿ ಸಂದು; ಇರ್ದ–ಇರ್ದ; ಸ್ಕಮುಂ–ᳵಂಬ ಜಿಹ್ವಾಮೂಲೀಯಮುಂ ᳶಮುಂ–ᳶಂಬ ಉಪಧ್ಮಾನೀಯಮುಂ; ಒಂದಿದ–ಕೂಡಿದ ᳶ; ಬಿಂದುವುಂ–ಸೊನ್ನೆಯುಂ; ವಿಸರ್ಗಮುಂ–ವಿಸರ್ಜನೀಯಮುಂ; ಎಂದು–ಎಂದು; ಇವು–ಈ ನಾಲ್ಕಕ್ಷರಂಗಳ್; ಎಯ್ದೆ–ಚೆನ್ನಾಗಿ; ಯೋಗವಾಹಂ–ಯೋಗವಾಹಾಕ್ಷರಂಗಳ್; ಅಕ್ಕುಂ–ಅಪ್ಪುವು; ಕ್ರಮದಿಂ–ತಱುವಾಯಿಂದೆ; ಕಪಯುಗಳಂ–ಈ ಜಿಹ್ವಾ ಮೂಲೀಯೋಪಧ್ಮಾನೀಯುಂಗಳಲ್ಲಿ; ಅನುಬಂಧಂಗಳ್–ಸಂಬಂಧಗಳಾಗಿರ್ಪುವು.

ವೃತ್ತಿ–ಕಕಾರಮುಚ್ಚಾರಣಾರ್ಥಮಾಗುಟಿದ ಹಸುಂಬೆಯೆ ಲಚ್ಚಣದಂತಿರ್ದ ವರ್ಣಂ ಜಿಹ್ವಾಮೂಲೀಯಮೆಂಬುದು; ಅದಱ ಸ್ವರೂಪಂ– ᳵ; ಪಕಾರಮುಚ್ಚಾರಣಾರ್ಥಮಾಗುಟಿದ ಕುಮಾರಿಯ ಸ್ತನಯುಗಳಾಕೃತಿಯ ವರ್ಣಮುಪಧ್ಮಾನೀಯಮದಱ ಸ್ವರೂಪಂ ᳶ; ಕವೆಯಾರಮಂ ಬೀಸಿದಂತೆ ಬಟ್ಟಿತ್ತಾಗಿ ತೋರ್ಪುದು ಸೊನ್ನೆ. ಅದಱ ಸ್ವರೂಪಂ–ಂ; ಮೇಲೆಯುಂ ಕೆಟಗೆಯುಮಾ ತೆಱದಿನಿರೆ ವಿಸರ್ಗಮದಱ ಸ್ವರೂಪಂ–ಃ; ಈ ನಾಲ್ಕು ಯೋಗವಾಹಂಗಳ್.

ಸೂತ್ರಂ॥ **ತಿಳಿ ದೇಶೀಯ[1]ಮವೈದಂ[1]**
**ಕಳೆ ನೀಂ ಋ ಇ ವರ್ಣ ಶ ಷ ವಿಸರ್ಗ ᳵ ᳶ**
**ಕ್ಷಳನಂ ನಾಲ್ವತ್ತೇೞಾ**
**ಯ್ತಳೆ ಶುದ್ಧಗೆ ಯಚ್ಚಗನ್ನಡಕ್ಕೀ ಕ್ರಮದಿಂ** ೪೩

ಟೀಕು ॥ –ದೇಶೀ[ಯಂ]–ದೇಶೀಯಾಕ್ಷರಂಗಳುಂ; [ಅವು]ಐದಂ–(ಱ, ೞ, ಳ, ಎ, ಒ ಎಂಬಿವು [ಆ] ಐದಂ; ನೀಂ–ನೀಂ; ತಿಳಿ–ಅಱೆ; ಓ ಋ ವರ್ಣ, ಶ, ಷ, ವಿಸರ್ಗ. ᳵ, ᳶ, ಕ್ಷ ಳ ನಂ–ಋವರ್ಣ, ಇವರ್ಣ, ಶಕಾರ, ಷಕಾರ, ವಿಸರ್ಗ, ಜಿಹ್ವಾ ಮೂಲೀಯ ಉಪಧ್ಮಾನೀಯ, ಕ್ಷಳಂಗೆಳೆಂಬಕ್ಕರಂಗಳಂ; ಕಳೆ–ಕರ್ಣಾಟಕ ಭಾಷೆಯೊಳಿಲ್ಲೆಂದು, ಬಿಡು; ಈ ಕ್ರಮದಿಂ–ಈ ರೀತಿಯಿಂದೆ; ಅಚ್ಚಗನ್ನಡಕ್ಕೆ–ಸಂಸ್ಕೃತಂ ಬೆರೆಯದ ಬಱಿಯ ಕನ್ನಡಕ್ಕೆ; ಶುದ್ಧಗೆ–ಶುದ್ಧಾಕ್ಷರಂಗಳ್; ನಾಲ್ವತ್ತೇೞಾಯ್ತು–ನಾಲ್ವತ್ತೇೞಕ್ಷರಂಗಳಾದುವೆಂದು; ಅಳೆ–ಪ್ರಮಾಣಿಸು.

ವೃತ್ತಿ–ಕನ್ನಡದೊಳ್ ಱ ಱ ಱ ಳ ಎ ಜ ಎಂದು ದೇಶೀಯಮೈದುತೆಱಂ; ಪಿಂತಣಯ್ವತ್ತೆರಡು ಶುದ್ಧಾಕ್ಷರಂಗಳ್ ಕೂಡೆ ೫೭ ಅಕ್ಕರಂಗಳೊಳಗೆ ಋ ೠ ಒ ಓ ಶ ಷ ವಿಸರ್ಗ ᳵ, ᳶ, ಕ್ಷ ಳಂಗಳೆಂಬ ಪತ್ತುಂ ಕಳೆದುಟಿದಕ್ಕರಂ ನಾಲ್ವತ್ತೇೞು; ಅಂತಚ್ಚಗನ್ನಡದೊಳ್ ನಾಲ್ವತ್ತೇೞಕ್ಕರಂ; ನಿಸರ್ಗಮಾಗಿ ವಿಸರ್ಗಮಿಲ್ಲ.

ಸೂತ್ರಂ॥ **ಪಿಂತಮರ್ದಿದೆ ಱಟಕುಳರೇ**
**ಫಾಂತಂ ಹ್ರಸ್ವಾದಲಿಂಗಮಂ[4]ತಾ[4]ಗಳ್ ಮೇ**
**ಣಂತೆ ಚತುರ್ಥಿಯ ಗೆಯೆ ಮೇ**
**ಣ್ಮುಂತಮರ್ದಿರೆ ಪಿರಿದುಮೊದವುಗುಂ ಶಿಥಿಲತ್ವಂ ೫೨**

ಟೀಕು ॥ ಹ್ರಸ್ವಾದಿಲಿಂಗಂ–ಹ್ರಸ್ವಾದಿಲಿಂಗಂಗಳಾದ; ಱಟಕುಳ ರೇಫಾಂತಂ–ಟಮಿಾಂತ ಕುಳಾಂತ ರೇಫಾಂತಂಗಳಾದ ಶಬ್ದಂಗಳ್; ಪಿಂತ–ಹಿಂದುಗಡೆಯಲ್ಲಿ; ಅಂತು–ಹಾಂಗೆ; ಅವು–ಆ ಶಬ್ದಂಗಳ್; ಅಮರ್ದಿರೆ–ಪೊರ್ದುಗೆಯಾಗಿ ಇರೆ; ಮೇಣ್–ವಿಕಲ್ಪದಿಂದೆ; ಗಳ್–ಬಹುವಚನದ ಗಳಾಗಮಂ; ಅಂತೆ–ಹಾಂಗೆ; ಮೇಣ್–ಅದಲ್ಲದೆ ಚತುರ್ಥಿಯ–ಚತುರ್ಥೀ ವಿಭಕ್ತಿಯ; ಗೆಯೆ–ಗೆಕಾರಂ; ಮುಂತೆ–ಮುಂದುಗಡೆಯಲ್ಲಿ; ಅಮರ್ದಿರೆ–ಪೊರ್ದುಗೆಯಾಗಿರೆ; ಪಿರಿದುಂ–ಬಹುಳಮಾಗಿಯುಂ; ಶಿಥಿಲತ್ವಂ–ಶಿಥಿಲಮಪ್ಪತನಂ; ಒದವುಗುಂ–ಪ್ರಾಪ್ತಿಸುವುದು.

ವೃತ್ತಿ–ಪೆಱಗಣ ಮೈಯೊಳ್ ಲಘು ಮೊದಲಾಗಿರ್ದ ಱಟ ಕುಳ ರೇಫಾಂತಂಗಳಪ್ಪ ಲಿಂಗಂಗಳರೆ ಮುಂದೆ ಗಳ್ ಅಕ್ಕೆ ಮೇಣ್ ಚತುರ್ಥಿಗಾದ ಗೆಕಾರಂ ಮೇಣ್ ನಿಲೆ ಶಿಥಿಲತ್ವಂ ಪಿರಿದುಮಕ್ಕುಂ.

ಱಟಾಂತಕ್ಕೆ ಪ್ರಯೋಗಂ: ಅಗಟ್ಗಳ್, ಎಸಟ್ಗಳ್, ನೆಗಟ್ಗಳ್–ನೆಗಟೆಂದು ಜಲಚರಂ, ಉಗುಟ್ಗಳ್.

ಗೆಕಾರಕ್ಕೆ : ಎಸಟ್ಗೆ, ಅಗಟ್ಗೆ, ನೆಗಟ್ಗೆ, ಉಗುಟ್ಗೆ.

ಆದಿದೀರ್ಘಮಾದೊಡಂ ಗುರುವಾದೊಡಂ ಶಿಥಿಲಮಿಲ್ಲ; ಬಾಸುಟ್ಗಳ್, ಇಕ್ಕುಟ್ಗಳ್, ಪೊಕ್ಕುಟ್ಗಳ್; ಬಾಸುಟ್ಗೆ, ಪೊಕ್ಕುಟ್ಗೆ ಎಂದು.

ಕುಳಾಂತಕ್ಕೆ ಪ್ರಯೋಗಂ : ಮುಗುಳ್ಗಳ್, ಪುಗುಳ್ಗಳ್, ಎಸಳ್ಗಳ್–ಪೂವಿನೆಸಳೊಳ್ ಕುಳಂ, ಅಗುಳ್ಗಳ್(?), ಅಮಳ್ಗಳ್.

ಅಮಳ್ಗಳ್ ನಯಗುಣವಿಕ್ರಮ
ದಮಳ್ಗಳ್... (೧)

ಗಕಾರಕ್ಕೆ : ಎಸಳ್ಗೆ, ಮುಗುಳ್ಗೆ, ಪುಗುಳ್ಗೆ, ಅಮಳ್ಗೆ.

ಪಿರಿದುಮೆಂಬದಱಿಂ ಕೆಲವಱೊಳ್ಶಿಥಿಲತ್ವಮಿಲ್ಲ; ಕುರುಳ್ಗಳ್, ಪುರುಳ್ಗಳ್, ಮರುಳ್ಗಳ್.

ರೇಫಾಂತಕ್ಕೆ : ಕನರ್ಗಳ್, ಕೊನರ್ಗಳ್, ತಳಿರ್ಗಳ್, ಕುಳಿರ್ಗಳ್, ತಿಮಿರ್ಗಳ್, ತೆಮರ್ಗಳ್, ಬೆಮರ್ಗಳ್,

ಬೆಮರ್ಗಳನೂದಿ ನುಣ್ಣೊಡೆಗಳಂ ಪಿಡಿಕೆಯ್ಸಿ... (೨)

ಗೆಕಾರಕ್ಕೆ : ಮೊಸರ್ಗೆ, ಎಸರ್ಗೆ, ಒಸರ್ಗೆ, ಉಸಿರ್ಗೆ, ಪಸಿರ್ಗೆ, ನವಿರ್ಗೆ, ನವಿರೆಂದು ಕೂದಲು.

ನಡೆದುದು ತಲೆನವಿರ್ಗೂಟಂ... (೩)

ಱಕಾರಾದೇಶರೇಫೆಗಂ ಶಿಥಿಲತ್ವಂ : ಅಳಿರ್ಗಳ್, ಪೆಸರ್ಗಳ್, ಹಗರ್ಗಳ್, ಬಳರ್ಗಳ್ (?), ಎಡರ್ಗಳ್.

ಆವೆಡರ್ಗಳುಮಂ ತಿರ್ದುವೊಂದು ಕೋಡುಂ ಪೆಂಪುಂ... (೪)

ಪಿರಿದುಮೆಂಬುದಱಿಂ ಕಾದಲರ್ಗಳೆಂಬ ಪದನಾದಿದೀರ್ಘಮಾಗಿಯುಂ ಶಿಥಿಲಮಾಯ್ತು.

ಸೂತ್ರಂ ॥ **ಗದವಜಕಾರಮವಿದಿರಿರೆ**
**ಪದಮಧ್ಯಂ ವಿಷಯಮಾಗನೇಕಾಕ್ಷರದೊಳ್**
**ಪುದಿಯೆ ಲಘೂಪಧೆ ಕೆಲಕೆಲ**
**ವೊದವಿರ್ಕುಂ ರಾಂತಳಾಂತಮವು ಶಿಥಿಲತೆಯಂ ೫೩**

ಟೀಕು ॥ ಪದಮಧ್ಯಂ–ಸಮಾಸಮಧ್ಯಂ; ವಿಷಯಂ–ಪ್ರಯೋಜನಂ; ಆಗೆ–ಆಗೆ; ಗದವಜಕಾರಂ–ಗಕಾರ, ದಕಾರ, ವಕಾರ, ಜಕಾರಂಗಳ್; ಅವು–ಅವು; ಇದಿರಿರೆ–ಮುಂದಿರೆ; ಅನೇಕಾಕ್ಷರದೊಳ್–ಅನೇಕಾಕ್ಷರದಲ್ಲಿ; ಪುದಿಯೆ–ಪ್ರವೇಶಮಾಗೆ; ಲಘೂಪಧೆ–ಲಘಂವೆ ಉಪಧೆಯಾದ; ಕೆಲಕೆಲವು–ಹಲವು ಕೆಲವು; ರಾಂತಳಾಂತಂ–ರೇಫಾಂತಳಕಾರಾಂತ ಶಬ್ದಂಗಳ್; ಅವು–ಅವು; ಶಿಥಿಲತೆಯಂ–ಶಿಥಿಲತ್ವವಂ; ಒದವಿರ್ಕುಂ–ಪ್ರಾಪ್ತಿಯಾಗಿರ್ಪುವು.

ವೃತ್ತಿ–ಮುಂತೆ ಗದವಜಕಾರಂಗಳಿರೆ ಪೆಱಗಣ ಮೈಯೊಳ್ ರಾಂತಳಾಂತಂಗಳ್ ಸಮಾಸಮಧ್ಯ ವಿಷಯಮಾಗಿ ಪಲವಕ್ಕರಂಗಳೊಳ್ ಕೂಡಿ ಲಘೂಪಧೆಯಾಗಿ ನಿಲೆ ಆ ರಾಂತಳಾಂತಂಗಳ್ಗೆ ಶಿಥಿಲತ್ವಮುಂಟು.

ಪ್ರಯೋಗಂ–ರಾಂತಕ್ಕೆ : ಕುಳಿರ್ಗಾಳಿ, ಅಲರ್ದೋಂಟಂ. ಅಲರ್ಗೊಂಚಲ್, ಬಿದಿರ್ದಟ್ಟಿ, ಪೊಗರ್ವಟ್ಟೆ, ಬೆಳರ್ಗೆಂಪು, ತಳಿರ್ದೋರಣಂ ಬೆಮರ್ವನಿ, ಆಲರ್ಜೊಂಪಂ, ಕದಿರ್ಜೊನ್ನಂ.

ಳಾಂತಕ್ಕೆ : ಮುಗುಳ್ಗಾಯ್, ಅಮಳ್ದೊಂಗಲ್, ಎಸಳ್ವಸೆ, ಅಮಳ್ಜಂತ್ರಂ.

ಸೂತ್ರಂ॥ **ಪುಗೆ ದದಪವಕಾರಂ ವಿಧಿ**
**ಯ ಗೆಕಾರಂ ವರ್ತಮಾನ ಕಾಲದ ಗುಂ ಧಾ**
**ತುಗೆ ಱಟಕುಳರೇಫಾಂತ**
**ಕ್ಕೊಗೆಗುಂ ಶಿಥಿಲತ್ವಮಗುರುಪೂರ್ವ[1]ಸ್ಥಿತಿಯಿಂ[1] ೫೪**

ಟೀಕು ॥ ಅಗುರುಪೂರ್ವಸ್ಥಿತಿಯಿಂ–ಲಘುಮೊದಲಾಗಿರ್ಪುದಱಿಂದೆ; ಱಟಕುಳ ರೇಫಾಂತಕ್ಕೆ–ಱಟಾಂತ ಕುಳಾಂತ ರೇಫಾಂತಗಳಾದ; ಧಾತುಗೆ–ಧಾತುಗಳ್ಗೆ; ದದಪವ ಕಾರಂ–ದಕಾರ ದಪಕಾರ ವಕಾರಂಗಳ್; ವಿಧಿಯ–ವಿಧ್ಯರ್ಥವ; ಗೆಕಾರಂ–ಗೆ ಎಂಬಕ್ಷರಂ; ವರ್ತಮಾನಕಾಲದ–ವರ್ತಮಾನಕಾಲಾರ್ಥದ; ಗುಂ–ಗುಂಕಾರಂ; ಪುಗೆ–ಪ್ರವೇಶಮಾಗೆ; ಶಿಥಿಲತ್ವಂ–ಶಿಥಿಲಮಪ್ಪತನಂ; ಒಗೆಗುಂ–ಹುಟ್ಟುಗುಂ.

ವೃತ್ತಿ–ಹ್ರಸ್ವಾದಿಗಳಪ್ಪ ಱಟಕುಳ ರೇಫಾಂತಂಗಳಪ್ಪನೇಕಾಕ್ಷರ ಧಾತುಗಳ್ಗೆ ಭೂತ ವರ್ತಮಾನಭವಿಷ್ಯಂತಿಗಾದ ದ, ದಪ, ವ ಎಂಬಿವು ಪರಮಾದೊಡಂ ಪ್ರಥಮಪುರುಷದ ವಿಧ್ಯರ್ಥದೊಳಾದ ಗೆ ಎಂಬುದಂ ಪ್ರಥಮಪುರುಷದ ವರ್ತಮಾನ ಭವಿಷ್ಯಂತಿಗಾದ ಗುಂ ಎಂಬುದಂ ಪರಮಾದೊಡಂ ಕ್ರಿಯಾಪದಂಗಳ್ ಶಿಥಿಲತೆಯನೆಯ್ದುವುವು.

ಱಟಾಂತಕ್ಕೆ ಪ್ರಯೋಗಂ–ಜಗುಟ್ದಿಂ, ಅಗುಟ್ದಿಂ, ಪೊಗಟ್ದಿಂ, ತೆಗಟ್ದಿಂ, ತುಮುಟ್ದಿಂ, ನೆಗಟ್ದಿಂ; ನೆಗಟ್ದಿಂಪಂ, ನೆಗಟ್ವೆನೆಂಬಂತೆ ದ, ದಪ, ವ ಎಂಬಿವನಿವರ್ಕೆಲ್ಲಂ ಪತ್ತಿಸುವುದು.

ವಿಧಿಯ ಗೆಕಾರಕ್ಕೆ ಪ್ರಯೋಗಂ–ತೆಗಟ್ಗೆ, ಪೊಗಟ್ಗೆ, ನೆಗಟ್ಗೆ ಎಂಬಂತಱಿವುದು.

ಗುಂ–ಇಂಗೆ : ತೆಗಟ್ಗೆಮೆಂಬಂತುಟೆದುವಂ ಪತ್ತಿಸಿಕೊಳ್ವುದು.

ಕುಳಾಂತಕ್ಕೆ : ನುಸುಳ್ದಂ, ನುಗುಳ್ದಂ, ಮಸುಳ್ದಂ, ಮಗುಳ್ದುಂ, ಮಗುಳ್ದಪಂ, ಮಗುಳ್ವಂ.

ಗೆಕಾರಕ್ಕೆ : ಮಸುಳ್ಗೆ, ನುಸುಳ್ಗೆ ಎಂಬಂತೆ.

ಗುಂ–ಇಂಗೆ : ಮಸುಳ್ಗುಂ, ನುಸುಳ್ಗುಂ ಎಂದು ಮಾಟ್ಪುದು.

ತೆರಳ್ದಂ, ಪೊರಳ್ದಂ ಎಂಬಂತೆ ಕೆಲವೆಡೆಯೊಳಶಿಥಿಲತ್ವಂ.

ರೇಫಾಂತಕ್ಕೆ : ತೊಡರ್ದಂ, ಪೊಡರ್ದಂ, ತಳರ್ದಂ, ಕೆಳರ್ದಂ, ಮಿಳಿರ್ದಂ, ಅಳರ್ದಂ, ಅದಿರ್ದಂ, ಬಿದಿರ್ದ, ಅಮರ್ದಂ, ನಿಮಿರ್ದಂ; ನಿಮಿರ್ದಪಂ, ನಿಮಿರ್ವನೆಂಬಂತೆ ದ, ದಪ, ವಕಾರಂಗಳನಿವರ್ಕೆಲ್ಲಂ ಪತ್ತಿಸುವುದು.

ವಿಧಿಯ ಗೆಕಾರಕ್ಕೆ : ಅಡರ್ಗೆ, ತೊಡರ್ಗೆ, ಅದಿರ್ಗೆ, ಬಿದಿರ್ಗೆ ಎಂಬಂತೆ ಪತ್ತಿಸುವುದು.

ಗುಂ–ಇಂಗೆ : ಅಮರ್ಗುಂ, ನಿಮಿರ್ಗುಂ, ತಳರ್ಗುಂ, ಎಂಬಂತೆ ಪತ್ತಿಸುವುದು.

ದೀರ್ಘಾದಿಗೆ ಶಿಥಿಲತ್ವಮಿಲ್ಲ : ಅರ್ದಂ, ಸಾರ್ದಂ, ಪಾರ್ದಂ ಎಂಬಂತೆ.

ಸೂತ್ರಂ॥ **ಬರ್ದಿಲಂ ಸಗ್ಗಕ್ಕೆ ಪೆಸರ್**
**ಗರ್ದುಗೆಸೆವಮರ್ದಮರ್ದುವಳ್ಳಿ [1]ಕಂಪಲರ್ದುದೆನ**
**ಲ್ಕೆ[1]ರ್ದೆವಾಯದಿರ್ಮುತ್ತೆ ಪೊದ**
**ಳ್ದೆರ್ದೆಯೆಂಬಿವು ಸಹಜ ಶಿಥಿಲವೃತ್ತಿಯನಾಳ್ಗುಂ[2]** ೫೫

ಟೀಕು ॥ ಬರ್ದಿಲು–ಬರ್ದಿಲಮೆಂದು; ಸಗ್ಗಕ್ಕೆ–ಸ್ವರ್ಗಕ್ಕೆ; ಪೆಸರ್–ಹೆಸರ್; ಗರ್ದುಗು–ಗರ್ದುಗು ಎಂದು; ಎಸೆವ–ಒಪ್ಪುವ; [ಅಮರ್ದು–ಅಮರ್ದಾ ಎಂದು]; ಅಮರ್ದುವಳ್ಳಿ–ಅಮರ್ದುವಳ್ಳಿಯೆಂದು; ಕಂಪಲರ್ದುದು–ಕಂಪಲರ್ದುದು ಎಂದು; ಎನಲ್ಕೆ–ಪೇಳಲ್ಕೆ; ಎರ್ದೆವಾಯ್–ಎರ್ದೆವಾಯೆಂದು; ಅದಿರ್ಮುತ್ತೆ–ಅದಿರ್ಮುತ್ತೆಯೆಂದು; ಪೊದಳ್ದ–ಪ್ರಸಿದ್ಧಿವಡೆದ; ಎರ್ದೆ–ಎರ್ದೆಯೆಂದು; ಎಂಬಿವು–ಎಂಬೀ ಶಬ್ದಂಗಳ್; ಸಹಜ ಶಿಥಿಲವೃತ್ತಿಯಂ–ಸಹಜವಾದ ಶಿಥಿಲದ ವೃತ್ತಿಯಂ; ಆಳ್ಗುಂ–ತಾಳ್ವುವು.

ಸೂತ್ರಂ॥ **ಎರಡುಂ ಪಲವುಂ ವರ್ಣಂ**
**ಪರಸ್ಪರಂ ಕೂಡುವಂದಮದೆ ಸಂಧಿ ವಲಂ**
**ಸ್ವರರಹಿತ ವ್ಯಂಜನಮವು**
**ಪರವರ್ಣಮನೆಯ್ದುತಿರ್ಪುವಾ ಸಂಹಿತೆಯೊಳ್ ೫೯**

ಟೀಕು ॥ ಎರಡುಂ–ಎರಡಕ್ಷರಂಗಳುಂ; ಪಲವುಂ–ಹಲವಕ್ಷರಂಗಳುಂ; ಪರಸ್ಪರಂ–ಅನ್ಯೋನ್ಯವಾಗಿ : ಕೂಡುವಂದಂ–ಸಂಯೋಗವಾಗುವಂದಂ; ಅದು–ಅದು; ಸಂಧಿ–ಸಂಧಿಯೆನಿಪುದು; ವಲಂ–ನಿಶ್ಚಯಂ; ಆ ಸಂಹಿತೆಯೊಳ್–ಆ ಸಂಧಿಯಲ್ಲಿ; ಸ್ವರರಹಿತ–ಸ್ವರಹೀನವಾದ; ವ್ಯಂಜನಂ–ವ್ಯಂಜನಾಕ್ಷರಂ; ಅವು–ಅವು; ಪರವರ್ಣಮಂ–ಮುಂದಣಕ್ಷರವಂ; ಎಯ್ದುತೆ ಇರ್ಪುವು–ಕೂಡುತ್ತಿರ್ಪುವು.

ವೃತ್ತಿ–ಎರಡಕ್ಕರಂ ಮೇಣ್ ಪಲವಕ್ಕರಂ ತಮ್ಮೊಳ್ ಅನ್ಯೋನ್ಯವಾಗಿ ಕೂಡುವುದು ಸಂದಿ; ಸ್ವರರಹಿತ ವ್ಯಂಜನಂಗಳ್ ಮುಂದಣಕ್ಕರಮನೆಯ್ದುವುವು.

ಪ್ರಯೋಗಂ–ಸ್ವರಯುಕ್ತ ವ್ಯಂಜನಕ್ಕೆ; ಕೂರ್ತು + ಈವಂ = ಕೂರ್ತೀವಂ; ಎನ್ನ + ಅರಸಂ = ಎನ್ನರಸು; ಮುನ್ನೆ + ಇಜೆವಂ = ಮುನ್ನಿಜೆವಂ.

ಸ್ವರರಹಿತ ವ್ಯಂಜನಕ್ಕೆ : ಜಾಣ್ + ಉಂಟು = ಜಾಣುಂಟು, ಕುರುಳ್ + ಕೊಂಕಾಯ್ತು = ಕುರುಳ್ಕೊಂಕಾಯ್ತು.

## ೨. ಸಂಧಿಪ್ರಕರಣಂ

ಸೂತ್ರಂ॥ **ಸ್ವರಮಿದಿರೊಳಿರೆ ವಿಭಕ್ತಿ**
**ಸ್ವರಕಂ ಪ್ರಕೃತಿ ಸ್ವರಕ್ಕಮಕ್ಕುಂ ಲೋಪಂ**
**ವರಸಂಸ್ಕೃತ ಕರ್ಣಾಟಕ**
**ಮೆರಡಜೊಳಂ ನಾಮರೂಢಿಯಜೆಯದ ಪಕ್ಷಂ ೬೨**

ಟೀಕು ॥ ವರ–ಶ್ರೇಷ್ಠವಾದ, ಸಂಸ್ಕೃತ ಕರ್ಣಾಟಕಂ–ಸಂಸ್ಕೃತ ಕರ್ಣಾಟಕಗಳೆಂಬ; ಎರಡಱೊಳು–ಎರಡು ಶಬ್ದದಲ್ಲಿಯುಂ; ನಾಮರೂಢಿ–ನಾಮಪ್ರಸಿದ್ಧಿಯು; ಅಱಿಯದ ಪಕ್ಷಂ–ಕೆಡದ ಪಕ್ಷದಲ್ಲಿ; ಸ್ವರಂ–ಸ್ವರಾಕ್ಷರಂ; ಇದಿರೊಳ್–ಮುಂದುಗಡೆಯಲ್ಲಿ; ಇರೆ–ಇರೆ; ವಿಭಕ್ತಿಸ್ವರಕಂ–ವಿಭಕ್ತಿಸ್ವರಕ್ಕೆಯುಂ; ಪ್ರಕೃತಿಸ್ವರಕ್ಕಂ–ಪ್ರಕೃತಿ ಸ್ವರಕ್ಕೆಯುಂ; ಲೋಪಂ–ಆದರ್ಶನಂ; ಅಕ್ಕುಂ–ಅಪ್ಪುದು.

ವೃತ್ತಿ–ಸ್ವರಂ ಪರಮಾಗೆ ಸಂಸ್ಕೃತದ ಕನ್ನಡದ ವಿಭಕ್ತಿ ಸ್ವರಕ್ಕಂ ಸಹಜ ಸ್ವರಕ್ಕಂ ನಾಮಪ್ರಸಿದ್ಧಿ ಕಿಡದ ಪಕ್ಷಂ ಲೋಪಮಕ್ಕುಂ.

ಪ್ರಯೋಗಂ–ಸಂಸ್ಕೃತ ವಿಭಕ್ತಿಸ್ವರಕ್ಕೆ ಲೋಪಂ : ಕ್ರಮದೆ + ಆಯ್ತು = ಕ್ರಮದಾಯ್ತು, ಈಶ್ವರನ + ಒಲವು = ಈಶ್ವರನೊಲವು, ಇಂದ್ರಂಗೆ + ಐರಾವತಂ = ಇಂದ್ರಂಗೈರಾವತಂ, ಗಿರಿಯತ್ತಣಿಂದೆ + ಇೞಿದಂ = ಗಿರಿಯತ್ತಣಿಂದಿೞಿದಂ, ಗೃಹದಲ್ಲಿ+ಇರ್ದಂ = ಗೃಹದಲ್ಲಿರ್ದಂ.

ಪ್ರಕೃತಿಸ್ವರಕ್ಕೆ ಲೋಪಂ : ಬುಧ + ಅರ್=ಬುಧರ್, ಉದ್ಧತ + ಅರ್=ಉದ್ಧತರ್, ದೇವ + ಎಂಬ=ದೇವೆಂಬ, ರಾಗ + ಇಸು=ರಾಗಿಸು, ಭಂಗ + ಇಸು=ಭಂಗಿಸು, ಭಾವ + ಇಸು=ಭಾವಿಸು, ಭೋಗ + ಇಸು=ಭೋಗಿಸು, ಪಾಲ + ಇಸು=ಪಾಲಿಸು.[1]

ಕರ್ಣಾಟ ವಿಭಕ್ತಿ ಸ್ವರಕ್ಕೆ ಲೋಪಂ : ನೆಲದಿಂದೆ + ಉಣ್ಬಂ = ನೆಲದಿಂದುಣ್ಬಂ, ಲೇಸಿಂಗೆ + ಒಡೆಯಂ=ಲೇಸಿಂಗೊಡೆಯಂ, ಮರದತ್ತಣಿಂದೆ + ಇೞಿದಂ= ಮರದತ್ತಣಿಂದಿೞಿದಂ, ಚಲದ + ಅಣ್ಮಂ=ಚಲದಾಣ್ಮಂ, ಪೊಲದಲ್ಲಿ + ಇರ್ದಂ=ಪೊಲದಲ್ಲಿರ್ದಂ.

ಆಖ್ಯಾತ ವಿಭಕ್ತಿಯ ಸ್ವರಕ್ಕಂ ಲೋಪಮುಂಟು : ಮಾಡಿದೆವು + ಒಳ್ಪಂ=ಮಾಡಿದೆವೊಳ್ಪಂ.

ಕ್ರಿಯಾ ವಿಭಕ್ತಿಯಾದೇಶ ಸ್ವರಕ್ಕಂ ಲೋಪಮುಂಟು : ಕೂಡಿ + ಇರ್ದಂ=ಕೂಡಿರ್ದಂ, ಪಸಿದು + ಉಂಡಂ=ಪಸಿದುಂಡಂ.

[1]ತೃತೀಯೆಗಾದೇಶಮಾದ ಎಕಾರಕ್ಕಂ ಲೋಪಮುಂಟು : ಪೊಲದೆ + ಎಟ್ಟಿಂದಂ=ಪೊಲದೆಟ್ಟಿಂದಂ.[1]

ಪ್ರಕೃತಿ ಸ್ವರಲೋಪಕ್ಕೆ : ಅಕಾರಕ್ಕೆ–ಅರಸ + ಆಳ್=ಅರಸಾಳ್, ಅಚ್ಚ + ಆನೆ = ಅಚ್ಚಾನೆ, ಸಾವಂತ + ಓಲಗಂ=ಸಾವಂತೋಲಗಂ, ಜೀಯ + ಎಂಬ=ಜೀಯೆಂಬ, ಬಡಬಡ + ಆದಂ = ಬಡಬಡಾದಂ.

ಇಕಾರಕ್ಕೆ : ದಾಟಿಟ್ಟಂ, ಸವಡಿಟ್ಟಂ.

ಉಕಾರಕ್ಕೆ : ಸುತ್ತೋಲೆ, ಹತ್ತೆಂಟು, ಲೇಸೆಲ್ಲಂ, ಸೊವಡೊಂದು.

ಏಕಾರಕ್ಕೆ : ಸೇಸಿಕ್ಕಿದಂ, ಮುಡಿಗಿಕ್ಕಿದಂ, ಮತ್ತೆಲ್ಲಂ, ಮುನ್ನಱಿವಂ.

ನಾಮಂ ಕಿಡುವೊಡೆ ಸಂಸ್ಕೃತ ಕರ್ಣಾಟಕ ಪ್ರಕೃತಿ ಸ್ವರಕ್ಕೆ ಲೋಪಮಿಲ್ಲ : ಪಟು + ಏಕ ವಾಕ್ಯಂ = ಪಟುವೇಕವಾಕ್ಯಂ, ವಿಧು + ಇದು = ವಿಧುವಿದು, ಮಡುವಿದು, ಕುಡುವಿದು.

ಸೂತ್ರಂ॥ **ಎರಡುಂ ರೇಫೆಗಳಂ ತಂ**
**ದುರವಣೆಯಿಂ ಕೂಡಿದಂತೆವೋಲ್ ಶ್ರುತಿಕಷ್ಟಂ**
**ಬರೆ ಸಂಧಿಮಾಡಲಾಗದು**
**ಕರಡೆಯ ಗಿರ್ಗಟದ ದನಿವೊಲಮರವವೆಂದುಂ** ೭೩

ಟೀಕು ॥ ಎರಡುಂ ರೇಫೆಗಳು–ಪೂರ್ವಪದದ ಕಡೆಯಲ್ಲಿ ಪರಪದದ ಮೊದಲಲ್ಲಿ ಇರ್ದ ಎರಡು ರೇಫೆಗಳು; ತಂದು–ತಂದುಕೊಂಡು; ಉರವಣೆಯಿಂ–ಶೀಘ್ರದಿಂದೆ; ಕೂಡಿದಂತೆವೋಲ್–ಕೂಡಿದಹಾಂಗೆ; ಶ್ರುತಿಕಷ್ಟಂ–ಶ್ರುತಿಕಷ್ಟವೆಂಬ ಕರ್ಣಕಠೋರಂ; ಬರೆ–ಬರೆ; ಸಂಧಿಮಾಡಲ್–ಸಂಧಿಯಂ ಮಾಡಲ್ಕೆ; ಆಗದು–ಸಲುವಳಿಯಾಗದು; ಅವು–ಅವು; ಎಂದುಂ–ಅವಾಗಳುಂ; ಕರಡೆಯ–ಕರಡೆ ಎಂಬ ವಾದ್ಯದ; ಗಿರ್ಗಟದ–ಗಿರ್ಗಟೆಯೆಂಬ ವಾದ್ಯದ ದನಿವೊಲ್–ದನಿಯ ಹಾಗೆ. ಅಮರವು–ಪೊರ್ದುಗೆಯಾಗವು.

ವೃತ್ತಿ–ಪದಂಗಳೆರಡಱಂತರಾಳರೇಫೆಗಳಂ ಕೂಡಿದಂತೆ ಶ್ರುತಿಕಷ್ಟಮಾಗೆ ಸಂಧಿಯಂ ಮಾಡಲಾಗದು; ಕರಡೆಯ ಗಿರಿಗಂಟೆಯ ದನಿಯಂತಿರವು ನೇರ್ಪಡವು.

ಪ್ರಯೋಗಂ–ರೇಫದ್ವಿತದು ಸಂಧಿದೋಷಕ್ಕೆ :

ಬಂದರ್ರಾಮರ್, ದೇವರ್ರಕ್ಷಿಸುಗೆ
'ಮೂವರ್ರಾಯರನೆ ಮಾಱುವಂತೆಸೆದಿರ್ಕುಂ.[1]

ಶ್ರುತಿಕಷ್ಟಕ್ಕೆ : ವಿದ್ವಿಟ್ರೇಯರ್ ಎಂದು ಸಂಧಿಮಾಡಲಾಗದು. (೧)

ಸೂತ್ರಂ॥ **ನೀನಱೆ ಕರ್ಣಾಟಕದೊಳ್**
**ಪೀನಂ ಸ್ತ್ರೀಪುಂನಪುಂಸಕೋಭಯಪುಂಸ್ತ್ರೀ**
**ಸ್ತ್ರೀನಪ್‌ಸಮಸ್ತ ವಾಚ್ಯಾ**
**ನೂನಾವ್ಯಯಮೆಂದು ಲಿಂಗಮೊಂಬತ್ತು ತೆಱಂ** ೯೮

ಟೀಕು ॥ ಕರ್ಣಾಟಕದೊಳ್–ಕನ್ನಡದಲ್ಲಿ; ಪೀನಂ–ವೆಗ್ಗಳವಾಗಿ; ಸ್ತ್ರೀ–ಸ್ತ್ರೀಲಿಂಗವೆಂದ ಪುಂ–ಪುಲ್ಲಿಂಗವೆಂದು; ನಪುಂಸಕ–ನಪುಂಸಕಲಿಂಗವೆಂದು; ಉಭಯ–ಪುಂನಪುಂಸಕಲಿಂಗವೆಂದು; ಪುಂಸ್ತ್ರೀ–ಪುಂಸ್ತ್ರೀಲಿಂಗವೆಂದು; ಸ್ತ್ರೀನಪ್–ಸ್ತ್ರೀನಪುಂಸಕ ಲಿಂಗವೆಂದು; ಸಮಸ್ತ–ತ್ರಿವಿಧಲಿಂಗವೆಂದು; ವಾಚ್ಯ–ವಿಶೇಷ್ಯಾಧೀನ ಲಿಂಗವೆಂದು;

ಅನೂನ–ಕೊರತೆಯಿಲ್ಲ. ಅವ್ಯಯ–ಅವ್ಯಯಲಿಂಗವೆಂದು; ಲಿಂಗಂ–ಲಿಂಗಂಗಳ್; ಒಂಬತ್ತು ತೆಱಂ–ಒಂಬತ್ತು ಪ್ರಕಾರವೆಂದು; ನೀಂ–ನೀಂ; ಅಱೆ–ತಿಳಿ.

ವೃತ್ತಿ–ಕರ್ಣಾಟಕ ಭಾಷೆಯೊಳ್ ಪಿರಿದುಂ ಸ್ತ್ರೀಲಿಂಗಮೆಂದುಂ ಪುಲ್ಲಿಂಗಮೆಂದುಂ ನಪುಂಸಕಲಿಂಗಮೆಂದುಂ ಪುಂಸ್ತ್ರೀಲಿಂಗಮೆಂದುಂ ಸ್ತ್ರೀನಪುಂಸಕಲಿಂಗಮೆಂದಂ ಪುನ್ನಪುಂಸಕಲಿಂಗ ಮೆಂದುಂ ತ್ರಿವಿಧಲಿಂಗಮೆಂದುಂ ವಿಶೇಷ್ಯಾಧೀನಲಿಂಗಮೆಂದುಂ ಅವ್ಯಯಲಿಂಗಮೆಂದುಂ ಲಿಂಗಮೊಂಬತ್ತು ತೆಱಂ.

ಪ್ರಯೋಗಂ–ಸ್ತ್ರೀಲಿಂಗಕ್ಕೆ : ಅರಸಿ, ದೇವಿ.

ಪುಲ್ಲಿಂಗಕ್ಕೆ : ಅರಸಂ, ದೇವಂ, ಸುರಂ, ನರಂ.

ನಪುಂಸಕಲಿಂಗಕ್ಕೆ : ಕನ್ನಡಿ, ಕಳಶಂ, ಜೆಡೆ, ಕೊಡೆ.

ಪುನ್ನಪುಂಸಕಕ್ಕೆ : ರವಿ ಮೂಡಿದಂ ರವಿ, ಮೂಡಿದುದು. ವಿಧು ಮೂಡಿದಂ, ವಿಧು ಮೂಡಿದುದು. ಮಂಗಳನಿವಂ, ಮಂಗಳನಿದು. ಬುಧನಿವಂ, ಬುಧನಿದು. ಬೃಹಸ್ಪತಿಯಿವಂ, ಬೃಹಸ್ಪತಿಯಿದು. ಶುಕ್ರನಿವಂ, ಶುಕ್ರನಿದು. ಶನಿಯಿವಂ, ಶನಿಯಿದು. ರಾಹುವಿವಂ, ರಾಹುವಿದು. ಕೇತುವಿವಂ, ಕೇತುವಿದು ಗ್ರಹಂಗಳೆಲ್ಲಂ ಪುನ್ನಪುಂಸಕಂಗಳ್.

ಆಳಿವಂ, ಆಳಿದು, ಅಂಕಮಿವಂ, ಅಂಕಮಿದು, ಬಸಂತಂ ಬಂದಂ, ಬಸಂತು ಬಂದುದು, ಮಲಯಾನಿಲಂ ತೀಡಿದಂ, ಮಲಯಾನಿಲಂ ತೀಡಿದುದು. ಕಾಮಂಗಂ ಕಾಮಕ್ಕಮೇಕತ್ವ ಮುಳ್ಳುದಱೆಂ ಕಾಮನೆಚ್ಚಂ, ಕಾಮಂ ಪೆರ್ಚಿದುದು–ಇವುಮಂತೆ.

ಪುಂಸ್ತ್ರೀಲಿಂಗಕ್ಕೆ : ಇವರ್ ಪುರುಷರ್, ಇವರ್ ಸ್ತ್ರೀಯರ್, ಅವರ್ಗಂಡರ್, ಅವರ್ ಪೆಂಡಿರ್, ಉವರ್ ದೇವರ್, ಉವರ್ ದೇವಿಯರ್, ತೊಟ್ಟುಂಬುದುಮಂತೆ–ಇವಂ ದೇವರ ತೋಟ್ಟು, ಇವಳ್ ದೇವರ ತೋಟ್ಟು.

ಸ್ತ್ರೀನಪುಂಸಕಕ್ಕೆ : ಆ ಪೆಣ್ ಜಾಣೆ, ಆ ಪೆಣ್ ಬಂದುದು. ಈ ಕನ್ನಿಕೆ ಸಲಕ್ಷಣೆ, ಈ ಕನ್ನಿಕೆ ಪೊಲ್ಲದು, ಸಿರಿ, ಸರಸ್ವತಿ, ದೇವತೆ ಎಂಬಿವುಮಂತೆ.

ಸಿರಿಯೊಲ್ವಳೆ ಹೃದ್ಯವಿದ್ಯರಂ[1] (೧)
ಸಿರಿಯೊಂದಾಗದೊಡಮೇನೊ ಸುಜನೋತ್ತಂಸಾ. (೨)
ಸರಸ್ವತಿ ಕೈನೆರವಾಗೆ ಪೇಟ್ದಿಪಳ್. (೩)
ಪರಮಜಿನೇಂದ್ರವಾಣಿಯೆ ಸರಸ್ವತಿ [3]ಬೇಱ[3]ದು ಪೆಣ್ಣ ರೂಪಮಂ
ಧರಿಯಿಸಿ ನಿಂದುದಲ್ತದುವೆ... (೪)
ದೇವತೆಯರ್ ಮೆಚ್ಚಿ ಬರಮನರಸಂಗಿತ್ತರ್ (೫)
ಬಾರಿಸಿದುವು ಬಿಡದೆ ಜಡಿದು ವನದೇವತೆಗಳ್. (೬)
ಅವಳ್ ಸಜ್ಜನವೆಂಡತಿ, ಅದು ಸಜ್ಜನಂ.

ತ್ರಿಲಿಂಗಕ್ಕೆ : ನೀನರಸಂ, ನೀನರಸಿ, ನೀನ್, ಪಶು, ನೀನ್, ಆನ್, ತಾನ್, ಏನ್, ಆರ್, ಏತರ್ಕೆ, ಅದಕೆ, ಶಿಶು, ಹಸುಳೆ, ಮಗುವು, ಕೂಸು, [1]ಸೊಂದಿ, ಪಗೆ, ಕಳೆ, ಅರಸು, [2]ತರುವಲಿ–ಎಂಬಿವುಮಂತೆ.

ವಾಚ್ಯಲಿಂಗಮೆಂದು ವಿಶೇಷ್ಯಾಧೀನಲಿಂಗಮದರ್ಕೆ ಪ್ರಯೋಗಂ : ನೇರಿದನಿವಂ, ನೇರಿದಳಿವಳ್, ನೇರಿತಿದು, ಅಭಿಮಾನಿ, ದಾನಿ, ಸಾಧು, [3]ಹಡಣಂ, [4]ಚಂಡಿ, ಕಟ್ಟಿ, ರಾಗಿ, ಭೋಗಿ, ಸುಖಿ, ಹೇಡಿ, ಕಲಿ, ಗುರು, ಲಘು–ಇವುಮಾ ತೆಱದೆ ಸಲ್ವುವು.

ಅವ್ಯಯಲಿಂಗಕ್ಕೆ ಪ್ರಯೋಗಂ : ಭೋಂಕನೆ ಬಂದಂ, ಭೋಂಕನೆ ಬಂದಳ್, ಭೋಂಕನೆ ಬಂದುದು. ತೊಟ್ಟನೆ, ಮೆಲ್ಲನೆ, ಕಮ್ಮನೆ, ಇಮ್ಮನೆ, ಸೀಯನೆ, ಕೆಚ್ಚನೆ, ಪಚ್ಚನೆ, ಬೆಳ್ಪಳಂ, ಚೆಚ್ಚರಂ, ನಿರ್ನೆರಂ (ನಿರ್ನೆರಂ ಎಂದು ನಿಷ್ಕಾರಣಂ), ಅಂತಱೆಂ, ಸೋಡಂಬಾಡಂ (ಸೋಡಂಬಾಡಂ ಎಂದು ಪಿರಿದೆಂಬರ್ಥಂ), ಅಂತೆವೋಲ್, ಮಿಗೆ, ದಲ್, ವಲಂ, ವೆಱಂ, ಕೆನ್ನಂ ಮತ್ತೆ–ಇವಾದಿಯಾಗಿ ಅವ್ಯಯಲಿಂಗಮನಱವುದು.

ಸೂತ್ರಂ॥ **ಪುರುಷರೆ ಪುಲ್ಲಿಂಗಂ ಸ್ತ್ರೀ**
**ಯರೆ ತಾಂ ಸ್ತ್ರೀಲಿಂಗಮುೞಿದವೆಲ್ಲಂ ನಪ್ಪಾ**
**ಗಿರೆ ಸಲ್ಗುಂ ಕನ್ನಡದೊಳ್**
**ಪರಿವರ್ತಿಸುವುೞಿದ ಲಿಂಗಮೊಳವಾಗಿರ್ದುಂ ೧೦೧**

ಟೀಕು ॥ ಪುರುಷರೆ–ಪುರುಷರಂ ಪೇಳ್ವ ಶಬ್ದಂಗಳೆ; ಪುಲ್ಲಿಂಗಂ–ಪುಲ್ಲಿಂಗವೆನಿಪುವು; ಸ್ತ್ರೀಯರೆ–ಸ್ತ್ರೀಯರಂ ಪೇಲ್ವ ಶಬ್ದಂಗಳೆ; ತಾಂ–ತಾಂ. ಸ್ತ್ರೀಲಿಂಗಂ–ಸ್ತ್ರೀಲಿಂಗವೆನಿಪುವು; ಉೞಿದುವು–ಪುರುಷರಂ ಸ್ತ್ರೀಯರು ಪೇಳದೆ ಉಳಿದ ಶಬ್ದಂಗಳ್; ಎಲ್ಲಂ–ಎಲ್ಲವು; ನಪ್ಪಾಗಿರೆ–ನಪುಂಸಕಲಿಂಗವಾಗಿರೆ; ಸಲ್ಗುಂ–ಸಲ್ವುವು; ಕನ್ನಡದೊಳ್–ಕರ್ಣಾಟಕ ಶಬ್ದದಲ್ಲಿ; ಉೞಿದ ಲಿಂಗಂ–ಮಿಕ್ಕ ಲಿಂಗಂಗಳ್; ಒಳವಾಗಿರ್ದುಂ–ಉಂಟಾಗಿರ್ದುಂ; ಪರಿವರ್ತಿಸವು–ಪ್ರವರ್ತಿಸವು.

ವೃತ್ತಿ–ಪುರುಷರಂ ಪೇೞ್ವ ಶಬ್ದಂಗಳೆಲ್ಲಂ ಪುಲ್ಲಿಂಗಂಗಳ್; ಸ್ತ್ರೀಯರಂ ಪೇೞ್ವ ಶಬ್ದಂಗಳೆಲ್ಲಂ ಸ್ತ್ರೀಲಿಂಗಂಗಳ್; ಉೞಿದ ಶಬ್ದಂಗಳೆಲ್ಲಂ ನಪುಂಸಕಂಗಳ್.

ಪ್ರಯೋಗಂ–ಪುಲ್ಲಿಂಗಕ್ಕೆ; ಅರಸಂ, ಕಾಮಂ, ರಾಮಂ, ರಾವಣಂ, ಭೀಮಂ, ಬ್ರಹ್ಮಂ, ನಾರಾಯಣಂ, ಶಂಕರಂ ಎಂಬಂತೆ.

ಸ್ತ್ರೀಲಿಂಗಕ್ಕೆ : ಲಕ್ಷ್ಮಿ, ಗೌರಿ, ಸರಸ್ವತಿ, ರತಿ, ಶಚಿ, ರೋಹಿಣಿ, ಕಾಮಿನಿ, ರಮಣಿ ಎಂಬಂತೆ.

ನಪುಂಸಕಲಿಂಗಕ್ಕೆ ಮರಂ, ಬಳ್ಳಿ, ಪುಲಿ, ಕರಡಿ, ಬೆಟ್ಟಂ, ಗಟ್ಟಂ, ಪುಲ್, ಪೂದಱ್, ಕನ್ನಡಿ, ಕಳಶು–ಇವು ಮೊದಲಾದ ತಿರ್ಯಗ್ಜೀವಂಗಳಪ್ಪ ಚೇತನಾಚೇತನ ವಸ್ತುಗಳ್ ನಪುಂಸಕಂಗಳ್.

ಇಂತುಂ ಲಿಂಗತ್ರಯಂ ಕನ್ನಡದೊಳ್ ಪಿರಿದುಂ ಪ್ರಸಿದ್ಧ ಮಾಗಿರ್ಪುವು; ಮಿಕ್ಕ ಲಿಂಗಂಗಳೆಲ್ಲಂ ಕ್ವಚಿತ್ಪ್ರಯೋಗಂಗಳ್.

ಸೂತ್ರಂ॥ **ಸಂದಿಸಿ ಮಮಿಂಕೆಯದದೊ**
**ಳ್ದೆಂದಿರ್ಪುವು ಸಪ್ತವಿಧ ವಿಭಕ್ತಿಗಳವು ಮಾ**
**ರ್ಗಂದಪ್ಪದರ್ಥವಶದಿಂ**
**ಪಿಂದೆಣಿಸಿದ ವಿವಿಧವಿಧದ ಲಿಂಗಕ್ಕೆಲ್ಲಂ ೧೦೩**

ಟೀಕು ॥ ಪಿಂದೆ–ಹಿಂದೆ; ಎಣಿಸಿದ ವಿವಿದ ವಿಧದ–ಹೇಳ್ದ ನಾನಾ ಪ್ರಕಾರದ; ಲಿಂಗಕ್ಕೆ–ಲಿಂಗಂಗಳ್ಗೆ; ಸಪ್ತವಿಧ–ಏಳು ತೆರನಾದ; ವಿಭಕ್ತಿಗಳ್–ಪ್ರತ್ಯಯಂಗಳ್; ಅವು–ಅವು; ಎಲ್ಲಂ–ಎಲ್ಲವು; ಮಾರ್ಗಂದಪ್ಪದೆ–ಕವಿಮಾರ್ಗಂ ತಪ್ಪದೆ; ಅರ್ಥ ವಶದಿಂ–ಅರ್ಥವಶದಿಂದೆ; ಸಂಧಿಸಿ–ಪೊರ್ದುಗೆಯಾಗಿ ಮಮಿಂಕೆಯದದೊಳೆ–ಮ್, ಅಮ್, ಇಮ್, ಕೆ, ಅತ್, ಅದ್, ಒಳ್ ಎಂಬಿವೆ; ಎಂದು–ಹೀಗೆಂದು; ಇರ್ಪುವು–ಇರ್ಪುವು.

ವೃತ್ತಿ–ಪಿಂತೆ ಪೇೞ್ದ ನಾನಾ ತೆಱದ ಲಿಂಗಂಗಳ್ಗೆ ಪರಮಾಗಿ ನಾಮ ವಿಭಕ್ತಿಗಳ್ ಮ್, ಅಮ್, ಇಮ್, ಕೆ, ಅತ್, ಅದ್, ಒಳ್, ಎಂದು ಪ್ರಥಮೆಗಂ, ದ್ವಿತೀಯೆಗಂ, ತೃತೀಯೆಗಂ, ಚತುರ್ಥಿಗಂ, ಪಂಚಮಿಗಂ, ಷಷ್ಠಿಗಂ, ಸಪ್ತಮಿಗಂ ಏೞಾಗಿ ಕಾರಕವಶದಿಂ ಪತ್ತುಗುಂ. ಕಾರಕಮೆಂಬುದು ಕ್ರಿಯಾನಿಮಿತ್ತಂ, ಆ ಕಾರಕಂ ಕರ್ತೃವೆಂದುಂ ಕರ್ಮಮೆಂದುಂ ಕರಣಮೆಂದುಂ ಸಂಪ್ರದಾನಮೆಂದುಂ ಅಪಾದಾನಮೆಂದುಂ ಅಧಿಕರಣಮೆಂದುಂ ಷಡ್ವಿಧಮಾರ್ಗಿರ್ಪುದು; ಷಷ್ಠಿಯೆಂಬುದು ಸಂಬಂಧಾರ್ಥಂ.

ಪ್ರಯೋಗಂ–ಮರಂ, ಮರನಂ, ಮರದಿಂ, ಮರಕ್ಕೆ, ಮರದತ್ತಣಿಂ, ಮರದ, ಮರದೊಳ್, ಮರನೇ–ಇಂತರ್ಥವಶದಿಂ ವಿಭಕ್ತಿ ಪರಿಣಾಮಿಪುವು; ವಿಭಕ್ತಿಗಳ್ ವಿಕಾರಮನೆಯ್ದುವುದಱಿಂ ಪದಂ ನಾನಾರೂಪಮಪ್ಪುದು.

ಮರನಿರ್ದುದು ಮರನಂ ಕಡಿ
ಮರದಿಂ ಮಾಡಾನೆಯಂ ಮರಕ್ಕೆಱೆ ನೀರಂ
ಮರದತ್ತಣಿನೆಲೆ ಬಿೞ್ದುದು
ಮರದದು ಪಣ್ ಮರದೊಳಿರು ತಳಿರ್ತಿರು ಮರನೇ (೧)

ಸೂತ್ರಂ॥ **ಏಕದ್ವಿತ್ವಬಹುತ್ವಮ**
**ನೇಕದ್ವಿಬಹುತ್ವವಸ್ತು [1]ಗಳ್ಗಾ[1] ಚರಿಪರ್**
**ಸ್ವೀಕಾರಂ ಕನ್ನಡದೊಳ**
**ಗೇಕಬಹುತ್ವಂ ದ್ವಿವಚನಮುಚಿತದೆ ಬರ್ಕುಂ ೧೦೪**

ಟೀಕು ॥ ಏಕದ್ವಿಬಹುತ್ವವಸ್ತುಗ[2]ಳೊಳ್–ಏಕವಸ್ತು ಬಹುವಸ್ತುಗಳಲ್ಲಿ[2]; ಏಕದ್ವಿತ್ವ ಬಹುತ್ವಮಂ–ಏಕವಚನ ದ್ವಿವಚನ ಬಹುವಚನಮಂ; ಆಚರಿಪರ್–ಪೇಳ್ವರ್; ಕನ್ನಡದೊಳಗೆ–ಕರ್ಣಾಟಕ ಭಾಷೆಯಲ್ಲಿ; ಏಕಬಹುತ್ವಂ–ಏಕವಚನ ಬಹುವಚನಂಗಳ್; ಸ್ವೀಕಾರಂ–ಅಂಗೀಕಾರಂ; ದ್ವಿವಚನಂ–ದ್ವಿವಚನಂ; ಉಚಿತದೆ–ಉಚಿತದಿಂದೆ; ಬರ್ಕುಂ–ಬರ್ಪುದು.

ವೃತ್ತಿ–ಒಂದೆರಡು ಮೂಱೆಂದು ಪದಾರ್ಥವನೆಣಿಸುವೆಡೆಯೊಳ್ ಏಕ ದ್ವಿ ಬಹುತ್ವ ವೃತ್ತಿಯಂ ಸ್ವೀಕರಿಸುವರ್; ಏಕ ಬಹುತ್ವಂಗಳ್ ಕನ್ನಡದೊಳತಿ ವ್ಯಕ್ತಂಗಳ್; ದ್ವಿವಚನ ಮನೌಚಿತ್ಯದಿಂದಱಿವುದು.

ಪ್ರಯೋಗಂ–ಏಕದ್ವಿತ್ವಬಹುತ್ವಂಗಳ್ಗೆ : ಮೇರುವಿದು, ಕಣ್ಗಳಿವು, ಕರುಳ್ಗಳಿವು; ಕಲಿ ಇವಂ, ಕಲಿಗಳಿವರ್. ಔಚಿತ್ಯದ ದ್ವಿವಚನಕ್ಕೆ : ಭೀಮಾರ್ಜುನರ್, ರಾಮಲಕ್ಷ್ಮಣರ್, ನಕುಲಸಹದೇವರ್ ಎಂಬಂತುಚಿತವಚನ ಪ್ರಸಿದ್ಧಿಯಿಂ ದ್ವಿವಚನಮನಱಿವುದು.

## ೩. ಸಮಾಸಪ್ರಕರಣಂ

ಸೂತ್ರಂ॥ **ಕಱು ತಾಯ ಬೞಿಯನುೞಿಯದ**
**ತೆಱದಿಂದಂ ನಾಮಪದಮದರ್ಥಾನುಗಮಾ**
**ಗೆಱಗೆ ಸಮಾಸಂ ನೆಗೞ್ಗುಂ**
**ನೆಱೆ ಪೋಕುಂ ಮಧ್ಯಗತವಿಭಕ್ತಿಗಳವಱೊಳ್** ೧೭೩

ಟೀಕು ॥ ಕಱು–ಕಱು; ತಾಯ ಬೞಿಯಂ–ತಾಯ ಬೆಂಬಳಿಯಂ; ಉೞಿಯದ ತೆಱದಿಂ–ಬಿಡದ ರೀತಿಯಿಂದೆ; ನಾಮಪದಂ–ನಾಮಪದಂ; ಅದು–ಅದು; ಅರ್ಥಾನುಗಂ–ಅರ್ಥದ ಬೆಂಬಳಿವಿಡಿದೆಯ್ದುವುದು; ಅಗಿ–ಅಗಿ; ಎಱಗೆ–ಪೊರ್ದುಗೆಯಾಗೆ; ಸಮಾಸಂ–ಸಮಾಸ ಪದಂ; ನೆಗೞ್ಗುಂ–ಪ್ರಸಿದ್ಧಿವಡೆವುದು; ಅವಱೊಳ್–ಆ ಸಮಾಸಂಗಳಲ್ಲಿ; ಮಧ್ಯಗತ ವಿಭಕ್ತಿಗಳ್–ನಡುವಿರ್ದ ಪ್ರತ್ಯಯಂಗಳ್; ನೆಱೆ–ಚೆನ್ನಾಗಿ; ಪೋಕುಂ–ಲೋಪವಾಗಿ ಹೋಗುವುವು.

ವೃತ್ತಿ–ತಾಯ ಬೞಿಯನುೞಿಯದ ಕಱುವಿನಂತೆ ನಾಮಪದಂಗಳರ್ಥದೊಳನುಗತಂಗಳಾಗೆ ಸಮಾಸಂ ಘಟಿಯಿಸುಗುಂ; ಅಂತರಾಳದೊಳಿರ್ದ ವಿಭಕ್ತಿಯೆಲ್ಲಂ ಪೋಕುಂ.

ಪ್ರಯೋಗಂ–ತೋಟಿಯ ಮಾವು = ತೋಱಿಮಾವು; ತೊಡೆಯ[1]ಸ[1]ಕ್ಕಿ = ತೊಡೆ[1]ಸ[1]ಕ್ಕಿ; ಎಡೆಯ ನುಡಿ = ಎಡೆನುಡಿ; ನೀರಂ ಕುಡಿದಂ = ನೀರ್ಗುಡಿದಂ; ಮರನಂಪಾಯ್ದಂ = ಮರವಾಯ್ದಂ; [2]ಪುಯ್ಯಲ್ಗೆ[2] ಪೋದಂ = ಪುಯ್ಯಲ್ವೋದಂ; ಮೆಲ್ಲಿತು ಅಡಿ = ಮೆಲ್ಲಡಿ.

ಸೂತ್ರಂ ॥ **ಪರಪದದೊಳರ್ಥವರ್ತನ**
**ಮಿರೆ ತತ್ಪುರುಷಂ ಸಮಂತದೇಕಾಶ್ರಯಮಾ**
**ಗಿರೆ ಕರ್ಮಧಾರಯಂ ನೆಲ**
**ಸಿರೆ ಮೊದಲೊಳ್ ಸಂಖ್ಯೆಯದೆ ವಲಂ ದ್ವಿಗುವಕ್ಕುಂ ೧೭೫**

ಟೀಕು ॥ ಪರಪದದೊಳ್–ಮುಂದಣ ಪದದಲ್ಲಿ; ಅರ್ಥವರ್ತನಂ–ಅರ್ಥದ ವರ್ತನೆ; ಇರೆ–ಇರೆ; ತತ್ಪುರುಷಂ–ತತ್ಪುರುಷ ಸಮಾಸಂ ಅಪ್ಪುದು; ಸಮಂತು–ಹಾಗೆ; ಅದು–ಆ ಸಮಾಸಂ; ಏಕಾಶ್ರಯಂ–ಅನ್ಯೋನ್ಯಾಶ್ರಯಂ; ಆಗಿ–ಆಗಿ; ಇರೆ–ಇರೆ; ಕರ್ಮಧಾರಯಂ–ಕರ್ಮಧಾರಯ ಸಮಾಸಂ ಅಪ್ಪುದು; ಮೊದಲೊಳ್–ಮೊದಲ ಪದದಲ್ಲಿ; ಸಂಖ್ಯೆ–ಸಂಖ್ಯಾವಾಚಿಗಳ್; ನೆಲಸಿರೆ–ನೆಲೆಗೊಂಡಿರೆ; ಅದೆ–ಅದು ತಾನೆ; ವಲಂ–ನಿಶ್ಚಯವಾಗಿ; ದ್ವಿಗು–ದ್ವಿಗುಸಮಾಸಂ; ಅಕ್ಕುಂ–ಅಪ್ಪುದು.

ವೃತ್ತಿ–ಮುಂದಣ ಪದದೊಳರ್ಥಂ ಪ್ರವರ್ತಿಸುತ್ತಿರೆ ತತ್ಪುರುಷಮೆಂಬ ಸಮಾಸಮಕ್ಕುಂ; ಆ ತತ್ಪುರುಷಮೇಕಾಶ್ರಯಮಾಗೆ ಕರ್ಮಧಾರಯಮಕ್ಕುಂ; ಅದುವೆ ಸಂಖ್ಯಾಪೂರ್ವಮಾಗೆ ದ್ವಿಗುವಕ್ಕುಂ.

ಪ್ರಯೋಗಂ–ತತ್ಪುರಷಕ್ಕೆ : ಮಲ್ಲಿಗೆನನೆ, ಮಾಣಿಕಗೆಂಪು, ಅಲರ್ವಕ್ಕಿ, ಕನ್ನಡವಕ್ಕಿ, ಕಡೆಸೆಂಱಗು, ಉಡೆನೂಲ್.[4]

ಕರ್ಮಧಾರಯಕ್ಕೆ : ತೆಳ್ಗದಂಪು, ಒಳ್ಗನ್ನಡಂ, ಮೇಲ್ನುಡಿ, ಬಲ್ಮುಗುಳ್, ಕಿಱುಗೂಸು.
ಕಿಱುಗೂಸಾಗಿಯುಪಾಯಮಂ ಮಱೆ[5]ದ[5]ನೇ... (೧)

ದ್ವಿಗುವಿಂಗೆ : ಎರಟ್ಮಾತು, ಎರಟ್ತಿರಂ, ಇರ್ಪಂಡಿರ್, ಇರ್ವಾಳ್, ಮೂವಾಳ್.

ಇರ್ವಾಳ್, ಮೂವಾಳಿಕ್ಕಿ
ದುರ್ವರೆಯೊಳ್... (೨)

ಸೂತ್ರಂ॥ **ಪದನೆರಡು ಪಲವು ಮೇಣ್ ಪರ**
**ಪದಾರ್ಥಮಂ ಬಯಸುತಿರೆ ಬಹುವ್ರೀಹಿ ಪದಾ**
**ರ್ಥದ ಗಡಣಂ ದ್ವಂದ್ವಮೆನಿ**
**ಪ್ಪುದವ್ಯಯೀಭಾವಮಾದಿಪದಮುಖ್ಯತೆಯಿಂ ೧೭೬**

ಟೀಕು ॥ ಪದನೆರ[ಡು]–ಎರಡು ಪದಂಗ[ಳು]; ಮೇಣ್–ಅದಲ್ಲದೆ; ಪಲ[ವು]–ಪಲವಾದ ಪದಂಗ[ಳು]; ಪರ ಪದಾರ್ಥಮಂ–ಮತ್ತೊಂದನ್ಯ ಪದಾರ್ಥವಂ; ಬಯಸುತೆ–ಬಯಸುತೆ; ಇರೆ–ಇರೆ; ಬಹುವ್ರೀಹಿ–ಬಹುವ್ರೀಹಿ ಸಮಾಸಂ ಎನಿಸುವುದು; ಪದಾರ್ಥದ–ಪದಾರ್ಥಂಗಳ; ಗಡಣಂ–ಸಮೂಹಂ; ದ್ವಂದ್ವಂ–ದ್ವಂದ್ವ ಸಮಾಸಂ;

ಎನಿಪ್ಪುದು–ಎನಿಸುವುದು; ಆದಿಪದ–ಮೊದಲ ಪದದ; ಮುಖ್ಯತೆಯಿಂ–ಮುಖ್ಯತ್ತದಿಂದೆ; ಅವ್ಯಯೀಭಾವಂ–ಅವ್ಯಯೀಭಾವ ಸಮಾಸಂ ಎನಿಸುವುದು.

ವೃತ್ತಿ–ಎರಡು ಪದಂ ಮೇಣ್ ಪಲವು ಪದಂ ಮೇಣ್ ಅನ್ಯಪದಾರ್ಥಮಂ ಬಯಸುತಿರೆ ಬಹುವ್ರೀಹಿಯಕ್ಕು; ಪದಾರ್ಥಂಗಳ [2]ಸಮುಚ್ಚಯಂ[2] ದ್ವಂದ್ವಮಕ್ಕುಂ; ಪೂರ್ವಪದಂ ಪ್ರಧಾನಮಾದೊಡೆ ಅವ್ಯಯಿಭಾವ ಸಮಾಸಂ ಮಕ್ಕುಂ.

ಪ್ರಯೋಗಂ–ಬಹುವ್ರೀಹಿಗೆ : ಕಡುಚಾಗಿ, ಚಲವಾದಿ, ಮೆಲ್ವಿನ್ನಣಿ, ಕಡುಗೇಡಿ, ನಿಡುಮೂಗಿ, [3]ಹಿಳ್ಳೆ[3]ಗಾಲಿ.

ದ್ವಂದ್ವಕ್ಕೆ : ಆಟಪಾಟಕೂಟಂಗಳ್, ಮರಗಿಡುಬಳ್ಳಿಪುಲ್ಲೊದಱುಪಕ್ಕಿಮಿಗಂಗಳ್.

ಆಟಪಾಟಕೂಟಂಗಳ ಕೇಳಿಗೆಯ್ದಿ ಸದ್ದು ಪೊಟ್ಟು... (೧)

ಅವ್ಯಯೀಭಾವಕ್ಕೆ : ಕಿಟ್ಪೊಡೆ, ಅಂಗಯ್, ಅಂಗಾಲ್, ಮೇಂಗಾಲ್, ಪಿಂತಿಲ್, ಕಿಟ್ಸಿರಿ, ಬೆಂಬಿಸಿಲ್, ಬೆಂಗಾಲ್, ಬಯ್ಗಿರುಳ್.[4]

ಸೂತ್ರಂ ॥ **ವಿದಿತಂ ಕ್ರಿಯಾಸಮಾಸಂ**
**ಮೊದಲೊಳ್ ಕಾರಕಮುಮಗ್ರದೊಳ್ ಕ್ರಿಯೆಯುಂ ಸ**
**ನ್ನಿದಮಾಗೆ ಬಿಂದು ಸಕ್ಕದ**
**ದದಂತದೊಳ್ ಕನ್ನಡಕ್ಕೆ ಮೇಣುತ್ವದೊಳಂ** ೧೭೮

ಟೀಕು ॥ ಮೊದಲೊಳ್–ಆದಿಯಲ್ಲಿ; ಕಾರಕಪದಮುಂ–ಕಾರಕಪದಮುಂ; ಆಗ್ರದೊಳು–ಪರದಲ್ಲಿ; ಕ್ರಿಯೆಯುಂ–ಕ್ರಿಯಾಪದಮುಂ; ಸನ್ನಿದಂ–ಸಂಬಂಧಂ; ಆಗೆ–ಆಗೆ; ವಿದಿತಂ–ಪ್ರಸಿದ್ಧವಾದ; ಕ್ರಿಯಾಸಮಾಸಂ–ಕ್ರಿಯಾಸಮಾಸವಪ್ಪುದು; ಸಕ್ಕದದ–ಸಂಸ್ಕೃತದ; ಅದಂತದೊಳ್–ಅಕಾರಾಂತದಲ್ಲಿ; ಬಿಂದು–ಸೊನ್ನೆ ಬರ್ಪುದು; ಕನ್ನಡಕ್ಕೆ–ಕರ್ಣಾಟಕ ಶಬ್ದಕ್ಕೆ; ಮೇಣ್–ವಿಕಲ್ಪದಿಂದೆ; ಉತ್ವದೊಳಂ–ಉಕಾರಾಂತದಲ್ಲಿಯುಂ; ಬಿಂದು–ಸೊನ್ನೆ ಬರ್ಪುದು. ಅಂ ಎಂಬ ಸಮುಚ್ಚಯದಿಂದೆ ಅಕಾರಾಂತದಲ್ಲಿಯುಂ ಬಿಂದು ಬರ್ಪುದು.

ವೃತ್ತಿ–ಮೊದಲೊಳ್ ಕಾರಕಮುಂ ಪರದೊಳ್ ಕ್ರಿಯೆಯುಂ ಅರ್ಥವ್ಯಕ್ತಿಯಿಂ [1]ಕೂ[1]ಡೆ ಕ್ರಿಯಾಸಮಾಸಂ; ಅಲ್ಲಿ ಸಂಸ್ಕೃತದ ಅಕಾರಾಂತಕ್ಕೆ ಬಿಂದು ನಿತ್ಯಂ; ಕನ್ನಡದದಂತಕ್ಕು ಮುದಂ ತಕ್ಕಂ ಮೇಣೆಂಬುದಱಿಂ ಬಿಂದು ವಿಕಲ್ಪಂ.

ಪ್ರಯೋಗಂ–ಕ್ರಿಯಾಸಮಾಸಕ್ಕೆ : ಬಳೆದೊಟ್ಟಂ, ಕೆಳೆಗೊಂಡಂ, ತೆಱೆದೆತ್ತಂ, ಮಱೆವೊಕ್ಕಂ.

ಸಂಸ್ಕೃತ ನಿತ್ಯಬಿಂದುಗೆ : ಗುಣಂಗೊಂಡಂ, ಪ್ರಿಯಂನುಡಿದಂ, ಧನಂಬಡೆದಂ, ರಂಗಂ ಬೊಕ್ಕಂ.

[1]ರಂಗಂಬೊಕ್ಕಾಡುವಂತೆ ಪೆಂಡಿರೆ ಗಂಡರ್[1]... (೧)

ಕನ್ನಡದೊಳ್ ಬಿಂದುವಿಕಲ್ಪಕ್ಕೆ : ಮೊಗಂ ನೋಡಿದಂ, ಮೊಗನೋಡಿದಂ; ಪದಂ ಗೊಂಡಂ, ಪದಗೊಂಡಂ; ಬೆಸಂಬಡೆದಂ, ಬೆಸವಡೆದಂ; ಕೆಯ್ವೊಲಂಗಾದಂ, ಕೆಯ್ವೊಲಗಾದಂ; ಮನಂ ಸಂದಂ, ಮನಸಂದಂ; ಕಡಂಗೊಂಡಂ, ಕಡಗೊಂಡಂ.

[2]ಟೆಕ್ಕೆಯ ಕಲ್ಗಮಿಾ ಕವಿಲೆ ಕರ್ಬುನಕಂ ಮನಸಂದು ಬಂದನೇ[2]...(೨)

ಕಾವೇರಿಯ ಕಾಲನಾ ತಿಗುಳನೇಂ ಕಡಗೊಂಡನೊ ಬಡ್ಡಿಗೊಂಡನೋ...(೩)

ಉತ್ವಕ್ಕೆ : ಪುದುಂಗೊಳಿಸಿದಂ, ಪುದುಗೊಳಿಸಿದಂ; ಮಾತುಂಗುಟ್ಟಿದಂ, ಮಾತುಗುಟ್ಟಿದಂ; ಅಸುಂಗೊಂಡಂ, ಅಸುಗೊಂಡಂ.

ಮಾತುಗುಟ್ಟದೆ ಮೂಗುವಟ್ಟಿರೆ ನೃಪರ್... (೪)

ಬಱುವಾತುಗುಟ್ಟಿ ಪೋಪರೆ ಗಂಡರುಂ... (೫)

ಅಸುಂಗೊಳೆ ಸುರರ್ ನೀನಸುಗೊಂಡೊಡೆ ದೋಸಮಾಗದೇ (೬)

ಅರ್ಥವ್ಯಕ್ತಿ ಕಿಡುವೊಡೆ ಬಿಂದುವಂ ಕಳೆಯಲಾಗದು : ಪಯಣಂಬೋದಂ, ಪಸರಂ[3] ಕುಡೆದಂ[3], ಗಡಣಂಗೊಂಡಂ, ಬಿಜಯಂಗೈದಂ, ಕೆಲಸಂಬೊಕ್ಕಂ, ಕರಗಂಬೊತ್ತಂ.

....ಜವಂ ಮೃಡ

ನೊಳ್ ಕಾದುವ ಕಾಲಮಾನೆ ಕರಗಂಬೊತ್ತೆಂ. (೭)

ಇದಱೊಳರಿಪದಂ ನಿದೋಷಂ :

ಸವಣಂ ಬಳೆಪಂಗೊಳೆ ಗಾಂ
ಡಿವಿ ಬಿಲ್ಗೊಳೆ ಬಲವಿರೋಧಿ ವಜ್ರಂಗೊಳೆ ದಾ
ನವರಿಪು ಚಕ್ರಂಗೊಳೆ ಕೌ
ರವಾರಿ ಗದೆಗೊಳೆ ಪೊಣರ್ಕೆಗಾವಂ ನಿಲ್ವಂ (೮)

ಸೂತ್ರಂ ॥ **ಜನಿಯಿಸುಗುಂ ಸಂಖ್ಯಾಸ**
**ರ್ವನಾಮಗುಣವಚನಕೃತ್ಪ್ರಪೂರ್ವಂ ಗಮಕಂ**
**ತನಗತ್ವಂ ಪೆಱಗಿತ್ವಂ**
**ತನಗರಿಪದನಿಲ್ಲ ಕರ್ಮಧಾರಯಮದುವುಂ ೧೭೯**

ಟೀಕು ॥ ಸಂಖ್ಯಾ–ಸಂಖ್ಯಾವಾಚಿಗಳ್; ಸರ್ವನಾಮ–ಸರ್ವನಾಮಂಗಳ್; ಗುಣ ವಚನ–ಗುಣವಚನಂಗಳ್; ಕೃತ್–ಕೃತ್ತುಗಳ್; ಪ್ರಪೂರ್ವಂ–ಆದಿಯಾಗೆ; ಗಮಕಂ–ಗಮಕಸಮಾಸಂ; ಜನಿಯಿಸುಗುಂ–ಹುಟ್ಟುವುದು; ತನಗೆ–ಗಮಕ ಸಮಾಸವಾದ ತನಗೆ; ಅತ್ವಂ–ಮಧ್ಯಕ್ಕೆ ಅಕಾರಂ; ಪೆಱಗೆ–ಅತ್ವದ ಪಿಂದುಗಡೆಯಲ್ಲಿ; ಇತ್ವಂ–ಇಕಾರಂ

ಹುಟ್ಟುವುದು; ತನಗೆ–ಗಮಕ ಸಮಾಸವಾದ ತನಗೆ; ಅರಿಪದಂ–ಅರಿಸಮಾಸಂ; ಇಲ್ಲ–ಉಂಟಾಗದು; ಅದುವುಂ–ಆ ಗಮಕ ಸಮಾಸವುಂ; ಕರ್ಮ ಧಾರಯಂ–ಕರ್ಮಧಾರಯ ಸಮಾಸವೆನಿಸುವುದು–ಉಂ ಎಂಬ ಸಮುಚ್ಚಯದಿಂದ ಎತ್ತಾನುಂ ತತ್ಪುರುಷಮುಮಪ್ಪುದು.

ವೃತ್ತಿ–ಪರಪದದೊಳ್ ಕಾರಕಮುಂ ಪೂರ್ವಪದದೊಳ್ ಸಂಖ್ಯೆ ಸರ್ವನಾಮ ಗುಣ ವಚನ ಕೃದಂತಂಗಳೊಳಾವುವಿರ್ದೊಡಂ ಗಮಕಸಮಾಸಮಕ್ಕುಂ; ಗುಣವಚನದ ಅಂತರಾಳದೊಳಂದಕಾರಂ, ಪಿಂತಣ ಮೆಯ್ಯೊಳ್ ಇಕಾರಮಕ್ಕುಂ; ಇದಜೊಳರಿಸಮಾಸ ದೋಷಮಿಲ್ಲ; ಅದು ಕರ್ಮಧಾರಯದ ಭೇದಮೆತ್ತಾನುಂ ತತ್ಪುರುಷಮಪ್ಪುದು...

ಪ್ರಯೋಗಂ–ಸಂಖ್ಯೆಯೊಳ್ ತತ್ಪುರುಷಕ್ಕೆ; ಇರ್ಪತ್ತೈದು, ನೂಱಪತ್ತು, ಮೂವತ್ತಾಱು. ಮೂವತ್ತಾಱುಂ ಗುಣಂಗಳ್ ತಮಗಮರ್ದಿರೆ...(೧)

ಸರ್ವನಾಮಕ್ಕೆ :

ಆವಮಾತು, ಆವಕಾರ್ಯಂ, ಆವನಾಯಕಂ, ಆವಕಾಂತೆ.
ಆವ ರಾವುತರಾವ ವಾಜಿಗಳಾವವಾನೆಗಳಾವನಾ
ಳಾವನಾಯಕರೋ... ನಿಮ್ಮಾವ್ಯೂಹಸಂದೋಹದೊಳ್ (೨)

ಗುಣವಚನಕ್ಕೆ :

ಅಸಿಯನಡು ಪಸಿಯಬಣ್ಣಂ
ಮಿಸುಪ ರದಂ...
ಬಿಳಿಯಕರ್ಬು, ನಿಡಿಯನಾಲಗೆ, ಕಿಱೆಯಮಗಂ.[1] (೩)

ಕೃತ್ತಿಂಗೆ :

ಪಾಡುವ ತುಂಬಿ ಕೋಡುವ ಪುೞಿಲ್... (೪)
ಆಡಿದ ಪೊಲನುಂಡಮರ್ದು ಕಂಡವಿಚಾರಂ. (೫)

ಅರಿಸಮಾಸಕ್ಕೆ ನಿರ್ದೋಷಂ :

ಬೀಸುವಚಾಮರಂ, ಪೊಡೆವಭೇರಿ, ಪೂರೈಸುವಶಂಖಂ,
ಪಿಡಿವಕಹಳೆ, ಪೂಸಿದಭಸ್ಮಪರಾಗಂ
ಆದವಿಷ್ಣು ವಿಜಯಾದಿತ್ಯಂ. (೬)
ಪಿಂಗೆ ಪೂಸಿದ ಭಸ್ಮಪರಾಗಂ ಪೊಣ್ಣು ವರ್ಘರ್ಮಜಲಂಗಳಾ
ಪಾಂಗು... (೭)

ಸೂತ್ರಂ ॥ **ಅದುವಿದುವುದುಗಾಯಿಾಯೂ**
**ವೊದೆವುಗುಮಾದೇಶಮಾಗಿ ಗಮಕದೊಳಾಯೆಂ**

**ಬುದು ಪೂರ್ವಪರಾಮರ್ಶೆಗ**
**ಮೊದವುಗುಮಾ ರೂಢಿಗಂ ಕವೀಶ್ವರಮತದಿಂ ೧೮೦**

ಟೀಕು ॥ ಗಮಕದೊಳ್–ಗಮಕ ಸಮಾಸದಲ್ಲಿ; ಅದುವಿದುವುದುಗೆ–ಅದು ಇದು ಉದು ಎಂಬ ಶಬ್ದಂಗಳ್ಗೆ; ಆಯೀಯೂ–ಆ ಎಂಬುದು ಈ ಎಂಬದು ಊ ಎಂಬುದು; ಆದೇಶವಾಗಿ–ಆದೇಶವಾಗಿ; ಒದವುಗುಂ–ಪ್ರಾಪ್ತಿಸುವುದು; ಕವೀಶ್ವರಮತದಿಂ–ಕವೀಶ್ವರಮತದಿಂದೆ; ಆಯೆಂಬುದು–ಆ ಎಂಬ ಶಬ್ದಂ; ಪೂರ್ವಪರಾಮರ್ಶೆಗಂ–ಪೂರ್ವ ಸ್ಮರಣೆಕ್ಕೆಯುಂ; ಆ ರೂಢಿಗಂ–ಆ ಪ್ರಸಿದ್ಧಿಗೆಯುಂ.

ವೃತ್ತಿ– ಅದು ಇದು ಉದು ಎಂಬ ಸರ್ವನಾಮಕ್ಕೆ ಗಮಕಸಮಾಸದೊಳ್ ಆ ಈ ಊ ಎಂದಾದೇಶಮಪ್ಪುವು; ಆ ಎಂಬುದು ಪೂರ್ವಸ್ಮರಣದೊಳಂ ಪ್ರಸಿದ್ಧಿಯೊಳಮುಂಟು. ಒದವುಗುಂ–ಪ್ರಾಪ್ತಿಸುವುದು.

ಪ್ರಯೋಗಂ–ಆ ಈ ಊ ಎಂಬ ಆದೇಶಕ್ಕೆ
ಆಮನೆ ಸಿರಿಯ ತವರ್ಮನೆ...(೧)
ಪಲದೆವಸಕ್ಕೆ ಕಂಡೆವಣವೀಮನೆಯತ್ತಲೆ ಸಾರಿರೀಕೆಗಿ ನ್ನಲಸಿದಿರಕ್ಕುಂ...(೨)
ಕಱು ತಡೆದತ್ತು ಕಂಚನುಣಲೂಮನೆಯೂಕೆಗಳುಯ್ದರ್... ಆ ಬನಮಾಬನ(೩)
ಮೂಬನವೆನ್ನದೆ ತೊಟಲ್ದು ಪೂಗೊಯ್ದರವರ್. (೪)
ಸ್ಮರಣಕ್ಕೆ : ನೆನೆದನಾ ಹಿರಣ್ಯಕನದೊಂದು ಬಿಟ್ದಿಂದಮಂ. (೫)
ಬೀದಿಗಾ ಪೊಟಲಿಚರ್ ಮಾನ್ಯದೊಕ್ಕಲತನುವ ಕೆಳೆಯರ್. (೬)
ಪ್ರಸಿದ್ಧಿಗೆ :
ಗಜಹಯರೂಢಿಯೊಳಾ ಭಗದತ್ತನಿನಾ ನಳನಿಂ ಮಿಗಿಲಾದಂ (೭)

* ವ್ಯಾಕರಣ ಪರಂಪರೆಯನ್ನು ಕುರಿತು ಅಧ್ಯಾಪಕರು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಬೇಕು.

# ಕನ್ನಡ ಭಾಷೆಯ ಸ್ವರೂಪ

## ಭಾಷೆಯೆಂದರೇನು?
## ಸ್ವರೂಪ ಲಕ್ಷಣಗಳು

೧.೦. ಭಾಷೆಯೆಂದರೇನು ಎಂಬುದನ್ನು ಸೂತ್ರಬದ್ಧವಾಗಿ ವ್ಯಾಖ್ಯಾನಿಸುವುದು ಸುಲಭವಲ್ಲ. ಆದರೂ ಅದನ್ನು ಸೂತ್ರರೂಪದಲ್ಲಿ ಹೇಳುವ ಪ್ರಯತ್ನವನ್ನು ಅನೇಕ ಭಾಷಾವಿಜ್ಞಾನಿಗಳು ಮಾಡಿದ್ದಾರೆ. ಕೆಲವು ಮಹತ್ವದ ವ್ಯಾಖ್ಯೆಗಳನ್ನಿಲ್ಲಿ ಗಮನಿಸಬಹುದು. ಎಫ್.ಡಿ. ಸಸೂರ್ ಎಂಬ ವಿಜ್ಞಾನಿ–ಮಾನವನು ತನ್ನ ಅನಿಸಿಕೆಗಳನ್ನು ಅಭಿವ್ಯಕ್ತಪಡಿಸುವುದಕ್ಕಾಗಿ ರೂಢಿಸಿಕೊಂಡಿರುವ ಸಂಕೇತಗಳ ವ್ಯವಸ್ಥೆಯೆ ಭಾಷೆ ಎಂದು ಹೇಳಿದರೆ ಎಡ್ವರ್ಡ್ ಸಪೀರನು – ಮನುಷ್ಯನಿಗೆ ಮಾತ್ರ ವಿಶಿಷ್ಟವಾಗಿ ಲಭಿಸಿರುವ ಸಹಜ ಪ್ರವೃತ್ತಿಯಲ್ಲದ ಸಾಂಸ್ಕೃತಿಕ ಕ್ರಿಯೆ ಎಂದು ಹೇಳಿ ಭಾಷೆ ಇದು ಮುಖ್ಯವಾಗಿ ನಮ್ಮ ಭಾವನೆ, ಅಭಿಪ್ರಾಯ ಹಾಗೂ ಇಚ್ಛೆಗಳನ್ನು ಇತರರಿಗೆ ತಿಳಿಸುವುದಕ್ಕಾಗಿ ಇದ್ದು ಅದರಲ್ಲಿ ಐಚ್ಛಿಕ ಧ್ವನಿ ಸಂಕೇತಗಳ ಉಚ್ಚಾರ ವ್ಯವಸ್ಥಿತವಾದ ರೀತಿಯಲ್ಲಿ ಇರುತ್ತದೆ ಎನ್ನುತ್ತಾನೆ. ಹಲವಾರು ವಿದ್ವಾಂಸರು ಭಾಷೆಯೆಂದರೇನೆಂಬುದನ್ನು ವಿವರಿಸಲು ಹೆಣಗಿದ್ದಾರೆ. ಆದರೆ ಅವುಗಳಲ್ಲಿ ಯಾವುದೂ ಪರಿಪೂರ್ಣವಾದ ವ್ಯಾಖ್ಯೆ ಎನಿಸುವುದಿಲ್ಲ.

೧.೧. ಬ್ಲಾಕ್ ಮತ್ತು ಟ್ರೇಗರ್ ಎಂಬ ವಿಜ್ಞಾನಿಗಳು ಹೇಳಿರುವ ವ್ಯಾಖ್ಯೆ ಈಗ ಬಹುಜನ ವಿದ್ವಾಂಸರ ಮನ್ನಣೆ ಪಡೆದಿದೆ. ಬ್ಲಾಕ್ ಮತ್ತು ಟ್ರೇಗರ್ ಅವರ ವ್ಯಾಖ್ಯೆ ಹೀಗಿದೆ : ಇಚ್ಛಿತ ಮೌಖಿಕ ಧ್ವನಿ ಸಂಕೇತಗಳ ವ್ಯವಸ್ಥೆಯಿಂದ ಕೂಡಿ ಸಾಮಾಜಿಕ ಸಮ್ಮತಿ ಹಾಗೂ ಸಹಕಾರಕ್ಕೆ ಕಾರಣವಾಗುವುದೇ ಭಾಷೆ. ಇಲ್ಲಿ ನಾಲ್ಕು ಅಂಶಗಳನ್ನು ಗುರುತಿಸಬಹುದು. ೧. ಭಾಷೆ ಒಂದು ವ್ಯವಸ್ಥೆ (System), ೨. ಭಾಷೆಯಲ್ಲಿ ಮೌಖಿಕ ಧ್ವನಿ ಸಂಕೇತಗಳಿರುತ್ತವೆ (Vocal Symbols), ೩. ಆ ಸಂಕೇತಗಳು ಯಾದೃಚ್ಛಿಕವಾಗಿರುತ್ತವೆ (Arbitrary), ೪. ಭಾಷೆ ಸಾಮಾಜಿಕ ಸಮ್ಮತಿಯನ್ನು ಪಡೆಯುವುದರ ಮೂಲಕ ಸಹಕಾರವನ್ನುಂಟು ಮಾಡುತ್ತದೆ. (Social group co-operation).

## ೧.೨. ಭಾಷೆ ಒಂದು ವ್ಯವಸ್ಥೆ

ಭಾಷೆ ಒಂದು ಕಟ್ಟಡವಿದ್ದಂತೆ. ಕಟ್ಟಡ ಕಟ್ಟಲು ಒಂದು ವ್ಯವಸ್ಥಿತವಾದ ಕ್ರಮವಿರುತ್ತದೆ. ಒಂದು ಮನೆಯ ಯೋಜನೆಯಂತೆ ಅದಕ್ಕೆ ನಿರ್ದಿಷ್ಟವಾದ ಪ್ರಮಾಣದಲ್ಲಿ ಮಣ್ಣು, ಸಿಮೆಂಟು, ಇಟ್ಟಂಗಿ, ಕಲ್ಲು, ಬಣ್ಣ ಇತ್ಯಾದಿ ಬೇಕಾಗುತ್ತವೆ. ಅವೆಲ್ಲ ವಿಶಿಷ್ಟ ರೀತಿಯಲ್ಲಿ ಬಳಕೆಗೊಂಡಿರುತ್ತವೆ. ಒಂದೊಂದು ಭಾಷೆಗೂ ತನ್ನದೆ ಆದ ವ್ಯವಸ್ಥೆ, ಕ್ರಮ ಇರುತ್ತದೆ. ಅನುವಂಶಿಕವಾಗಿ ಒಂದೇ ವರ್ಗಕ್ಕೆ ಸೇರುವ ಬೇರೆ ಬೇರೆ ಭಾಷೆಗಳಲ್ಲಿ, ವ್ಯವಸ್ಥೆ ಮೂಲಭೂತ ಅಂಶಗಳಲ್ಲಿ ಹೋಲುತ್ತಿರುತ್ತದೆ. ಧ್ವನಿಮಾ ಅಥವಾ ವರ್ಣವ್ಯವಸ್ಥೆಯನ್ನೇ ಉದಾಹರಣೆಗಾಗಿ ಎತ್ತಿಕೊಂಡರೆ ದ್ರಾವಿಡ ವರ್ಗದ ಭಾಷೆಗಳಲ್ಲಿ ಮಹಾಪ್ರಾಣಗಳು ಶ್, ಷ್, ಕ್ಷ, ಜ್ಞ ವಿಸರ್ಗ ಮುಂತಾದ ವರ್ಣಗಳು ಇಲ್ಲ. ಆದರೆ ಇತ್ತಿತ್ತಲಾಗಿ ಕನ್ನಡ, ತೆಲುಗು ಮೊದಲಾದ ಭಾಷೆಗಳು ಅವುಗಳಲ್ಲಿ ಕೆಲವು ರೂಢಿಸಿಕೊಳ್ಳುತ್ತಿವೆ. ಸಂಸ್ಕೃತ ಮುಂತಾದ ಆರ್ಯವರ್ಗದ ಭಾಷೆಗಳಲ್ಲಿ ಸಹಜವಾಗಿ ಇವು ದೊರೆಯುತ್ತವೆ. ಲಿಂಗವ್ಯವಸ್ಥೆ ಆರ್ಯ ಭಾಷೆಗಳಲ್ಲಿರುವಂತೆ ದ್ರಾವಿಡ ಭಾಷೆಗಳಲ್ಲಿ ಇಲ್ಲ. ಹೀಗೆ ಭಾಷೆಯ ವ್ಯವಸ್ಥೆ ಒಂದೊಂದು ವರ್ಗದ ಭಾಷೆಗಳಿಗೂ ಭಿನ್ನವಾಗಿದ್ದರೂ, ಒಂದೇ ವರ್ಗದ ಭಿನ್ನ ಭಾಷೆಗಳಲ್ಲೂ ಅವು ತಾವಾಗೆ ಬೆಳೆಸಿಕೊಂಡು ಬಂದ ವಿಶಿಷ್ಟ ವ್ಯವಸ್ಥೆಯೂ ಸೇರಿಕೊಂಡಿರುಬಹುದು. ಗೋಪಾಲ ಹಾಲನ್ನು ಕುಡಿಯುತ್ತಾಳೆ ಎಂದು ಕನ್ನಡದಲ್ಲಿ ಹೇಳಿದರೆ ತಪ್ಪಾಗುತ್ತದೆ. ಏಕೆಂದರೆ ಗೋಪಾಲ ಪುಲ್ಲಿಂಗವಿರುವುದರಿಂದ ಕುಡಿಯುತ್ತಾನೆ ಎಂಬ ರೂಪವೆ ಕೊನೆಯಲ್ಲಿರಬೇಕೆಂಬ ವ್ಯವಸ್ಥೆಯಿದೆ. ಹಾಗೆಯೇ ಶಕುಂತಲೆ ಸೀರೆಯಿಂದ ಉಡುತ್ತಾಳೆ ಎನ್ನಲು ಬಾರದು. ಇಲ್ಲಿ ಲಿಂಗಕ್ಕೆ ಸಂಬಂಧಿಸಿದಂತೆ ಉಡುತ್ತಾಳೆ ರೂಪವು ಸರಿ ಇದ್ದರೂ ಸೀರೆಯಿಂದ ಎಂಬುದು ಸೀರೆಯನ್ನು ಆಗಬೇಕು. ಆದ್ದರಿಂದ ಯಾವ ರೂಪವನ್ನು ಎಲ್ಲಿಡಬೇಕು ಅವುಗಳಿಗೆ ಯಾವ ಪ್ರತ್ಯಯ ಹಚ್ಚಬೇಕು, ಎಂಬುದೆಲ್ಲ ನಿಶ್ಚಿತವಾಗಿ ಸಮಾಜ ಒಪ್ಪಿಕೊಂಡ ವ್ಯವಸ್ಥೆಗೆ ಅನುಗುಣವಾಗಿಯೇ ನಡೆಯಬೇಕು. ಭಾಷೆಯಲ್ಲಿ ವ್ಯವಸ್ಥೆ ಎಲ್ಲ ಮಟ್ಟದಲ್ಲೂ ಇರುತ್ತದೆ. ಭಾಷೆ ಬದಲಾಗುತ್ತಾ ಸಾಗಿದರೂ ಸಾಮಾಜಿಕ ಒಪ್ಪಿಗೆಯೊಡನೆ ವ್ಯವಸ್ಥೆಯೂ ಅದಕ್ಕನುಗುಣವಾಗಿ ಹೊಂದಿಕೊಳ್ಳುತ್ತಾ ಸಾಗುತ್ತದೆ. ಹಲ್ಲಿ-ಗಿಲ್ಲಿ, ಮಾತು-ಗೀತು, ಚಪ್ಪಲಿ-ಗಿಪ್ಪಲಿ, ರೊಟ್ಟಿ-ಗಿಟ್ಟಿ, ಕಟಗಿ-ಗಿಟಗಿ ಇಂಥ ಹಲವಾರು ಪ್ರತಿಧ್ವನಿ ಶಬ್ದಗಳ (echo words) ಉತ್ತರಾರ್ಧದಲ್ಲಿ 'ಗಿ' ನಿಯಮಿತವಾಗಿ ಬಂದಿರುವುದು ಎದ್ದು ತೋರುತ್ತದೆ. ಇನ್ನು ಕೆಲವು ಶಬ್ದಗಳಲ್ಲಿ 'ಗಿ' ಬರುವ ಸ್ಥಾನದಲ್ಲಿ 'ಪ' ಬರಬಹುದು. ಉದಾ: ಗಿಡ-ಪಡ, ಸಣ್ಣ-ಪಣ್ಣ, ಸೈಕಲ್-ಪೈಕಲ್ ಆದರೂ 'ಪ' ಬರುವ ಶಬ್ದಗಳ ಸಂಖ್ಯೆ ಕಡಿಮೆ, ಭಾಷೆಯಲ್ಲಿ ಬಳಸಿಕೊಳ್ಳುವ ಧ್ವನಿ, ಧ್ವನಿಮಾ, ಆಕೃತಿಮಾ ಹಾಗೂ ವಾಕ್ಯಗಳು ಒಂದು ವ್ಯವಸ್ಥೆಗೆ ಒಳಪಟ್ಟಿರುತ್ತವೆ. ಹೀಗೆ ಭಾಷೆಯಲ್ಲಿ ಒಂದು

ಕ್ರಮವಿರುವುದರಿಂದಲೇ ಅದನ್ನು ವಿವರಿಸಲು ಸಾಧ್ಯವಾಗುತ್ತದೆ. ಒಂದ ಕಾಲದ ಭಾಷಾ ವ್ಯವಸ್ಥೆ ಎಲ್ಲ ಕಾಲದಲ್ಲೂ ಒಂದೇ ಬಗೆಯಾಗಿದ್ದು ಸ್ಥಿರವಾಗಿ ಉಳಿಯುತ್ತದೆ ಎಂದು ಹೇಳಲಾಗದು. ಬಹಳ ಕಾಲ ಬದಲಾಗದೇ ಉಳಿಯಲೂಬಹುದು. ಇಲ್ಲವೆ ಯಾವ ಕಾಲದಲ್ಲಾದರೂ ಅದು ಬದಲಾವಣೆಗೆ ಒಳಪಡಬಹುದು.

## ೧.೩. ಧ್ವನಿ ಸಂಕೇತಗಳು

ಮನುಷ್ಯ, ಜೀವನದಲ್ಲಿ ತನ್ನ ವ್ಯವಹಾರಕ್ಕಾಗಿ ಅನೇಕ ಬಗೆಯ ಸಂಕೇತಗಳನ್ನು ಬಳಸುತ್ತಾನೆ. ತನ್ನ ಕಣ್ಣಳತೆಯಲ್ಲಿರುವ ಒಬ್ಬ ವ್ಯಕ್ತಿಯನ್ನು ಕರೆಯಬೇಕಾದರೆ ಕೈ ಬೀಸಬಹುದು ಇಲ್ಲವೆ ತಲೆ ಅಲುಗಾಡಿಸಬಹುದು, ಚಪ್ಪಾಳೆ ತಟ್ಟಬಹುದು, ಶಿಳ್ಳು ಹಾಕಬಹುದು, ಕಣ್ಣು ಹೊಡೆಯಬಹುದು. ಹೀಗೆಯೇ ಹಸಿರು ದೀಪ ಅಥವಾ ಹಸಿರು ನಿಶಾನೆ ತೋರಿಸಿದರೆ ರೈಲು ಹೊರಡುತ್ತದೆ. ಕೆಂಪು ತೋರಿಸಿದರೆ ನಿಲ್ಲುತ್ತದೆ. ನಿಲ್ದಾಣದಲ್ಲಿ ಕೈ (signal) ಕೆಳಕ್ಕೆ ಇಳಿದಿದ್ದರೆ ರೈಲು ಒಳಪ್ರವೇಶಿಸುತ್ತದೆ, ಇಲ್ಲದಿದ್ದರೆ ನಿಲ್ಲುತ್ತದೆ. ಕೆಂಪು ತ್ರಿಕೋನ ಕುಟುಂಬ ಕಲ್ಯಾಣವನ್ನು ಸೂಚಿಸುತ್ತದೆ. ಕರೆಗಂಟೆಯ ಗುಂಡಿಯನ್ನು ಒತ್ತಿದರೆ ಮನೆಬಾಗಿಲು ತೆರೆಯುತ್ತಾರೆ. ಟೇಬಲ್ ಗಂಟೆಯನ್ನು ಬಾರಿಸಿದರೆ ಸೇವಕ ಹಾಜರಾಗುತ್ತಾನೆ. ಕಂಡಕ್ಟರ್ ಶೀಟಿ ಊದಿ ಬಸ್ಸನ್ನು ನಿಲ್ಲಿಸುವ, ಹೊರಡಿಸುವ ನಿಯಂತ್ರಣ ಪಡೆಯುತ್ತಾನೆ. ಇವೆಲ್ಲವು ಸಂಕೇತಗಳ ಮೂಲಕ ನಡೆಯುವ ಚಟುವಟಿಕೆಗಳು. ಸಂಕೇತಗಳಲ್ಲಿ ಕಣ್ಣಿಗೆ ಗೋಚರಿಸುವಂಥವು ಕಿವಿಗೆ ಕೇಳಿಸುವಂಥವು, ಸ್ಪರ್ಶಕ್ಕೆ ಅನುಭವವೇದ್ಯವಾಗುವಂಥವು ಎಂದು ಮೂರು ಬಗೆ. ರೇಲ್ವೆ ಸಿಗ್ನಲ್, ನಿಶಾನೆ, ಕೆಂಪು ತ್ರಿಕೋನ ಇತ್ಯಾದಿ ದೃಶ್ಯ ಸಂಕೇತಗಳಾದರೆ ಗಂಟೆ, ಶೀಟಿ ಇತ್ಯಾದಿ ಶ್ರವಣ ಸಂಕೇತಗಳು. ಕುರುಡರು ಸ್ಪರ್ಶ ಮೂಲಕ ವಸ್ತುಗಳನ್ನು ಗುರುತಿಸುತ್ತಾರೆ. ಅವು ಸ್ಪರ್ಶ ಸಂಕೇತಗಳು. ಇಂತಹ ವಿವಿಧ ಬಗೆಯ ಸಂಜ್ಞೆ, ಸಂಕೇತಗಳನ್ನು ಬಳಸಿ ಜಗತ್ತಿನಲ್ಲಿ ಸೀಮಿತವಾದ ಬಗೆಯಲ್ಲಿ ಸಮಾಚಾರ, ಭಾವ, ಸಂದೇಶ ಮುಂತಾದವುಗಳ ವಿನಿಮಯವೂ ನಡೆಯುತ್ತಿದ್ದಂತೆ ತೋರುತ್ತದೆ. ಅಮೆರಿಕೆಯ ಇಂಡಿಯನ್‌ರ ರಗ್ಗಿನ ಭಾಷೆ (Blanket Language), ದರ್ಪಣ ಭಾಷೆ (Mirror Language), ನಗಾರಿ ಭಾಷೆ (Drum Language), ಆಸ್ಟ್ರೇಲಿಯಾದ ಕೈಭಾಷೆ (Hand Language) ಇವು ಒಂದಾನೊಂದು ಕಾಲದಲ್ಲಿ ಕೆಲವು ಜನರ ಗುಂಪುಗಳು ಬಳಸುತ್ತಿದ್ದ ಸಾಂಕೇತಿಕ ಭಾಷೆಗಳು. ತಂತಿ ಭಾಷೆ (Telegraphic Language), ಸಂಖ್ಯಾ ಭಾಷೆ (Statistical Language) ಸೈನಿಕ ಭಾಷೆ, ಇಂತಹವು ಈಗಲೂ ಕೂಡಾ ಜಗತ್ತಿನಲ್ಲಿ ಬಳಕೆಯಲ್ಲಿವೆ. ಆದರೆ ಇವೆಲ್ಲವೂ ಸೀಮಿತ ವ್ಯಾಪ್ತಿಯುಳ್ಳವು, ನಿರ್ದಿಷ್ಟ ಗುರಿಯುಳ್ಳವು.

ಭಾಷೆಯಲ್ಲಿ ಧ್ವನಿ (ಶ್ರವಣ) ಸಂಕೇತಗಳಿಗೆ ಮಾತ್ರ ಸ್ಥಾನ. ಆದರೆ ಸಿಕ್ಕ ಸಿಕ್ಕ ಧ್ವನಿಗಳಿಗೆ ಭಾಷೆಯಲ್ಲಿ ಸ್ಥಾನವಿಲ್ಲ. ಮೌಖಿಕವಾಗಿ ಹೊರಡಿಸಬಹುದಾದ ಧ್ವನಿಗಳಿಗೆ ಮಾತ್ರ ಇಲ್ಲಿ ಮಹತ್ವ, ಮನುಷ್ಯ ತನ್ನ ಬಾಯಿಯ ಮೂಲಕ ಅಸಂಖ್ಯಾತ ಬಗೆಯ ಧ್ವನಿಗಳನ್ನು ಹೊರಡಿಸಲು ಶಕ್ತನಾಗುತ್ತಾನೆ, ಧ್ವನಿಪೆಟ್ಟಿಗೆಯೊಂದನ್ನು ಬಿಟ್ಟು ಇತರ ಯಾವ ಅಂಗವೂ ಧ್ವನಿಯನ್ನು ಹುಟ್ಟಿಸುವುದಕ್ಕಾಗಿಯೇ ಇಲ್ಲವಾದರೂ ನಾಲಗೆ, ತುಟಿ, ನಾಸಿಕ, ಗಂಟಲು, ಪುಪ್ಪುಸ, ಕಾಲು, ಹಲ್ಲು ಇವೆಲ್ಲವೂ ಧ್ವನಿ ವೈವಿಧ್ಯಕ್ಕೆ ಕಾರಣವಾಗಿವೆ. ಇವೆಲ್ಲವುಗಳಿಗೆ ಧ್ವನ್ಯಂಗಗಳೆನ್ನುತ್ತಾರೆ. ಧ್ವನ್ಯಂಗಗಳು ಹೊರಡಿಸುವ ಅಗಣಿತ ಧ್ವನಿಗಳೆಲ್ಲವನ್ನೂ ಭಾಷೆ ಹೊಂದಿರುವುದಿಲ್ಲ. ಉದಾಹರಣೆಗೆ ಸೀನಿದಾಗ, ಕೆಮ್ಮಿದಾಗ, ಬಿಕ್ಕಿದಾಗ, ಬಾಯಿ ಚಪ್ಪರಿಸಿದಾಗ ಉಂಟಾಗುವ ಧ್ವನಿಗಳನ್ನು ಭಾಷೆಯಲ್ಲಿ ಬಳಸಲಾಗದು. ಉಚ್ಚಾರಕ್ಕೆ ಅನುಕೂಲವಾದವುಗಳನ್ನು ಮಾತ್ರ ಆಯ್ದುಕೊಳ್ಳಲಾಗುತ್ತದೆ. ಹಾಗೆ ಆಯ್ದುಕೊಂಡ ಧ್ವನಿ ಘಟಕಗಳನ್ನು ವ್ಯವಸ್ಥಿತವಾಗಿ ಒಂದರ ನಂತರ ಒಂದನ್ನು ಹೊರತುಪಡಿಸಿ ಉಚ್ಚರಿಸಲಾಗುತ್ತದೆ.  ಒಂದು, ಎರಡು, ಮೂರು, ನಾಲ್ಕು, ಐದು ಹೀಗೆ ತನಗನುಕುಳವಾಗುವಂತೆ ಧ್ವನಿ ಘಟಕಗಳನ್ನು ಹೊಂದಿಸಿ ಸಂಕೇತಗಳನ್ನು ನಿರ್ಮಿಸಲಾಗುತ್ತದೆ. ಗುಡಿ ಎಂಬ ಶಬ್ದದಲ್ಲಿ ಗ್, ಉ, ಡ್, ಇ ಎಂಬ ನಾಲ್ಕು ಧ್ವನಿಗಳು ಇವೆ. ಹಾಗೂ ಗ್ ಮುಂದೆ ಉ, ಅದರ ಮುಂದೆ ಡ್, ಅನುಕ್ರಮವಾಗಿ  ಒಂದರನಂತರ ಒಂದು ಉಚ್ಚರಿಸಲ್ಪಡುತ್ತವೆ. ಮಂದಿರಕ್ಕೆ ಗುಡಿ ಎಂಬ ಧ್ವನಿ ಮೊತ್ತದ ಸಂಕೇತವನ್ನು ನಿಗದಿಪಡಿಸಲಾಗಿದೆ. ಈ ಸಂಕೇತವನ್ನು ಕನ್ನಡ ಭಾಷೆಯನ್ನಾಡುವವರೆಲ್ಲರೂ ಒಪ್ಪಿಕೊಂಡಿರುತ್ತಾರೆ. ಒಂದೊಂದು ವಸ್ತು, ಪ್ರಾಣಿ, ಭಾವಕ್ಕೂ ಒಂದೊಂದು ಇಲ್ಲವೆ ಹಲವಾರು ಇಂತಹ ಧ್ವನಿ ಸಂಕೇತಗಳನ್ನು ಬಳಸಬಹುದು. ಉದಾಹರಣೆಗೆ ಪುಸ್ತಕ, ಗ್ರಂಥ, ಹೊತ್ತಗೆ. ಒಂದೇ ಧ್ವನಿಗಳ ಮೊತ್ತ ಹಲವು ಅರ್ಥಗಳಿಗೆ ಸಂಕೇತವಾಗಿರಲೂಬಹುದು. ಉದಾ: ಆಡು ಎಂಬ ಶಬ್ದವು ಪ್ರಾಣಿಯನ್ನು ಸೂಚಿಸುವಂತೆ ಆಟ ಆಡುವ ಕ್ರಿಯಾರ್ಥ ಸೂಚಕ ಪದವೂ ಆಗುತ್ತದೆ. ಹೀಗೆ ಧ್ವನಿ ಸಂಕೇತಗಳು ಒಂದರಿಂದ ಹಲವು ಆಗಿ ಸಂಕೀರ್ಣಗೊಳ್ಳುತ್ತ ಬಳಕೆಯಾಗುತ್ತವೆ.

## ೧.೪. ಯಾದೃಚ್ಛಿಕತೆ

ಧ್ವನಿಸಂಕೇತಗಳು ಭಾಷೆಯಲ್ಲಿ ಯಾದೃಚ್ಛಿಕವಾಗಿ ಬಳಕೆಗೊಳ್ಳುತ್ತವೆಂಬುದು ಮುಖ್ಯವಾದುದು. ಸಾಮಾನ್ಯವಾಗಿ ಪ್ರತಿಯೊಂದು ವಸ್ತು, ಪ್ರಾಣಿ ಅಥವಾ ಭಾವಕ್ಕೆ ನಿಗದಿಪಡಿಸಿ ಸಾರ್ವತ್ರಿಕವಾಗಿ ಒಪ್ಪಿಗೆ ಪಡೆದ ಧ್ವನಿಸಂಕೇತಗಳು ಒಂದೊಂದು ಭಾಷೆಯಲ್ಲಿ ಬಳಕೆಗೊಳ್ಳುತ್ತವೆ. ಇಂತಹ ವಸ್ತು, ಪ್ರಾಣಿ, ಭಾವಕ್ಕೆ ಇಂತಹದೇ ಧ್ವನಿಸಂಕೇತಗಳನ್ನು ನೀಡಬೇಕೆಂಬ ನಿರ್ದಿಷ್ಟ ನಿಯಮವೇನೂ ಇಲ್ಲ.

ಒಂದು ಧ್ವನಿಸಂಕೇತದ ಮೊತ್ತಕ್ಕೆ ಒಂದೇ ಅರ್ಥವಿರಬೇಕೆಂಬ ನಿಯಮವೂ ಇಲ್ಲ. ಅದು ಒಂದಕ್ಕಿಂತ ಹೆಚ್ಚು ಅರ್ಥಗಳನ್ನು ಹೊಂದಿರಬಹುದು. 'ಸರಿ' ಎಂಬ ಕನ್ನಡ ಶಬ್ದ ಸಮ, ಒಂದು ಬಗೆಯ ಅಂಟು, ಚಲಿಸು, ಆಗಲಿ ಎಂಬ ಹಲವು ಅರ್ಥಗಳನ್ನು ಕೊಡುತ್ತದೆ. ಹೀಗೆಯೇ ಹಲವು ಶಬ್ದಗಳು ಒಂದೇ ಅರ್ಥವನ್ನು ಹೊಂದಿರಬಹುದಾಗಿದೆ. ಮಂಗ, ಕಪಿ, ಕೋತಿ, ಮರ್ಕಟ, ಮುಸ್ಕಾ, ಸೊಲಗ, ಬಾಲ್ಯಾ ಇವೆಲ್ಲವೂ ಕನ್ನಡದಲ್ಲಿ ಮಂಗವನ್ನು ಸೂಚಿಸುತ್ತವೆ. ಹೀಗೆ ಒಂದೇ ಅರ್ಥಕ್ಕೆ ಹಲವು ಧ್ವನಿಸಂಕೇತ ಮೊತ್ತಗಳನ್ನು, ಒಂದೇ ಧ್ವನಿ ಸಂಕೇತ ಮೊತ್ತಕ್ಕೆ ಹಲವು ಅರ್ಥಗಳನ್ನು ಹೊರಡಿಸುವ ಅದರಂತೆ ಬಳಸುವ ಈ ಐಚ್ಛಿಕತೆ ಅಥವಾ ಸ್ಥೂಲ ಅರ್ಥದಲ್ಲಿ ಮನಸೇಚ್ಛೇ ಭಾಷೆಯ ಒಂದು ಪ್ರಮುಖ ಲಕ್ಷಣವಾಗಿದೆ.

## ೧.೫. ಸಾಮಾಜಿಕ ಸಮ್ಮತಿ ಸಹಕಾರ

ಭಾಷೆಯ ಮೂಲ ಉದ್ದೇಶವೇನೆಂದರೆ ಜನರಲ್ಲಿ ಪರಸ್ಪರ ವ್ಯವಹಾರವನ್ನು ಸರಳಗೊಳಿಸುವುದು. ಒಂದು ಮಾವಿನ ಮರದ ತುದಿಯಲ್ಲಿ ಒಂದು ಹಣ್ಣಿದೆ ಎಂದಟ್ಟುಕೊಳ್ಳೋಣ. ಅದನ್ನು ಒಬ್ಬ ಬಾಲಕಿ ನೋಡಿ ತಿನ್ನಲು ಆಸೆ ಪಡುತ್ತಾಳೆ. ಅದೇ ಸಮಯಕ್ಕೆ ಒಬ್ಬ ಬಾಲಕ ಅಲ್ಲಿಗೆ ಬರುತ್ತಾನೆ. ಹುಡುಗಿಗೆ ಮಾತನಾಡಲು ಬರುತ್ತಿರಲಿಲ್ಲವೆಂದರೆ ಅವಳು ತನ್ನ ಕೈಬಾಯಿಗಳ ಸಂಕೇತಗಳ ಮೂಲಕ ಹಣ್ಣು ಕಿತ್ತುಕೊಡಲು ಸೂಚಿಸುತ್ತಾಳೆ. ಆದರೆ ಕೇವಲ ಸನ್ನೆಯಿಂದ ತನ್ನ ಮನಸ್ಸಿನ ಇಚ್ಛೆಯನ್ನು ತಿಳಿಸುವುದು ಸ್ವಲ್ಪ ಕಠಿಣವೇ ಸರಿ. ಹಣ್ಣು ಕಣ್ಣಿಗೆ ಕಾಣುವ ವಸ್ತುವಾದ್ದರಿಂದ ಇಲ್ಲಿ ಹುಡುಗನಿಗೆ ಹುಡುಗಿಯ ಇಚ್ಛೆ ಬೇಗ ಅರ್ಥವಾಗಿ ಅವನು ಸರಸರನೆ ಗಿಡ ಹತ್ತಿ ಹಣ್ಣು ಹರಿದು ಅವಳಿಗೆ ಕೊಟ್ಟಿರಬಹುದು. ಇಲ್ಲವೆ ತನಗೂ ಗಿಡ ಹತ್ತಲು ಬರುವುದಿಲ್ಲವೆಂದು ಸನ್ನೆ ಮಾಡಿ ಸೂಚಿಸಿರಬಹುದು. ಆದರೆ ಎಲ್ಲ ಸಮಯದಲ್ಲೂ ಅದು ಸಾಧ್ಯವಿಲ್ಲ.

'ಐದು ಮೈಲು ದೂರವಿರುವ ಮುರಗೋಡ ಎಂಬ ಊರಲ್ಲಿ ನನ್ನ ಅಣ್ಣನ ಮಗಳ ಮಗನಿಗೆ ನಿನ್ನೆ ಕೆಟ್ಟ ಕನಸು ಬಿದ್ದಿತಂತೆ. ಅದಕ್ಕೆ ಹಾಲು ದಾನ ಮಾಡಬೇಕು ಎಂದು ತಿಳಿಸಿರಿ' ಈ ವಿಚಾರಗಳನ್ನು ಧ್ವನಿರಹಿತ ಸನ್ನೆಗಳ ಮೂಲಕ ತಿಳಿಸುವುದು ಹೇಗೆ? ಅಂತೆಯೇ ಮನುಷ್ಯರ ವ್ಯವಹಾರಕ್ಕಾಗಿ ಭಾಷೆಯಲ್ಲಿ ಧ್ವನಿಸಂಕೇತಗಳು ಅತ್ಯವಶ್ಯ ಹಾಗೂ ಅತ್ಯಮೌಲ್ಯವೆನಿಸಿವೆ. ಭಾಷೆ ಎರಡು ಅಥವಾ ಅದಕ್ಕೂ ಹೆಚ್ಚು ವ್ಯಕ್ತಿಗಳಲ್ಲಿ ಪರಸ್ಪರ ವ್ಯವಹಾರಗಳನ್ನು ಸುಲಭಗೊಳಿಸುತ್ತದೆ. ಅವರ ಮನಸ್ಸಿನ ಭಾವನೆಗಳನ್ನು ವಿನಿಮಯಗೊಳಿಸುತ್ತದೆ. ಅವರಲ್ಲಿ ಸಹಕಾರ ಹೊಂದಾಣಿಕೆಯನ್ನು ಒಗ್ಗಟ್ಟನ್ನು ಹೆಚ್ಚಿಸುತ್ತದೆ. ಕೇವಲ ಭಾಷಾ ಕೌಶಲ್ಯದಿಂದ ಮಾನವರು ಅನೇಕ

ಕಾರ್ಯಸಾಧನೆಗಳನ್ನು ಮಾಡಿಕೊಳ್ಳುತ್ತಾರೆ. ಮಾನವನ ಸಂಸ್ಕೃತಿ ನಾಗರಿಕತೆ ಮುನ್ನಡೆಯಲು ಭಾಷೆ ಸಹಕರಿಸುತ್ತದೆ.

ವ್ಯಕ್ತಿ–ವ್ಯಕ್ತಿಗಳಲ್ಲಿ ಸಾಮಾಜಿಕ ಸಹಕಾರವನ್ನು ಉಂಟುಮಾಡುವಲ್ಲಿ ಭಾಷೆ ಅತ್ಯಂತ ಮಹತ್ವದ ಪಾತ್ರವಹಿಸುತ್ತದೆ. ಸಮಾಜದ ತೊಟ್ಟಿಲಲ್ಲಿ ಬೆಳೆಯುತ್ತ ಸಾಮಾಜಿಕ ಸಹಕಾರವನ್ನುಂಟುಮಾಡುವುದೇ ಭಾಷೆಯ ಮುಖ್ಯ ಕಾರ್ಯ. ಬ್ಲಾಕ್ ಹಾಗೂ ಟ್ರೇಗರ್ ಅವರು ನೀಡಿದ ಭಾಷೆಯ ಬಗೆಗಿನ ವ್ಯಾಖ್ಯೆಯಲ್ಲಿ ಮೊದಲ ಮೂರು ಅಂಶಗಳು ಭಾಷೆಯೆಂದರೇನು? ಅದು ಏನನ್ನು ಒಳಗೊಂಡಿರುತ್ತದೆ ಎಂಬುದನ್ನು ಸೂಚಿಸಿದರೆ ಕೊನೆಯ ಅಂಶವು ಭಾಷೆಯ ಕಾರ್ಯವನ್ನು ಸೂಚಿಸುತ್ತದೆ. ಮಾನವನು ತನ್ನ ಭಾವನೆ, ವಿಚಾರ, ಅನಿಸಿಕೆಗಳನ್ನು ಇತರರಿಗೆ ಅಭಿವ್ಯಕ್ತಪಡಿಸಲು ಇರುವ ಅತ್ಯಂತ ಸಮರ್ಥ ಮಾಧ್ಯಮವಾಗಿರುವ ಭಾಷೆ ಮಾನವ–ಮಾನವರಲ್ಲಿ ಸಂಪರ್ಕವನ್ನುಂಟು ಮಾಡಿ ಅವರಲ್ಲಿ ಪರಸ್ಪರ ಸಹಕಾರಕ್ಕೆ ಅನುವು ಮಾಡಿಕೊಡುತ್ತದೆ. ವ್ಯಕ್ತಿಯಿಂದ, ವ್ಯಕ್ತಿ ಅಥವಾ ವ್ಯಕ್ತಿಗಳಿಗಾಗಿ ಭಾಷೆ ಇದ್ದರೂ ವ್ಯಕ್ತಿಗಳಲ್ಲಿಯೇ ಅದರ ಹುಟ್ಟು ಮತ್ತು ಬೆಳವಣಿಗೆ ಇರುತ್ತದೆ. ಭಾಷೆಯನ್ನು ಬೆಳೆಸುವುದರಿಂದ ಮನುಷ್ಯನು ತನ್ನ ಸೂಕ್ಷ್ಮ ಭಾವನೆಗಳನ್ನು ಕೂಡ ಇತರರಿಗೆ ಹೇಳಬಹುದು. ಭಾಷೆಗೆ ಲಿಪಿಯೊಂದನ್ನು ರೂಢಿಸಿಕೊಂಡರಂತೂ ತಲೆತಲಾಂತರವಾಗಿ ತಮ್ಮ ಅನುಭವಗಳನ್ನು ಸಾಗಿಸಬಹುದು. ಪ್ರಾಚೀನ ತಲೆಮಾರಿನವರ ಸಂಸ್ಕೃತಿ–ನಾಗರಿಕತೆಗಳನ್ನು ಗ್ರಂಥಸ್ಥ ಭಾಷೆಯ ಮೂಲಕ ಅರಿಯಬಹುದು. ನಾಡವರ ಇತಿಹಾಸವನ್ನು ಬರವಣಿಗೆಯ ಮೂಲಕ ಕಾಯ್ದಿಡಬಹುದು. ಜನಾಂಗದವರ ಚಟುವಟಿಕೆಗಳನ್ನು ಭಾಷೆಯ ಮೂಲಕ ದಾಖಲೆಯಾಗಿ ಉಳಿಸಬಹುದು. ಈ ರೀತಿ ಭಾಷೆ ಸಾಮಾಜಿಕ ಕ್ರಿಯೆಯಾಗಿ ಸಾಮಾಜಿಕ ಸಹಕಾರವನ್ನು ಪರಸ್ಪರ ವ್ಯವಹಾರವನ್ನು ಬೆಳೆಸುವ ಪ್ರಮುಖ ಮಾಧ್ಯಮವಾಗಿ ಮುಂದುವರೆಯುತ್ತದೆ.

ಭಾಷೆ ಸಮಾಜದ ಎಲ್ಲ ವ್ಯಕ್ತಿಗಳ ಸ್ವತ್ತು. ಅದು ಕೆಲವರ ಸ್ವತ್ತಾಗಿ, ತೊತ್ತಾಗಿ ಬದುಕಲಾರದು. ಜನಪದರಲ್ಲಿ ಜೀವಂತವಾಗಿರುವವರೆಗೂ ಭಾಷೆಗೆ ಬೆಲೆ ಇದೆ. ಜನತೆಯ ನಾಲಗೆಯಿಂದ ದೂರವಾದಾಗ ಅದು ಮೃತಭಾಷೆಯಾಗುತ್ತದೆ. ಅದಕ್ಕೆ ಮುಂದೆ ಭವಿಷ್ಯವೆಂಬುದಿಲ್ಲ. ಜನಸಮೂಹದ ಸಮ್ಮತಿ ಸಹಕಾರದಿಂದ, ಯಾದೃಚ್ಛಿಕ ಧ್ವನಿಗಳ ಸಂಕೇತಗಳಿಂದ ಕೂಡಿದ ವ್ಯವಸ್ಥಿತವಾಗಿ ಬಳಸಲ್ಪಡುವ ಸಮರ್ಥ ಮಾಧ್ಯಮವೇ ಭಾಷೆಯಾಗಿದೆ. ಮಾನವನು ಇಂತಹ ಅದ್ಭುತ ಮಾಧ್ಯಮವನ್ನು ರೂಪಿಸಿಕೊಂಡಿರುವುದರಿಂದಲೇ ಪ್ರಾಣಿಗಳಿಗಿಂತ ಬಹಳ ಉನ್ನತ ಮಟ್ಟದಲ್ಲಿ ಭಿನ್ನ ಸ್ವರೂಪನಾಗಿ ನಿಂತಿದ್ದಾನೆ. ವಿಶ್ವವನ್ನೇ ಆಳುವ ಶಕ್ತಿ ಪಡೆದಿದ್ದಾನೆ. ಇಂದಿನ ಎಲ್ಲ ಬಗೆಯ ಅಭಿವೃದ್ಧಿಗೂ ಜೀವವಾಹಿನಿಯಾಗಿ ಭಾಷೆ ನಿಂತಿದೆ.

# ಸ್ವರೂಪ ಲಕ್ಷಣಗಳು

೨.೦. ಒಂದು ಸುಖಮಯವಾದ ಸಂಸಾರ; ಗಂಡ–ಹೆಂಡತಿ, ಇಬ್ಬರು ಮುದ್ದಾದ ಮಕ್ಕಳೊಂದಿಗೆ ನಗುತ್ತ ಕಲೆಯುತ್ತ ಇದ್ದಾರೆ. ಎಂಟು ವರ್ಷದ ಹಿರಿಯ ಮಗ ಸಂತೋಷ, ಪುಟ್ಟ ಕುಲಂಗಿ ನಾಯಿಯೊಂದನ್ನು ಸಾಕಿದ್ದಾನೆ. ಐದು ವರ್ಷದ ಮಗಳು ರಜನಿಗೆ ಮನೆಯ ಹಜಾರದ ಪಂಜರದ ಆಡುವ ಗಿಳಿ ಎಂದರೆ ಅಚ್ಚು–ಮೆಚ್ಚು. ರಜನಿ ತಾನು ಎರಡು ವರ್ಷದವಳಿದ್ದಾಗಿನಿಂದಲೂ ಗಿಳಿಯನ್ನು ತನ್ನದೆ ಆದ ರೀತಿಯಲ್ಲಿ ಮಾತನಾಡಿಸುತ್ತಾಳೆ. ಈಗ ರಜನಿ ಚೆನ್ನಾಗಿ ಮಾತನಾಡುತ್ತಾಳೆ. ಒಮ್ಮೆ ತನ್ನ ತಂದೆಯನ್ನು ಕೇಳುತ್ತಾಳೆ– 'ಅಪ್ಪಾಜಿ, ಗಿಳಿ ಏಕೆ ಮಾತಾಡೊಲ್ಲ?' ತಂದೆ, 'ಅದು ಹಕ್ಕಿ, ಮರಿ ಅದಕ್ಕೆ ಮನುಷ್ಯರಂತೆ ಮಾತು ಕಲಿತುಕೊಳ್ಳೊ ಶಕ್ತಿ ಇಲ್ಲ' ಎಂದು ಉತ್ತರಿಸುತ್ತಾನೆ. ಒಮ್ಮೆ ಸಂತೋಷ ಬಂದು 'ಅಪ್ಪಾಜಿ, ನಾಯಿ ಹಾಗೆ ನಮಗ್ಯಾಕೆ ಬೊಗಳೋಕೆ ಬರೋಲ್ಲ!' ಎಂದು ಕೇಳಿ ಅಚ್ಚರಿ ಪಡಿಸುತ್ತಾನೆ. ನಾಯಿಗೆ ಬೊಗಳುವಿಕೆ ತೀರ ಸಹಜ. ಆದರೆ ಮನುಷ್ಯನಿಗೆ ಬೊಗಳುವಿಕೆ ತೀರ ಅಸಹಜ. ಮನುಷ್ಯ ಮಾತನಾಡುವ ಸಾಮರ್ಥ್ಯ ಹೊಂದಿದ್ದಾನೆ. ಆದರೆ ಪಕ್ಷಿ–ಪ್ರಾಣಿಗಳಿಗೆ ಆ ಶಕ್ತಿ ಇಲ್ಲ. ಮಂಗ, ಚಿಂಪಾಂಜಿ, ಗೋರಿಲ್ಲಾ ಇವು ಮನುಷ್ಯನ ಆಕಾರಕ್ಕೆ ಹೋಲಿಕೆಯಲ್ಲಿದ್ದರೂ ಮನುಷ್ಯರಂತೆ ಮಾತನಾಡಲಾರವು. ಪ್ರಾಣಿ–ಪಕ್ಷಿಗಳಿಗೂ, ಮಾನವನಿಗೂ ಇರುವ ಅತ್ಯಂತ ಮಹತ್ವದ ಈ ಭಿನ್ನತೆಯ ಅಂಶವೇ ಪ್ರಾಣಿಗಳು ಆದಿಕಾಲದಿಂದ ತಾವಿದ್ದ ಸ್ಥಿತಿಯಲ್ಲೇ ಈಗಲೂ ಉಳಿಯಲು, ಮಾನವನು ಮಾತ್ರ ಎಲ್ಲದರಲ್ಲೂ ಮುಂದುವರಿಯಲು ಕಾರಣವಾಗಿದೆ. ಅಂತೆಯೆ ಭಾಷೆ ಮಾನವನಿಗೆ ಮಾತ್ರ ಲಭಿಸಿರುವ ಅಮೌಲ್ಯ ವರ.

೨.೧. ಮನುಷ್ಯ ಮಾತನಾಡಲು ಕಲಿತಂದಿನಿಂದಲೇ ತನ್ನ ಅನಿಸಿಕೆಗಳನ್ನು ಸುಲಭವಾಗಿ ಇತರರಿಗೆ ತಿಳಿಸಲು ತೊಡಗಿ ಇತರರ ಭಾವನೆಗಳನ್ನು ಅರ್ಥ ಮಾಡಿಕೊಂಡು ಸಮಾಜಜೀವಿಯಾಗತೊಡಗಿದ. ಹೊಸ ಹೊಸ ಸಂಶೋಧನೆಗಳನ್ನು ತನ್ನ ಅವಶ್ಯಕತೆಗನುಗುಣವಾಗಿ ನಡೆಸುತ್ತ ಸಾಗಿದ. ತಾನು ಕಂಡುಕೊಂಡ ಸತ್ಯವನ್ನು ಮುಂಬರುವ ಪೀಳಿಗೆಯವರಿಗೆ ದಾಖಲೆಯಾಗಿ ಉಳಿಸಬೇಕೆಂಬ ಇಚ್ಛೆಯಿಂದ, ತನ್ನೆದುರಿಗೆ ಇಲ್ಲದವರಿಗೂ ತನ್ನ ಭಾವನೆಗಳನ್ನು ತಿಳಿಸಬೇಕೆಂಬ ಹಂಬಲದಿಂದ ತನ್ನ ಮಾತಿಗೆ ಬರಹದ ರೂಪವನ್ನು ಕೊಟ್ಟನು. ಹೀಗೆ ಮೊದಲು ಮಾತು ಕಲಿತು ಅದನ್ನು ಬರೆದಿಡುವುದನ್ನು ರೂಢಿಸಿಕೊಂಡ. ಈ ಬಗೆಯ ಪ್ರಯತ್ನಗಳನ್ನು ಮಾನವರು ತಮತಮಗೆ ತಿಳಿದಂತೆ ಪ್ರಪಂಚದಲ್ಲಿ ಹಲವಾರು ಪ್ರದೇಶಗಳಲ್ಲಿ ನಡೆಸಿ ತಮ್ಮದೇ ಆದ ಭಾಷೆ ಬರಹಗಳನ್ನು ರೂಢಿಸಿಕೊಂಡರು.

೨.೨. ಜಗತ್ತಿನಲ್ಲಿ ಮಾನವನಿಗೆ ಮಾತ್ರ ಹೀಗೆ ಮಾತನಾಡುವ ಕಲೆಯನ್ನು ಸಾಧಿಸಿಕೊಳ್ಳುವುದು ಸಾಧ್ಯವಾಗಿದೆ. ಅದಕ್ಕೆ ಕಾರಣವೆಂದರೆ ಪ್ರಾಣಿಗಳಿಗಿಂತ ಭಿನ್ನವಾದ ಮಾನವನ ಮಿದುಳನ್ನು ದೇವರು ರಚಿಸಿದ್ದು. ಮಾನವನ ಮಿದುಳಿನ ಎಡಭಾಗದಲ್ಲಿ (Left hemisphere) ಮಾತನಾಡುವ ಶಕ್ತಿಯ ಕೇಂದ್ರವಿದೆಯೆಂದು ಹೇಳಲಾಗುತ್ತದೆ. ಈ ಶಾರೀರಿಕ ವಿಶಿಷ್ಟ ಕೇಂದ್ರ ದೈವದತ್ತವಾದುದು. ಅನುವಂಶಿಕವಾದುದು. ಮನುಷ್ಯ ಭಾಷೆಯನ್ನು ಸೃಷ್ಟಿಸಬಲ್ಲ, ಬೆಳೆಯಿಸಬಲ್ಲ. ಪ್ರಾಯಃ ಈ ಕಾರಣಗಳಿಂದಲೇ ಪ್ರಾಚೀನ ವಿದ್ವಾಂಸರು ಭಾಷೆ ದೈವದತ್ತವಾದುದೆಂದು ನಂಬಿರಬೇಕು. ಭಾಷೆ ದೇವರ ಕೊಡುಗೆ ಎಂದು ಋಗ್ವೇದದ ಏಳನೆಯ ಮಂಡಲದಲ್ಲಿ ಹೇಳಲಾಗಿದೆ. ಜೆನೆಸಿಸ್ ಎಂಬ ದೇವತೆಯಿಂದ ಭಾಷೆ ಹುಟ್ಟಿತೆಂದು ಪಾಶ್ಚಾತ್ಯರು ನಂಬಿದ್ದರು. ಥಾಥ್ ಎಂಬ ದೇವರಿಂದ ಭಾಷೆ ಮಾನವರಿಗೆ ಲಭ್ಯವಾಯಿತೆಂದು ಈಜಿಪ್ತನಲ್ಲಿ ನಂಬಿಕೆಯಿತ್ತು. ಸರಸ್ವತಿ ಭಾರತೀಯರಿಗೆ ಭಾಷಾದೇವಿ. ಆದರೆ ಇಂದು ಆ ಕಲ್ಪನೆಗಳಿಗೆ ಮನ್ನಣೆಯಿಲ್ಲ. ದೈವದತ್ತತೆಯನ್ನು ಆಧುನಿಕರು ಒಪ್ಪುವುದಿಲ್ಲ. ಭಾಷೆಯ ಉಗಮದ ಬಗೆಗೆ ಹೀಗೆಯೇ ಎಂದು ಹೇಳಲಾಗದು. ಅನುವಂಶಿಕವಾಗಿ ಬರುವ ಭಾಷೆಯನ್ನು ರೂಢಿಸಿಕೊಳ್ಳುವ ಆ ವಿಶಿಷ್ಟ ಶಕ್ತಿ ಮಾತ್ರ ದೈವದತ್ತವೆನ್ನಬಹುದು. ಆದರೆ ಈ ಒಂದೇ ಕಾರಣದಿಂದ ಮನುಷ್ಯನ ಹುಟ್ಟಿನೊಂದಿಗೆ ಭಾಷೆ ಅವನ ಕರಗತವಾಗಿರುವುದಿಲ್ಲ. ಅಂತೆಯೇ ಭಾಷೆ ಉಸಿರಿನ ಕೂಸಲ್ಲ. ಅದು ಮನುಷ್ಯನ ಬುದ್ಧಿಯ ಕೂಸು ಎನ್ನುತ್ತಾರೆ. ಕೂಸು ತಾಯಿಯ ಗರ್ಭದಿಂದ ಹೊರಕ್ಕೆ ಬಂದ ಮೇಲೆ ಉಸಿರಾಡಿಸುತ್ತದೆ. ಮೊಲೆ ಹಾಲು ಕುಡಿಯುತ್ತದೆ. ಹೀಗೆಯೇ ಅದರ ಇನ್ನಿತರ ನೈಸರ್ಗಿಕ ಕ್ರಿಯೆಗಳೆಲ್ಲ ಸಹಜವಾಗಿ ನಡೆಯುತ್ತವೆ. ಆದರೆ ಮಾತನಾಡಲಿಕ್ಕೆ ಮಾತ್ರ ನೈಸರ್ಗಿಕವಾಗಿ ಅದಕ್ಕೆ ಬರುವುದಿಲ್ಲ. ಆ ಕಾರಣದಿಂದಲೇ ಭಾಷೆಯನ್ನು ರೂಢಿಸಿಕೊಳ್ಳಲು ಮಾನವನಿಗೆ ಬಹಳಷ್ಟು ಕಾಲವೇ ಸಂದುಹೋಗಿರಬೇಕು. ತನಗೆ ಪ್ರಾಣಿ–ಪಕ್ಷಿಗಳಿಗೆ ಇಲ್ಲದಿರುವ, ಮಾತನಾಡುವ ವಿಶಿಷ್ಟ ಶಕ್ತಿಯಿದೆಯೆಂಬುದೇ ಮಾನವನಿಗೆ ಎಷ್ಟೋ ಕಾಲ ತಿಳಿಯಲಿಲ್ಲ. (ಅದು ತಿಳಿದಿರಲೇಬೇಕೆಂಬ ನಿಯಮವೇನೂ ಇಲ್ಲ.) ಆದರೂ ಮಾತನಾಡಲು ಮನುಷ್ಯ ತನ್ನ ಸ್ವಪ್ರಯತ್ನದಿಂದಲೇ ಕಲಿತನು.

೨.೩. ಭಾಷೆಯ ಉಗಮಕ್ಕೆ ಇನ್ನೆರಡು ಅಂಶಗಳೂ ಅತ್ಯಂತ ಮಹತ್ವದವು. ೧. ಕಲ್ಕೆ, ೨. ಪರಿಸರ. ಕಲ್ಕೆ ಎಂದರೆ ಪ್ರಯತ್ನ. ಭಾಷೆಯನ್ನು ರೂಢಿಸಿಕೊಳ್ಳಲು ಕೆಲವು ಕಾಲದವರೆಗೂ ಪ್ರಯತ್ನ ಮುಂದುವರೆಯಬೇಕಾಗುತ್ತದೆ. ಈ ಪ್ರಯತ್ನದಿಂದಾಗಿ ಮಾನವನು ಪ್ರಪಂಚದ ಯಾವ ಭಾಷೆಯನ್ನೂ ಕಲಿಯುವುದು ತೀರ ಸುಲಭ. ಇನ್ನು ಕೂಸಿಗೆ ತನ್ನ ತಾಯಿ ಹಾಗೂ ಕುಟುಂಬದ ಸದಸ್ಯರ ನಿರಂತರವಾದ ತಮ್ಮ ಭಾಷೆಯ

ದಟ್ಟ ಪರಿಸರವಿರುತ್ತದೆ. ಹೀಗಾಗಿ ತೀರ ಚಿಕ್ಕಂದಿನಿಂದಲೇ ಕೇಳಿ, ಅನುಕರಿಸಿ ಭಾಷೆಯನ್ನು ರೂಢಿಸಿಕೊಳ್ಳುತ್ತದೆ. ಪರಿಸರ ದಟ್ಟವಿದ್ದಷ್ಟೂ, ಹೆಚ್ಚು ಕಾಲವಿದ್ದಷ್ಟೂ ಭಾಷೆಯ ಸೂಕ್ಷ್ಮಾತಿಸೂಕ್ಷ್ಮ ರಚನೆಯ ಅಂಶಗಳು ಸುಲಭವಾಗಿ ಕರಗತವಾಗುತ್ತ ಹೋಗುತ್ತವೆ. ಪರಿಸರವಿಲ್ಲದೆಯೇ ಕಲ್ಕೆಯಿಂದ ಭಾಷೆಯನ್ನು ರೂಢಿಸಿಕೊಳ್ಳುವುದು ಹೆಚ್ಚು ಪ್ರಯಾಸದ್ದು. ಕಲ್ಕೆ ಮತ್ತು ಪರಿಸರ ಭಾಷೆಯ ಪರಿಣತಿಗೆ ದೊರೆಯುವಲ್ಲಿ ಈ ಅಂಶಗಳು ಪರಸ್ಪರ ಹೇಗೆ ಅವಶ್ಯಕವೆನ್ನುವುದನ್ನು ಅಕ್ಬರ ಬಾದಶಹನು ಪ್ರಯೋಗದ ಮೂಲಕ ಕಂಡುಕೊಂಡನಂತೆ.

ಹಿಂದು ಊರಿನಲ್ಲಿ ಒಂದೇ ದಿನ ಒಂದೇ ವೇಳೆಗೆ ಹುಟ್ಟಿದ ಎರಡು ಗಂಡು ಕೂಸುಗಳನ್ನು ಅವನು ಒಂದನ್ನು ಕೋಣೆಯಲ್ಲಿಯೇ ಬೆಳೆಯುವಂತೆ ಮಾಡಿ ಇನ್ನೊಂದನ್ನು ಸಹಜವಾಗಿ ಓಣಿಯ ಮಕ್ಕಳ ಮಧ್ಯದಲ್ಲಿ ತಂದೆ–ತಾಯಿಗಳ ಆರೈಕೆಯಲ್ಲಿ ಬಿಟ್ಟನಂತೆ. ಕೋಣೆಯ ಕೂಸಿಗೆ ಕೇವಲ ಆಹಾರ–ಇತ್ಯಾದಿ ಜೀವನಕ್ಕೆ ಬೇಕಾಗುವ ವಸ್ತುಗಳನ್ನು ಪೂರೈಸುತ್ತ ಅದನ್ನು ಆರೈಕೆ ಮಾಡುವವರು ಮಗುವಿನೊಡನೆ ಅಥವಾ ತಮ್ಮ ತಮ್ಮಲ್ಲಿ ಮಗುವಿನ ಎದುರಿಗೆ ಏನೊಂದು ಮಾತನಾಡವಂತಿರಲಿಲ್ಲ. ಸಂಪೂರ್ಣವಾಗಿ ಭಾಷಾ ಪರಿಸರದಿಂದ ಆ ಮಗು ದೂರವಾಗಿಡಲ್ಪಟ್ಟಿತ್ತು. ನಾಲ್ಕೈದು ವರ್ಷದ ನಂತರ ಎರಡನ್ನೂ ಒಟ್ಟಿಗೆ ಪರೀಕ್ಷಿಸಿದಾಗ ಓಣಿಯ ಮಗು ತೀರ ಸಹಜವಾಗಿ ಮಾತನಾಡಲು ಸಮರ್ಥವಾಗಿದ್ದರೆ ಕೋಣೆಯಲ್ಲಿಯ ಮಗುವಿಗೆ ಏನೊಂದು ಮಾತು ಬರದೆ ಅದು ಮಾತನಾಡುವವರನ್ನು ಕಂಡು ಕಕ್ಕಾಬಿಕ್ಕಿಯಾಯಿತಂತೆ. ಇದರಿಂದ ಕಲ್ಕೆ–ಪರಿಸರಗಳು ಭಾಷೆಗೆ ಎಷ್ಟು ಅವಶ್ಯಕವೆಂಬುದನ್ನು ಖಚಿತಪಡಿಸಿಕೊಳ್ಳಲಾಯಿತು. ಮಗುವಿಗೆ ಪ್ರಯತ್ನದಿಂದ ಯಾವ ಭಾಷೆಯನ್ನಾದರೂ ಕಲಿಸಲು ಸಾಧ್ಯ. ಒಂದು ಭಾಷೆಯ ಪರಿಸರದಲ್ಲಿ ಆ ಭಾಷೆಯನ್ನು ಕಲಿಯುತ್ತ ಹಲವು ಭಾಷೆಗಳನ್ನು ಪರಿಸರವಿಲ್ಲದೆಯೆ ಪ್ರಯತ್ನದಿಂದ ಒಟ್ಟಿಗೆ ಕಲಿಯಬಹುದು. ಇದೆಲ್ಲ ಸಾಧ್ಯವಾಗಿದ್ದು ಕೇವಲ ಮನುಷ್ಯನ ಪ್ರಯತ್ನದಿಂದ. ಪಕ್ಷಿ–ಪ್ರಾಣಿಗಳಿಗೂ ತಮ್ಮದೇ ಆದ ಸಾಂಕೇತಿಕ ಭಾಷೆ ಇರಬಹುದು. ಆದರೆ ಅದು ತೀರ ಸೀಮಿತವಾದುದು. "The most stupid men learn how to talk while even the most brilliant monkeys never learn" ಸುಪ್ರಸಿದ್ಧ ಭಾಷಾ ವಿಜ್ಞಾನಿ ಚೋಮ್‌ಸ್ಕಿ ಅವರ ಈ ಮಾತು ತೀರ ಸತ್ಯವಾದುದು.

ಭಾಷೆಯ ಉಗಮದ ಬಗ್ಗೆ ಅನೇಕ ವಾದಗಳನ್ನು ವಿದ್ವಾಂಸರು ಮಂಡಿಸಿದ್ದಾರೆ. ಲೀಬ್ನಿಜ್‌ನ ಅನುಕರಣವಾದ, ಮ್ಯಾಕ್ಸಮುಲ್ಲರ್‌ನ ಅನುರಣನವಾದ, ನೋರಿಯ ಶ್ರಮಪರಿಹಾರವಾದ, ವುಂಡ್ತನ ಸಂಜ್ಞಾವಾದ, ಯೆಸ್ಪರಸನ್‌ನ ತೊದಲ್ನುಡಿವಾದ ಇವಲ್ಲದೆ ಟಾಟಾವಾದ, ತರಂಗವಾದ, ವಂಶವೃಕ್ಷವಾದ, ಸ್ವೀಕಾರವಾದ, ಸಂಪರ್ಕವಾದ, ಇಂಗಿತವಾದ, ಏಕಪರಿವಾರವಾದ ಇತ್ಯಾದಿ ಹಲವಾರು ವಾದಗಳು ಭಾಷೆಯ ಉಗಮವನ್ನು ವಿವರಿಸುವ ಪ್ರಯತ್ನಗಳಾಗಿವೆ.

೨.೪. ಭಾಷೆ ಮನುಷ್ಯ–ಮನುಷ್ಯರನ್ನು ತೀರ ಹತ್ತಿರಕ್ಕೆ ತಂದಿದೆ. ಗುಂಪು ಜೀವಿಯಾಗಿದ್ದವನನ್ನು ಸಮಾಜ ಜೀವಿಯನ್ನಾಗಿಸಿದೆ. ಅವನ ಮಾನಸಿಕ, ಶಾರೀರಿಕ, ಸಾಮಾಜಿಕ ಅವಶ್ಯಕತೆಗಳ ಪೂರೈಕೆಗಾಗಿ ಭಾವನೆಯ ಎಳೆ–ಎಳೆಗಳನ್ನು ಅವನು ಭಾಷಾ ಮಾಧ್ಯಮದ ಮೂಲಕ ಸಾಧ್ಯ ಮಾಡಿಕೊಂಡಿದ್ದಾನೆ. ತನ್ನ ಅನಿಸಿಕೆ–ಅನುಭವ, ಹಂಬಲ–ಹವಣಿಕೆಗಳನ್ನು ಅಭಿವ್ಯಕ್ತಪಡಿಸಿಕೊಟ್ಟು–ಪಡೆಯುತ್ತ ಮಾನವ ಮುಂದುವರೆದಿದ್ದಾನೆ. ವೈಜ್ಞಾನಿಕ ಸಾಧನೆಗಳು, ಆವಿಷ್ಕಾರಗಳು, ರಾಜಕೀಯ ಶಾಂತಿ, ಪರಸ್ಪರ ಸಹಕಾರ, ಸಾಂಸ್ಕೃತಿಕ ಔನ್ನತ್ಯ, ಮನುಷ್ಯನ ಸರ್ವಾಂಗೀಣ ವ್ಯಕ್ತಿತ್ವ ವಿಕಾಸ ಭಾಷಾ ಮಾಧ್ಯಮದ ಮೂಲಕ ತೀರ ಸುಲಭವಾಗಿದೆ. ಅಂತೆಯೇ ಇಂದಿನ ಜಗತ್ತಿನಲ್ಲಿ ಗಾಳಿ–ಬೆಳಕುಗಳಷ್ಟೇ ಭಾಷೆ ಅತ್ಯವಶ್ಯವೆನಿಸುವಷ್ಟರ ಮಟ್ಟಿಗೆ ಮಹತ್ವಪೂರ್ಣವಾಗಿದೆ.

ಇದಂ ಅಂಧತಮಂ ಕೃತ್ಸ್ನಂಜಾಯೇತ ಭುವನ ತ್ರಯಂ।
ಯದಿ ಶಬ್ದಾಹ್ವಯಂ ಜ್ಯೋತಿರಾನ್ ಸಂಸಾರಾನ್ ನದೀಪ್ಯತೇ॥

ಎಂಬ ದಂಡಿಯ ಉಕ್ತಿ ಇಂದು ತೀರ ಸತ್ಯವೆನಿಸಿದೆ. ಭಾಷೆಯಿಲ್ಲದೆ ಜೀವನವೇ ಅಸ್ತ–ವ್ಯಸ್ತ. ಕಲಿಯುಗದಲ್ಲಿ ಮಾನವನು ಭಾಷಾವಿಹೀನನಾದರೆ ಬದುಕುವುದೇ ದುಸ್ತರವಾಗಿಬಿಡುತ್ತದೆ. ಮಾತು ಬೆಳ್ಳಿ, ಮೌನ ಬಂಗಾರವಾದರೂ ಸಮಾಜದ ದೃಷ್ಟಿಯಿಂದ ಮಾತು ಬಂಗಾರವೇ. ಮಾತಿಲ್ಲದೆ ಸಮಾಜ ಜೀವನವೇ ಅಸಾಧ್ಯ. ಕಾರಣ ಮಾತೆಂಬುದು ಜ್ಯೋತಿರ್ಲಿಂಗ. ಆ ಮಾತಿನ ಭಾಷೆಯ ಆಂತರ್ಯ ನಮಗೆ ತಿಳಿಯಲಿ ಬಿಡಲಿ ದಿನನಿತ್ಯದ ವ್ಯವಹಾರ ನಡೆಯಬೇಕಿದ್ದರೆ ಮಾತು ಬೇಕೇಬೇಕು. ಹಾಗಿದ್ದರೆ ಮಾನವ ರೂಪಿಸಿಕೊಂಡಿರುವ ಈ ಭಾಷಾವೈಶಿಷ್ಟ್ಯಗಳೇನು? ಎಂಬ ಪ್ರಶ್ನೆ ಉದ್ಭೂತವಾಗುತ್ತದೆ. ಮಾನವ ಭಾಷಾ ಲಕ್ಷಣಗಳನ್ನು ಈಗ ನೋಡೋಣ.

## ೨.೫.೧. ದ್ವೈವಿಧ್ಯ

ಮನುಷ್ಯ ತಾನು ಅಸಂಖ್ಯಾತ ಧ್ವನಿಗಳನ್ನು ಹೊರಡಿಸಬಹುದು. ಅವುಗಳಲ್ಲಿ ತನಗೆ ಅನುಕೂಲವೆನಿಸುವ ಹಾಗೂ ಉಚ್ಚಾರಕ್ಕೆ ಸುಲಭವೆನಿಸುವ ಧ್ವನಿ ಅಥವಾ ಧ್ವನಿಯ ಮೊತ್ತವನ್ನು ಒಂದೊಂದು ವಸ್ತು, ಭಾವನೆಗಳಿಗೆ ಸಂಕೇತಿಸುತ್ತ ಹೋಗುತ್ತಾನೆ. ಉದಾ: ಈ ಎಂದರೆ ಈ ವಸ್ತು, ಇದು. ಆ ಎಂದರೆ ಅಲ್ಲಿಯ ವಸ್ತು. ನೀ ಎಂದರೆ ನೀನು. ಬಾ ಎಂದರೆ ಕರೆ. ಹುಡುಗಿ ಎಂದರೆ ಚಿಕ್ಕ ವಯಸ್ಸಿನ ಹೆಣ್ಣು. ಈ ಎಲ್ಲ ಶಬ್ದಗಳಿಗೂ ಒಂದೊಂದು ಅರ್ಥವನ್ನು ಕನ್ನಡ ಭಾಷೆಯಲ್ಲಿ ಕಲ್ಪಿಸಲಾಗಿದೆ. ಈ ಆ ಇವು ಒಂದೇ ಧ್ವನಿಯಿಂದ ಕೂಡಿವೆ. ನೀ, ಬಾ ಇವು ನ್+ಈ; ಬ್+ಆ ಎಂಬಂತೆ ಎರಡೆರಡು ಧ್ವನಿಗಳನ್ನು ಹೊಂದಿವೆ. ಹುಡುಗಿ –ಹ್+ಉ+ಡ್+ಉ+ಗ್+ಇ ಇದು

ಆರು ಧ್ವನಿಗಳ ಮೊತ್ತವಾಗಿದೆ. ಇವೆಲ್ಲವನ್ನು ಕನ್ನಡ ಭಾಷೆಯನ್ನಾಡುವ ಜನಸಮೂಹ ಒಪ್ಪಿಕೊಂಡು ಬಳಕೆಯಲ್ಲಿ ತಂದಿರುತ್ತದೆ. ಆದ್ದರಿಂದ ಮಾನವ ಭಾಷೆಯಲ್ಲಿ ತಾನೇ ಆಯ್ಕೆ ಮಾಡಿಕೊಂಡ ಮಹತ್ವದ ಹಾಗೂ ಅರ್ಥವತ್ತಾದ "ಧ್ವನಿ" ಹಾಗೂ ಅವುಗಳಿಂದುಂಟಾದ "ಅರ್ಥ". ಈ ಬಗೆಯ ದ್ವೈವಿಧ್ಯ ಮಹತ್ವದ ಲಕ್ಷಣವಾಗಿದೆ. ಅಭಿವ್ಯಕ್ತಿ ಅದಕ್ಕೊಂದು ಧ್ವನ್ಯಾತ್ಮಕರೂಪ ಒಂದು ಮುಖವಾದರೆ ಅದಕ್ಕಂಟಿಕೊಂಡೇ ಬರುವ ಇನ್ನೊಂದು ಮುಖ ಅದರ ಅರ್ಥ. ಇದನ್ನೇ ದ್ವೈವಿಧ್ಯ ಎನ್ನುವುದು.

## ೨.೫.೨. ಉತ್ಪಾದಕತೆ

ಭಾಷೆ ನಿರಂತರವಾಗಿ ಪ್ರವಹಿಸುವ ಪ್ರವಾಹದಂತೆ. ಹರಿವ ನದಿಗೆ ಹೊಸ ಹೊಸ ನೀರು ಬಂದು ಕೊಡುತ್ತಲೇ ಇರುವಂತೆ – ಇದ್ದ ಧ್ವನಿ ಸಾಮಗ್ರಿಯನ್ನೇ ಬಳಸುತ್ತ ಹೊಸ ಹೊಸ ಶಬ್ದರೂಪಗಳನ್ನು ಸೃಷ್ಟಿಸುವ ಕಾರ್ಯ ಸಾಗಿಯೇ ಇರುತ್ತದೆ. ಎಲ್ಲರಿಗೂ ಸಾಮಾನ್ಯವಾಗಿ ಪೇಟೆಯಲ್ಲಿ ದೊರೆಯುವ ವಸ್ತುಗಳನ್ನೇ ತೆಗೆದುಕೊಂಡು ಜಾಣಳಾದ ಗೃಹಿಣಿಯು ಮನೆಯಲ್ಲಿ ಬಗೆಬಗೆಯ ಖಾದ್ಯಗಳನ್ನು ಮಾಡುವಂತೆ ಹೊಸ ಹೊಸ ಪ್ರಯೋಗದಿಂದ ಹೊಸ ಶಬ್ದಾರ್ಥ, ವಾಕ್ಯ ನಿರ್ಮಾಣ ಮಾಡಲು ಮಾನವನು ಪ್ರಯತ್ನಿಸುತ್ತಾನೆ. ನಿರಂತರ ಹೊಸ ಸೃಷ್ಟಿ ನಡೆದೇ ಇರುತ್ತದೆ. ವಿಧಾನಸಭೆ, ತೆರೆದ ಅಂಚೆ, ಕಾರ್ಖಾನೆ, ಉಗಿಬಂಡಿ, ಶೀತಾಗಾರ, ದೂರವಾಣಿ, ದೂರದರ್ಶನ, ಆತಂಕವಾದಿ, ಕ್ಷಿಪಣಿ ಇಂತಹ ಅಗಣಿತ ಶಬ್ದಗಳು ನಮ್ಮ ಪೂರ್ವಜರಿಗೆ ಗೊತ್ತಿರಲಿಲ್ಲ. ನಾವು ಸದ್ಯಕ್ಕೆ ಊಹಿಸಲಾಗದ ಇನ್ನೂ ಎಷ್ಟೋ ನವೀನ ಶಬ್ದಗಳೂ ಮುಂಬರುವ ಕಾಲದಲ್ಲಿ ಸೃಷ್ಟಿಯಾಗಬಹುದು. ಈ ರೀತಿ ಅನೂಚಾನವಾಗಿ ನಡೆಯುವ ಉತ್ಪಾದಕ ಗುಣ ಮಾನವ ಭಾಷೆಯ ಇನ್ನೊಂದು ವೈಶಿಷ್ಟ್ಯವಾಗಿದೆ.

## ೨.೫.೩. ಐಚ್ಛಿಕತೆ

ಒಂದು ಶಬ್ದರೂಪವು ಒಂದೇ ಅರ್ಥವನ್ನು ಅಥವಾ ಹಲವು ಅರ್ಥಗಳನ್ನು ಹೊಂದಿರಬಹುದು. ಇಲ್ಲವೆ ಹಲವು ರೂಪಗಳುಳ್ಳ ಅನೇಕ ಶಬ್ದಗಳು ಒಂದೇ ಅರ್ಥವನ್ನೂ ಸೂಚಿಸಬಹುದು. ಈ ಅನುಕೂಲತೆ ಭಾಷೆಯ ಹರುಹನ್ನು ಹೆಚ್ಚಿಸಿದೆ. ಉದಾ: ಕನ್ನಡದಲ್ಲಿ ಹರಾಜು ಎಂಬ ಶಬ್ದ ಉತ್ತರ ಕರ್ನಾಟಕದಲ್ಲಿ ಕೆಲವೆಡೆ ಲಿಲಾವು, ಮಂಗಳೂರಿನ ಕಡೆಗೆ ಏಲಂ ಎಂದು ಬಳಕೆಯಲ್ಲಿದೆ. ಕಾವಲಿ ಉತ್ತರ ಕರ್ನಾಟಕದಲ್ಲಿ ನೀರು ಹರಿಯುವ ಕಾಲುವೆಯಾದರೆ ಮೈಸೂರು ಕಡೆಗೆ ದೋಸೆ ಹೊಯ್ಯುವ ಹಂಚು. ಕಲಬುರ್ಗಿ ಭಾಗದಲ್ಲಿ ಹಾನ ಧಾರವಾಡ ಭಾಗದಲ್ಲಿ ಅದಾನೆ ಮೈಸೂರು ಭಾಗದಲ್ಲಿ ಇದ್ದಾನೆ. ಆಡು ಎಂದರೆ ಆಟವಾಡು ಅಥವಾ ಒಂದು ಪ್ರಾಣಿ. ಹೀಗೆ ಒಂದೇ

ಭಾಷೆಯಲ್ಲಿ ಈ ಬಗೆಯ ವ್ಯತ್ಯಾಸಗಳನ್ನು ಕಾಣುತ್ತೇವೆ. ನಾಯಿ ಎನ್ನುವ ಒಂದೇ ಪ್ರಾಣಿಗೆ ದ್ರಾವಿಡದ ಒಂದೇ ವರ್ಗದ ಭಾಷೆಗಳಲ್ಲಿ ಆತೆ (ನಾಯ್ಕಿ), ನೆತ್ತ (ಪರ್ಜಿ), ನೇತೆ (ಗದಬ), ನುಕುಡಿ (ಕೊಂಡ), ನೆಹುರಿ (ಕುವಿ), ನೆಕುಡ್ (ಪೆಂಗೊ), ನಾಯಿ (ಕನ್ನಡ) ಜಾಗಿಲಮು/ಕುಕ್ಕ (ತೆಲುಗು) ಎಂಬುದಾಗಿ ಶಬ್ದಗಳಿದ್ದರೆ ಹಿಂದಿಯಲ್ಲಿ ಕುತ್ತಾ, ಮರಾಠಿಯಲ್ಲಿ ಕುತರಾ, ಗುಜರಾತಿಯಲ್ಲಿ ಕುತರಿ, ಇಂಗ್ಲೀಷಿನಲ್ಲಿ ಡಾಗ್, ಜರ್ಮನ್‌ನಲ್ಲಿ ಹಂಟ್ ಶಬ್ದಗಳಿವೆ. ಹೀಗೆ ವಸ್ತು ಅಥವಾ ಪ್ರಾಣಿ ಒಂದೇ ಇದ್ದರೂ ಅವುಗಳನ್ನು ಸಂಕೇತಿಸುವ ಧ್ವನಿ ಮೊತ್ತ ಒಂದೇ ಏಕೆ ಇಲ್ಲ? ಎನಿಸುತ್ತದೆ. ಮಾನವಕುಲ ಒಂದೇ ಇದ್ದರೂ ಅವನ ಭಾಷಾಕುಲ ಒಂದೇ ಇಲ್ಲ. ಇದಕ್ಕೆ ಕಾರಣ ಮನುಷ್ಯರ ಒಂದೊಂದು ಸಮೂಹವೂ ತನಗನುಕೂಲವೆನಿಸಿದಂತೆ ತಮ್ಮ ತಮ್ಮ ವ್ಯವಹಾರಕ್ಕಾಗಿ ಸ್ವತಂತ್ರವಾಗಿ ಭಾಷೆಯನ್ನು ರೂಪಿಸಿಕೊಂಡಿದ್ದು, ಇದನ್ನೆ ಯಾದೃಚ್ಛಿಕತೆಯೆನ್ನುತ್ತಾರೆ. ಆನೆ ಎಂಬುದು ಒಂದು ಪ್ರಾಣಿಯಾದರೂ ಅದನ್ನು ಆನೆ ಎಂದೇ ಕರೆಯಬೇಕೆಂಬ ನಿಯಮವಿಲ್ಲ. ಆನೆಯನ್ನು ಕಲ್ಲು ಎಂದು ಎಲ್ಲರೂ ಒಪ್ಪಿ ಕರೆಯಲಾರಂಭಿಸಿದರೆ ಆನೆ ಶಬ್ದಹೋಗಿ ಅದಕ್ಕೆ ಕಲ್ಲು ಶಬ್ದ ಪ್ರಾಪ್ತಿಯಾಗುತ್ತದೆ. ಭಾಷೆಗಳಲ್ಲಿ ಕೆಲವು ಸಾಮಾನ್ಯ ತತ್ವಗಳಿದ್ದರೂ ಅವುಗಳ ಅನುಕೂಲ್ಯ ಗುಣ ಮಾತ್ರ ವ್ಯಾಪಕವಾಗಿದೆ. ಒಂದು ಕಾಲಕ್ಕೆ ಅಮ್ಮ ಎಂದರೆ ಕನ್ನಡದಲ್ಲಿ ತಂದೆ ಎಂಬರ್ಥವಿತ್ತು. ಈಗದು ತಾಯಿಗೆ ಅನ್ವಯವಾಗುತ್ತದೆ. ಸೀರೆ ಗಂಡಸರು ತೊಡುವ ವಸ್ತ್ರವಾಗಿತ್ತು. ಈಗ ಅದು ಹೆಂಗಸರಿಗೆ ಮಾತ್ರ ಸೀಮಿತ. ಕುನ್ನಿ ಎಂದರೆ ಮಗು ಎಂಬ ಅರ್ಥವಿದ್ದುದು ಈಗ ನಾಯಿಗೆ ಮಾತ್ರ ಅನ್ವಯವಾಗುತ್ತದೆ. ಆದುದರಿಂದ ಐಚ್ಛಿಕತೆ ಎಂಬುದು ಮಾನವ ಭಾಷೆಯ ಒಂದು ವಿಶಿಷ್ಟ ಲಕ್ಷಣ.

## ೨.೫.೪. ಸ್ಥಾನ ಪಲ್ಲಟತೆ

ಭಾಷೆ ಇರುವುದು ಮೂಲತಃ ಮನುಷ್ಯರ ವ್ಯವಹಾರಕ್ಕಾಗಿ, ಭಾವನೆಗಳ ಅನಿಸಿಕೆಗಳ ವಿನಿಮಯಕ್ಕಾಗಿ, ಒಬ್ಬನು ಹೇಳಿದುದನ್ನು ಇನ್ನೊಬ್ಬ ಅರ್ಥಮಾಡಿಕೊಳ್ಳುತ್ತಾನೆ. ಅದಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾನೆ. ಇದು ಸಹಜ ವಿನಿಮಯ ಗುಣ. ಹೇಳಿದುದನ್ನು ಅರ್ಥಮಾಡಿಕೊಳ್ಳುವ ವಿಶೇಷ ಪ್ರಾವೀಣ್ಯವೂ ಇದಕ್ಕೆ ಪೂರಕವಾಗುತ್ತದೆ. ಕಷ್ಟ ಇದೆ ಸ್ವಾಮಿ, ತ್ರಾಸ ಐತ್ರಿ, ಕಠಿಣ ಅದರಿ, ಮುಶಿಕಿಲ್ ಆದರಿ–ಇವು ಕರ್ನಾಟಕದ ಬೇರೆ ಬೇರೆ ಭಾಗಗಳ ಕನ್ನಡಿಗರು ಆಡುವ ಮಾತುಗಳು. ಆದರೂ ಇವುಗಳ ಅರ್ಥ ಹೆಚ್ಚು ಕಡಿಮೆಯಾದರೂ ಅರ್ಥ ಗ್ರಹಿಸುವ ಶಕ್ತಿ ಮಾನವನಿಗಿದೆ. ಎಷ್ಟೋ ಸಲ ವಸ್ತು ಕಣ್ಣ ಮುಂದೆ ಇರದಿದ್ದರೂ ಅರ್ಥ ಮಾಡಿಕೊಳ್ಳುತ್ತಾನೆ. ಪುಷ್ಪಕವಿಮಾನ, ಸಂಜೀವಿನಿ ಕಡ್ಡಿ, ಕಾಮ, ಸ್ವರ್ಗಲೋಕ, ಶಿವಕಾರುಣ್ಯ, ಭಕ್ತಿ ಇಂತಹವು ಎಂದೂ ಕಣ್ಣಿಗೆ ಕಾಣದವು. ಆದರೂ ಇವುಗಳ ಕಲ್ಪನೆಯನ್ನು ಉಂಟುಮಾಡಿಕೊಳ್ಳಲು ಮಾನವ ಶಕ್ತನಾಗಿದ್ದಾನೆ.

ಈ ರೀತಿ ಅಮೂರ್ತ ವಸ್ತುಗಳನ್ನು ಮೂರ್ತವೆಂಬಂತೆ ಮನಸ್ಸಿಗೆ ತಿಳಿವಳಿಕೆಯನ್ನುಂಟು ಮಾಡಿಕೊಡುವ ಈ ಸ್ಥಾನ ಪಲ್ಲಟತ್ವ ಮನುಷ್ಯ ಭಾಷೆಯ ಒಂದು ವಿಶೇಷ ಗುಣ.

## ೨.೫.೫. ವಿಶಿಷ್ಟ ಪ್ರಾವೀಣ್ಯ

ಮನುಷ್ಯನಿಗೆ ತಾನು ಮಾತನಾಡುವ ಭಾಷೆಯ ರಚನೆಯ ಜ್ಞಾನ ಎಂದರೆ ಅದನ್ನು ಬಳಸುವ ಬಗೆಯ ಕುರಿತು ತಿಳಿದಿರುತ್ತದೆ. ಭಾಷೆಯ ಈ ಅಂತರಾರ್ಥವನ್ನು ತಿಳಿಯದೇ ಒಮ್ಮೊಮ್ಮೆ ಹಾಸ್ಯಕ್ಕೀಡಾಗಬಹುದು. ಸಂಸ್ಕೃತದ 'ಮೋದಕೇನ ತಾಡಯ' (ಮಾ ಉದಕೇನ ತಾಡಯ) ಎಂಬ ವಾಕ್ಯದ ಅರ್ಥವನ್ನು ತಿಳಿಯದ ಪ್ರಿಯಕರನು ಕಡುಬುಗಳನ್ನು ತೆಗೆದುಕೊಂಡು ಪ್ರೇಯಸಿಯನ್ನು ಹೊಡೆದ ಕತೆ ನೀವು ಕೇಳಿರಬಹುದು. ಬಳೆ ಹೆಚ್ಚಿವೆ ಎಂದು ಹೆಂಡತಿ ಹೇಳಿದಾಗ ಹೆಚ್ಚಾದರೆ ಮಾರಿಬಿಡೋಣವೇ ಎಂದು ಗಂಡ ಕೇಳಿದನಂತೆ. ಹೀಗೆಯೇ ಕೈಲಾಸವಾಸಿಯಾಗು, ದೀಪ ದೊಡ್ಡದು ಮಾಡು, ಕುಂಕುಮ ಹೆಚ್ಚಿತು. ಇಂತಹ ಹಲವಾರು ಪ್ರಯೋಗಗಳ ಅರ್ಥವನ್ನು ಸಂದರ್ಭಕ್ಕನುಗುಣವಾಗಿ ತಿಳಿಯದೇ ಹೋದರೆ ಭಾಷೆಯ ಅರಿವು ನಮಗೆ ಸಂಪೂರ್ಣ ಆಗಿಲ್ಲವೆಂದೇ ಅರ್ಥ. ಆದರೆ ಈ ವಿಶಿಷ್ಟ ಪ್ರಾವೀಣ್ಯ ಪಡೆಯುವ ಸಾಮರ್ಥ್ಯ ಮಾನವನಿಗಿದೆ. ಭಾಷೆ ಕೇವಲ ಧ್ವನಿ, ಶಬ್ದ, ಅರ್ಥಗಳ ಸಮೂಹವಲ್ಲ, ಅದರ ರಚನೆ ಸಂಕೀರ್ಣವಾಗಿರುತ್ತದೆ. ಮಾತೃಭಾಷೆಯಲ್ಲಿ ನಮಗೆ ಅರಿವಾಗದಂತೆ ಈ ರಚನೆ ನಮಗೆ ರೂಢಿಯಾಗಿ ಬಿಡುತ್ತದೆ. ಬೇರೆ ಭಾಷೆ ಕಲಿಯುವಾಗಲೂ ಕಷ್ಟಪಟ್ಟು ಅಂಥವುಗಳನ್ನು ಅರಗಿಸಿಕೊಳ್ಳಬೇಕಾಗುತ್ತದೆ.

## ೨.೫.೬. ಸಂಸ್ಕೃತಿ ವಾಹಕತೆ

ಮಾನವನು ಪರಿಶ್ರಮದಿಂದ ಪ್ರಪಂಚದ ಯಾವುದೇ ಭಾಷೆಯ ಪ್ರಾವೀಣ್ಯ ಪಡೆಯಬಹುದು. ಅದಕ್ಕಿಂತ ಹೆಚ್ಚಾಗಿ ತಾನು ಕಲಿತ ಭಾಷೆಯನ್ನು ತನ್ನ ಮುಂದಿನ ಪೀಳಿಗೆಯವರಿಗೆ ಸುಲಭವಾಗಿ ಅವನು ಸಾಗಿಸುತ್ತಾನೆ. ತನ್ನ ಸಂಸ್ಕೃತಿಯನ್ನು ಭಾಷೆಯಲ್ಲಿ ತುಂಬಿ ಅದನ್ನು ಮುಂದಿನವರಿಗೆ ಕಟ್ಟಿಕೊಡುತ್ತಾನೆ. ತನ್ನ ಭಾಷೆಗೊಂದು ಲಿಪಿಯನ್ನು ರೂಪಿಸಿ ಅಥವಾ ಆಗಲೇ ಸಿದ್ಧವಿರುವ ಯಾವುದಾದರೂ ಲಿಪಿಯನ್ನು ಉಪಯೋಗಿಸಿಕೊಂಡು ತನ್ನ ಅನುಭವ, ಶೋಧನೆಗಳನ್ನು ಬರೆದಿಡುತ್ತಾನೆ. ಹೀಗೆ ಸಾಹಿತ್ಯ, ಧರ್ಮ, ತತ್ವ ನೀತಿ, ಆಚಾರ–ವಿಚಾರ ವಿಜ್ಞಾನ ಮುಂತಾಗಿ ತಾನು ಕಂಡದ್ದನ್ನು, ಅನುಭವಿಸಿದ್ದನ್ನು ಲಿಖಿತವಾಗಿಸುತ್ತಾನೆ. ತನ್ನ ಅನುಭವಗಳನ್ನು ಚಿಕ್ಕವರಿಗೆ ಬೋಧಿಸುತ್ತಾನೆ. ಚಿಕ್ಕವರು ತಾವು ದೊಡ್ಡವರಾದ ಮೇಲೆ ತಮ್ಮ ಹಿರಿಯರು ಉಪದೇಶಿಸಿದ್ದನ್ನು ಸ್ವಂತ ಅನುಭವದೊಡನೆ ಮುಂದಿನ ಪೀಳಿಗೆಯವರಿಗೆ ರವಾನಿಸುತ್ತಾರೆ.

ಈ ರೀತಿ ಭಾಷಾಮಾಧ್ಯಮದ ಮೂಲಕ ಜ್ಞಾನವು, ಸಂಸ್ಕೃತಿಯ ಪರಂಪರೆ ನಿರಂತರವಾಗಿ ತಲೆತಲಾಂತರವಾಗಿ ಮುಂದುವರೆಯುತ್ತದೆ. ಈ ಸಂಸ್ಕೃತಿ ವಾಹಕತೆಯ ಕೆಲಸ ಸಾಮಾನ್ಯವಾದುದಲ್ಲ. ಮನುಷ್ಯನ ಬೌದ್ಧಿಕ ಬೆಳವಣಿಗೆಗೆ ಭಾಷೆ ನೀಡಿರುವ ಕಾಣಿಕೆ ಅತ್ಯಮೂಲ್ಯವಾದುದು.

## ೨.೫.೭. ಇತರ ಲಕ್ಷಣಗಳು

ಭಾಷೆಯ ಮೂಲ ಉದ್ದೇಶವೇ ತನ್ನ ಅನಿಸಿಕೆಗಳನ್ನು ಇತರರೊಡನೆ ವಿನಿಮಯ ಮಾಡಿಕೊಳ್ಳುವುದಾಗಿದೆ. ಆದ್ದರಿಂದ ತಾನು ಹೇಳಿದ್ದನ್ನು ಅವರು ಕೇಳಿ, ಅವರು ಹೇಳಿದ್ದನ್ನು ತಾನು ಕೇಳಿ ಕಾರ್ಯ ಸಾಗಿಸಲು ಭಾಷೆಯ ಈ ಪರಸ್ಪರ ವಿನಿಮಯಗುಣವೂ ಒಂದು. ಹಾಗೆಯೇ ಧ್ವನಿ, ಧ್ವನಿಗಳ ಸಕ್ರಮವಾದ ಅನುಕ್ರಮತೆ ಅನುಕ್ರಮಿತ ಧ್ವನಿಗಳ ಅರ್ಥ, ಸೃಜನಶೀಲತೆ, ಅಧ್ಯಯನಶೀಲತ್ವ ಹೀಗೆ ಇನ್ನೂ ಕೆಲವು ಮಾನವ ಭಾಷಾ ವೈಲಕ್ಷ್ಯಣಗಳನ್ನು ಭಾಷಾವಿಜ್ಞಾನಿಗಳು ಹೇಳಿದ್ದಾರೆ.

ಮಾನವನ ಸಂಸ್ಕೃತಿ ನಾಗರಿಕತೆಗಳಲ್ಲಿ ಭಾಷೆ ಇಂದು ಅತ್ಯಂತ ಮಹತ್ವದ ಅಂಶವಾಗಿದೆ. ಹುಟ್ಟಿದ ಕೂಸುಗಳಲ್ಲಿ ಬಹಳಷ್ಟು ಕೂಸುಗಳು ಮಾತು ಕಲಿತೇ ಕಲಿಯುತ್ತವೆ. ಮನುಷ್ಯರು ತಮ್ಮ ಜೀವಿತದ ಅವಧಿಯ ಕೊನೆಯ ಗಳಿಗೆಯವರೆಗೂ ಮಾತನಾಡುತ್ತಾರೆ. ಆದರೆ ಮಾತನಾಡುವವರೆಲ್ಲರೂ ತಾವು ಆಡುತ್ತಿರುವ ಭಾಷೆಯ ಬಗ್ಗೆ ಜಿಜ್ಞಾಸೆಯುಳ್ಳವರಾಗಿರುವುದಿಲ್ಲ. ಅದರ ರಚನೆಯ ತಿರುಳಿನ ಸ್ವಾರಸ್ಯವೇನೆಂಬುದು ಅವರಿಗೆ ಅರಿವಾಗದೆಯೆ ಹೋಗಬಹುದು. ಮಾತನಾಡುವವರೆಲ್ಲರಿಗೂ ಅವರಾಡುವ ಭಾಷೆಯ ರಚನೆಯ ಅಂತರಾಳ ತಿಳಿದಿರಲೇಬೇಕೆಂಬ ನಿಯಮವಿಲ್ಲ. ಮಕ್ಕಳನ್ನು ಹೆರುವ ಪ್ರತಿಯೊಬ್ಬ ತಾಯಿಯೂ ತನ್ನ ಗರ್ಭದಲ್ಲಿ ಕೂಸು ಹೇಗೆ ಮೂಡುತ್ತದೆ, ಅದರ ಬೆಳವಣಿಗೆಯ ಹಂತಗಳೇನು? ಅದರ ಒಂದೊಂದು ಅಂಗವೂ ಹೇಗೆ ನಿರ್ಮಾಣವಾಗುತ್ತದೆ. ಇತ್ಯಾದಿ ವೈಚಿತ್ರ್ಯಗಳ ಬಗೆಗೆ ತಿಳಿದಿರಬೇಕಾಗಿಲ್ಲ. ಹೆರುವ ಕಾರ್ಯವೊಂದು ಅವಳ ಪಾಲಿಗೆ ಸಹಜ ಯಾಂತ್ರಿಕ ಕಾರ್ಯವಾಗಿ ಬಿಟ್ಟಿರಬಹುದು. ಆದರೆ ಆ ಬಗ್ಗೆ ಡಾಕ್ಟರರು ಮಾತ್ರ ವಿವರವಾಗಿ ತಿಳಿದಿಕೊಂಡಿರುತ್ತಾರೆ. ಅವರಿಗೆ ಗರ್ಭಸ್ಥ ಶಿಶುವಿನ ಒಂದೊಂದು ವಾರ, ಒಂದೊಂದು ದಿನವೂ ಮಹತ್ವಪೂರ್ಣ, ಅವರ ಶೋಧನೆಗೆ ಆಸಕ್ತಿಗೆ, ಉತ್ಸಾಹಕ್ಕೆ ಮಿತಿಯಿಲ್ಲ. ಹಾಗೆಯೇ ಎಂಜಿನಿಯರನಿಗೆ ಕಟ್ಟಡದ ಒಂದೊಂದು ಕಲ್ಲು ಮಹತ್ವದ್ದು. ಆದರೆ ಅದಕ್ಕಾಗಿ ಕಲ್ಲು ಹೊರುವ ಆಳಿಗೆ ಅದರ ಕಲ್ಪನೆ ಇಲ್ಲ. ಅಂದರೆ ವ್ಯವಹಾರ ಸರಳವಾಗಿರುವವರಿಗೆ ಜೀವನಕ್ಕೆ ಮಿತಿ ಹಾಕಿಕೊಂಡವರಿಗೆ, ಜೀವನ ಯಾಂತ್ರಿಕವಾಗಿರುವವರಿಗೆ ವಿಶೇಷ ಜ್ಞಾನದ ಅವಶ್ಯಕತೆ ಇರುವುದಿಲ್ಲ. ಕೇವಲ ಹಸಿವು, ನೀರಡಿಕೆ, ನಿದ್ದೆ, ಮೈಥುನ ಇಷ್ಟರಲ್ಲೇ ಬದುಕುವ

ಪ್ರಾಣಿ–ಪಕ್ಷಿಗಳೂ ಇಂತಹ ಸುಲಭ–ಸರಳ ಯಾಂತ್ರಿಕ ಜೀವನ ನಡೆಸುತ್ತವೆ. ಆದರೆ ಮಾನವ ಇದೆಲ್ಲವನ್ನೂ ಮೀರಿ ಚಿಂತನಶೀಲ ಮನುಸ್ಸುಳ್ಳ ಸುಸಂಸ್ಕೃತ ವ್ಯಕ್ತಿಯಾಗಿದ್ದಾನೆ. ಅವನ ಅವಶ್ಯಕತೆ ಹೆಚ್ಚಿದಂತೆ, ಕುತೂಹಲ ಹೆಚ್ಚಿದಂತೆ ಹೊಸ ಹೊಸ ಆವಿಷ್ಕಾರಗಳನ್ನು ಮೊದಲು ಸಾಧ್ಯವಾಗಿರುವುದು ಇದರಿಂದಲೇ. ಜ್ಞಾನತೃಷೆಯುಳ್ಳವರು ಒಂದೊಂದು ಕ್ಷೇತ್ರದಲ್ಲೂ ಆಳವಾಗಿ ಚಿಂತಿಸುತ್ತಾರೆ. ಇಂದು ಜೀವನ ಜಟಿಲ, ಸಂಕೀರ್ಣವಾಗಿದೆ. ಹೆಚ್ಚು ಹೆಚ್ಚು ತಿಳಿಯಬಯಸುವವ ತನ್ನಲ್ಲೇ ಹುಟ್ಟುವ ಭಾಷೆಯ ಬಗೆಗೂ ಚಿಂತನಶೀಲತೆಗೆ ಒಳಗಾಗಿ ಭಾಷಾರಚನೆಯ ತಿರುಳನ್ನು ಹಿಂಜಿ, ಹಿಂಜಿ ನೋಡುತ್ತಾನೆ. ಅದರ ವೈಚಿತ್ರ –ವೈಶಿಷ್ಟ್ಯಗಳನ್ನು ಮುಂದಿಡುತ್ತಾನೆ. ಅದರ ಅಂತರಾಳವನ್ನು ಬಿಚ್ಚಿ ಇಡುತ್ತಾನೆ. ಭಾಷೆಯನ್ನು ವಿವರಿಸುವುದು ಸುಲಭದ ಕೆಲಸವಲ್ಲ. ಅದಕ್ಕಾಗಿ ವಿಶೇಷ ಪರಿಣತಿ ಬೇಕು.

# ಭಾಷಾವರ್ಗೀಕರಣದ ಮೂಲತತ್ವಗಳು

ಜಗತ್ತಿನಾದ್ಯಂತ ಸಾವಿರಾರು ಭಾಷೆ ಮತ್ತು ಉಪಭಾಷೆಗಳು ಬಳಕೆಯಲ್ಲಿವೆ. ಈ ಭಾಷೆಗಳನ್ನು ಸ್ಥೂಲವಾಗಿ ಅಧ್ಯಯನದ ದೃಷ್ಟಿಯಿಂದ ಬರಹದ ಭಾಷೆಗಳು ಮತ್ತು ಆಡುಭಾಷೆಗಳು ಎಂದು ಎರಡು ವರ್ಗಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾಗಿದೆ. ಹೀಗೆ ಹೆಸರಿಸಿಕೊಂಡ ಬರಹದ ಭಾಷೆಗಳನ್ನು ಲಿಖಿತ ಭಾಷೆಗಳು, ಚಾಕ್ಷುಷ ಭಾಷೆಗಳು, ಗ್ರಾಂಥಿಕ ಭಾಷೆಗಳು, ಸಾಹಿತ್ಯಿಕ ಭಾಷೆಗಳು, ಸಾಂಸ್ಕೃತಿಕ ಭಾಷೆಗಳು, ಸಂಸ್ಕಾರಿತ ಭಾಷೆಗಳು, ಅನಾಗರಿಕ ಭಾಷೆಗಳು, ಅಸಂಸ್ಕಾರಿಕ ಭಾಷೆಗಳು, ಅಸಂಸ್ಕೃತ ಭಾಷೆಗಳು, ಹಿಂದುಳಿದ ಭಾಷೆಗಳು, ಲಿಪಿರಹಿತ ಭಾಷೆಗಳು ಎಂದೂ ಬೇರೆ ಬೇರೆ ಸಂದರ್ಭಗಳಲ್ಲಿ ಕರೆದುಕೊಳ್ಳುವುದನ್ನು ಅಲ್ಲಲ್ಲಿ ಕಾಣುತ್ತೇವೆ. ಬರಹದ ಭಾಷೆಗಳು ಆಡುಭಾಷೆಗಳಿಗಿಂತ ಬೇರೆ ಎಂಬುದು ಇದರಿಂದ ತಿಳಿದುಬರುವುದು.

ಬರಹದ ಭಾಷೆಗಳು ಸಾಮಾನ್ಯವಾಗಿ ಆಡುಭಾಷೆಗಳಿಗಿಂತ ಹೆಚ್ಚು ಸಂಪದ್ಭರಿತ ಭಾಷೆಗಳಾಗಿರುತ್ತವೆ. ಕೆಲವು ಭಾಷೆಗಳು ಇದಕ್ಕೆ ಅಪವಾದಗಳಿರಬಹುದು. ಬೆಟ್ಟಗುಡ್ಡಗಳಲ್ಲಿ ವಾಸಿಸುವ ಹಿಂದುಳಿದ ಆದಿವಾಸಿ ಜನರು ಆಡುವ ಭಾಷೆಗಳು ಸಾಮಾನ್ಯವಾಗಿ ಹಿಂದುಳಿದ ಭಾಷೆಗಳಾಗಿರುತ್ತವೆ. ಆದರೆ ಎಲ್ಲಾ ಆಡುಭಾಷೆಗಳು ತುಂಬ ಹಿಂದುಳಿದ ಭಾಷೆಗಳಾಗಿರುವುದಿಲ್ಲ. ಕೆಲವು ಆಡುಭಾಷೆಗಳನ್ನು ತುಂಬ ಮುಂದುವರಿದ ಜನರು ಆಡುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಎಲ್ಲಾ ಆಡುಭಾಷೆಗಳನ್ನು ಎಲ್ಲಾ ಸಂದರ್ಭಗಳಲ್ಲಿಯೂ ಹಿಂದುಳಿದ ಭಾಷೆಗಳು, ಅನಾಗರಿಕ ಭಾಷೆಗಳು, ಅಸಂಸ್ಕಾರಿಕ ಅಥವಾ ಅಸಾಂಸ್ಕೃತಿಕ ಭಾಷೆಗಳು, ಕ್ಷುಲಕ ಭಾಷೆಗಳು ಎಂದು ಹೇಳಲು ಬರುವುದಿಲ್ಲ. ಅವು ಬರಹದ ಭಾಷೆಗಳಾಗಿರಲಿ, ಆಡುಭಾಷೆಗಳಾಗಿರಲಿ, ಅವು ಅವುಗಳ ಪರಿಸರ ಹಾಗೂ ಪರಿಸ್ಥಿತಿಗಳಿಗೆ ತಕ್ಕಂತೆ ಬೆಳೆದುಬಂದಿರುತ್ತವೆ.

ವಾಣಿಜ್ಯ ವ್ಯವಹಾರಕ್ಕಾಗಿ ಬಳಸಿಕೊಂಡ ಭಾಷೆಗಳನ್ನು ವಾಣಿಜ್ಯ ಭಾಷೆಗಳು ಎಂದೂ, ಸಾಹಿತ್ಯಕ್ಕಾಗಿ ಬಳಸಿಕೊಂಡ ಭಾಷೆಗಳನ್ನು ಸಾಹಿತ್ಯಿಕ ಭಾಷೆಗಳು ಎಂದೂ ರಾಷ್ಟ್ರವ್ಯವಹಾರಕ್ಕಾಗಿ ಬಳಸಿಕೊಂಡ ಭಾಷೆಗಳನ್ನು ರಾಷ್ಟ್ರೀಯ ಭಾಷೆಗಳು ಎಂದೂ, ರಾಜ್ಯ ಅಥವಾ ಪ್ರಾಂತೀಯ ವ್ಯವಹಾರಕ್ಕಾಗಿ ಬಳಸಿಕೊಂಡ ಭಾಷೆಗಳನ್ನು ರಾಜ್ಯ ಅಥವಾ ಪ್ರಾಂತೀಯ ಭಾಷೆಗಳು ಎಂದೂ ಆಡಳಿತಕ್ಕಾಗಿ ಬಳಸಿಕೊಂಡ ಭಾಷೆಗಳನ್ನು

ಆಡಳಿತ ಭಾಷೆಗಳು ಎಂದೂ ಗುಪ್ತವ್ಯವಹಾರಕ್ಕಾಗಿ ಬಳಸಿಕೊಂಡ ಭಾಷೆಗಳನ್ನು ಗುಪ್ತ ಭಾಷೆಗಳು ಎಂದೂ ಕೃತಕವಾಗಿ ಸೃಷ್ಟಿಸಿಕೊಂಡ ಭಾಷೆಗಳನ್ನು ಕೃತಕ ಭಾಷೆಗಳು ಎಂದೂ, ತುಂಬ ಹಿಂದುಳಿದ ಭಾಷೆಗಳನ್ನು ಹಿಂದುಳಿದ ಭಾಷೆಗಳು ಎಂದೂ, ತುಂಬ ಸಂಪದ್ಭರಿತವಾದ ಭಾಷೆಗಳನ್ನು ಸಂಪದ್ಭರಿತ ಭಾಷೆಗಳು ಎಂದೂ, ಬರಹದಲ್ಲಿ ಕಂಡುಬರುವ ಭಾಷೆಗಳನ್ನು ಬರಹದ ಭಾಷೆಗಳು ಎಂದೂ ಭಾಷೆಗಳನ್ನು ಅವುಗಳ ಬಳಕೆ ಮುಂತಾದವುಗಳಿಗೆ ಅನುಗುಣವಾಗಿ ಹೆಸರಿಸಿಕೊಳ್ಳುವುದು ಹೆಚ್ಚು ರೂಢಿ. ಜಗತ್ತಿನಾದ್ಯಂತ ಕಂಡುಬರುವ ಎಲ್ಲಾ ಭಾಷೆಗಳನ್ನು ಅವುಗಳ ವ್ಯವಹಾರ ಮತ್ತು ಉದ್ದೇಶ ಮುಂತಾದವುಗಳಿಗೆ ಅನುಗುಣವಾಗಿ ಹೆಸರಿಸಿಕೊಳ್ಳಬಹುದೇ ವಿನಾ ಅವುಗಳನ್ನು ಅವುಗಳ ಉದ್ದೇಶಕ್ಕೆ ಅನುಗುಣವಾಗಿವಾಗಿ ವರ್ಗೀಕರಿಸಿಕೊಳ್ಳಲು ಎಲ್ಲಾ ವೇಳೆಯಲ್ಲಿಯೂ ಸಾಧ್ಯವಾಗುವುದಿಲ್ಲ. ಹಾಗೆ ಭಾಷೆಗಳನ್ನು ವರ್ಗೀಕರಿಸಿಕೊಳ್ಳಲು ಪ್ರಯತ್ನಿಸಿದಲ್ಲಿ ಅನೇಕ ಭಾಷೆಗಳು ಅವುಗಳಲ್ಲಿ ಸೇರದೆ ಹೋಗಬಹುದಾದ ಅವಕಾಶಗಳಿವೆ. ಕೆಲವು ವೇಳೆ ಒಂದೇ ಭಾಷೆ ರಾಜ್ಯ, ರಾಷ್ಟ್ರ, ಆಡಳಿತ, ಸಾಹಿತ್ಯ, ವಾಣಿಜ್ಯ ಭಾಷೆಯಾಗಿ ಕಾಣಿಸಿಕೊಳ್ಳಬಹುದು. ಉದಾಹರಣೆಗೆ ಕನ್ನಡ ಕರ್ನಾಟಕದ ರಾಜ್ಯ ಭಾಷೆಯೂ, ಸಾಹಿತ್ಯಿಕ ಭಾಷೆಯೂ, ಆಡಳಿತ ಭಾಷೆಯೂ, ಬಹರದ ಭಾಷೆಯೂ ಆಗಿ ಕಾಣಿಸಿಕೊಳ್ಳುವುದು.

ಪ್ರಾಚೀನ ಕಾಲದಲ್ಲಿ ಜಗತ್ತಿನಾದ್ಯಂತ ಅನೇಕ ಭಾಷೆಗಳು ಬಳಕೆಯಲ್ಲಿದ್ದುವು ಎಂಬುದಕ್ಕೆ ಸಾಕಷ್ಟು ಆಧಾರಗಳು ದೊರೆಯುತ್ತವೆ. ಹಿಂದೆ ಇದ್ದ ಎಷ್ಟೋ ಭಾಷೆಗಳು ಈಗ ಬಳಕೆಯಲ್ಲಿಲ್ಲ. ಅವುಗಳನ್ನು ಆಡುತ್ತಿದ್ದ ಜನರು ಈಗಿಲ್ಲ. ಅವುಗಳಿಂದ ಕಾಲಕಾಲಕ್ಕೆ ಹುಟ್ಟಿ ಬೆಳೆದು ಬಂದ ಭಾಷೆಗಳು, ಸೋದರಭಾಷೆಗಳು, ಮರಿಭಾಷೆಗಳು, ಉಪಭಾಷೆಗಳು ಮಾತ್ರ ಬಳಕೆಯಲ್ಲಿವೆ. ಹಿಂದೆ ಬಳಕೆಯಲ್ಲಿದ್ದ ಹಾಗೂ ಇಂದು ಬಳಕೆಯಲ್ಲಿರುವ ಭಾಷೆಗಳನ್ನು ಅಧ್ಯಯನದ ದೃಷ್ಟಿಯಿಂದ ಜೀವಂತ ಭಾಷೆಗಳು ಮತ್ತು ಅಳಿದ ಭಾಷೆಗಳು ಎಂದು ಎರಡು ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾಗಿದೆ. ಹಿಂದೆ ಬಳಕೆಯಲ್ಲಿದ್ದು ಹಾಗೆ ಕಣ್ಮರೆಯಾಗಿ ಹೋಗಿರಬಹುದಾದ ಭಾಷೆಗಳ ಸಂಖ್ಯೆ ಇಂದು ಬಳಕೆಯಲ್ಲಿರುವ ಭಾಷೆಗಳ ಸಂಖ್ಯೆಗಿಂತ ಕಡಿಮೆ ಇರುತ್ತವೆ. ಜೀವಂತ ಭಾಷೆಗಳನ್ನು ಪ್ರಚಲಿತ ಭಾಷೆಗಳು ಎಂದೂ, ಅಳಿದ ಭಾಷೆಗಳನ್ನು ಅಪ್ರಚಲಿತ ಭಾಷೆಗಳು ಎಂದೂ ಕರೆಯುವರು. ಆಳಿದ ಭಾಷೆಗಳನ್ನು ಇಂದು ಜೀವಂತವಾಗಿರುವ ಭಾಷೆಗಳಂತೆ ಅವುಗಳನ್ನು ಪೂರ್ಣವಾಗಿ ಅಧ್ಯಯನ ಮಾಡಲು ಬರುವುದಿಲ್ಲ. ಅಳಿದ ಭಾಷೆಗಳಲ್ಲಿ ಕೆಲವಕ್ಕೆ ಲಿಖಿತ ಆಧಾರಗಳು ದೊರೆಯುತ್ತವೆಯಾದರೂ ಅವು ಅಷ್ಟೇನು ಸ್ಪಷ್ಟವಾಗಿರುವುದಿಲ್ಲ. ಇಷ್ಟಾದರೂ ಕಎಲವು ವಿದ್ವಾಂಸರು ಹಾಗೆ ಕಣ್ಮರೆಯಾಗಿ ಹೋಗಿರುವ ಕೆಲವು ಭಾಷೆಗಳನ್ನು ಅಧ್ಯಯನ ಮಾಡುವ ಪ್ರಯತ್ನ ಮಾಡಿದ್ದಾರೆ.

ಜಗತ್ತಿನ ಪ್ರತಿಯೊಂದು ಭಾಷೆಯೂ ತನ್ನದೇ ಆದ ಇತಿಹಾಸವನ್ನು ರೂಪಿಸಿಕೊಂಡಿರುತ್ತದೆ. ಕೆಲವು ಭಾಷೆಗಳ ಅಂತಹ ಇತಿಹಾಸವನ್ನು ಗುರುತಿಸಿಕೊಳ್ಳಲು ಸಾಧ್ಯವಾದರೆ, ಮತ್ತೆ ಕೆಲವು ಭಾಷೆಗಳ ಇತಿಹಾಸವನ್ನು ಗುರುತಿಸಿಕೊಳ್ಳಲು ಬರುವುದಿಲ್ಲ. ಕಾರಣವೇನೆಂದರೆ ಅದಕ್ಕೆ ನೆರವಾಗುವ ಯಾವ ಖಚಿತವಾದ ಆಧಾರಗಳು ದೊರೆಯುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಜಗತ್ತಿನ ಭಾಷೆಗಳನ್ನು ಅವುಗಳ ಇತಿಹಾಸವನ್ನು ಆಧರಿಸಿ, ಮೂಲಭಾಷೆಗಳು, ಪ್ರಾಚೀನ ಭಾಷೆಗಳು, ಮಧ್ಯಕಾಲೀನ ಭಾಷೆಗಳು, ಆಧುನಿಕ ಭಾಷೆಗಳು ಎಂದು ಬೇರೆ ಬೇರೆ ಹಂತಗಳಲ್ಲಿ ವರ್ಗೀಕರಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಈ ವರ್ಗೀಕರಣ ಜಗತ್ತಿನ ಎಲ್ಲಾ ಭಾಷೆಗಳಿಗೂ ಅನ್ವಯವಾಗುವುದಿಲ್ಲ. ಆದಕಾರಣ ಈ ಬಗೆಯ ಭಾಷಾ ವರ್ಗೀಕರಣ ಎಲ್ಲಾ ವೇಳೆಯಲ್ಲಿಯೂ ಹೆಚ್ಚು ಉಪಯುಕ್ತವಾದುದಲ್ಲ ಎಂದು ಹೇಳಬಹುದು.

ಜಗತ್ತಿನ ಭಾಷೆಗಳನ್ನು ಮೇಲಿನಂತೆ ಅವುಗಳ ಬರಹ, ಬಳಕೆ, ಇತಿಹಾಸ ಮುಂತಾದವುಗಳಿಗೆ ಅನುಗುಣವಾಗಿ ಹೆಚ್ಚು ಸಮರ್ಪಕ ಹಾಗೂ ಸಮಗ್ರವಾಗಿ ವರ್ಗೀಕರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂಬುದನ್ನು ಮನಗಂಡ ಕೆಲವು ವಿದ್ವಾಂಸರು ಭಾಷೆಗಳನ್ನು ಅವುಗಳ ಪ್ರಭಾವ ಇತ್ಯಾದಿಗಳಿಗೆ ಅನುಗುಣವಾಗಿ ವರ್ಗೀಕರಿಸಿಕೊಳ್ಳಲು ಪ್ರಯತ್ನಿಸಿದರು. ಭಾಷೆಗಳನ್ನು ಸಂಸ್ಕೃತ ಪ್ರಭಾವಿತ ಭಾಷೆಗಳು, ಪರ್ಷಿಯನ್ ಪ್ರಭಾವಿತ ಭಾಷೆಗಳು, ಇಂಗ್ಲೀಷ್ ಪ್ರಭಾವಿತ ಭಾಷೆಗಳು, ರಷ್ಯನ್ ಪ್ರಭಾವಿತ ಭಾಷೆಗಳು ಎಂಬಿತ್ಯಾದಿಯಾಗಿ ವರ್ಗೀಕರಿಸಿ ತೋರಿಸಬಹುದಾದರೂ ಜಗತ್ತಿನ ಎಲ್ಲಾ ಭಾಷೆಗಳನ್ನು ಈ ಬಗೆಯಲ್ಲಿ ಪೂರ್ಣವಾಗಿ ವರ್ಗೀಕರಿಸಿ ತೋರಿಸಲು ಸಾಧ್ಯವಾಗವುದಿಲ್ಲ.

ಜಗತ್ತಿನ ಪ್ರತಿಯೊಂದು ಭಾಷೆಯೂ ಒಂದಲ್ಲ ಒಂದು ಭಾಷೆಯ ಪ್ರಭಾವಕ್ಕೆ ಒಳಗಾಗಿರಲೇ ಬೇಕು. ಜಗತ್ತಿನ ಯಾವ ಭಾಷೆಯೂ ಇದರಿಂದ ಪೂರ್ಣವಾಗಿ ಮುಕ್ತವಾಗಿಲ್ಲ. ಯಾವ ಭಾಷೆಯ ಮೇಲೆ ಯಾವ ಭಾಷೆಯ ಪ್ರಭಾವ ಹೆಚ್ಚು, ಯಾವ ಭಾಷೆಯ ಮೇಲೆ ಯಾವ ಭಾಷೆಯ ಪ್ರಭಾವ ಕಡಿಮೆ ಎಂಬುದನ್ನು ಪೂರ್ಣವಾಗಿ ಪರಿಶೀಲಿಸಿ ತಿಳಿಯಬೇಕಾಗುತ್ತದೆ. ಇದು ತುಂಬ ಜಟಿಲವಾದ ವಿಚಾರ. ಕೆಲವು ಭಾಷೆಗಳ ಮೇಲೆ ತಮ್ಮ ತಮ್ಮ ನೆರೆಹೊರೆಯ ಭಾಷೆಗಳ ಪ್ರಭಾವ ಹೆಚ್ಚಿದ್ದರೆ, ಮತ್ತೆ ಕೆಲವು ಭಾಷೆಗಳಲ್ಲಿ ಹೆಚ್ಚಿರುವುದಿಲ್ಲ. ಈ ಕಾರಣದಿಂದ ಜಗತ್ತಿನ ಭಾಷೆಗಳನ್ನು ಅವುಗಳ ಪ್ರಭಾವ ಇತ್ಯಾದಿಗಳಿಗೆ ಅನುಗುಣವಾಗಿ ವರ್ಗೀಕರಿಸಿ ತೋರಿಸಲು ಕಷ್ಟವಾಗುವುದು. ಈ ಕಾರ್ಯ ತುಂಬ ಕ್ಲಿಷ್ಟವಾದ ಕಾರಣ ಈ ಬಗೆಯ ಭಾಷಾವರ್ಗೀಕರಣ ಹೆಚ್ಚು ಪ್ರಚಾರಕ್ಕೆ ಬರಲಾರದೆ ಹೋಯಿತು.

ಭೂಮಂಡಲವನ್ನು ಅದರ ಸ್ವಾಭಾವಿಕ ಲಕ್ಷಣಗಳಿಗೆ ಅನುಗುಣವಾಗಿ ಅಮೆರಿಕಾ ಖಂಡ, ಆಫ್ರಿಕಾ ಖಂಡ, ಏಷ್ಯಾ ಖಂಡ, ಯುರೋಪ್ ಖಂಡ, ಆಸ್ಟ್ರೇಲಿಯಾ ಖಂಡ

ಎಂದ ಮುಂತಾಗಿ ಹೆಸರಿಸಿಕೊಳ್ಳುವರು. ಈ ಬೇರೆ ಬೇರೆ ಖಂಡಗಳಲ್ಲಿ ಕಂಡುಬರುವ ಎಲ್ಲಾ ಭಾಷೆ ಮತ್ತು ಉಪಭಾಷೆಗಳನ್ನು ಅಮೆರಿಕಾ ಖಂಡದ ಭಾಷೆಗಳು, ಯೂರೋಪ್ ಖಂಡದ ಭಾಷೆಗಳು ಎಂದು ಬೇರೆ ಬೇರೆ ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾದರೂ ಈ ಬಗೆಯ ವರ್ಗೀಕರಣವನ್ನು ಹೆಚ್ಚು ವೈಜ್ಞಾನಿಕವೆಂದು ಭಾವಿಸಲು ಬರುವದಿಲ್ಲ. ಕಾರಣವೇನೆಂದರೆ ಏಷ್ಯಾಖಂಡದಾದ್ಯಂತ ಒಂದೇ ಭಾಷಾಪರಿವಾರಕ್ಕೆ ಸೇರಿದ ಭಾಷೆಗಳು ಬಳಕೆಯಲ್ಲಿಲ್ಲ ಇಲ್ಲಿ ಬೇರೆ ಬೇರೆ ಭಾಷಾ ಪರಿವಾರಗಳಿಗೆ ಸೇರಿದ ಅನೇಕ ಭಾಷೆಗಳಿವೆ. ಇವುಗಳನ್ನು ಅವುಗಳ ಜ್ಞಾತಿ ಸಂಬಂಧವನ್ನು ಕಡೆಗಣಿಸಿ ಏಷ್ಯಾಖಂಡದ ಭಾಷೆಗಳು ಎಂದು ವರ್ಗೀಕರಿಸಿಕೊಂಡರೆ ಅವುಗಳ ಆಂತರಿಕ ಸಂಬಂಧಕ್ಕೆ ಹೆಚ್ಚಿನ ಮಾನ್ಯತೆ ದೊರಕಿದಂತಾಗುವುದಿಲ್ಲ. ಆಂತರಿಕ ಸಾಮ್ಯವುಳ್ಳ ಭಾಷೆಗಳು ಏಷ್ಯಾಖಂಡ ಮಾತ್ರವಲ್ಲದೆ ಬೇರೆ ಬೇರೆ ಖಂಡಗಳಲ್ಲಿಯೂ ಬಳಕೆಯಲ್ಲಿರಬಹುದು. ಉದಾಹರಣೆಗೆ, ಇಂಡೋಯೂರೋಪಿಯನ್ ಭಾಷೆಗಳು, ಯೂರೋಪ್ ಖಂಡ, ಏಷ್ಯಾಖಂಡ, ಆಫ್ರಿಕಾ ಖಂಡ, ಆಸ್ಟ್ರೇಲಿಯಾ ಖಂಡ ಮುಂತಾದ ಕಡೆಗಳಲ್ಲಿ ಬಳಕೆಯಲ್ಲಿವೆ. ಈ ಭಾಷೆಗಳನ್ನು ಅವುಗಳ ಸಾಮ್ಯವನ್ನು ಕಡೆಗಣಿಸಿ ಏಷ್ಯಾ ಖಂಡ, ಆಫ್ರಿಕಾ ಖಂಡ, ಯುರೋಪ್ ಖಂಡ, ಆಸ್ಟ್ರೇಲಿಯಾ ಖಂಡದ ಭಾಷೆಗಳು ಎಂದು ಹೆಸರಿಸಿಕೊಂಡರೆ ಅದು ತೀರ ಹಾಸ್ಯಾಸ್ಪದವಾಗಿ ಕಾಣಿಸಿಕೊಳ್ಳುತ್ತದೆ. ಈ ಕಾರಣದಿಂದಲೇ ಭಾಷೆಗಳನ್ನು ಅವು ದೊರೆಯುವ ಖಂಡವನ್ನು ಆಧರಿಸಿ ವರ್ಗೀಕರಿಸಿಕೊಳ್ಳುವ ವಿಧಾನವು ಹೆಚ್ಚು ಪ್ರಚಾರಕ್ಕೆ ಬರಲಾರದೆ ಹೋಯಿತು.

ಭಾಷೆಗಳನ್ನು ಅವು ದೊರೆಯುವ ದೇಶ ಅಥವಾ ರಾಜ್ಯವನ್ನು ಆಧರಿಸಿ ವರ್ಗೀಕರಿಸಿಕೊಳ್ಳುವ ಪ್ರಯತ್ನಗಳು ನಡೆದವು. ದೇಶಗಳನ್ನು ಆಧರಿಸಿ ಭಾರತೀಯ ಭಾಷೆಗಳು, ಯುರೋಪಿನ ಭಾಷೆಗಳು, ರಷ್ಯಾದ ಭಾಷೆಗಳು, ಚೀನಾದ ಭಾಷೆಗಳು, ತುರ್ಕಿ ಭಾಷೆಗಳು, ಇರಾನಿಯನ್ ಭಾಷೆಗಳು ಎಂದು ಮುಂತಾಗಿ ವರ್ಗೀಕರಿಸಿಕೊಳ್ಳುವ ಪ್ರಯತ್ನಗಳು ಜಗತ್ತಿನ ಅಲ್ಲಲ್ಲಿ ನಡೆದಿವೆಯಾದರೂ ಈ ಬಗೆಯ ಭಾಷಾವರ್ಗೀಕರಣ ಹೆಚ್ಚು ಉಪಯುಕ್ತವಾದುದಲ್ಲ. ಆದಕಾರಣ ಇದು ಪ್ರಚಾರಕ್ಕೆ ಬರಲಾರದೆ ಹೋಯಿತು. ಭಾರತದ ಭಾಷೆಗಳನ್ನು ಭಾರತೀಯ ಭಾಷೆಗಳು ಎಂದು ಹೆಸರಿಸಿಕೊಳ್ಳಬಹುದಾದರೂ ಭಾರತದಲ್ಲಿ ಒಂದೇ ಭಾಷಾಪರಿವಾರಕ್ಕೆ ಸೇರಿದ ಭಾಷೆಗಳು ಮಾತ್ರ ಬಳಕೆಯಲ್ಲಿಲ್ಲ. ಹಾಗೆ ಭಾಷೆಗಳನ್ನು ಭೌಗೋಳಿಕವಾಗಿ ವರ್ಗೀಕರಿಸಿಕೊಂಡಲ್ಲಿ ಭಾಷೆಗಳ ಆಂತರಿಕ ಸಾಮ್ಯಕ್ಕೆ ಹೆಚ್ಚಿನ ಮಾನ್ಯತೆ ಕೊಟ್ಟಂತಾಗುವುದಿಲ್ಲ. ಜಗತ್ತಿನಲ್ಲಿ ಯಾವುದೇ ದೇಶ ಅಥವಾ ರಾಜ್ಯ ತೆಗೆದುಕೊಂಡರೂ ಅದರಲ್ಲಿ ಒಂದೇ ಭಾಷಾ ಪರಿವಾರಕ್ಕೆ ಸೇರಿದ ಭಾಷೆಗಳಿರುವುದಿಲ್ಲ. ಭಾರತದಲ್ಲಿ ನಾಲ್ಕು ಭಾಷಾ ಪರಿವಾರಗಳಿಗೆ ಸೇರಿದ ಭಾಷೆಗಳಿವೆ. ಆಂತರಿಕ ಸಂಬಂಧ ಭಾಷೆಗಳ ವರ್ಗೀಕರಣಕ್ಕೆ ಬಹಳ ಮುಖ್ಯ. ರಷ್ಯ, ಅಮೆರಿಕ,

ಇಂಗ್ಲೆಂಡ್, ಭಾರತ, ಚೀನ ಮುಂತಾದ ದೇಶಗಳಲ್ಲಿ ಬಳಕೆಯಲ್ಲಿರುವ ಎಲ್ಲಾ ಭಾಷೆಗಳನ್ನು ಅವುಗಳ ಜ್ಞಾತಿ ಸಂಬಂಧವನ್ನೂ ಆಧರಿಸಿ ಬೇರೆ ಬೇರೆ ಪರಿವಾರ, ಉಪಪರಿವಾರ, ವರ್ಗ, ಉಪವರ್ಗಗಳಲ್ಲಿ ವರ್ಗೀಕರಿಸಿ ತೋರಿಸಬಹುದಾದ ಅವಕಾಶಗಳಿವೆಯಾದರೂ ಅವು ದೊರೆಯುವ ದೇಶ ಅಥವಾ ರಾಜ್ಯವನ್ನು ಆಧರಿಸಿ ಭಾಷೆಗಳನ್ನು ಎಲ್ಲಾ ವೇಳೆಯಲ್ಲಿಯೂ ವರ್ಗೀಕರಿಸಿಕೊಳ್ಳುವುದು ಹೆಚ್ಚು ಸಮಂಜಸವಾದುದಲ್ಲ.

ಮೇಲಿನ ಯಾವ ಬಗೆಯ ಭಾಷಾ ವರ್ಗೀಕರಣ ವಿಧಾನವನ್ನು ಒಪ್ಪದ ಕೆಲವರು ಬಾಷೆಗಳನ್ನು ಆಡುವ ಜನರ ಜನಾಂಗ, ಜಾತಿ, ಧರ್ಮ, ಸಮಾಜ, ಸಂಸ್ಕೃತಿ, ವೃತ್ತಿ, ಮುಂತಾದವುಗಳಿಗೆ ಅನುಗುನವಾಗಿ ವರ್ಗೀಕರಿಸಿಕೊಂಡರು. ಭಾಷೆಗಳನ್ನು ಆಡುವ ಜನರ ಜಾತಿಯನ್ನು ಆಧರಿಸಿ ಬ್ರಾಹ್ಮಣರ ಭಾಷೆಗಳು, ಬ್ರಾಹ್ಮಣೇತರರ ಭಾಷೆಗಳು, ಹರಿಜನರ ಭಾಷೆಗಳು, ಗಿರಿಜನರ ಭಾಷೆಗಳು ಎಂದೂ, ಅವನ್ನು ಆಡುವ ಜನರ ಧರ್ಮವನ್ನು ಆಧರಿಸಿ ಹಿಂದೂಗಳ ಭಾಷೆಗಳು, ಮುಸ್ಲಿಮರ ಭಾಷೆಗಳು ಕ್ರಿಶ್ಚಿಯನ್ನರ ಭಾಷೆಗಳು, ದ್ರಾವಿಡ ಭಾಷೆಗಳು, ಸೆಮೆಟಿಕ್ ಮತ್ತು ಹೆಮೆಟಿಕ್ ಭಾಷೆಗಳು, ಸಿರಿಯನ್ ಭಾಷೆಗಳು ಎಂದೂ, ಜನಾಂಗವನ್ನು ಆಧರಿಸಿ ಕಾಕೇಶಿಯನ್ ಭಾಷೆಗಳು, ಮಂಗೋಲಿಯನ್ ಭಾಷೆಗಳು, ನೀಗ್ರೋ ಭಾಷೆಗಳು ಎಂದೂ ಮುಂತಾಗಿ ವರ್ಗೀಕರಿಸಿ ತೋರಿಸಬಹುದು. ಜಗತ್ತಿನ ಭಾಷೆಗಳನ್ನು ಅವುಗಳನ್ನು ಆಡುವ ಜನರ ಜನಾಂಗ, ಜಾತಿ, ಧರ್ಮ, ವೃತ್ತಿ, ಸಮಾಜ ಮತ್ತು ಸಂಸ್ಕೃತಿಗಳಿಗೆ ಅನುಗುಣವಾಗಿ ಸಮಗ್ರವಾಗಿ ವರ್ಗೀಕರಿಸಿ ತೋರಿಸಲು ಸಾಧ್ಯವಾಗುವುದಿಲ್ಲ. ಜಗತ್ತಿನಲ್ಲಿ ಒಂದೇ ಜಾತಿ, ಜನಾಂಗ, ಧರ್ಮ, ವೃತ್ತಿ, ಸಮಾಜ ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿದ ಜನರಿಲ್ಲ. ಇವು ದೇಶದಿಂದ ದೇಶಕ್ಕೆ ಬೇರೆಬೇರೆಯಾಗಿರುತ್ತವೆ. ಒಂದೇ ಜಾತಿ, ಜನಾಂಗ, ಧರ್ಮಕ್ಕೆ ಸಂಬಂಧಿಸಿದ ಜನರು ದೊರೆತರೂ ಅವರು ಒಂದೇ ಭಾಷೆ ಆಡುತ್ತಿಲ್ಲ. ಅವರು ಬೇರೆ ಬೇರೆ ಜನಾಂಗ, ಸಂಸ್ಕೃತಿ, ಸಮಾಜ, ಧರ್ಮ, ವೃತ್ತಿಗಳಿಗೆ ಸಂಬಂಧಿಸಿದ ಬೇರೆ ಬೇರೆ ಭಾಷೆಗಳನ್ನು ಆಡುತ್ತಿದ್ದಾರೆ. ಭಾಷೆ ಅದು ಯಾವುದೇ ಜಾತಿ, ಜನಾಂಗ ಧರ್ಮಗಳಿಗೆ ಸಂಬಂಧಿಸಿರಲಿ, ಯಾವುದೇ ಸಮಾಜ ಹಾಗೂ ಸಂಸ್ಕೃತಿಗಳಿಗೆ ಸಂಬಂಧಿಸಿರಲಿ, ಅವರು ಅವರವರ ಪರಿಸರ ಹಾಗೂ ಪರಿಸ್ಥಿತಿಗಳಿಗೆ ಅನುಗುಣವಾಗಿ ಬೇರೆ ಬೇರೆ ಭಾಷೆಗಳನ್ನು ತಮ್ಮ ತಮ್ಮ ಮನೆಮಾತನ್ನಾಗಿ ಆಡುತ್ತಿರುತ್ತಾರೆ. ಭಾಷೆಗೂ ಅದನ್ನು ಆಡುವ ಜನರ ಸಮಾಜ, ಸಂಸ್ಕೃತಿ, ಜಾತಿ, ಜನಾಂಗ, ಧರ್ಮ, ವೃತ್ತಿಗಳಿಗೂ ನೇರವಾದ ಸಂಬಂಧ ಕಂಡುಬರುವುದಿಲ್ಲ. ಈ ಬೇರೆ ಬೇರೆ ಅಂಶಗಳು ಭಾಷೆಗಳ ಬೆಳವಣಿಗೆಗೆ ಎಷ್ಟೇ ಸಹಾಯಕಾರಿಯಾಗಿ ಕಂಡು ಬಂದರೂ ಅವು ಯಾವುವೂ ಭಾಷೆಗಳನ್ನು ನೇರವಾಗಿ ನಿರ್ದೇಶಿಸಲಾರವು. ಉದಾಹರಣೆಗೆ ಹವ್ಯಕರು ಆಡುವ

ಕನ್ನಡವನ್ನು ಹವ್ಯಕ ಕನ್ನಡವೆಂದೂ, ಕೊಡವರು ಆಡುವ ಭಾಷೆಯನ್ನು ಕೊಡಗು ಭಾಷೆ ಎಂದೂ, ಬಡಗರು ಆಡುವ ಭಾಷೆಯನ್ನು ಬಡಗ ಭಾಷೆ ಎಂದೂ ತೊದವರು ಆಡುವ ಭಾಷೆಯನ್ನು ತೊದ ಭಾಷೆ ಎಂದೂ ಹೆಸರಿಸಿಕೊಳ್ಳಬಹುದುದಾದರೂ ಈ ಭಾಷೆಗಳು ಅವನ್ನು ಆಡುವ ಜನರ ಸಮಾಜ, ಸಂಸ್ಕೃತಿ, ಜಾತಿ, ಧರ್ಮ ಮುಂತಾದವುಗಳನ್ನು ಪೂರ್ಣವಾಗಿ ನಿರ್ದೇಶಿಸುತ್ತವೆ ಎಂಬುದೇನೂ ಇಲ್ಲ. ಜಗತ್ತಿನಾದ್ಯಂತ ವ್ಯಾಪಿಸಿಕೊಂಡಿರುವ ಹಲವು ಭಾಷೆಗಳು ಅವನ್ನು ಆಡುವ ಜನರ ಜಾತಿ, ಧರ್ಮ, ವೃತ್ತಿ, ಜನಾಂಗ, ಸಮಾಜ, ಸಂಸ್ಕೃತಿ ಮುಂತಾದವುಗಳನ್ನು ಮೇಲ್ನೋಟಕ್ಕೆ ಪ್ರತಿನಿಧಿಸುವಂತೆ ಕಂಡುಬಂದರೂ ಅವು ಪೂರ್ಣವಾಗಿ ಅವುಗಳನ್ನು ಪ್ರತಿನಿಧಿಸುತ್ತಿಲ್ಲ. ಭಾಷೆಗಳಲ್ಲಿ ಯಾವ ಯಾವ ಭಾಷೆಗಳು ಜಾತಿ ಆಧಾರಿತ, ಯಾವ ಯಾವ ಭಾಷೆಗಳು ಜನಾಂಗ ಆಧಾರಿತ, ಯಾವ ಯಾವ ಭಾಷೆಗಳು ಸಮಾಜ ಮತ್ತು ಸಂಸ್ಕೃತಿ ಆಧಾರಿತ, ಯಾವ ಯಾವ ಭಾಷೆಗಳು ಧರ್ಮ ಆಧಾರಿತ, ಯಾವ ಯಾವ ಭಾಷೆಗಳು ವೃತ್ತಿ ಆಧಾರಿತವೆಂದು ಖಚಿತವಾಗಿ ಹೇಳಲು ಬರುವುದಿಲ್ಲ. ಇಷ್ಟಾದರೂ ಕೆಲವು ವಿದ್ವಾಂಸರು ಭಾಷೆಗಳನ್ನು ಅವನ್ನು ಆಡುವ ಜನರ ಜಾತಿ, ಧರ್ಮ ಮುಂತಾದವುಗಳನ್ನು ಆಧರಿಸಿ ವರ್ಗೀಕರಿಸಿಕೊಳ್ಳಲು ಪ್ರಯತ್ನಿಸಿದ್ದಾರೆ.

ಭಾಷೆಗಳನ್ನು ಕೆಲವರು ಅವುಗಳ ಮೂಲಭಾಷೆಗಳನ್ನು ಆಧರಿಸಿ ವಾಂಶಿಕವಾಗಿ ಬೇರೆ ಬೇರೆ ಪರಿವಾರ, ಉಪ–ಪರಿವಾರ ವರ್ಗ, ಉಪವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಲು ಪ್ರಯತ್ನಿಸಿದರು. ಈ ಬಗೆಯ ಭಾಷಾವರ್ಗೀಕರಣ ಭಾಷೆಗಳ ವಂಶ ಅಥವಾ ಜ್ಞಾತಿ ಸಂಬಂಧಕ್ಕೆ ಸಂಬಂಧಿಸಿದ್ದು. ಮೂಲತಃ ಒಂದೇ ಭಾಷೆಯಿಂದ ಕಾಲ ಕಾಲಕ್ಕೆ ಕವಲು ಕವಲುಗಳಲ್ಲಿ ಹುಟ್ಟಿ ಬೆಳೆದು ಬಂದ ಭಾಷೆಗಳಲ್ಲಿ ಒಂದಲ್ಲ ಒಂದು ಬಗೆಯ ಜ್ಞಾತಿ ಸಂಬಂಧ ಇದ್ದೇ ಇರುತ್ತದೆ. ಒಂದು ಮೂಲ ಭಾಷೆಯಿಂದ ಹುಟ್ಟಿ ಬಂದ ಕೆಲವು ಭಾಷೆಗಳು ಕೆಲವು ವೇಳೆ ಸಾಮ್ಯವನ್ನು ಕಳೆದುಕೊಂಡಿರುತ್ತರವೆ. ಒಂದೇ ಮೂಲಭಾಷೆಯಿಂದ ಹುಟ್ಟಿ ಬೆಳೆದು ಬಂದ ಭಾಷೆಗಳನ್ನು ಸಾಮಾನ್ಯವಾಗಿ ಒಂದೇ ಭಾಷಾ ಪರಿವಾರಕ್ಕೆ ಸೇರಿದ ಭಾಷೆಗಳು ಎಂದು ಹೆಸರಿಸಿಕೊಳ್ಳುವುದು ರೂಢಿ. ಜಗತ್ತಿನ ಎಲ್ಲಾ ಭಾಷೆಗಳನ್ನು ಅವುಗಳ ಮೂಲ ಭಾಷೆಯನ್ನು ಆಧರಿಸಿ, ಅವುಗಳ ಸಾಮ್ಯಕ್ಕೆ ಅನುಗುಣವಾಗಿ ಬೇರೆ ಬೇರೆ ಪರಿವಾರ, ಉಪ–ಪರಿವಾರ, ವರ್ಗ, ಉಪವರ್ಗಗಳಲ್ಲಿ ವರ್ಗೀಕರಿಸಿ ತೋರಿಸಬಹುದಾದರೂ ಜಗತ್ತಿನ ಎಲ್ಲಾ ಭಾಷೆಗಳಿಗೆ ಒಂದೇ ಮೂಲಭಾಷೆ ಇಲ್ಲ. ಇವು ಬೇರೆ ಬೇರೆ ಮೂಲಗಳಿಂದ ಹುಟ್ಟಿ ಬೆಳೆದು ಬಂದಿವೆ. ಅವು ಒಂದೇ ಮೂಲ ಭಾಷೆಯಿಂದ ಬೆಳೆದುಬಂದಿವೆ ಎಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಇದಕ್ಕೆ ಖಚಿತವಾದ ಯಾವ ಆಧಾರಗಳು ದೊರೆಯುವುದಿಲ್ಲ. ಜಗತ್ತಿನ ಭಾಷೆಗಳನ್ನು ಅವುಗಳ ಮೂಲ ಭಾಷೆಗಳನ್ನು ಆಧರಿಸಿ

ವಾಂಶಿಕವಾಗಿ ವರ್ಗೀಕರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂಬುದನ್ನು ಮನಗಂಡ ಕೆಲವರು, ಭಾಷೆಗಳನ್ನು ಅವುಗಳ ರಚನಾಕ್ರಮವನ್ನು ಆಧರಿಸಿ ಯೋಗಾತ್ಮಕ ಭಾಷೆಗಳು, ಅಯೋಗಾತ್ಮಕ ಭಾಷೆಗಳು ಎಂದು ವರ್ಗೀಕರಿಸಿಕೊಂಡರೆ, ಮತ್ತೆ ಕೆಲವರು ಯೋಗಾತ್ಮಕ, ಆಯೋಗಾತ್ಮಕ, ವಿಶ್ಲೇಷಣಾತ್ಮಕ, ಸಂಶ್ಲೇಷಣಾತ್ಮಕ, ಬಹುಸಂಶ್ಲೇಷಣಾತ್ಮಕ ಭಾಷೆಗಳು ಎಂದು ಬೇರೆ ಬೇರೆ ವರ್ಗಗಳಲ್ಲಿ ವರ್ಗೀಕರಿಸಿಕೊಂಡರು. ಈ ರೀತಿ ರಾಚನಿಕವಾಗಿ ಭಾಷೆಗಳನ್ನು ವರ್ಗೀಕರಿಸಿಕೊಂಡಿರುವ ಅನೇಕ ಉದಾಹರಣೆಗಳಿವೆ. ಈ ವಿಧಾನ ಎಷ್ಟೇ ಸಮರ್ಪಕವಾಗಿ ಕಂಡುಬಂದರೂ ಈ ಬಗೆಯ ಭಾಷಾ ವರ್ಗೀಕರಣದಲ್ಲಿಯೂ ಕೆಲವು ಇತಿಮಿತಿಗಳೂ ಕುಂದುಕೊರತೆಗಳೂ ಇವೆ.

ಜಗತ್ತಿನ ಮೂಲೆಮೂಲೆಗಳಲ್ಲಿ ಹರಡಿಕೊಂಡಿರುವ ಎಲ್ಲಾ ಭಾಷೆಗಳನ್ನು ಮೇಲಿನಂತೆ ಬೇರೆ ಬೇರೆ ವಿಧಾನಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾದರೂ ಈ ಬಗೆಯ ಭಾಷಾ ವರ್ಗೀಕರಣದಲ್ಲಿ ಅನೇಕ ಸಮಸ್ಯೆಗಳಿರುವುದು ಕಂಡುಬರುತ್ತವೆ. ಈ ಕಾರಣದಿಂದಾಗಿಯೇ ಭಾಷೆಗಳ ವರ್ಗೀಕರಣ ಇನ್ನೂ ಒಂದು ದೊಡ್ಡ ಸಮಸ್ಯೆಯಾಗಿಯೇ ಉಳಿದುಕೊಂಡಿದೆ.

ಮೇಲೆ ಸೂಚಿಸಿರುವ ಭಾಷಾ ವರ್ಗೀಕರಣ ವಿಧಾನಗಳು ಎಷ್ಟೇ ಅವೈಜ್ಞಾನಿಕ ಹಾಗೂ ಅಸಮರ್ಪಕವಾಗಿ ಕಂಡುಬಂದರೂ ಇದರಿಂದ ಭಾಷಾ ವರ್ಗೀಕರಣಕ್ಕೆ ನೆರವಾಗುವ ಕೆಲವು ತತ್ವಗಳು (Basic Principles) ಹೊರಬರಲು ಸಾಧ್ಯವಾಯಿತು. ಭಾಷೆಗಳನ್ನು ಅವುಗಳ ಇತಿಹಾಸ, ಭೂಗೋಳ, ವಂಶ ಮತ್ತು ರೂಪ ರಚನೆಗಳನ್ನು ಆಧರಿಸಿ ವರ್ಗೀಕರಿಸಿಕೊಳ್ಳಬಹುದಾದ ವಿಧಾನವನ್ನು ಪ್ರಧಾನ ವಿಧಾನಗಳು ಎಂದೂ, ಅದೇ ರೀತಿ ಭಾಷೆಗಳನ್ನು ಅವುಗಳ ಬರಹ, ಬಳಕೆ, ಪ್ರಭಾವ, ದೇಶ, ರಾಜ್ಯ, ಜಿಲ್ಲೆ, ಜನಾಂಗ, ಧರ್ಮ, ಸಮಾಜ, ಸಂಸ್ಕೃತಿ, ವೃತ್ತಿ, ಮುಂತಾದವುಗಳನ್ನು ಆಧರಿಸಿ ವರ್ಗೀಕರಿಸಿಕೊಳ್ಳಬಹುದಾದ ವಿಧಾನಗಳನ್ನು ಅಪ್ರಧಾನ ವಿಧಾನಗಳು ಎಂದೂ ಪರಿಗಣಿಸಿಕೊಳ್ಳಬಹುದು. ಭಾಷೆಗಳ ವರ್ಗೀಕರಣದಲ್ಲಿ ಪ್ರಧಾನ ವಿಧಾನಗಳಿಗೆ ಅನ್ವಯವಾಗುವ ತತ್ವಗಳನ್ನು ಪ್ರಧಾನ ತತ್ವಗಳು (Primary Principles) ಎಂದೂ ಅಪ್ರಧಾನ ವಿಧಾನಗಳಿಗೆ ಅನ್ವಯವಾಗುವ ತತ್ವಗಳನ್ನು ಅಪ್ರಧಾನ ತತ್ವಗಳು (Secondary Principles) ಎಂದೂ ಎರಡು ವರ್ಗಗಳಲ್ಲಿ ವಿವರಿಸಿ ತೋರಿಸಬಹುದು.

ಮೇಲಿನ ಆ ಬೇರೆ ಬೇರೆ ಭಾಷಾ ವರ್ಗೀಕರಣ ವಿಧಾನಗಳಲ್ಲಿ ಯಾವುದು ಸಮರ್ಪಕ, ಯಾವುದು ಅಸಮರ್ಪಕ, ಯಾವುದು ವೈಜ್ಞಾನಿಕ, ಯಾವುದು ಅವೈಜ್ಞಾನಿಕ, ಯಾವುದು ಉಪಯುಕ್ತ, ಯಾವುದು ಉಪಯುಕ್ತವಲ್ಲ ಎಂದು ಹೇಳಲಾಗದು. ಈ ವಿಧಾನಗಳಲ್ಲಿ ಒಂದೊಂದು ವಿಧಾನವನ್ನು ಒಬ್ಬೊಬ್ಬರು ಹೆಚ್ಚು ವೈಜ್ಞಾನಿಕವೆಂದೂ, ಹೆಚ್ಚು ಸಮರ್ಪಕವೆಂದೂ, ಹೆಚ್ಚು ಉಪಯುಕ್ತವೆಂದೂ ಸೂಚಿಸುವರು. ಈ ದಿಕ್ಕಿನಲ್ಲಿ

ಆಲೋಚಿಸಲು ಹೊರಟ ಕೆಲವು ವಿದ್ವಾಂಸರು (೧) ಐತಿಹಾಸಕ ವರ್ಗೀಕರಣ, (೨) ಜನಾಂಗಿಕ ವರ್ಗೀಕರಣ, (೩) ಭೌಗೋಳಿಕ ವರ್ಗೀಕರಣ, (೪) ವಾಂಶಿಕ ವರ್ಗೀಕರಣ, (೫) ರಾಚನಿಕ ವರ್ಗೀಕರಣ ವಿಧಾನಗಳು ಇವು ಹೆಚ್ಚು ಸಮರ್ಪಕವಾದ ಭಾಷಾ ವರ್ಗೀಕರಣ ವಿಧಾನಗಳು ಎಂದು ಪರಿಗಣಿಸಿಕೊಂಡಿದ್ದಾರೆ. ಈ ಬೇರೆ ಬೇರೆ ಭಾಷಾ ವರ್ಗೀಕರಣ ವಿಧಾನಗಳು, ಅವುಗಳಿಗೆ ನೆರವಾಗುವ ಮುಖ್ಯ ತತ್ವಗಳು, ಅವುಗಳ ಇತಿಮಿತಿಗಳನ್ನು ಕುರಿತು ಈ ಕೆಳಗೆ ವಿವರವಾಗಿ ಚರ್ಚಿಸಲು ಪ್ರಯತ್ನಿಸಲಾಗಿದೆ.

## ೧. ಐತಿಹಾಸಿಕ ವರ್ಗೀಕರಣ : (Historical Classification)

ಭಾಷೆಗಳು ತಮ್ಮದೇ ಆದ ಇತಿಹಾಸವನ್ನು ರೂಪಿಸಿಕೊಂಡಿರುತ್ತವೆ. ಭಾಷೆಗಳನ್ನು ಅವುಗಳ ಇತಿಹಾಸವನ್ನು ಆಧರಿಸಿ ಮೂಲ ಭಾಷೆಗಳು, ಪ್ರಾಚೀನತಮ ಭಾಷೆಗಳು, ಮಧ್ಯಕಾಲೀನ ಭಾಷೆಗಳು, ಆಧುನಿಕ ಭಾಷೆಗಳು ಎಂದು ಬೇರೆ ಬೇರೆ ವರ್ಗಗಳಲ್ಲಿ ವರ್ಗೀಕರಿಸಿ ತೋರಿಸುವರು. ಈ ಬಗೆಯ ಭಾಷಾ ವರ್ಗೀಕರಣ ಹಿಂದೆ ಹೆಚ್ಚು ಪ್ರಚಾರದಲ್ಲಿದ್ದಿತು. ಇದಕ್ಕೆ ಭಾಷೆಗಳ ಐತಿಹಾಸಿಕ ದಾಖಲೆಗಳು, ಲಿಖಿತ ಗ್ರಂಥಗಳು ಅತ್ಯಾವಶ್ಯಕ. ಇವುಗಳ ಸಹಾಯವಿಲ್ಲದೆ ಜಗತ್ತಿನ ಯಾವ ಭಾಷೆಗಳನ್ನು ಐತಿಹಾಸಿಕವಾಗಿ ಸಮರ್ಪಕವಾಗಿ ವರ್ಗೀಕರಿಸಿಕೊಳ್ಳಲು ಬರುವುದಿಲ್ಲ. ಭಾರತದಲ್ಲಿ ಬಳಕೆಯಲ್ಲಿದ್ದ ಹಾಗೂ ಈ ಬಳಕೆಯಲ್ಲಿರುವ ಎಲ್ಲಾ ಆರ್ಯ ಭಾಷೆಗಳನ್ನು ಅವುಗಳ ಇತಿಹಾಸವನ್ನು ಆಧರಿಸಿ ಪ್ರಾಚೀನ ಭಾರತೀಯ ಆರ್ಯ ಭಾಷೆಗಳು, ಮಧ್ಯಕಾಲೀನ ಭಾರತೀಯ ಆರ್ಯ ಭಾಷೆಗಳು, ಆಧುನಿಕ ಭಾರತೀಯ ಆರ್ಯ ಭಾಷೆಗಳು ಎಂದು ಮೂರು ವರ್ಗಗಳಲ್ಲಿ ವರ್ಗೀಕರಿಸಿಕೊಂಡಿರವ ಉದಾಹರಣೆಗಳಿವೆ. ಇವುಗಳಿಗೆ ಅನೇಕ ಸಾಹಿತ್ಯ ಗ್ರಂಥಗಳು, ಐತಿಹಾಸಿಕ ದಾಖಲೆಗಳು ದೊರೆಯುತ್ತವೆ. ಜಗತ್ತಿನ ಎಲ್ಲಾ ಭಾಷೆಗಳಿಗೂ ಇಂತಹ ಐತಿಹಾಸಿಕ ದಾಖಲೆಗಳೂ, ಸಾಹಿತ್ಯಿಕ ಗ್ರಂಥಗಳೂ ದೊರೆಯುವುದಿಲ್ಲ. ಆಡುಭಾಷೆಗಳಲ್ಲಿ ಇಂತಹ ಯಾವ ಲಿಖಿತ ಆಧಾರಗಳೂ ದೊರೆಯುವುದಿಲ್ಲವಾದ ಕಾರಣ ಅಂತಹ ಭಾಷೆಗಳನ್ನು ಐತಿಹಾಸಿಕವಾಗಿ ಬರಹದ ಭಾಷೆಗಳಂತೆ ಬೇರೆ ಬೇರೆ ಹಂತಗಳಲ್ಲಿ ವರ್ಗೀಕರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಜಗತ್ತಿನಲ್ಲಿ ಬರಹದ ಭಾಷೆಗಳಿಗಿಂತ ಆಡು ಭಾಷೆಗಳ ಸಂಖ್ಯೆ ಹೆಚ್ಚು. ಬರಹದ ಭಾಷೆಗಳಿಗೆ ಮಾತ್ರ ಈ ಬಗೆಯ ಭಾಷಾವರ್ಗೀಕರಣ ಸೀಮಿತವಾದುದಾಗಿ ಕಾಣಿಸಿಕೊಳ್ಳುತ್ತದೆ. ಆಡು ಭಾಷೆಗಳಿಗೆ ಇತಿಹಾಸವೇ ಇಲ್ಲ ಎಂದರ್ಥವಲ್ಲ. ಅವು ಐತಿಹಾಸಿಕವಾಗಿ ನಾನಾ ಹಂತಗಳಲ್ಲಿ ಬೆಳೆದುಬಂದ ವಿಧಾನವನ್ನು ಗುರುತಿಸಿ ವಿವರಿಸಿಕೊಳ್ಳಲು ಸಹಾಯಕವಾಗುವ ಯಾವ ಲಿಖಿತ ಆಧಾರಗಳು ದೊರೆಯುವುದಿಲ್ಲ ಅಷ್ಟೆ. ಕೆಲವಕ್ಕೆ ಆಧಾರಗಳು ದೊರೆತರೂ ಅವು ಸ್ಪಷ್ಟವಾಗಿರುವುದಿಲ್ಲ. ಇಂತಹ

ಆಡುಭಾಷೆಗಳ ಇತಿಹಾಸವನ್ನು ಕೆಲವು ವೇಳೆ ಬೇರೆ ಬೇರೆ ಮೂಲಗಳಿಂದ ನಿರ್ಧರಿಸಿ ವಿವರಿಸಿಕೊಳ್ಳಬೇಕಾಗುತ್ತದೆ. ಇದು ಎಲ್ಲಾ ವೇಳೆಯಲ್ಲಿಯೂ ಸಮಂಜಸವಾದುದಲ್ಲ. ಉದಾಹರಣೆಗೆ, ತುಳುಭಾಷೆಯನ್ನೋ ಅಥವಾ ಕೊಡಗು ಭಾಷೆಯನ್ನೋ ತೆಗೆದುಕೊಳ್ಳಿ. ಕರ್ನಾಟಕದ ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ತುಳು ಭಾಷೆಯನ್ನು ಆಡುವ ಸಾಕಷ್ಟು ಜನರಿದ್ದಾರೆ. ಅದೇ ರೀತಿ ಕೊಡಗಿನ ಸುತ್ತಮುತ್ತಲ ಪ್ರದೇಶಗಳಲ್ಲಿ ಕೊಡಗು ಭಾಷೆಯನ್ನು ಆಡುವ ಸಾವಿರಾರು ಜನರಿದ್ದಾರೆ. ಇವು ಬರಹದ ಭಾಷೆಗಳಲ್ಲ. ಇವುಗಳಲ್ಲಿ ಯಾವ ಲಿಖಿತ ಆಧಾರಗಳು, ಐತಿಹಾಸಿಕ ದಾಖಲೆಗಳು ದೊರೆಯುವುದಿಲ್ಲ. ಇವು ತಮ್ಮದೇ ಆದ ಇತಿಹಾಸವನ್ನು ಸಂಪಾದಿಸಿಕೊಂಡಿವೆ ಮಾತ್ರವಲ್ಲದೆ ಇವು ಒಂದೇ ಮೂಲಭಾಷೆಯಿಂದ ಹುಟ್ಟಿ ಬೆಳೆದುಬಂದ ಭಾಷೆಗಳಾಗಿವೆ. ಆ ಮೂಲಭಾಷೆಯಿಂದ ಯಾವ ಕಾಲದಲ್ಲಿ ತುಳು ಭಾಷೆಯೂ ಮತ್ತೆ ಯಾವ ಕಾಲದಲ್ಲಿ ಕೊಡಗು ಭಾಷೆಯೂ ಹುಟ್ಟಿ ಬೆಳೆದುಬಂದಿದೆ ಎಂಬುದನ್ನು ಸುಲಭವಾಗಿ ನಿರ್ಧರಿಸಿಕೊಳ್ಳಲು ಬರುವುದಿಲ್ಲ. ಇಂತಹ ಆಡುಭಾಷೆಗಳನ್ನು ಐತಿಹಾಸಿಕವಾಗಿ ಬೇರೆ ಬೇರೆ ಹಂತಗಳಲ್ಲಿ ವರ್ಗೀಕರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಕನ್ನಡವನ್ನು ತೆಗೆದುಕೊಳ್ಳಿ. ಕನ್ನಡ ಕರ್ನಾಟಕ ರಾಜ್ಯದ ಬಹುಮುಖ್ಯ ಭಾಷೆ. ಇದನ್ನು ಕರ್ನಾಟಕದಲ್ಲಿ ಮೂರುವರೆ ಕೋಟಿಗೂ ಹೆಚ್ಚು ಜನರು ಆಡುತ್ತಿದ್ದಾರೆ. ಇದರಲ್ಲಿ ಸಾಕಷ್ಟು ಸಾಹಿತ್ಯಿಕ ದಾಖಲೆಗಳು ದೊರೆಯುತ್ತವೆ. ಇವುಗಳ ಸಹಾಯದಿಂದ ಕನ್ನಡ ಐತಿಹಾಸಿಕವಾಗಿ ಬೆಳೆದು ಬಂದ ವಿಧಾನವನ್ನು ಅನುಸರಿಸಿ ಪೂರ್ವದ ಹಳಗನ್ನಡ, ನಡುಗನ್ನಡ, ಹೊಸಗನ್ನಡ, ನಡುಗನ್ನಡ ಎಂದು ಐದು ಹಂತಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾಗಿದೆ. ಇದೇ ರೀತಿ ಮಲೆಯಾಳಿ, ತಮಿಳು, ತೆಲುಗು ಮುಂತಾದ ದ್ರಾವಿಡ ಭಾಷೆಗಳನ್ನು, ಹಿಂದಿ, ಗುಜರಾತಿ, ಪಂಜಾಬಿ, ಮರಾಠಿ, ಅಸ್ಸಾಮಿ, ಒರಿಯ, ಬಂಗಾಳಿ ಮುಂತಾದ ಯೂರೋಪಿಯನ್ ಭಾಷೆಗಳನ್ನು ಮೇಲಿನಂತೆ ಇತಿಹಾಸವನ್ನು ಆಧರಿಸಿ ನಾನಾ ಹಂತಗಳಲ್ಲಿ ವರ್ಗೀಕರಿಸಿ ತೋರಿಸಬಹುದಾದ ಅವಕಾಶಗಳಿವೆ. ಈ ಬಗೆಯ ಭಾಷಾವರ್ಗೀಕರಣ ವಿಧಾನವನ್ನೇ ಐತಿಹಾಸಿಕ ವರ್ಗೀಕರಣ ಎನ್ನುವರು. ಇದನ್ನು ಮತ್ತಷ್ಟು ಸ್ಪಷ್ಟವಾಗಿ ತಿಳಿದುಕೊಳ್ಳುವ ದೃಷ್ಟಿಯಿಂದ ಇಂಗ್ಲಿಷ್ ಅಥವಾ ಹಿಂದಿ ಭಾಷೆಗಳನ್ನು ತೆಗೆದುಕೊಳ್ಳಿ. ಇವು ಬರಹದ ಭಾಷೆಗಳು. ಇವು ತಮ್ಮದೇ ಆದ ಇತಿಹಾಸವನ್ನು ರೂಪಿಸಿಕೊಂಡಿವೆ. ಹಿಂದಿ ಭಾಷೆಯನ್ನು ಭಾರತದಲ್ಲಿ ನಲವತ್ತು ಕೋಟಿಗೂ ಹೆಚ್ಚು ಜನರು ಆಡುತ್ತಿದ್ದಾರೆ. ಇದು ಭಾರತದಲ್ಲಿ ಬಹು ವಿಶಾಲವಾದ ಕ್ಷೇತ್ರದಲ್ಲಿ ವ್ಯಾಪಿಸಿಕೊಂಡಿದೆ. ಇದು ಐತಿಹಾಸಿಕವಾಗಿ ಬೆಳೆದು ಬಂದ ವಿಧಾನವನ್ನು ಅನುಸರಿಸಿ ಪೂರ್ವದ ಹಿಂದಿ, ಪ್ರಾಚೀನ ಹಿಂದಿ, ಮಧ್ಯಕಾಲೀನ ಹಿಂದಿ ಆಧುನಿಕ ಹಿಂದಿ ಎಂದು ನಾಲ್ಕು ಹಂತಗಳಲ್ಲಿ ಇದನ್ನು ವರ್ಗೀಕರಿಸಿಕೊಳ್ಳಬಹುದು. ಇದಕ್ಕೆ

ಸಾಹಿತ್ಯಿಕ ಗ್ರಂಥಗಳೂ, ಅನೇಕ ಐತಿಹಾಸಿಕ ದಾಖಲೆಗಳು ದೊರೆಯುತ್ತವೆ. ಇಂಗ್ಲೀಷ್ ಅಂತರರಾಷ್ಟ್ರೀಯ ಭಾಷೆ. ಇದು ಜಗತ್ತಿನಲ್ಲಿ ಹೆಚ್ಚು ಜನರ ಭಾಷೆಯಾಗಿದೆ. ಇದನ್ನು ಐತಿಹಾಸಿಕವಾಗಿ ಪೂರ್ವದ ಇಂಗ್ಲಿಷ್, ಹಳೆಯ ಇಂಗ್ಲಿಷ್, ಮಧ್ಯಕಾಲೀನ ಇಂಗ್ಲೀಷ್ ಆಧುನಿಕ ಇಂಗ್ಲಿಷ್ ಎಂದು ಬೇರೆ ಬೇರೆ ಹಂತಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾಗಿದೆ. ಈ ರೀತಿ ಜಗತ್ತಿನ ಅನೇಕ ಬರಹದ ಭಾಷೆಗಳನ್ನು ಐತಿಹಾಸಿಕವಾಗಿ ವರ್ಗೀಕರಿಸಿ ತೋರಿಸಬಹುದಾದರೂ ಈ ಬಗೆಯ ವರ್ಗೀಕರಣದಿಂದ ಅಂತಹ ಭಾಷೆಗಳು ಬೆಳೆದುಬಂದ ವಿಧಾನವನ್ನು ತಿಳಿಯಲು ಸಹಾಯಕವಾಗುವುದು. ಕೊಂಕಣಿ, ಜಯಪುರಿ, ಮಾಲವಿ, ಹಿಂದೂಸ್ತಾನಿ ಮುಂತಾದ ಆಡುಭಾಷೆಗಳನ್ನು ಈ ವಿಧಾನದಲ್ಲಿ ಕೈಬಿಡಬೇಕಾಗಿ ಬರುತ್ತದೆ. ಆದಕಾರಣ ಭಾಷೆಗಳ ಐತಿಹಾಸಿಕ ವರ್ಗೀಕರಣ ಎಲ್ಲಾ ವೇಳೆಯಲ್ಲಿಯೂ ಅಷ್ಟೊಂದು ಉಪಯುಕ್ತವಾದ ವಿಧಾನವೆಂದು ಭಾವಿಸಲು ಬರುವುದಿಲ್ಲ. ಈ ವಿಧಾನದಲ್ಲಿ ಜಗತ್ತಿನ ಅನೇಕ ಭಾಷೆಗಳು ಸೇರದೆ ಹೋಗುವ ಕಾರಣದಿಂದಲೇ ಐತಿಹಾಸಿಕ ಭಾಷಾ ವರ್ಗೀಕರಣ ಜಗತ್ತಿನಲ್ಲಿ ಹೆಚ್ಚು ಪ್ರಚಾರಕ್ಕೆ ಬರಲಾರದೆ ಹೋಯಿತು. ಇಷ್ಟಾದರೂ ಕೆಲವರು ಕೆಲವು ಬರಹದ ಭಾಷೆಗಳನ್ನು ಸಂದರ್ಭಕ್ಕೆ ತಕ್ಕಂತೆ ಐತಿಹಾಸಿಕವಾಗಿ ವರ್ಗೀಕರಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ.

### ೨. ಜನಾಂಗಿಕ ವರ್ಗೀಕರಣ : (Racial Classification)

ಮಾನವಶಾಸ್ತ್ರಜ್ಞರು ಮಾನವರನ್ನು ಜನಾಂಗಿಕವಾಗಿ ಅವರ ಬಣ್ಣ, ಗಾತ್ರ, ಆಕಾರ, ಎತ್ತರ ಮುಂತಾದವುಗಳನ್ನು ಆಧರಿಸಿ ಬೇರೆ ಬೇರೆ ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳುವಂತೆ, ಅವರು ಆಡುವ ಭಾಷೆಗಳನ್ನು ಜನಾಂಗಿಕವಾಗಿ ಬೇರೆ ಬೇರೆ ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಉದಾಹರಣೆಗೆ, ಕಾಕೇಶಿಯನರು ಆಡುವ ಭಾಷೆಗಳನ್ನು ಕಾಕೇಶಿಯನ್ ಭಾಷೆಗಳು ಎಂದೂ. ನೀಗ್ರೋಗಳು ಆಡುವ ಭಾಷೆಗಳನ್ನು ನೀಗ್ರೋ ಭಾಷೆಗಳು ಎಂದೂ, ಮಂಗೋಲಿಯನರು ಆಡುವ ಭಾಷೆಗಳನ್ನು ಮಂಗೋಲಿಯನ್ ಭಾಷೆಗಳು ಎಂದೂ ಬೇರೆ ಬೇರೆ ವರ್ಗಗಳಲ್ಲಿ ವರ್ಗೀಕರಿಸಿ ತೋರಿಸಬಹುದು. ಹೀಗೆ ಭಾಷೆಗಳನ್ನು ವರ್ಗೀಕರಿಸಿ ಕೊಂಡಿರುವ ಅನೇಕ ಉದಾಹರಣೆಗಳಿವೆ. ಹಾಗೆ ಜಗತ್ತಿನಾದ್ಯಂತ ಹರಡಿಕೊಂಡಿರುವ ಎಲ್ಲಾ ಭಾಷೆಗಳನ್ನು ಅವನ್ನು ಆಡುವ ಜನರ ಜನಾಂಗವನ್ನು ಆಧರಿಸಿ ವರ್ಗೀಕರಿಸಿಕೊಳ್ಳುವ ವಿಧಾನವನ್ನು ಜನಾಂಗಿಕ ವರ್ಗೀಕರಣವೆಂದು ಕರೆಯುವರು.

ಜಗತ್ತಿನಾದ್ಯಂತ ವ್ಯಾಪಿಸಿಕೊಂಡಿರುವ ಜನರನ್ನು ಜನಾಂಗಿಕವಾಗಿ ಕಾಕೇಶಿಯನರು, ಮಂಗೋಲಿಯನರು, ನೀಗ್ರೋಗಳು, ಆಸ್ಟ್ರಲಾಯ್ಡ್ಸ್‌ಗಳು ಇತ್ಯಾದಿಗಳಲ್ಲಿ

ಹೆಸರಿಸಿಕೊಳ್ಳಬಹುದಾದರೂ ಜಗತ್ತಿನಲ್ಲಿ ಜಪಾನಿಯನರು, ಸಿಥಿಯನರು, ದ್ರಾವಿಡರು, ಆರ್ಯರು, ಕೋಲರು, ಉರಲಿಯನರು ಎಂಬ ಅನೇಕ ಜನಾಂಗಗಳಿರುವುದು ಕಂಡುಬರುತ್ತವೆ. ಇವರು ನಿರ್ದಿಷ್ಟವಾಗಿ ಯಾವ ಜನಾಂಗಕ್ಕೆ ಸೇರಿದವರು ಎಂಬುದನ್ನು ಖಚಿತವಾಗಿ ಹೇಳಲು ಬರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಜಗತ್ತಿನ ಭಾಷೆಗಳನ್ನು ಜನಾಂಗಿಕವಾಗಿ ವರ್ಗೀಕರಿಸಿ ಕೊಳ್ಳುವುದು ಕೆಲವು ವೇಳೆ ಕಷ್ಟವಾಗುವುದು. ಒಂದು ಜನಾಂಗಕ್ಕೆ ಸೇರಿದ ಜನರು ನಿರ್ದಿಷ್ಟವಾಗಿ ಒಂದೇ ಭಾಷೆ ಆಡುತ್ತಿಲ್ಲ. ಉದಾಹರಣೆಗೆ ಆಫ್ರಿಕದಲ್ಲಿ ಬೇರೆ ಬೇರೆ ಯೂರೋಪಿಯನ್ ಭಾಷೆಗಳೂ ಬಳಕೆಯಲ್ಲಿವೆ. ಇವರು ಬೇರೆ ಬೇರೆ ಭಾಷೆಗಳನ್ನು ಆಡುತ್ತಿದ್ದಾರೆ. ಅಮೆರಿಕದಲ್ಲಿ ಬಳಕೆಯಲ್ಲಿರುವ ಎಲ್ಲಾ ಭಾಷೆಗಳನ್ನು ಅಮೆರಿಕದ ಮೂಲನಿವಾಸಿಗಳೇ ಆಡುತ್ತಿಲ್ಲ. ಅವರು ಬೇರೆ ಬೇರೆ ಭಾಷೆಗಳನ್ನು ಕೂಡ ಆಡುತ್ತಿದ್ದಾರೆ. ಹೀಗಾಗಿ ಚೀನ, ಭಾರತ, ರಷ್ಯ, ಜರ್ಮನಿ, ಜಪಾನ್ ಮುಂತಾದ ದೇಶಗಳ ಭಾಷೆಗಳನ್ನು ನಿರ್ದಿಷ್ಟವಾಗಿ ಒಂದೊಂದೇ ಜನಾಂಗಕ್ಕೆ ಸೇರಿದ ಜನರು ಆಡುತ್ತಿಲ್ಲ. ಇವುಗಳಲ್ಲಿ ಬೇರೆ ಬೇರೆ ಜನಾಂಗಗಳಿಗೆ ಸೇರಿದ ಅನೇಕ ಭಾಷೆಗಳು ಬಳಕೆಯಲ್ಲಿವೆ.

ಜಗತ್ತಿನ ಕೆಲವು ಭಾಷೆಗಳು ಅವುಗಳ ಜನಾಂಗವನ್ನು ನೇರವಾಗಿ ಪ್ರತಿನಿಧಿಸುವುದಿಲ್ಲ. ಒಂದು ಜನಾಂಗಕ್ಕೆ ಸೇರಿದ ಜನರು ಒಂದೇ ಭಾಷೆಯನ್ನು ಆಡಬೇಕೆಂಬ ನಿರ್ಬಂಧವೇನೂ ಇಲ್ಲ. ಒಂದು ಜನಾಂಗಕ್ಕೆ ಸೇರಿದ ಜನರು ಅವರವರ ಪರಿಸರ ಹಾಗೂ ಪರಿಸ್ಥಿತಿಗಳಿಗೆ ತಕ್ಕ ಯಾವ ಭಾಷೆಯನ್ನು ಬೇಕಾದರೂ ಆಡಬಹುದು. ಆಫ್ರಿಕದಿಂದ ಅಮೆರಿಕಕ್ಕೆ ವಲಸೆ ಬಂದ ಕೆಲವು ನೀಗ್ರೋಗಳು ಅವರು ಮೊದಲು ಆಡುತ್ತಿದ್ದ ಭಾಷೆಗಳಿಗೆ ಬದಲು ಅಮೆರಿಕದಲ್ಲಿ ಬಳಕೆಯಲ್ಲಿರುವ ಬೇರೆ ಬೇರೆ ಯೂರೋಪಿಯನ್ ಭಾಷೆಗಳನ್ನು ಆಡುತ್ತಿರುವ ನಿದರ್ಶನಗಳಿವೆ.

ಇದೇ ರೀತಿ ಭಾರತದಿಂದ ಅಮೆರಿಕಕ್ಕೆ ವಲಸೆಹೋದ ಕೆಲವು ಭಾರತೀಯರು ಅವರು ಮೊದಲು ಆಡುತ್ತಿದ್ದ ಭಾಷೆಗಳನ್ನು ಬಿಟ್ಟು ಬೇರೆ ಬೇರೆ ಭಾಷೆಗಳನ್ನು ಆಡುತ್ತಿದ್ದಾರೆ. ಈ ಎಲ್ಲಾ ಕಾರಣಗಳಿಂದಾಗಿಯೇ ಜಗತ್ತಿನ ಭಾಷೆಗಳನ್ನು ಜನಾಂಗಿಕವಾಗಿ ವರ್ಗೀಕರಿಸಿಕೊಳ್ಳುವುದು ಕೆಲವು ವೇಳೆ ಸಾಧುವಾದುದಲ್ಲ. ಒಂದು ಜನಾಂಗಕ್ಕೆ ಸೇರಿದ ಜನರು ಒಂದೇ ಭಾಷೆಯನ್ನು ಆಡುತ್ತಿದ್ದಾರೆ ಎಂದು ಭಾವಿಸಿ ಭಾಷೆಗಳನ್ನು ಜನಾಂಗಿಕವಾಗಿ ವರ್ಗೀಕರಿಸಿಕೊಂಡಲ್ಲಿ ಇಂತಹ ಭಾಷೆಗಳ ಒಳ ಸಾಮ್ಯವನ್ನು ಕಡೆಗಣಿಸಿದಂತಾಗುವುದು. ಇಂತಹ ಅನೇಕ ಸಮಸ್ಯೆಗಳು ಎದುರಾಗುವುದರಿಂದ ಜಗತ್ತಿನ ಎಲ್ಲಾ ಭಾಷೆಗಳನ್ನು ಜನಾಂಗಿಕವಾಗಿ ಹಾಗೆ ವರ್ಗೀಕರಿಸಿಕೊಳ್ಳುವುದು ಎಲ್ಲಾ ವೇಳೆಯಲ್ಲಿಯೂ ಹೆಚ್ಚು ಉಪಯುಕ್ತವಾದುದಲ್ಲವೆಂದು ಭಾವಿಸಿಕೊಳ್ಳಬಹುದಾಗಿದೆ.

## ೩. ಭೌಗೋಳಿಕ ವರ್ಗೀಕರಣ : (Geographical Classification)

ಭಾಷೆಗಳನ್ನು ಅವು ದೊರೆಯುವ ಸ್ಥಳ, ದೇಶ, ರಾಜ್ಯ ಮುಂತಾದವುಗಳನ್ನು ಆಧರಿಸಿ ಭೌಗೋಳಿಕವಾಗಿ ವರ್ಗೀಕರಿಸಿಕೊಳ್ಳಬಹುದಾದ ವಿಧಾನವನ್ನೇ ಭೌಗೋಳಿಕ ವರ್ಗೀಕರಣ ಎನ್ನುವರು. ಭಾಷೆಗಳನ್ನು ಭೌಗೋಳಿಕವಾಗಿ ವರ್ಗೀಕರಿಸಿಕೊಳ್ಳುವುದು ಬಹು ಹಿಂದಿನಿಂದಲೂ ಹೆಚ್ಚು ಪ್ರಚಾರದಲ್ಲಿದ್ದಿತು. ಈ ಬಗೆಯ ಭಾಷಾ ವರ್ಗೀಕರಣವನ್ನು ಮೊಟ್ಟಮೊದಲು ಗ್ರೀಕ್, ರೋಮ್, ಇಟಲಿ, ಫ್ರಾನ್ಸ್, ಜರ್ಮನಿ ಮುಂತಾದ ದೇಶಗಳ ಅನೇಕ ವಿದ್ವಾಂಸರು ಹೆಚ್ಚು ಪ್ರಚಾರಕ್ಕೆ ತಂದಿದ್ದರು. ಇವರು ತಮ್ಮ ತಮ್ಮ ಭಾಷೆಗಳನ್ನು ಭೌಗೋಳಿಕವಾಗಿ ವರ್ಗೀಕರಿಸಿಕೊಳ್ಳತೊಡಗಿದರು ಅಲ್ಲದೆ ಇವರು ಭಾಷೆಗಳನ್ನು ಅವು ದೊರೆಯುವ ದಿಕ್ಕು ಅವು ದೊರೆಯುವ ಸ್ಥಳವನ್ನು ಆಧರಿಸಿ ಪೂರ್ವದ ಭಾಷೆಗಳು, ಉತ್ತರದ ಭಾಷೆಗಳು ದಕ್ಷಿಣದ ಭಾಷೆಗಳು, ಮಧ್ಯದ ಭಾಷೆಗಳು, ಪಶ್ಚಿಮೋತ್ತರ ಭಾಷೆಗಳು, ದಕ್ಷಿಣೋತ್ತರ ಭಾಷೆಗಳು, ಪೂರ್ವೋತ್ತರ ಭಾಷೆಗಳು, ನೈಋತ್ಯದ ಭಾಷೆಗಳು, ವಾಯುವ್ಯದ ಭಾಷೆಗಳು ಈಶಾನ್ಯದ ಭಾಷೆಗಳು, ಮಧ್ಯವರ್ತಿ ಭಾಷೆಗಳು, ಎಂದು ಮುಂತಾಗಿ ವರ್ಗೀಕರಿಸಿಕೊಂಡಿರುವ ಅನೇಕ ಉದಾಹರಣೆಗಳು ದೊರೆಯುತ್ತವೆ.

ಭಾರತದ ಭಾಷೆಗಳನ್ನು ಭಾರತೀಯ ಭಾಷೆಗಳು, ಚೀನಾದ ಭಾಷೆಗಳನ್ನು ಚೀನಿ ಭಾಷೆಗಳು, ರಷ್ಯಾದ ಭಾಷೆಗಳನ್ನು ರಷ್ಯನ್ ಭಾಷೆಗಳು ಎಂದು ಅವುಗಳ ದೇಶವನ್ನು ಆಧರಿಸಿ ಭೌಗೋಳಿಕವಾಗಿ ವರ್ಗೀಕರಿಸಿ ತೋರಿಸಬಹುದು. ಆದರೆ ಭಾರತ, ರಷ್ಯ, ಚೀನ ಮುಂತಾದ ದೇಶಗಳಲ್ಲಿ ಒಂದೊಂದೇ ಭಾಷಾಪರಿವಾರಕ್ಕೆ ಸೇರಿದ ಭಾಷೆಗಳಿಲ್ಲ. ಭಾರತದಲ್ಲಿ ನಾಲ್ಕು ಬೇರೆ ಬೇರೆ ಭಾಷಾ ಪರಿವಾರಗಳಿಗೆ ಸೇರಿದ ಭಾಷೆಗಳಿದ್ದರೆ, ರಷ್ಯದಲ್ಲಿ ಮೂರು ಬೇರೆ ಬೇರೆ ಭಾಷಾಪರಿವಾರಗಳಿಗೆ ಸೇರಿದ ಭಾಷೆಗಳಿವೆ. ಇಂತಹ ಪರಿಸ್ಥಿತಿಯಲ್ಲಿ ಭಾಷೆಗಳನ್ನು ಅವು ದೊರೆಯುವ ದೇಶ ಅಥವಾ ರಾಜ್ಯವನ್ನು ಆಧರಿಸಿ ವರ್ಗೀಕರಿಸಿಕೊಳ್ಳುವುದು ಎಲ್ಲಾ ವೇಳೆಯಲ್ಲಿಯೂ ಹೆಚ್ಚು ಸಮಂಜಸವಾದುದಲ್ಲ. ಹೀಗೆ ಭಾಷೆಗಳನ್ನು ವರ್ಗೀಕರಿಸಿಕೊಳ್ಳಲು ಪ್ರಯತ್ನಿಸಿದಾಗ ಅವುಗಳ ಆಂತರಿಕ ಸಂಬಂಧಕ್ಕೆ ಹೆಚ್ಚಿನ ಮಾನ್ಯತೆ ಕೊಟ್ಟಂತಾಗುವುದಿಲ್ಲ.

ಅಮೆರಿಕದಲ್ಲಿ ಬಳಕೆಯಲ್ಲಿರುವ ಎಲ್ಲಾ ಭಾಷೆಗಳನ್ನು ಭೌಗೋಳಿಕವಾಗಿ ಅಮೆರಿಕನ್ ಭಾಷೆಗಳು ಎಂದು ಹೆಸರಿಸಿಕೊಳ್ಳಬಹುದಾದರೂ ಇದರಲ್ಲಿ ಉತ್ತರ ಅಮೆರಿಕ, ದಕ್ಷಿಣ ಅಮೆರಿಕ, ಮಧ್ಯ ಅಮೆರಿಕದ ಬೇರೆ ಬೇರೆ ಭಾಷೆಗಳು ಸೇರಿವೆ. ಉತ್ತರ ಅಮೆರಿಕದ ಭಾಷೆಗಳು ದಕ್ಷಿಣ ಅಮೆರಿಕದ ಭಾಷೆಗಳಿಗಿಂತ ಬೇರೆ. ಅಮೆರಿಕಾದ್ಯಂತ ಬೇರೆ ಬೇರೆ ಪರಿವಾರಗಳಿಗೆ ಸೇರಿದ ಭಾಷೆಗಳು ಬಳಕೆಯಲ್ಲಿವೆ. ಇಂತಹ ಸಂದರ್ಭಗಳಲ್ಲಿ ಅಮೆರಿಕದ ಎಲ್ಲಾ ಭಾಷೆಗಳನ್ನು ಭೌಗೋಳಿಕವಾಗಿ ಅಮೆರಿಕನ್ ಭಾಷೆಗಳು ಎಂದು

ಹೆಸರಿಸಿಕೊಳ್ಳಲಾಗದು. ಇದೇ ರೀತಿ ಆಫ್ರಿಕಾದ್ಯಂತ ಬಳಕೆಯಲ್ಲಿರುವ ಭಾಷೆಗಳನ್ನು ಭೌಗೋಳಿಕವಾಗಿ ಆಫ್ರಿಕನ್ ಭಾಷೆಗಳು ಎಂದು ಹೆಸರಿಸಿಕೊಳ್ಳಬಹುದಾದರೂ ಆಫ್ರಿಕದಲ್ಲಿ ಒಂದೇ ಭಾಷಾ ಪರಿವಾರಕ್ಕೆ ಸೇರಿದ ಭಾಷೆಗಳು ಬಳಕೆಯಲಿಲ್ಲ. ಇದರಲ್ಲಿ ಉತ್ತರ ಆಫ್ರಿಕ, ದಕ್ಷಿಣ ಆಫ್ರಿಕ, ಮಧ್ಯ ಆಫ್ರಿಕ ಮತ್ತ ಬೇರೆ ಬೇರೆ ಯೂರೋಪಿಯನ್ ಭಾಷೆಗಳು ಬಳಕೆಯಲ್ಲಿವೆ. ಇಂತಹ ಭಾಷೆಗಳನ್ನು ಭೌಗೋಳಿಕವಾಗಿ ಆಫ್ರಿಕನ್ ಭಾಷೆಗಳು ಎಂದು ವರ್ಗೀಕರಿಸಿಕೊಳ್ಳಲು ಯತ್ನಿಸಿದಲ್ಲಿ ಇದರಲ್ಲಿ ಭಾಷೆಗಳ ಆಂತರಿಕ ಸಂಬಂಧವನ್ನು ಕಡೆಗಣಿಸಿದಂತಾಗುತ್ತದೆ. ಆಫ್ರಿಕ, ಅಮೆರಿಕ, ಏಷ್ಯಾ, ಯುರೋಪ್ ಮುಂತಾದ ದೇಶಗಳಲ್ಲಿ ಬೇರೆ ಬೇರೆ ಗುಣಧರ್ಮ ಹೊಂದಿರುವ ಅನೇಕ ಭಾಷೆಗಳಿವೆ. ಇಂತಹ ಸಂದರ್ಭದಲ್ಲಿ ಅವುಗಳ ಲಕ್ಷಣಗಳನ್ನು ಕಡೆಗಣಿಸಿ ಹಾಗೆ ಭೌಗೋಳಿಕವಾಗಿ ವರ್ಗೀಕರಿಸಿಕೊಳ್ಳುವುದು ಹೆಚ್ಚು ಯುಕ್ತವಾದುದಲ್ಲ.

ಭಾರತದಲ್ಲಿ ಒಂದು ಸಾವಿರ ಎಂಟುನೂರಕ್ಕೂ ಹೆಚ್ಚೆ ಭಾಷೆ ಮತ್ತು ಉಪಭಾಷೆಗಳಿವೆ. ಏಷ್ಯಾದಲ್ಲಿ (ಭಾರತ ಬಿಟ್ಟು) ಎಂಟುನೂರು ಭಾಷೆಗಳು ಬಳಕೆಯಲ್ಲಿವೆ. ಆಫ್ರಿಕದಲ್ಲಿ ಐದುನೂರಕ್ಕೂ ಹೆಚ್ಚು ಭಾಷೆಗಳಿವೆ. ಇವು ಬೇರೆ ಬೇರೆ ಭಾಷಾ ಪರಿವಾರಗಳಿಗೆ ಸೇರಿದ ಭಾಷೆಗಳು. ಭಾರತದಲ್ಲಿ ಭಾರತದ ಸಂವಿಧಾನವು ಮಾನ್ಯ ಮಾಡಿರುವ ಹದಿನೆಂಟು ಭಾಷೆಗಳೂ, ಕೇಂದ್ರ ಸಾಹಿತ್ಯ ಅಕಾಡೆಮಿಯು ಮಾನ್ಯ ಮಾಡಿರುವ ಇಪ್ಪತ್ತ ನಾಲ್ಕು ಭಾಷೆಗಳು ಬೇರೆ ಬೇರೆ ಭಾಷಾಪರಿವಾರಗಳಿಗೆ ಸೇರಿದ ಭಾಷೆಗಳಾಗಿವೆ. ಇಂತಹ ಭಾಷೆಗಳ ಕ್ಷೇತ್ರವನ್ನು ಎಂ.ಬಿ. ಎಮೆನೊ ಎಂಬುವವನು India is a linguistic area ಎಂದು ಹೆಸರಿಸಿಕೊಂಡನು. ಭಾರತದಲ್ಲಿ ಬೇರೆ ಬೇರೆ ಜಾತಿ, ಧರ್ಮ, ಜನಾಂಗಕ್ಕೆ ಸೇರಿದ ಭಾಷೆಗಳಿವೆ. ಇವರು ನಿರ್ದಿಷ್ಟವಾಗಿ ಒಂದೊಂದೇ ಭಾಷೆಯನ್ನು ಆಡುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಭಾರತದ ಭಾಷೆಗಳನ್ನು ಜನಾಂಗಿಕವಾಗಿಯಾಗಲಿ ಖಚಿತವಾಗಿ ವರ್ಗೀಕರಿಸಿಕೊಳ್ಳಲು ಬರುವುದಿಲ್ಲ. ಆದರೂ ಭಾರತದಲ್ಲಿ ಬಳಕೆಯಲ್ಲಿರುವ ಆರ್ಯ ಭಾಷೆಗಳನ್ನು ಭೌಗೋಳಿಕವಾಗಿ ಉತ್ತರ ಆರ್ಯ ಭಾಷೆಗಳು, ಪಶ್ಚಿಮ ಆರ್ಯಭಾಷೆಗಳು, ಮಧ್ಯ ಆರ್ಯಭಾಷೆಗಳು, ಪೂರ್ವ ಆರ್ಯ ಭಾಷೆಗಳು, ಪಶ್ಚಿಮೋತ್ತರ ಆರ್ಯ ಭಾಷೆಗಳು, ಪೂರ್ವೋತ್ತರ ಆರ್ಯ ಭಾಷೆಗಳು ಎಂದು ಮುಂತಾಗಿ ವರ್ಗೀಕರಿಸಿಕೊಂಡಿರುವ ಉದಾಹರಣೆಗಳಿವೆ. ಇದೇ ರೀತಿ ದ್ರಾವಿಡ ಭಾಷೆಗಳನ್ನು ಭೌಗೋಳಿಕವಾಗಿ ಉತ್ತರ ದ್ರಾವಿಡ ಭಾಷೆಗಳು, ಮಧ್ಯ ದ್ರಾವಿಡ ಭಾಷೆಗಳು, ದಕ್ಷಿಣ ದ್ರಾವಿಡ ಭಾಷೆಗಳು ಎಂದು ವರ್ಗೀಕರಿಸಿಕೊಂಡಿದ್ದಾರೆ. ಆದರೆ ಭಾರತದ ಎಲ್ಲಾ ಭಾಷೆಗಳನ್ನು ಪೂರ್ಣವಾಗಿ ಭೌಗೋಳಿಕವಾಗಿ ಮೇಲಿನಂತೆ ವರ್ಗೀಕರಿಸಿಕೊಳ್ಳಲು ಬರುವುದಿಲ್ಲ. ಇದರಲ್ಲಿ ಬೇರೆ ಬೇರೆ ಪರಿವಾರಗಳಿಗೆ ಸೇರಿದ ಭಾಷೆಗಳಿವೆ. ಆದಕಾರಣ ಭಾಷೆಗಳನ್ನು ಎಲ್ಲಾ ವೇಳೆಯಲ್ಲಿಯೂ ಭೌಗೋಳಿಕವಾಗಿ ವರ್ಗೀಕರಿಸಿಕೊಳ್ಳುವುದು ಯುಕ್ತವಲ್ಲ.

## ೪. ವಾಂಶಿಕ ವರ್ಗೀಕರಣ : (Geneological Classification)

ಜಗತ್ತಿನ ಪ್ರತಿಯೊಂದು ಭಾಷೆಯೂ ತನ್ನದೇ ಆದ ಮೂಲಭಾಷೆಯನ್ನು ಸಂಪಾದಿಸಿ ಕೊಂಡಿರುತ್ತೆ. ಒಂದೇ ಮೂಲಭಾಷೆಯಿಂದ ಹುಟ್ಟಿಬೆಳೆದುಬಂದ ಭಾಷೆಗಳಲ್ಲಿ ಸಾಮಾನ್ಯವಾಗಿ ಒಂದಲ್ಲಾ ಒಂದು ರೀತಿಯ ಸಾಮ್ಯ ಇದ್ದೇ ಇರುತ್ತದೆ. ಅಂತಹ ಭಾಷೆಗಳು ಸಾಮಾನ್ಯವಾಗಿ ಒಂದೇ ಭಾಷಾಪರಿವಾರಕ್ಕೆ ಸೇರಿದ ಭಾಷೆಗಳಾಗಿ ಕಂಡುಬರುತ್ತವೆ. ಹೀಗೆ ಭಾಷೆಗಳನ್ನು ಅವುಗಳ ಮೂಲ ಭಾಷೆಯನ್ನು ಆಧರಿಸಿ ವಾಂಶಿಕವಾಗಿ ಬೇರೆ ಬೇರೆ ಪರಿವಾರ, ಉಪಪರಿವಾರ, ವರ್ಗ, ಉಪವರ್ಗ ಮುಂತಾದುವುಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾದ ವಿಧಾನವನ್ನೇ ವಾಂಶಿಕ ವರ್ಗೀಕರಣ ಎನ್ನುವರು. ಈ ಬಗೆಯ ಭಾಷಾವರ್ಗೀಕರಣ ಜಗತ್ತಿನಲ್ಲಿ ಹೆಚ್ಚು ಪ್ರಚಾರದಲ್ಲಿದೆ. ಇದನ್ನೇ ಪಾರಿವಾರಿಕ ವರ್ಗೀಕರಣ ಎಂದೂ, ಐತಿಹಾಸಿಕ ವರ್ಗೀಕರಣ ಎಂದೂ, ಬೇರೆ ಬೇರೆ ಹೆಸರಿನಿಂದ ಕಡೆಯುವರು.

ಒಂದೇ ಮೂಲಭಾಷೆಯಿಂದ ಕಾಲಕಾಲಕ್ಕೆ ಹುಟ್ಟಿ ಬೆಳೆದು ಬಂದ ಎಲ್ಲಾ ಸ್ವತಂತ್ರ ಭಾಷೆಗಳನ್ನು ಸೋದರಭಾಷೆಗಳು ಎಂದು ಹೆಸರಿಸಿಕೊಂಡರೆ, ಈ ಸೋದರ ಭಾಷೆಗಳಿಂದ ಹುಟ್ಟಿ ಬೆಳೆದುಬಂದ ಬೇರೆ ಬೇರೆ ಸ್ವತಂತ್ರ ಭಾಷೆಗಳನ್ನು ಮರಿ ಭಾಷೆಗಳು ಎನ್ನುವರು. ಈ ಬೇರೆ ಬೇರೆ ಭಾಷೆಗಳ ಮೂಲ ಭಾಷೆಗಳನ್ನೇ ಕೆಲವರು ಪೇರೆಂಟ್ ಭಾಷೆಗಳು ಎಂತಲೂ ಕರೆಯುವರು. ಈ ಬೇರೆ ಬೇರೆ ಭಾಷೆಗಳು ತಮ್ಮ ತಮ್ಮ ಕ್ಷೇತ್ರ ಹಾಗೂ ಅವುಗಳನ್ನು ಆಡುವ ಜನಸಂಖ್ಯೆಗೆ ತಕ್ಕಂತೆ ಬೇರೆ ಬೇರೆ ಉಪಭಾಷೆಗಳನ್ನು ಬೇರೆ ಬೇರೆ ಉಪಭಾಷಾ ರೂಪಗಳನ್ನು ಪಡೆದುಕೊಂಡಿರುತ್ತವೆ. ಹೀಗೆ ಕಂಡುಬರುವ ಆ ಬೇರೆ ಬೇರೆ ಉಪಭಾಷೆಗಳನ್ನು ಮತ್ತೆ ಪ್ರಾದೇಶಿಕ ಹಾಗೂ ಸಾಮಾಜಿಕ ಉಪಭಾಷೆಗಳು ಎಂದು ಎರಡು ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದು. ಪ್ರತಿಯೊಂದು ಭಾಷೆಯೂ ತನ್ನದೇ ಆದ ಇಂತಹ ಪ್ರಾದೇಶಿಕ ಹಾಗೂ ಸಾಮಾಜಿಕ ಉಪಭಾಷೆಗಳನ್ನು ಸಂಪಾದಿಸಿಕೊಂಡಿರುತ್ತದೆ. ಉದಾಹರಣೆಗೆ, ಮೂಲ ದ್ರಾವಿಡ ಭಾಷೆಯಿಂದ ಬೇರೆ ಬೇರೆ ದ್ರಾವಿಡ ಭಾಷೆಗಳು ಕವಲು ಕವಲುಗಳಲ್ಲಿ ಬೆಳೆದುಬಂದಿವೆ. ಇವುಗಳಲ್ಲಿ ಕೆಲವು ಅವುಗಳ ಸೋದರ ಭಾಷೆಗಳಾಗಿಯೂ, ಮತ್ತೆ ಕೆಲವು ಮರಿಭಾಷೆಗಳಾಗಿಯೂ ಕಾಣಿಸಿಕೊಳ್ಳುವುವು. ಇವುಗಳಲ್ಲಿ ಸೋದರ ಭಾಷೆಗಳು ಯಾವುವು, ಮರಿಭಾಷೆಗಳು ಯಾವುವು ಎಂಬುದನ್ನು ಖಚಿತವಾಗಿ ಹೇಳಲು ಬರುವುದಿಲ್ಲ. ಮೂಲ ದ್ರಾವಿಡದಿಂದ ಕಾಲಕಾಲಕ್ಕೆ ಮೂಲ ದಕ್ಷಿಣ ದ್ರಾವಿಡ ಭಾಷೆಯೂ, ಮೂಲ ಮಧ್ಯ ದ್ರಾವಿಡ ಭಾಷೆಯೂ, ಮೂಲ ಉತ್ತರ ದ್ರಾವಿಡ ಭಾಷೆಯು ವಿಕಾಸಗೊಂಡಿವೆ. ಅನಂತರ ಮೂಲ ದಕ್ಷಿಣ ದ್ರಾವಿಡದಿಂದ ಎಲ್ಲಾ ದಕ್ಷಿಣ ದ್ರಾವಿಡ ಭಾಷೆಗಳೂ, ಮೂಲ ಉತ್ತರ ದ್ರಾವಿಡದಿಂದ ಎಲ್ಲಾ ಉತ್ತರ ದ್ರಾವಿಡ ಭಾಷೆಗಳು

ಕವಲು ಕವಲುಗಳಲ್ಲಿ ಕಾಲಕಾಲಕ್ಕೆ ಹುಟ್ಟಿ ಬೆಳೆದುಬಂದಿರಬಹುದು. ಮೂಲದ್ರಾವಿಡದಿಂದ ಮೊಟ್ಟಮೊದಲು ಯಾವ ಭಾಷೆ, ಯಾವ ಕಾಲದಲ್ಲಿ ಹುಟ್ಟಿ ಬೆಳೆದುಬಂದಿದೆ. ಅದರಿಂದ ಯಾವ ಯಾವ ದ್ರಾವಿಡ, ಭಾಷೆಗಳು ಬೆಳೆದುಬಂದಿವೆ. ಅನಂತರ ಯಾವ ಯಾವ ಭಾಷೆಗಳು ಬೆಳೆದುಬಂದಿವೆ ಎಂಬುದಕ್ಕೆ ಯಾವ ಖಚಿತವಾದ ಆಧಾರಗಳು ದೊರೆಯುವುದಿಲ್ಲ. ಇದಕ್ಕೆ ನೆರವಾಗುವ ಯಾವ ಲಿಖಿತ ಆಧಾರಗಳು ಸಿಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಎಲ್ಲಾ ಭಾಷೆಗಳು ಅವುಗಳ ವಂಶವನ್ನು ಆಧರಿಸಿ ವರ್ಗೀಕರಿಸಿಕೊಳ್ಳುವುದು ಕೆಲವು ವೇಳೆ ಕಷ್ಟವಾಗುವುದು.

ತಮಿಳು, ಮಲೆಯಾಳಂ, ಕೋತ, ತೊದ, ಇರುಳ, ಕನ್ನಡ, ಬಡಗ, ಕೊಡಗು, ಹವ್ಯಕ, ಸೋಲಿಗ, ಕುರುಬ, ತುಳು, ತೆಲುಗು, ಸವಾರ ಮುಂತಾದ ಭಾಷೆಗಳನ್ನು ಪರಸ್ಪರ ಹೋಲಿಸಿದಾಗ ಅವುಗಳಲ್ಲಿ ಹೆಚ್ಚಿನ ಸಾಮ್ಯ ಕಂಡುಬರುವುದು. ಇವು ಮೂಲತಃ ಒಂದೇ ಭಾಷೆಯಿಂದ ಹುಟ್ಟಿ ಬೆಳೆದು ಬಂದ ಭಾಷೆಗಳು ಎನ್ನುವುದರ ಬಗ್ಗೆ ಯಾವ ಅನುಮಾನವೂ ಇಲ್ಲ. ಇವುಗಳಲ್ಲಿ ಯಾವ ಯಾವ ಭಾಷೆಗಳು ಯಾವ ಯಾವ ಕಾಲಗಳಲ್ಲಿ ಯಾವ ಯಾವ ಭಾಷೆಗಳಿಂದ ಹುಟ್ಟಿ ಬೆಳೆದು ಬಂದಿವೆ ಎಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಾಗದು. ಕೊಲಾಮಿ, ನಾಯ್ಕಿ, ಪರ್ಜಿ, ಗದಬ, ಗೋಂಡಿ, ಕೊಂಡ, ಪೆಂಗೊ, ಮಂಡ, ದೋರ್ಲಿ, ಕುಯಿ, ಕುವಿ ಮುಂತಾದ ಮಧ್ಯ ದ್ರಾವಿಡ ಭಾಷೆಗಳಲ್ಲಿಯೂ ಸಾಕಷ್ಟು ಸಾಮ್ಯ ಕಂಡುಬರುವುದು. ಇವು ಮೂಲತಃ ಮೂಲ ಮಧ್ಯ ದ್ರಾವಿಡದಿಂದಲೋ ಅಥವಾ ಮೂಲದ್ರಾವಿಡದಿಂದಲೋ ಹುಟ್ಟಿ ಬೆಳೆದು ಬಂದ ಭಾಷೆಗಳು. ಇದೇ ರೀತಿ, ಬ್ರಾಹೂಈ, ಕುರುಖ್, ಮಲ್ತೊ, ಧಾಂಗರ್ ಮುಂತಾದ ಭಾಷೆಗಳು ಕೂಡ ಮೂಲ ಉತ್ತರ ದ್ರಾವಿಡ ಭಾಷೆಯಿಂದಲೋ ಅಥವಾ ಮೂಲ ದ್ರಾವಿಡ ಭಾಷೆಯಿಂದಲೋ ಹುಟ್ಟಿ ಬೆಳೆದುಬಂದಿವೆ. ಇದಕ್ಕೆ ಅವುಗಳಲ್ಲಿ ಕಂಡುಬರುವ ಒಳಸಾಮ್ಯ ಮುಖ್ಯವಾಗಿದೆ. ಹೀಗೆ ಇಂಡೋ–ಯೂರೋಪಿಯನ್ ಭಾಷೆಗಳು, ಆಸ್ಟ್ರೋಏಷ್ಯಾಟಿಕ್ ಭಾಷೆಗಳು, ಸಿನೋ–ಟಿಬೆಟಿಯನ್ ಭಾಷೆಗಳು, ಆಫ್ರಿಕನ್ ಮತ್ತು ಅಮೆರಿಕನ್ ಭಾಷೆಗಳನ್ನು ಅವುಗಳ ಒಳಸಾಮ್ಯವನ್ನು ಆಧರಿಸಿ ಬೇರೆ ಬೇರೆ ವರ್ಗಗಳಲ್ಲಿ ವಿವರಿಸಿ ತೋರಿಸಬಹುದು.

ಕನ್ನಡ, ತೆಲುಗು, ತಮಿಳು, ಭಾಷೆಗಳು ಅವುಗಳ ಮೂಲ ಭಾಷೆಯಿಂದ ಉಪಭಾಷೆಗಳವರೆಗೆ ಹೇಗೆ ಬೆಳೆದುಬಂದಿವೆ ಎಂಬುದನ್ನು ಸುಲಭವಾಗಿ ವಿವರಿಸಿ ತೋರಿಸಬಹುದು. ಇದಕ್ಕೆ ಸಾಹಿತ್ಯಿಕ ಆಧಾರಗಳಿವೆ. ತುಳು, ಕೊಡಗು, ಬಡಗ, ತೊದ, ಕೋತ ಭಾಷೆಗಳು ಅವುಗಳ ಮೂಲಭಾಷೆಯಿಂದ ಹೇಗೆ ಹುಟ್ಟಿ ಅವು ಬೆಳೆದು ಬಂದಿವೆ ಎಂಬುದನ್ನು ಖಚಿತವಾಗಿ ವಿವರಿಸಿ ತೋರಿಸಲು ಬರುವುದಿಲ್ಲ. ಇದಕ್ಕೆ ಯಾವ ಲಿಖಿತ ಆಧಾರಗಳೂ ದೊರೆಯುವುದಿಲ್ಲ. ಕನ್ನಡ ಅನೇಕ ಉಪಭಾಷೆಗಳನ್ನು

ಸಂಪಾದಿಸಿಕೊಂಡಿದೆ. ಅವುಗಳಲ್ಲಿ ಮೈಸೂರು ಕನ್ನಡ, ಮಂಗಳೂರು ಕನ್ನಡ, ಧಾರವಾಡ ಕನ್ನಡ, ಬೀದರ್ ಕನ್ನಡ, ಮೀರಜ್ ಕನ್ನಡ ಮುಖ್ಯವಾಗಿವೆ. ಹಾಗೆಯೇ ಪ್ರತಿಯೊಂದು ಉಪಭಾಷೆಯೂ ತನ್ನದೇ ಆದ ಉಪಭಾಷಾರೂಪಗಳನ್ನು ಹೊಂದಿರುತ್ತದೆ. ಉದಾಹರಣೆಗೆ, ಮೈಸೂರು ಕನ್ನಡದಲ್ಲಿ ಮಳವಳ್ಳಿ ಕನ್ನಡ, ಯಳಂದೂರು ಕನ್ನಡ, ಕೊಳ್ಳೇಗಾಲ ಕನ್ನಡ, ನಂಜನಗೂಡು ಕನ್ನಡ, ಹುಣಸೂರು ಕನ್ನಡ ಮಂತಾದವು ಅದರ ಉಪಭಾಷಾ ರೂಪಗಳು, ಇದೇ ರೀತಿ ಪ್ರತಿಯೊಂದು ಭಾಷೆಯೂ ಉದಾಹರಣೆಗಳನ್ನು ಮತ್ತು ಉಪಭಾಷಾ ರೂಪಗಳನ್ನು ಸಂಪಾದಿಸಿಕೊಂಡಿರುತ್ತದೆ. ಉಪಭಾಷಾ ರೂಪಗಳು ಸಾಮಾನ್ಯವಾಗಿ ವ್ಯಕ್ತಿ ಭಾಷಾರೂಪಗಳು ಆದಕಾರಣ ಸೋದರ ಭಾಷೆಗಳು, ಮರಿಭಾಷೆಗಳು, ಉಪಭಾಷೆಗಳು, ಉಪಭಾಷಾ ರೂಪಗಳು, ವ್ಯಕ್ತಿಭಾಷಾರೂಪಗಳನ್ನು ಆ ಭಾಷೆಗಳ ಸಂದರ್ಭಕ್ಕೆ ತಕ್ಕಂತೆ ವಿವರಿಸಿಕೊಳ್ಳಬೇಕಾಗುತ್ತದೆ.

ಒಂದೇ ಮೂಲಭಾಷೆಯಿಂದ ಕಾಲಕಾಲಕ್ಕೆ ಕವಲು ಕವಲುಗಳಲ್ಲಿ ಬೆಳೆದುಬರಬಹುದಾದ ಎಲ್ಲಾ ಭಾಷೆಗಳಲ್ಲಿ ಒಂದು ರೀತಿಯ ಸಾಮ್ಯ ಇದ್ದೇ ಇರುತ್ತದೆ. ಎಂದಮೇಲೆ ಅಂತಹ ಭಾಷೆಗಳು ಸಾಮಾನ್ಯವಾಗಿ ಅವುಗಳ ಮೂಲಭಾಷೆಯನ್ನು ಸಾಮಾನ್ಯವಾಗಿ ಹೋಲುವಂತಿರುತ್ತವೆ. ಹೀಗೆ ಒಂದನ್ನೊಂದು ಹೋಲುವ ಹಾಗೂ ಹೆಚ್ಚು ಸಾಮ್ಯ ಉಳ್ಳ ಒಂದೇ ಮೂಲಭಾಷೆಯಿಂದ ಹುಟ್ಟಿ ಬಂದ ಬೇರೆ ಬೇರೆ ಭಾಷೆಗಳನ್ನು ಜ್ಞಾತಿ ಭಾಷೆಗಳು (Cognate Language) ಎನ್ನುವರು. ಇಂತಹ ಭಾಷೆಗಳನ್ನು ಸಾಮಾನ್ಯವಾಗಿ ಒಂದೇ ಭಾಷಾ ಪರಿವಾರಕ್ಕೆ ಸೇರಿದ ಭಾಷೆಗಳು ಎಂದು ನಿರ್ಣಯಿಸಿಕೊಳ್ಳಬಹುದು.

ಒಂದು ಮೂಲಭಾಷೆಯಿಂದ ಉಪಭಾಷೆಗಳವರೆಗೆ ಬೆಳೆದು ಬರಬಹುದಾದ ಎಲ್ಲಾ ಜ್ಞಾತಿ ಭಾಷೆಗಳ ಬೆಳವಣಿಗೆಯನ್ನು ಕೆಲವರು ವೃಕ್ಷವಾದಕ್ಕೆ (Pedigree Theory) ಹೋಲಿಸಿಕೊಂಡರೆ, ಅದನ್ನೇ ಮತ್ತೆ ಕೆಲವರು ತರಂಗವಾದಕ್ಕೆ (Wave theory) ಹೋಲಿಸುವರು. ಒಂದು ವೃಕ್ಷ ದೊಡ್ಡದಾದಂತೆಲ್ಲಾ ಕಾಲಕ್ರಮೇಣ ಅದರಲ್ಲಿ ಕವಲುಗಳು, ಉಪಕವಲುಗಳು ಬೆಳೆದು ಬರುವುದು ಸರ್ವೇಸಾಮಾನ್ಯ. ಹಾಗೆಯೇ ಒಂದು ಮೂಲಭಾಷೆಯಿಂದ ಕಾಲಕಾಲಕ್ಕೆ ಕವಲು ಕವಲುಗಳಲ್ಲಿ, ಉಪಕವಲುಗಳಲ್ಲಿ ಬೇರೆ ಬೇರೆ ಭಾಷೆ ಮತ್ತು ಉಪಭಾಷೆಗಳು ವೃಕ್ಷದಂತೆ ಬೆಳೆದು ಬಂದಿರುತ್ತವೆ. ಈ ಕಾರಣದಿಂದಾಗಿಯೇ ಭಾಷೆಗಳ ಬೆಳವಣಿಗೆಯನ್ನು ವೃಕ್ಷದ ಬೆಳವಣಿಗೆಗೆ ಹೋಲಿಸುವರು. ಇಂದು ಜಗತ್ತಿನಾದ್ಯಂತ ಬಳಕೆಯಲ್ಲಿರುವ ಎಲ್ಲಾ ಭಾಷೆ ಮತ್ತು ಉಪಭಾಷೆಗಳು ತಮ್ಮ ತಮ್ಮ ಮೂಲಭಾಷೆಗಳಿಂದ ಕವಲು ಉಪಕವಲುಗಳಲ್ಲಿ ವೃಕ್ಷವು ಬೆಳೆದು ಬಂದಂತೆ ಬೆಳೆದುಬಂದು ವ್ಯಾಪಿಸಿಕೊಂಡಿವೆಯಾದರೂ, ಇವು ಒಂದೇ ಮೂಲಭಾಷೆಯಿಂದ ಏಕಕಾಲದಲ್ಲಿ ಹುಟ್ಟಿ ಬೆಳೆದುಬಂದಿಲ್ಲ. ಇವು ಬೇರೆ

ಬೇರೆ ಮೂಲಭಾಷೆಗಳಿಂದ ಕಾಲಕಾಲಕ್ಕೆ ತರಂಗತರಂಗವಾಗಿ ಬೆಳೆದುಬಂದಿರುವ ಕಾರಣ ಆ ಬೇರೆ ಬೇರೆ ಭಾಷೆ ಮತ್ತು ಉಪಭಾಷೆಗಳನ್ನು ಕೆಲವರು ತರಂಗವಾದಕ್ಕೆ ಹೋಲಿಸಿಕೊಳ್ಳುವರು. ಇಂಗ್ಲಿಷ್, ಫ್ರೆಂಚ್, ಜರ್ಮನ್, ಗ್ರೀಕ್, ಲ್ಯಾಟಿನ್, ಗಾಥಿಕ್, ಪೋರ್ಚುಗೀಸ್, ಇಟಾಲಿಯನ್, ಸಂಸ್ಕೃತ, ಹಿಂದಿ ಮುಂತಾದ ಭಾಷೆಗಳು ತರಂಗತರಂಗವಾಗಿ ಒಂದೇ ಮೂಲಭಾಷೆಯಿಂದ ಕಾಲಕಾಲಕ್ಕೆ ಹುಟ್ಟಿ ಬೆಳೆದುಬಂದ ಭಾಷೆಗಳಾಗಿವೆ. ಇವುಗಳಲ್ಲಿ ಸಾಮ್ಯವಿದೆ ಮಾತ್ರವಲ್ಲದೆ ಅವು ಮೂಲತಃ ಒಂದೇ ಮೂಲಭಾಷೆಯಿಂದ ಹುಟ್ಟಿ ಬೆಳೆದುಬಂದ ಭಾಷೆಗಳು. ಇವುಗಳ ಮೂಲಭಾಷೆ ಯಾವುದು ಎಂಬುದೊಂದು ದೊಡ್ಡ ಪ್ರಶ್ನೆ. ಆ ಮೂಲ ಭಾಷೆಗಳು ಯಾವುವೂ ಈಗ ಬಳಕೆಯಲ್ಲಿಲ್ಲ. ಅವನ್ನು ಆಡುವ ಜನರು ಈಗ ಯಾರೂ ದೊರೆಯುವುದಿಲ್ಲ. ಒಂದು ಕಾಲದಲ್ಲಿ ಬಳಕೆಯಲ್ಲಿದ್ದ ಅಂತಹ ಮೂಲ ಭಾಷೆಗಳು ಕಾಲಕ್ರಮೇಣ ಕಣ್ಮರೆಯಾಗಿ ಹೋಗಿರಬಹುದು. ಹಾಗೆ ಕಣ್ಮರೆಯಾಗಿ ಹೋಗಿರಬಹುದಾದ ಮೂಲಭಾಷೆಗಳು ಯಾವುವು, ಅವುಗಳಿಂದ ಯಾವ ಯಾವ ಭಾಷೆಗಳು ಹುಟ್ಟಿಬೆಳೆದು ಬಂದಿವೆ ಎಂಬ ವಿಚಾರಗಳನ್ನು ಖಚಿತವಾಗಿ ನಿರ್ಧರಿಸಿ ವಿವರಿಸಿ ತೋರಿಸುವುದು ತುಂಬ ತೊಡಕಿನ ಪ್ರಶ್ನೆಯಾಗಿದೆ.

ಜಗತ್ತಿನಾದ್ಯಂತ ಹರಡಿಕೊಂಡಿರುವ ಭಾಷೆಗಳಿಗೆ ಒಂದೇ ಮೂಲ ಭಾಷೆಯಲ್ಲ. ಕ್ರಿ.ಪೂ. ನಾಲ್ಕು ಸಾವಿರಕ್ಕೂ ಹಿಂದೆ ಬಳಕೆಯಲ್ಲಿದ್ದಿತು ಎಂದು ಹೇಳಲಾಗುತ್ತಿರುವ ಸುಮೇರಿಯನ್ ಭಾಷೆಯೇ ಅತ್ಯಂತ ಪ್ರಾಚೀನವಾದ ಭಾಷೆ ಇರಬಹುದೆಂದು ಕೆಲವರು ಭಾವಿಸಿದರೆ, ಮತ್ತೆ ಕೆಲವರು ಈಜಿಪ್ಟ್‌ನಲ್ಲಿ ಬಹು ಪ್ರಾಚೀನ ಕಾಲದಲ್ಲಿ ಬಳಕೆಯಲ್ಲಿದ್ದ ಈಜಿಪ್ಷಿಯನ್ ಭಾಷೆಯೇ ಹೆಚ್ಚು ಪ್ರಾಚೀನವಿರಬಹುದೆಂದು ಭಾವಿಸುವರು. ಇವು ಜಗತ್ತಿನ ಅನೇಕ ಭಾಷೆಗಳಿಗೆ ಮೂಲವಿದ್ದರೂ ಇರಬಹುದು. ಬಹು ಪ್ರಾಚೀನ ಕಾಲದಲ್ಲಿ ಚೀನದಲ್ಲಿ ಬಳಕೆಯಲ್ಲಿದ್ದ ಹಳೆಯ ಚೀನಿ ಭಾಷೆಯೇ ಇವುಗಳಲ್ಲಿ ಹೆಚ್ಚು ಪ್ರಾಚೀನವಿದ್ದರೂ ಇರಬಹುದೆಂದು ಇನ್ನೂ ಕೆಲವರ ಭಾವನೆ. ಸುಮೇರಿಯನ್, ಈಜಿಪ್ಷಿಯನ್ ಮತ್ತು ಹಳೆಯ ಚೀನಿ ಭಾಷೆಗಳು ಜಗತ್ತಿನಲ್ಲಿಯೇ ಹೆಚ್ಚು ಪ್ರಾಚೀನತಮ ಭಾಷೆಗಳು ಕ್ರಿ.ಪೂ. ೩೦೦೦ ವರ್ಷಗಳ ಅನಂತರ ಕಾಣಿಸಿಕೊಂಡ ಲ್ಯಾಟಿನ್ ಭಾಷೆಗಳು ಹೆಚ್ಚು ಪ್ರಾಚೀನತಮ ಭಾಷೆಗಳಾಗಿವೆಯಾದರೂ ಇವುಗಳಿಗೂ ಹಿಂದೆ ಕೆಲವು ಮೂಲ ಭಾಷೆಗಳಿದ್ದಿರಬಹುದೆಂದು ಕೆಲವರ ವಾದ.

ಭಾರತದ ಅನೇಕ ಭಾಷೆಗಳಿಗೆ ವೇದಗಳ ಸಂಸ್ಕೃತವೂ, ಯೂರೋಪಿನ ಅನೇಕ ಭಾಷೆಗಳಿಗೆ ಹೀಬ್ರೂ ಇಲ್ಲವೇ ಗ್ರೀಕ್ ಭಾಷೆಯೂ, ಸಿನೋ–ಟಿಬೆಟಿನ್ ಭಾಷೆಗಳಿಗೆ ಪ್ರಾಚೀನಿ ಚೀನಿ ಭಾಷೆಯೂ, ದ್ರಾವಿಡ ಭಾಷೆಗಳಿಗೆ ಮೂಲ ದ್ರಾವಿಡ ಭಾಷೆಯೂ, ಆಫ್ರಿಕದ ಅನೇಕ ಭಾಷೆಗಳಿಗೆ ಈಜಿಪ್ಷಿಯನ್ ಭಾಷೆಯೂ ಮೂಲವಿದ್ದರೂ

ಇರಬಹುದೆಂದು ಕೆಲವರ ಅಭಿಪ್ರಾಯ. ಈ ವಿಚಾರವನ್ನು ಆ ಬೇರೆ ಬೇರೆ ಭಾಷೆಗಳಲ್ಲಿ ಕಂಡು ಬರುವ ಸಾಮ್ಯವನ್ನು ಆಧರಿಸಿ ನಿರ್ಧರಿಸಬಹುದಾಗಿದೆ. ಕೆಲವು ವಿದ್ವಾಂಸರು ಅತ್ಯಂತ ಪ್ರಾಚೀನ ಭಾಷೆಗಳಾದ ಗ್ರೀಕ್, ಲ್ಯಾಟಿನ್, ಗಾಥಕ್, ಇಟಾಲಿಯನ್, ಜರ್ಮನ್, ಸಂಸ್ಕೃತ, ಅರಾಬಿಕ್, ಪರ್ಷಿಯನ್ ಮುಂತಾದ ಭಾಷೆಗಳನ್ನು ತೌಲನಿಕವಾಗಿ ಪರಿಶೀಲಿಸಿ ಅವುಗಳ ಜ್ಞಾನಿ ಸಂಬಂಧವನ್ನು ನಿರ್ಧರಿಸಿಕೊಂಡರು ಮಾತ್ರವಲ್ಲದೆ ಆ ಭಾಷೆಗಳಲ್ಲಿ ಕಂಡುಬರುವ ಮೂಲ ಶಬ್ದಗಳ ಸಹಾಯದಿಂದ ಅವುಗಳ ಮೂಲ ಭಾಷೆಯನ್ನು ಪುನರ್‌ರಚಿಸಿಕೊಳ್ಳಲು ಯತ್ನಿಸುವರು. ಇದರ ಫಲವಾಗಿ ಜಗತ್ತಿನ ಅನೇಕ ಭಾಷೆಗಳ ಮೂಲ ಭಾಷೆಗಳನ್ನು ಅವುಗಳ ಮೂಲ ಸಾಮಗ್ರಿಯ ಸಹಾಯದಿಂದ ಪುನರ್‌ರಚಿಸಿಕೊಳ್ಳುವ ಕಾರ್ಯ ಆರಂಭಗೊಂಡಿತು. ಇದರಿಂದ ಒಂದು ಕಾಲದಲ್ಲಿ ಬಳಕೆಯಲ್ಲಿದ್ದು ಕಣ್ಮರೆಯಾಗಿ ಹೋಗಿರಬಹುದಾದ ಅಂತಹ ಮೂಲಭಾಷೆಗಳನ್ನು ಕಂಡುಕೊಳ್ಳಲು ಸಾಧ್ಯವಾಯಿತು. ಈ ದಿಕ್ಕಿನಲ್ಲಿ ಆಳವಾದ ಸಂಶೋಧನೆಯನ್ನು ಕೈಗೊಂಡು ಶ್ರಮಿಸಿದವರಲ್ಲಿ ರಾಸ್ಕ್, ಗ್ರಿಮ್, ವರ್ನರ್, ಹಂಬೋಲ್ಟ್, ಹನಿಂಗ್ಸ್‌ವಾಲ್ಡ್ ಮುಂತಾದವರು ಮುಖ್ಯರೆನಿಸಿಕೊಂಡಿದ್ದಾರೆ. ಅವರ ಪರಿಶ್ರಮದ ಫಲದಿಂದಾಗಿ ಜಗತ್ತಿನ ಅನೇಕ ಭಾಷೆಗಳನ್ನು ವಾಂಶಿಕವಾಗಿ ಬೇರೆ ಬೇರೆ ಪರಿವಾರಗಳಲ್ಲಿ ಸಮರ್ಪಕವಾಗಿ ವರ್ಗೀಕರಿಸಿಕೊಳ್ಳಲು ಸಹಾಯಕವಾಯಿತಲ್ಲದೆ ಅವುಗಳ ಸಹಾಯದಿಂದ ಅವುಗಳ ಮೂಲಭಾಷೆಗಳನ್ನು ಪುನರ್‌ರಚಿಸಿಕೊಳ್ಳುವ ಕಾರ್ಯವು ಹೆಚ್ಚು ಪ್ರಚಾರಕ್ಕೆ ಬಂದಿತು. ಇದರಿಂದ ವಾಂಶಿಕ ಭಾಷಾವರ್ಗೀಕರಣವು ಹೆಚ್ಚು ಪ್ರಚಾರಕ್ಕೆ ಬರಲು ಸಾಧ್ಯವಾಯಿತು.

ಜಗತ್ತಿನಾದ್ಯಂತ ಬೇರೆ ಬೇರೆ ವೈವಿಧ್ಯಗಳಿಂದ ಕೂಡಿರುವ ಅನೇಕ ಭಾಷೆಗಳು ಬಳಕೆಯಲ್ಲಿವೆ. ಈ ವೈವಿಧ್ಯ ಭಾಷೆಯಿಂದ ಭಾಷೆಗೆ ಬೇರೆ ಬೇರೆಯಾಗಿ ಕಾಣಿಸಿಕೊಳ್ಳುವುದು. ಕೆಲವು ಭಾಷೆಗಳಲ್ಲಿ ಹೆಚ್ಚು ಸಮಾನ ಅಂಶಗಳು ಕಾಣಿಸಿಕೊಂಡರೆ, ಮತ್ತೆ ಕೆಲವು ಭಾಷೆಗಳಲ್ಲಿ ಅಂತಹ ಹೆಚ್ಚಿನ ಸಮಾನ ಅಂಶಗಳು ಕಾಣಿಸಿಕೊಳ್ಳುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಭಾಷೆಗಳನ್ನು ಅವುಗಳ ಸಮಾನ ಅಂಶಗಳನ್ನು ಆಧರಿಸಿ ವರ್ಗೀಕರಿಸಿಕೊಳ್ಳುವುದು ಕೆಲವು ವೇಳೆ ಕಷ್ಟವಾಗುವುದು. ಒಂದು ಭಾಷೆಯ ಲಕ್ಷಣ ಇನ್ನೊಂದು ಭಾಷೆಯಲ್ಲಿರಬಹುದು, ಇಲ್ಲದೆಯೂ ಇರಬಹುದು. ಒಂದೇ ಮೂಲ ಭಾಷೆಯಿಂದ ಹುಟ್ಟಿ ಬೆಳೆದು ಬಂದ ಕೆಲವು ಭಾಷೆಗಳಲ್ಲಿ ಕೆಲವು ವೇಳೆ ಅಂತಹ ಸಾಮ್ಯವನ್ನು ಗುರುತಿಸಿಕೊಳ್ಳಲು ಸಾಧ್ಯವಾಗದೆಯೂ ಇರಬಹುದು.

ಕ್ರಿ.ಶ. ಸುಮಾರು ೧೮೨೨ರಲ್ಲಿ ಜರ್ಮನಿಯ ವಿಲ್‌ಹೆಲ್ಡ್ ಹಂಬೋಲ್ಟ್ ಎಂಬುವವನು ಜಗತ್ತಿನ ಅನೇಕ ಭಾಷೆಗಳನ್ನು ತೌಲನಿಕವಾಗಿ ಪರಿಶೀಲಿಸಿ ಅವುಗಳ ಸಮಾನ ಅಂಶಗಳನ್ನು ಆಧರಿಸಿ ಹದಿಮೂರು ಪರಿವಾರಗಳಲ್ಲಿ ವರ್ಗೀಕರಿಸಿಕೊಳ್ಳಲು

ಪ್ರಯತ್ನಿಸಿದರೆ, ಪಾಟ್‌ರಿಡ್ಜ್ ಎಂಬುವವನು ಜಗತ್ತಿನ ಭಾಷೆಗಳನ್ನು, ಅವುಗಳ ಸಾಮ್ಯವನ್ನು ಆಧರಿಸಿ ಸುಮಾರು ಹತ್ತು ಪರಿವಾರಗಳಲ್ಲಿ ವರ್ಗೀಕರಿಸಿಕೊಳ್ಳಲು ಯತ್ನಿಸಿದನು. ಹಾಗೆಯೇ ಥಾಮಸ್ ಗ್ರೇ ಎಂಬುವವನು ಜಗತ್ತಿನ ಅನೇಕ ಭಾಷೆಗಳನ್ನು ಸುಮಾರು ಇಪ್ಪತ್ತಕ್ಕೂ ಹೆಚ್ಚು ಪರಿವಾರಗಳಲ್ಲಿ ವರ್ಗೀಕರಿಸಿಕೊಳ್ಳಬಹುದೆಂಬ ತೀರ್ಮಾನಕ್ಕೆ ಬಂದನು. ಆಧುನಿಕ ಭಾಷಾ ವಿಜ್ಞಾನಿಗಳು ಜಗತ್ತಿನ ಎಲ್ಲಾ ಭಾಷೆಗಳನ್ನು ಅವುಗಳ ಸಮಾನತೆಯನ್ನು ಆಧರಿಸಿ ಸುಮಾರು ಏಳು ಪರಿವಾರಗಳಲ್ಲಿ ವರ್ಗೀಕರಿಸಿಕೊಳ್ಳಬಹುದೆಂಬ ನಿರ್ಧಾರಕ್ಕೆ ಬಂದರು.

ಭಾಷೆಗಳಿಂದ ಭಾಷೆಗಳಿಗೆ ಕಂಡುಬರುವ ಸಾಮ್ಯ ಆಕಸ್ಮಕವಾದುದೇ ಅಥವಾ ಸಹಜವಾದುದೇ ಎಂಬ ಪ್ರಶ್ನೆಯನ್ನು ಕೆಲವು ವಿದ್ವಾಂಸರು ಆಳವಾಗಿ ಪರಿಶೀಲಿಸಿ ವಿವೇಚಿಸಿದ್ದಾರೆ. ಒಂದೇ ಮೂಲ ಭಾಷೆಯಿಂದ ಹುಟ್ಟಿ ಬೆಳೆದುಬಂದ ಬೇರೆ ಬೇರೆ ಭಾಷೆಗಳಲ್ಲಿ ಕಂಡುಬರುವ ಸಾಮ್ಯ ಆಕಸ್ಮಿಕವೇನಲ್ಲ. ಅವುಗಳಲ್ಲಿ ಸಾಮ್ಯ ಸಹಜವಾಗಿರುತ್ತದೆ. ಕೆಲವು ಭಾಷೆಗಳು ಒಂದೇ ಮೂಲ ಭಾಷೆಯಿಂದ ಹುಟ್ಟಿ ಬೆಳೆದು ಬಂದಿದ್ದರೂ ಅವು ಅವುಗಳ ಸಾಮ್ಯವನ್ನು ಕಳೆದುಕೊಂಡಿರಬಹುದಾದ ಸಾಧ್ಯತೆಗಳೂ ಇವೆ. ಇಂತಹ ಭಾಷೆಗಳ ಸಾಮ್ಯವನ್ನು ಎಷ್ಟು ಪ್ರಯತ್ನಿಸಿದರೂ ನಿರ್ಧರಿಸಿಕೊಳ್ಳಲು ಬರುವುದಿಲ್ಲ. ಕಾರಣವೇನೆಂದರೆ ಅಂತಹ ಭಾಷೆಗಳು ಇತರ ಭಾಷೆಗಳ ಪ್ರಭಾವದಿಂದ ಅವುಗಳ ಸಾಮ್ಯವನ್ನು ಕಳೆದುಕೊಳ್ಳಲು ಸಾಧ್ಯವಾಗಿರಬಹುದು.

ಸಮಾನ ಅಂಶಗಳುಳ್ಳ ಭಾಷೆಗಳ ಮೂಲ ಭಾಷೆಯನ್ನು ಪುನರ್ರಚಿಸಿಕೊಳ್ಳಬೇಕಾದರೆ ಅಂತಹ ಭಾಷೆಗಳ ಮೂಲ ಸಾಮಗ್ರಿಯ ಸಂಗ್ರಹಕಾರ್ಯ ನಡೆಯಬೇಕಾಗುತ್ತದೆ. ಯಾವ ಭಾಷೆಗಳಲ್ಲಿ ಹೆಚ್ಚಿನ ಸಾಮ್ಯವಿದೆಯೋ ಅಂತಹ ಭಾಷೆಗಳ ಸಮಾನ ಅಂಶಗಳ ಸಹಾಯದಿಂದ ಅವುಗಳ ಮೂಲದಲ್ಲಿದ್ದ ಭಾಷೆಯನ್ನು ಪುನರ್ರಚಿಸಿಕೊಳ್ಳುವುದು ಸುಲಭ. ಇದಕ್ಕೆ ಅವುಗಳ ನಿತ್ಯಉಪಯೋಗಿ ಶಬ್ದಗಳು (Basic Vocabulary), ಸಹಾಯ ಮಾಡುತ್ತವೆ. ಮನುಷ್ಯನ ದೇಹ, ಮರ, ಗಿಡ, ಬಳ್ಳಿ, ಬೆಟ್ಟಗುಡ್ಡ, ಆಹಾರ, ವಸತಿ, ಉಡುಗೆ ತೊಡುಗೆ ವಸ್ತುಗಳಿಗೆ ಸಂಬಂಧಿಸಿದ ಶಬ್ದಗಳು ಭಾಷೆಗಳಲ್ಲಿ ದಿನ ನಿತ್ಯ ವ್ಯವಹಾರದಲ್ಲಿ ಹೆಚ್ಚು ಬಳಕೆಯಲ್ಲಿರುವ ಶಬ್ದಗಳು, ಇವು ಭಾಷೆಗಳಲ್ಲಿ ಸಾಮಾನ್ಯವಾಗಿ ಸಮಾನವಾಗಿರುತ್ತವೆ. ಇವು ಭಾಷೆಯಿಂದ ಭಾಷೆಗೆ ಸ್ವೀಕಾರವಾಗುವುದು ಹೆಚ್ಚು ಪರಿವರ್ತನೆಗೆ ಒಳಗಾಗುವುದು ಅಪರೂಪ. ಭಾಷೆಗಳಲ್ಲಿ ಕಂಡುಬರುವ ಸರ್ವನಾಮಗಳು, ಸಂಖ್ಯಾವಾಚಕಗಳು ಈ ಶಬ್ದಗಳ ವರ್ಗಕ್ಕೆ ಸೇರುತ್ತವೆ. ಭಾಷೆಗಳನ್ನು ಆಡುವ ಜನರ ಜಾತಿ, ಜನಾಂಗ, ಸಮಾಜ, ಸಂಸ್ಕೃತಿ, ಆಹಾರ, ಜನಜೀವನ, ಧರ್ಮ, ವೃತ್ತಿಗಳಿಗೆ ಸಂಬಂಧಿಸಿದ ಸಾಂಸ್ಕೃತಿಕ ಶಬ್ದಗಳು (Cultural Vocabulary) ಭಾಷೆಯಿಂದ ಭಾಷೆಗಳಿಗೆ ಬೇರೆ ಬೇರೆಯಾಗಿರುತ್ತವೆ. ಇವು ಭಾಷೆಯಿಂದ ಭಾಷೆಗೆ ಸ್ವೀಕಾರವಾಗುವುದು

ಹೆಚ್ಚು ಪರಿವರ್ತನೆಗೆ ಒಳಗಾಗುವುದು ಸರ್ವೇಸಾಮಾನ್ಯ ಸಾಂಸ್ಕೃತಿಕ ಶಬ್ದಗಳಲ್ಲಿ ಹೆಚ್ಚು ಶಬ್ದಗಳು ಸ್ವೀಕೃತ ಶಬ್ದಗಳು. ನಿತ್ಯ ಉಪಯೋಗಿ ಶಬ್ದಗಳಂತಲ್ಲ. ಸಾಂಸ್ಕೃತಿಕ ಶಬ್ದಗಳಲ್ಲಿ ಅಂತಹ ಸಾಮ್ಯವನ್ನು ಗುರುತಿಸಿಕೊಳ್ಳಲು ಕೆಲವು ವೇಳೆ ಕಷ್ಟವಾಗುವುದು. ಒಂದು ಪಕ್ಷ ಅದು ಸಾಧ್ಯವಿದ್ದರೂ ಅಂತಹ ಶಬ್ದಗಳ ಸಹಾಯದಿಂದ ಅವುಗಳ ಮೂಲ ಭಾಷೆಯನ್ನು ಪುನರ್ರಚಿಸಿಕೊಳ್ಳಲು ಬರುವುದಿಲ್ಲ. ಸಾಂಸ್ಕೃತಿಕ ಶಬ್ದಗಳು ಭಾಷೆಯ ಪುನರ್ರಚನೆಗೆ ಎಲ್ಲಾ ವೇಳೆಯಲ್ಲಿಯೂ ಯೋಗ್ಯವಲ್ಲ. ಯಾವ ಯಾವ ಭಾಷೆಗಳ ನಿತ್ಯ ಉಪಯೋಗಿ ಶಬ್ದಗಳಲ್ಲಿ ಹೆಚ್ಚಿನ ಸಾಮ್ಯವನ್ನು ಕಾಣಬಹುದೋ ಅಂತಹ ಭಾಷೆಗಳು ಸಾಮಾನ್ಯವಾಗಿ ಒಂದೇ ಭಾಷಾ ಪರಿವಾರಕ್ಕೆ ಸೇರಿದ ಭಾಷೆಗಳಾಗಿ ಗೋಚರಿಸುತ್ತವೆ. ಯಾವ ಯಾವ ಭಾಷೆಗಳ ಇಂತಹ ಶಬ್ದಗಳಲ್ಲಿ ಹೆಚ್ಚು ಹೆಚ್ಚು ಸಾಮ್ಯ ಕಂಡುಬರುವುದಿಲ್ಲವೋ ಅವು ಸಾಮಾನ್ಯವಾಗಿ ಬೇರೆ ಬೇರೆ ಪರಿವಾರಗಳಿಗೆ ಸಂಬಂಧಿಸಿದ ಭಾಷೆಗಳಾಗಿರುತ್ತವೆ.

ದಿನನಿತ್ಯ ವ್ಯವಹಾರದಲ್ಲಿ ಬಳಕೆಯಲ್ಲಿರುವ ಸಾಮಾನ್ಯ ಶಬ್ದಗಳಲ್ಲಿ ಸಾಮ್ಯವಿದ್ದ ಮಾತ್ರಕ್ಕೆ ಅಂತಹ ಭಾಷೆಗಳು ಮೂಲತಃ ಒಂದೇ ಭಾಷೆಯಿಂದ ಹುಟ್ಟಿ ಬೆಳೆದು ಬಂದಿವೆ ಎಂದು ಎಲ್ಲಾ ವೇಳೆಯಲ್ಲಿಯೂ ಹೇಳಲಾಗದು. ಇಂತಹ ಶಬ್ದಗಳನ್ನು ಆ ಭಾಷೆಗಳು ಬೇರೆ ಬೇರೆ ಮೂಲಗಳಿಂದ ಒಂದು ಪಕ್ಷ ಸ್ವೀಕಾರ ಮಾಡಿಕೊಂಡಿದ್ದರೂ ಇರಬಹುದು. ಈ ಕಾರಣದಿಂದಾಗಿಯೇ ಭಾಷೆಗಳಲ್ಲಿ ಕಂಡುಬರುವ ಸಾಮ್ಯ ಅವುಗಳಲ್ಲಿ ಸಹಜವಾದ್ದದೇ ಅಥವಾ ಆಕಸ್ಮಿಕವಾದದ್ದೇ ಎಂಬುದನ್ನು ಪರಿಶೀಲಿಸಿ ತಿಳಿಯಬೇಕಾಗುತ್ತದೆ. ಆಕಸ್ಮಿಕವಾದ ಇಂತಹ ಶಬ್ದಗಳ ಸಾಮ್ಯದಿಂದ ಪುನರ್ರಚನೆಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಅಂತಹ ಸಾಮ್ಯಕ್ಕೆ ಇಲ್ಲಿ ಬೆಲೆ ಸಿಗುವುದಿಲ್ಲ. ಭಾಷೆಗಳಲ್ಲಿ ಕೆಲವು ವೇಳೆ ಶಬ್ದ ಸಾಮ್ಯವಿದ್ದ ಮಾತ್ರಕ್ಕೆ ಅಂತಹ ಭಾಷೆಗಳು ಜ್ಞಾತಿ ಭಾಷೆಗಳು ಎಂದು ಪರಿಗಣಿಸಿಕೊಳ್ಳಲು ಸಾಧ್ಯವಾಗದೇ ಇರಬಹುದಾದ ಸಂದರ್ಭಗಳೂ ಇವೆ. ಅಂತಹ ಸಂದರ್ಭಗಳಲ್ಲಿ ಭಾಷೆಗಳಲ್ಲಿ ಶಬ್ದ ಸಾಮ್ಯದ ಜೊತೆಗೆ ವ್ಯಾಕರಣ ಸಾಮ್ಯವೂ ಇರಬೇಕಾದುದು ಅತ್ಯಾವಶ್ಯಕ.

ಮೂಲ ಭಾಷೆಗಳ ಪುನರ್ರಚನೆ, ಭಾಷೆಗಳ ಆಂತರಿಕ ಸಾಮ್ಯವನ್ನು ಕಂಡುಕೊಳ್ಳುವಿಕೆ, ಭಾಷೆಯ ಪುನರ್ರಚನೆಗೆ ನೆರವಾಗುವ ಸಾಮಗ್ರಿಯ ಸಂಗ್ರಹ ಮುಂತಾದವುಗಳ ಕೊರತೆಯಿಂದಾಗಿಯೇ ಭಾಷೆಗಳನ್ನು ವಾಂಶಿಕವಾಗಿ ಹೆಚ್ಚು ಪರಿಣಾಮಕಾರಿಯಾಗಿ ವರ್ಗೀಕರಿಸಿಕೊಳ್ಳಲು ಇನ್ನೂ ಸಾಧ್ಯವಾಗಿಲ್ಲ. ಭಾಷೆಗಳ ವಾಂಶಿಕ ಹಿನ್ನೆಲೆಗೆ ಸಹಾಯಕವಾಗುವ ಲಿಖಿತ ಆಧಾರಗಳು, ಐತಿಹಾಸಿಕ ದಾಖಲೆಗಳು, ಭಾಷೆಗಳ ತೌಲನಿಕ ಅಧ್ಯಯನದ ಸ್ಪಷ್ಟತೆ. ಮುಂತಾದವುಗಳಿಂದಾಗಿ ಭಾಷೆಗಳನ್ನು ವಾಂಶಿಕವಾಗಿ ವರ್ಗೀಕರಿಸಿಕೊಳ್ಳಲು ಯತ್ನಿಸಿದ್ದಾನೆ.

## ೫. ರಾಚನಿಕ ವರ್ಗೀಕರಣ : (Typological Classification)

ಭಾಷವಿಜ್ಞಾನ ಕ್ಷೇತ್ರದಲ್ಲಿ ಭಾಷೆಗಳ ಅಧ್ಯಯನ ವೈಜ್ಞಾನಿಕವಾಗಿ ಮುಂದುವರಿದಂತೆಲ್ಲಾ ಭಾಷಾ ವರ್ಗೀಕರಣಕ್ಕೆ ಸಂಬಂಧಿಸಿದ ಹೊಸ ಹೊಸ ವಿಧಾನಗಳು ಹೊರಬಂದವು. ಭಾಷೆಗಳನ್ನು ಅವುಗಳ ಧ್ವನಿ, ಪದ, ವಾಕ್ಯ, ಪದರಚನೆ, ವಾಕ್ಯರಚನೆ, ವ್ಯಾಕರಣ ಮುಂತಾದ ಅಂಶಗಳನ್ನು ಆಧರಿಸಿ ಭಾಷೆಗಳನ್ನು ವರ್ಗೀಕರಿಸಿಕೊಳ್ಳುವ ವಿಧಾನವು ಹೆಚ್ಚು ಪ್ರಚಾರಕ್ಕೆ ಬಂದಿತು. ಮೇಲಿನ ಆ ಬೇರೆ ಬೇರೆ ಭಾಷಾ ವರ್ಗೀಕರಣ ವಿಧಾನಗಳಿಗಿಂತ ಇದು ತುಂಬ ವೈಜ್ಞಾನಿಕವಾದದ್ದು ಎಂದು ಕೆಲವರ ಅಭಿಮತ. ಭಾಷೆಗಳನ್ನು ಅವುಗಳ ವಿವಿಧ ಪ್ರರೂಪಾತ್ಮಕ ಅಂಶಗಳನ್ನು ಆಧರಿಸಿ ವರ್ಗೀಕರಿಸಿಕೊಳ್ಳುವ ವಿಧಾನವನ್ನೇ ರಾಚನಿಕ ವರ್ಗೀಕರಣ ಎನ್ನುವರು. ಇದನ್ನೇ ಕೆಲವರು ಪ್ರರೂಪಾತ್ಮಕ ವರ್ಗೀಕರಣ (Typical Classification) ಎಂತಲೂ, ವಾಕ್ಯಾತ್ಮಕ ವರ್ಗೀಕರಣ (Morphological Classification) ಎಂತಲೂ, ವಾಕ್ಯಾತ್ಮಕ ವರ್ಗೀಕರಣ (Syntactic Classification) ಎಂತಲೂ ವ್ಯಾಕರಣಾತ್ಮಕ ವರ್ಗೀಕರಣ (Grammatical Classification) ಎಂತಲೂ, ರಚನಾತ್ಮಕ ವರ್ಗೀಕರಣ (Structural Classification) ಎಂತಲೂ ಕರೆಯುವರು.

ಜಗತ್ತಿನಾದ್ಯಂತ ಬಳಕೆಯಲ್ಲಿರುವ ಎಲ್ಲಾ ಭಾಷೆ ಮತ್ತು ಉಪಭಾಷೆಗಳನ್ನು ಆಧುನಿಕ ಭಾಷಾ ವಿಜ್ಞಾನಿಗಳು ಅವುಗಳ ರಚನಾತ್ಮಕ ಅಂಶಗಳನ್ನು ಆಧರಿಸಿ ಬೇರೆ ಬೇರೆ ವರ್ಗ, ಉಪವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಈ ಬಗೆಯಲ್ಲಿ ಭಾಷೆಗಳನ್ನು ಬಹಳ ಹಿಂದೆ ವರ್ಗೀಕರಿಸಿಕೊಂಡಿರುವ ಅನೇಕ ಉದಾಹರಣೆಗಳಿವೆ. ಭಾಷೆಗಳನ್ನು ರಾಚನಿಕವಾಗಿ ವರ್ಗೀಕರಿಸಿಕೊಳ್ಳಲು ಪ್ರಯತ್ನಿಸಿದವರಲ್ಲಿ ಶ್ಲೆಗೆಲ್, ಶ್ಲೀಷರ್, ಫ್ಹಿಟ್ನಿ, ಮ್ಯಾಕ್ಸ್‌ಮುಲ್ಲರ್, ವಾನ್ ಹಂಬೋಲ್ಟ್, ಫ್ರಾನ್ಸಿಸ್ ಬಾಷ್, ಷಾಟ್, ಸಪೀರ್, ಬ್ಲೂಮ್‌ಫೀಲ್ಡ್ ಮುಂತಾದವರು ಅತಿ ಮುಖ್ಯರೆನಿಸಿಕೊಂಡಿದ್ದಾರೆ. ಇವರು ಭಾಷೆಗಳ ಎಲ್ಲಾ ರಚನಾತ್ಮಕ ಅಂಶಗಳನ್ನು ಆಳವಾಗಿ ಪರಿಶೀಲಿಸಿ ಅವನ್ನು ಸಮರ್ಪಕ ಹಾಗೂ ಸಮಗ್ರವಾಗಿ ವರ್ಗೀಕರಿಸಿಕೊಳ್ಳುವಲ್ಲಿ ಸಫಲರಾಗಿದ್ದಾರೆ. ಇವರ ಈ ಪರಿಶ್ರಮದ ಫಲದಿಂದಾಗಿಯೇ ಭಾಷಾ ವಿಜ್ಞಾನ ಕ್ಷೇತ್ರವು ಬಹುಮುಖವಾಗಿ ಬೆಳೆಯತೊಡಗಿತಲ್ಲದೆ, ಭಾಷಾ ವಿಜ್ಞಾನ ಕ್ಷೇತ್ರದಲ್ಲಿ ವಿವರಣಾತ್ಮಕ ಭಾಷಾ ವಿಜ್ಞಾನವು ತಲೆಯೆತ್ತಿಕೊಂಡಿತು. ಇದರಿಂದ ಭಾಷೆಗಳ ತೌಲನಿಕ ಹಾಗೂ ಐತಿಹಾಸಿಕ ಅಧ್ಯಯನವು ಹೆಚ್ಚು ಸಮರ್ಪಕ ಹಾಗೂ ಸಮರ್ಥವಾಗಿ ಮುಂದುವರಿಯಲು ಸಾಧ್ಯವಾಯಿತು.

ಭಾಷೆಗಳಿಂದ ಭಾಷೆಗಳಿಗೆ ಶಬ್ದಗಳು ಸ್ವೀಕಾರವಾಗಬಹುದು ಇಲ್ಲವೇ ಭಾಷೆಗಳಲ್ಲಿ ಹೊಸ ಹೊಸ ಶಬ್ದಗಳು ಸೃಷ್ಟಿಯಾಗಬಹುದು. ಕೆಲವು ಭಾಷೆಗಳಲ್ಲಿ ಶಬ್ದಗಳು ವ್ಯವಹಾರದಿಂದ ದೂರ ಸರಿಯಬಹುದು. ಆದರೆ ವ್ಯಾಕರಣ ವಿಚಾರಗಳು ಭಾಷೆಗಳಿಂದ

ಭಾಷೆಗಳಿಗೆ ಸ್ವೀಕಾರವಾಗುವುದು ಅಪರೂಪ. ಅವು ಶಬ್ದಗಳಂತೆ ಪರಿವರ್ತನೆಗೊಳ್ಳುವುದು ಕೂಡ ಕಡಿಮೆ. ವ್ಯಾಕರಣ ವಿಚಾರಗಳು ಪರಿವರ್ತನೆಗೆ ಒಳಗಾಗುವುದೇ ಇಲ್ಲ ಎಂದರ್ಥವಲ್ಲ. ಇಂತಹ ಅಂಶಗಳು ಪರಿವರ್ತನೆಗೆ ಒಳಗಾಗುವುದು ತುಂಬ ನಿಧಾನ. ಭಾಷೆಗಳ ಪದಕೋಶ ಎಷ್ಟೇ ವೇಗವಾಗಿ ಪರಿವರ್ತನೆಗೊಂಡರೂ ಅವುಗಳ ವ್ಯಾಕರಣ ವಿಚಾರಗಳು ಬಹಳ ಕಾಲ ಹಾಗೆಯೇ ಉಳಿಯಬಲ್ಲವು. ಇಂತಹ ರಚನಾತ್ಮಕ ಅಂಶಗಳನ್ನು ಆಧರಿಸಿ ಭಾಷೆಗಳನ್ನು ವರ್ಗೀಕರಿಸಿಕೊಳ್ಳುವುದು ಎಲ್ಲ ರೀತಿಗಿಂತಲೂ ಹೆಚ್ಚು ವೈಜ್ಞಾನಿಕವಾದುದ್ದು ಎನ್ನುವುದರಲ್ಲಿ ಅನುಮಾನವೇನಿಲ್ಲ.

ಎಫ್.ವಿ. ಶ್ಲೆಗಲ್ ಎಂಬುವವನು ಜಗತ್ತಿನ ಭಾಷೆಗಳನ್ನು ರಚನಾತ್ಮಕವಾಗಿ ಸಂಸ್ಕೃತ ಮತ್ತು ಸಂಸ್ಕೃತೇತರ ಭಾಷೆಗಳು ಎಂದು ಎರಡು ವರ್ಗಗಳಲ್ಲಿ ಸ್ಥೂಲವಾಗಿ ವರ್ಗೀಕರಿಸಿಕೊಂಡ ಇವನ ಸಹೋದರ ಎ.ಡಬ್ಲ್ಯು. ಶ್ಲೆಗರ್ ಎಂಬವವನು ಜಗತ್ತಿನ ಅನೇಕ ಭಾಷೆಗಳು ಯೋಗಾತ್ಮಕ ಭಾಷೆಗಳು, ಅಯೋಗಾತ್ಮಕ ಭಾಷೆಗಳು ಅಂತರ್ಗಮಕ ಭಾಷೆಗಳು ಎಂದು ಮೂರ ವರ್ಗಗಳಲ್ಲಿ ವರ್ಗೀಕರಿಸಿಕೊಂನು. ಇವನು ಪ್ರತ್ಯಯಗಳು ಬಳಕೆಯಲ್ಲಿಲ್ಲದ ಭಾಷೆಗಳನ್ನು ಆಯೋಗಾತ್ಮಕ ಭಾಷೆಗಳು ಎಂದೂ, ಪ್ರತ್ಯಯಗಳುಳ್ಳ ಭಾಷೆಗಳನ್ನು ಯೋಗಾತ್ಮಕ ಭಾಷೆಗಳು ಎಂದೂ ಈ ಎರಡು ಅಂಶಗಳನ್ನು ಹೊಂದಿರುವ ಭಾಷೆಗಳನ್ನು ಅಂತರ್ಗಮಕ ಭಾಷೆಗಳು ಎಂದೂ ಕರೆದನು. ಪದರಚನೆಗಳಲ್ಲಿ ಪ್ರಕೃತಿ ಮತ್ತು ಪ್ರತ್ಯಯಗಳು ಪರಸ್ಪರ ಕೂಡಿದಾಗ ಅಂತಹ ರಚನೆಗಳಲ್ಲಿ ಕೆಲವು ವೇಳೆ ಪ್ರಕೃತಿ ಯಾವುದು, ಪ್ರತ್ಯಯ ಯಾವುದು ಎಂಬುದನ್ನು ನಿರ್ಧರಿಸಿ ವಿವರಿಸಿಕೊಳ್ಳಲು ಕಷ್ಟವಾಗಬಹುದು. ಶ್ಲೀಷರ್ ಎಂಬಾತನು ಮೇಲಿನ ಆ ವರ್ಗೀಕರಣವನ್ನು ಮತ್ತಷ್ಟು ಪರಿಶೀಲಿಸಿ ಭಾಷೆಗಳನ್ನು ತನ್ನದೇ ಆದ ರೀತಿಯಲ್ಲಿ ವರ್ಗೀಕರಿಸಿಕೊಂಡನು. ಇದು ತಕ್ಕಮಟ್ಟಿಗೆ ಜನಪ್ರಿಯತೆಯನ್ನು ಗಳಿಸಿಕೊಂಡಿತು. ಮ್ಯಾಕ್ಸ್‌ಮುಲ್ಲರ್, ಫ್ಹಿಟ್ಸ್, ಬಾಪ್, ಪಾಟ್ ಮುಂತಾದವರು ಈ ಶ್ಲಿಷರ್ ಮಹಾಶಯನ ವರ್ಗೀಕರಣವನ್ನು ಹೆಚ್ಚು ಪ್ರಶಂಸಿದರು. ಜಗತ್ತಿನ ಭಾಷೆಗಳನ್ನು ಪ್ರರೂಪಾತ್ಮಕವಾಗಿ ವರ್ಗೀಕರಿಸಿಕೊಳ್ಳುವ ವಿಧಾನವನ್ನು ಮೊಟ್ಟಮೊದಲಿಗೆ ಬೆಳಕಿಗೆ ತಂದ ಕೀರ್ತಿ ಶ್ಲೆಗೆಲ್ ಮಹಾಶಯನಿಗೆ ಸಲ್ಲುತ್ತದೆ. ಇದರಿಂದ ಭಾಷೆಗಳನ್ನು ಸಾವಯವ ಭಾಷೆಗಳು, ನಿರಾವಯವ ಭಾಷೆಗಳು, ಅಂತರ್ಗಮಕ ಭಾಷೆಗಳು, ಎಂದು ಮೂರು ವರ್ಗಗಳಲ್ಲಿ ವರ್ಗೀಕರಿಸಿಕೊಂಡ ವರ್ಗೀಕರಣವ ಹೆಚ್ಚು ಮಾನ್ಯತೆಯನ್ನು ಗಳಿಸಿಕೊಂಡಿತು. ಇದನ್ನು ಗಮನಿಸಿದ ಗ್ರಿಮ್, ಕೆರೋಲ್ ವರ್ನರ್, ಬಾಪ್, ಪಾಟ್ ಮುಂತಾದವರು ಭಾಷೆಗಳನ್ನು ಇದೇ ಮಾದರಿಯನ್ನು ಅನುಸರಿಸಿ ತಮ್ಮದೇ ಆದ ರೀತಿಯಲ್ಲಿ ವರ್ಗೀಕರಿಸಿಕೊಳ್ಳತೊಡಗಿದರು. ಈ ಬಗೆಯ ಭಾಷಾವರ್ಗೀಕರಣ ಹೆಚ್ಚು ಪ್ರಚಾರ ಗಳಿಸಿಕೊಂಡಿತು.

ಜಗತ್ತಿನಾದ್ಯಂತ ಕಂಡುಬರುವ ಎಲ್ಲಾ ಭಾಷೆಗಳನ್ನು ಮುಖ್ಯವಾಗಿ ಯೋಗಾತ್ಮಕ

ಭಾಷೆಗಳು (Agglutinative languages) ಮತ್ತು ಅಯೋಗಾತ್ಮಕ ಭಾಷೆಗಳು (Isolating languages) ಎಂದು ಎರಡು ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾದರೂ, ಈ ಯೋಗಾತ್ಮಕ ಭಾಷೆಗಳನ್ನು ಮತ್ತೆ ಪ್ರಶ್ಲಿಷ್ಟ ಯೋಗಾತ್ಮಕ ಭಾಷೆಗಳು (Incorporating languages) ಅಶ್ಲಿಷ್ಟ ಯೋಗಾತ್ಮಕ ಭಾಷೆಗಳು (Agglutinative languages) ಮತ್ತು ಶ್ಲಿಷ್ಟ ಯೋಗಾತ್ಮಕ ಭಾಷೆಗಳು (Inflectional languages) ಮತ್ತು ಶ್ಲಿಷ್ಟ ಯೋಗಾತ್ಮಕ ಭಾಷೆಗಳು (Inflectional languages) ಎಂದೂ ಅಪೂರ್ಣ ಪ್ರಶ್ಲಿಷ್ಟ ಯೋಗಾತ್ಮಕ ಭಾಷೆಗಳು (Partial incorporating languages) ಎಂದೂ ಎರಡು ಉಪವರ್ಗಗಳಲ್ಲಿಯೂ, ಅಶ್ಲಿಷ್ಟ ಯೋಗಾತ್ಮಕ ಭಾಷೆಗಳು (partialagglutinative languages) ಎಂದೂ ಶ್ಲಿಷ್ಟ ಯೋಗಾತ್ಮಕ ಭಾಷೆಗಳನ್ನು ಮತ್ತು ಅಂತರ್‌ಮುಖಿ ಶ್ಲಿಷ್ಟ ಯೋಗಾತ್ಮಕ ಭಾಷೆಗಳು (Internal inflectional languages) ಮತ್ತು ಬಹಿರ್‌ಮುಖಿ ಶ್ಲಿಷ್ಟ ಯೋಗಾತ್ಮಕ ಭಾಷೆಗಳು (External inflectional languages) ಎಂದೂ ಎರಡು ಉಪವರ್ಗಗಳಲ್ಲಿಯೂ ವರ್ಗೀಕರಿಸಿಕೊಳ್ಳಬಹುದಾಗಿದೆ. ಪೂರ್ಣ ಅಶ್ಲಿಷ್ಟ ಯೋಗಾತ್ಮಕ ಭಾಷೆಗಳನ್ನು ಮತ್ತೆ ಪೂರ್ವ ಯೋಗಾತ್ಮಕ ಭಾಷೆಗಳು (Prefixal agglutinative languages) ಮಧ್ಯ ಯೋಗಾತ್ಮಕ ಭಾಷೆಗಳು (Infixal agglutinative languages) ಅಂತ್ಯ ಯೋಗಾತ್ಮಕ ಭಾಷೆಗಳು (Suffixal agglutinative languages) ಎಂದು ಮೂರು ಉಪವರ್ಗಗಳಲ್ಲಿ ವರ್ಗೀಕರಿಸಿ ತೋರಿಸಬಹುದು. ಈ ಪ್ರತಿಯೊಂದು ವರ್ಗಕ್ಕೂ ಸೇರಿದ ಭಾಷೆಗಳನ್ನು ಮತ್ತೆ ಸಂಶ್ಲೇಷಣಾತ್ಮಕ ಭಾಷೆಗಳು (Synthetic languages) ವಿಶ್ಲೇಷಣಾತ್ಮಕ ಭಾಷೆಗಳು (Analytic languages) ಮತ್ತು ಬಹುಸಂಶ್ಲೇಷಣಾತ್ಮಕ ಭಾಷೆಗಳು (Polysynthetic languages) ಎಂದು ಮೂರು ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾಗಿದೆ.

### ೧. ಅಯೋಗಾತ್ಮಕ ಭಾಷೆಗಳು : (Isolating languages)

ಯಾವ ಭಾಷೆಗಳ ಪದ ರಚನೆಗಳಲ್ಲಿ ಅವು ಯಾವ ಪ್ರತ್ಯಯಗಳನ್ನು ತೆಗೆದುಕೊಳ್ಳುವುದಿಲ್ಲವೋ ಅಂತಹ ಭಾಷೆಗಳು ಸಾಮಾನ್ಯವಾಗಿ ಅಯೋಗಾತ್ಮಕ ಭಾಷೆಗಳಾಗಿರುತ್ತವೆ. ಇಂತಹ ಭಾಷೆಗಳಲ್ಲಿ ಪದ ಹಾಗೂ ವಾಕ್ಯಗಳು ಅವುಗಳ ಉಚ್ಚಾರ ಮತ್ತು ಸ್ಥಾನ ಬಲದಿಂದ ಮಾತ್ರ ರೂಪುಗೊಳ್ಳುತ್ತವೆ. ಇಂತಹ ಭಾಷೆಗಳಲ್ಲಿ ಪದ ಮತ್ತು ವಾಕ್ಯ ರಚನೆಗಳು ಎಂಬ ಕಲ್ಪನೆಯ ಅವಶ್ಯಕತೆ ಕಂಡುಬರುವುದಿಲ್ಲ. ಆದಕಾರಣ ಅವುಗಳಲ್ಲಿ ವ್ಯಾಕರಣ ಎಂಬುದನ್ನು ಸಪಷ್ಟವಾಗಿ ಕಾಣಲು ಬರುವುದಿಲ್ಲ.

ಇಂತಹ ಲಕ್ಷಣ ಹೊಂದಿರಬಹುದಾದ ಭಾಷೆಗಳನ್ನೇ ಅಯೋಗಾತ್ಮಕ ಭಾಷೆಗಳು ಎನ್ನುವರು ಚೀನಿ ಭಾಷೆ ಇದಕ್ಕೆ ಉತ್ತಮವಾದ ಉದಾಹರಣೆ.

ಯಾವ ಭಾಷೆಗಳು ಪದರಚನೆಗೆ ಯಾವ ಬಗೆಯ ಪ್ರತ್ಯಯಗಳನ್ನು ತೆಗೆದುಕೊಳ್ಳುವುದಿಲ್ಲವೋ, ಅಂತಹ ಭಾಷೆಗಳಲ್ಲಿ ಪದಗಳು ಸ್ವತಂತ್ರವಾಗಿರುತ್ತವೆ. ಅವು ಅವುಗಳ ಉಚ್ಚಾರ ಮತ್ತು ಸಂದರ್ಭಕ್ಕೆ ತಕ್ಕಂತೆ ಬೇರೆ ಬೇರೆ ಅರ್ಥ ವ್ಯಕ್ತಗೊಳಿಸಬಲ್ಲವು. ಇದಕ್ಕೆ ಚೀನಿ ಭಾಷೆಯ talen ಮತ್ತು twang ಎಂಬ ಶಬ್ದಗಳನ್ನು ಗಮನಿಸಬಹುದು. talen ಎಂದರೆ ದೊಡ್ಡ ಮನುಷ್ಯ ಎಂಬ ಅರ್ಥವಿದೆ. ಇದೇ ಶಬ್ದವನ್ನು lenta ಎಂದು ಉಚ್ಚರಿಸಿದರೆ, ಅದಕ್ಕೆ ಮನುಷ್ಯ ದೊಡ್ಡವನು ಎಂಬ ಅರ್ಥ ಕಂಡುಬರುವುದು. ಇದೇ ರೀತಿ twang ಎಂಬುದನ್ನು ದೀರ್ಘವಾಗಿ ಉಚ್ಚರಿಸಿದರೆ, ಅದು ಪ್ರಜೆಗಳು ಎಂಬ ಅರ್ಥ ಸೂಚಿಸುವುದು. ಹೀಗೆ ಚೀನಿ ಭಾಷೆಯಲ್ಲಿ ಶಬ್ದಗಳನ್ನು ಸಂದರ್ಭಕ್ಕೆ ತಕ್ಕಂತೆ ಬೇರೆ ಬೇರೆ ಬಗೆಯಲ್ಲಿ ಉಚ್ಚರಿಸುವುದರ ಮೂಲಕ ಬೇರೆ ಬೇರೆ ಅರ್ಥ ಪಡೆಯಬಹುದಾಗಿದೆ. ಇಂತಹ ಭಾಷೆಗಳಲ್ಲಿ ಅಂತಹ ಯಾವ ಪ್ರತ್ಯಯಗಳ ಅವಶ್ಯಕತೆ ಕಂಡುಬರುವುದಿಲ್ಲ. ಆದಕಾರಣ ಇಂತಹ ಭಾಷೆಗಳನ್ನೇ ಯೋಗರಹಿತ ಭಾಷೆಗಳು, ನಿರಾವಯವ ಭಾಷೆಗಳು, ಅಯೋಗಾತ್ಮಕ ಭಾಷೆಗಳು ಎಂದು ಕರೆಯುವರು. ಇಂತಹ ಶಬ್ದಗಳನ್ನು ಹೆಚ್ಚು ಹೊಂದಿರುವ ಭಾಷೆಗಳನ್ನೇ ಕೆಲವರು ಸ್ಥಾನಪ್ರಧಾನ ಭಾಷೆಗಳು ಎಂತಲೂ ಕರೆಯುವರು. ಚೀನಿ, ಸೂಡಾನಿಕ್, ಮಲೆಯನ್ ಮುಂತಾದ ಭಾಷೆಗಳು ಈ ವರ್ಗಕ್ಕೆ ಸೇರುತ್ತವೆ.

ಚೀನಿ ಮುಂತಾದ ಅಯೋಗಾತ್ಮಕ ಭಾಷೆಗಳಲ್ಲಿ ವ್ಯಾಕರಣ ವಿಶೇಷತೆಗಳನ್ನು ಸಂದರ್ಭ ಹಾಗೂ ಉಚ್ಚಾರಕ್ಕೆ ತಕ್ಕಂತೆ ಗುರುತಿಸಿಕೊಳ್ಳಬೇಕಾಗುತ್ತದೆ. ಇವುಗಳಲ್ಲಿ ಶಬ್ದಗಳು ಬರುವ ಕ್ರಮ, ಅವುಗಳ ಉಚ್ಚಾರಣಾ ರೀತಿ, ಅವುಗಳನ್ನು ಸಂದರ್ಭಕ್ಕೆ ತಕ್ಕಂತೆ ನಾಮಪದ, ಕ್ರಿಯಾಪದ, ವಿಶೇಷಣ, ಕ್ರಿಯಾವಿಶೇಷಣ, ಮುಂತಾದವುಗಳಲ್ಲಿ ಅರ್ಥೈಸಿಕೊಳ್ಳಬಹುದಾದ ಅವಕಾಶಗಳಿವೆಯಾದರೂ ಅವುಗಳ ಉಚ್ಚಾರವನ್ನು ಇಲ್ಲಿ ಕಡೆಗಣಿಸುವಂತಿಲ್ಲ. ಇಂತಹ ಸಂದರ್ಭಗಳಲ್ಲಿ ಪ್ರತ್ಯೇಕವಾದ ಅಂತಹ ಪ್ರತ್ಯಯಗಳನ್ನು ಬಳಸಬೇಕಾದ ಅವಶ್ಯಕತೆ ಏನೂ ಕಂಡುಬರುವುದಿಲ್ಲ. ಈ ಕಾರಣದಿಂದಲೇ ಈ ಭಾಷೆಗಳಲ್ಲಿ ವ್ಯಾಕರಣಕ್ಕೆ ಹೆಚ್ಚು ಮಾನ್ಯತೆ ದೊರೆಯುವುದಿಲ್ಲ. ಪದಗಳ ಉಚ್ಚಾರಣಾ ರೀತಿ, ಅವು ಬರುವ ಸಂದರ್ಭ, ಈ ಪದಗಳಲ್ಲಿದ್ದರೆ, ಅಂತಹ ಶಬ್ದಗಳ ಬೇರೆ ಬೇರೆ ಅರ್ಥವನ್ನು ಗುರುತಿಸಿಕೊಳ್ಳಲು ಕಷ್ಟವಾಗುತ್ತಿತ್ತು. ಸ್ವರ ಪ್ರಧಾನವಾದ ಚೀನಿಭಾಷೆಯನ್ನು, ನಿಪಾತಪ್ರಧಾನವಾದ ಬರ್ಮಿಭಾಷೆಯನ್ನು, ಸ್ಥಾನಪ್ರಧಾನವಾದ ಚೀನಿ ಭಾಷೆಯನ್ನು, ನಿರಾವಯವಯುಕ್ತ ಟಿಬೆಟ್ಟಿಯನ್ ಭಾಷೆಯನ್ನು ಅಯೋಗಾತ್ಮಕ ಭಾಷೆಗಳು ಎಂದು ಪರಿಗಣಿಸಿಕೊಳ್ಳಬಹುದಾಗಿದೆ.

## ೨. ಯೋಗಾತ್ಮಕ ಭಾಷೆಗಳು : (Agglutinative Languages)

ಅಯೋಗಾತ್ಮಕ ಭಾಷೆಗಳಿಗೆ ವಿರುದ್ಧವಾದ ಲಕ್ಷಣ ಹೊಂದಿರಬಹುದಾದ ಭಾಷೆಗಳನ್ನೇ ಯೋಗಾತ್ಮಕ ಭಾಷೆಗಳು ಎನ್ನುವರು. ಯೋಗಾತ್ಮಕ ಭಾಷೆಗಳ ಪದ ರಚನೆಗಳಲ್ಲಿ ಪದಗಳಿಗೆ ಬೇರೆ ಬೇರೆ ಪ್ರತ್ಯಯಗಳನ್ನು ಹಚ್ಚುವುದರ ಮೂಲಕ ಬೇರೆ ಬೇರೆ ಪದಗಳನ್ನು ರಚಿಸಿಕೊಳ್ಳಬಹುದಾಗಿದೆ. ಅಯೋಗಾತ್ಮಕ ಭಾಷೆಗಳನ್ನು ಪ್ರತ್ಯಯ ಪ್ರಧಾನ ಭಾಷೆಗಳು ಎಂದು ಪರಿಗಣಿಸಿಕೊಳ್ಳುವರು. ಯಾವ ಭಾಷೆಗಳಲ್ಲಿ ಪದರಚನೆಗೆ ಹೆಚ್ಚಾಗಿ ಪ್ರತ್ಯಯಗಳನ್ನು ಬಳಸಲಾಗುತ್ತದೆಯೋ ಅಂತಹ ಭಾಷೆಗಳನ್ನೇ ಅಂಟು ಭಾಷೆಗಳು, ಪ್ರತ್ಯಯಪ್ರಧಾನ ಭಾಷೆಗಳು, ಯೋಗಾತ್ಮಕ ಭಾಷೆಗಳು ಎಂದು ಕರೆಯುವರು. ಜಗತ್ತಿನ ಹೆಚ್ಚು ಭಾಷೆಗಳು ಈ ವರ್ಗಕ್ಕೆ ಸೇರುತ್ತವೆ. ಇವುಗಳಲ್ಲಿ ಕೆಲವು ಭಾಷೆಗಳು ಪೂರ್ಣ ಯೋಗಾತ್ಮಕ ಭಾಷೆಗಳಾಗಿದ್ದರೆ, ಮತ್ತೆ ಕೆಲವು ಅಪೂರ್ಣ ಯೋಗಾತ್ಮಕ ಭಾಷೆಗಳಾಗಿರುತ್ತವೆ. ತುರ್ಕಿ ಭಾಷೆ ಪ್ರತ್ಯಯ ಪ್ರಧಾನ ಭಾಷೆಗಳಿಗೆ ಉತ್ತಮ ಉದಾಹರಣೆ.

ಪದರಚನೆಗಳಲ್ಲಿ ಪದಗಳ ಮೂಲರೂಪಗಳಿಗೆ ಬೇರೆ ಬೇರೆ ಪ್ರತ್ಯಯಗಳನ್ನು ಹಚ್ಚಿದಾಗ ಅವುಗಳ ಮೂಲರೂಪ ಇಲ್ಲವೇ ಅವುಗಳ ಪ್ರತ್ಯಯಗಳಲ್ಲಿ ವ್ಯತ್ಯಾಸ ಕಾಣಿಸಿಕೊಳ್ಳಬಹುದು. ಮತ್ತೆ ಕೆಲವು ವೇಳೆ ಪದರಚನೆಗಳಲ್ಲಿ ಅವುಗಳ ಮೂಲ ರೂಪ ಅಥವಾ ಪ್ರತ್ಯಯಗಳಲ್ಲಿ ಯಾವ ಬಗೆಯ ವ್ಯತ್ಯಾಸವು ಕಾಣಿಸಿಕೊಳ್ಳದೆಯೂ ಇರಬಹುದು. ಇಂತಹ ರಚನೆಗಳು ಭಾಷೆಗಳಲ್ಲಿ ಸರ್ವೇಸಾಮಾನ್ಯ. ಈ ದೃಷ್ಟಿಯಿಂದ ಕನ್ನಡ ಅಥವಾ ತುರ್ಕಿ ಭಾಷೆಯ ಈ ಕೆಳಗಿನ ಉದಾಹರಣೆಗಳನ್ನು ಗಮನಿಸಬಹುದು.

| **ತುರ್ಕಿ** | | **ಕನ್ನಡ** |
|---|---|---|
| ev | ಮನೆ | ಮನೆ |
| ev-ler | ಮನೆಗಳು | ಮನೆ+ಗಳು |
| ev-im | ನನ್ನ ಮನೆ | ನನ್ನ + ಮನೆ |
| ev-ler-im | ನನ್ನ ಮನೆಗಳು | ನನ್ನ+ಮನೆ+ಗಳು |
| ev-den | ಮನೆಯಿಂದ | ಮನೆ+ಇಂದ |
| ev-ler-den | ಮನೆಗಳಿಂದ | ಮನೆ+ಗಳು+ಇಂದ |
| ev-im-den | ನನ್ನ ಮನೆಯಿಂದ | ನನ್ನ+ಮನೆ+ಇಂದ |

ಮೇಲಿನ ಈ ಉದಾಹರಣೆಗಳನ್ನು ಗಮನಿಸಿದಾಗ ಇವುಗಳ ಪದರಚನೆಗಳಲ್ಲಿ ಅವುಗಳ ಮೂಲರೂಪದಲ್ಲಿಯಾಗಲಿ ಅಥವಾ ಪ್ರತ್ಯಯದಲ್ಲಿಯಾಗಲಿ ಅಂತಹ ಹೆಚ್ಚಿನ ವ್ಯತ್ಯಾಸವೇನು ಕಾಣಿಸಿಕೊಳ್ಳುವುದಿಲ್ಲ. ಇದೇ ರೀತಿ ಬೇರೆ ಬೇರೆ ದ್ರಾವಿಡ ಭಾಷೆಗಳ ಉದಾಹರಣೆಗಳನ್ನು ಗಮನಿಸಬಹುದು. ಕೆಲವು ದ್ರಾವಿಡ ಭಾಷೆಗಳಲ್ಲಿ

ಕೆಲವು ಶಬ್ದಗಳು ಯಾವ ಪ್ರತ್ಯಯವನ್ನು ತೆಗೆದುಕೊಳ್ಳದೆ ಯಾವಾಗಲೂ ಸ್ವತಂತ್ರವಾಗಿಯೇ ಬಳಕೆಗೆ ಬರಬಹುದಾದ ಅವಕಾಶಗಳಿವೆ. ಇಂತಹ ಶಬ್ದಗಳನ್ನು ದ್ರಾವಿಡ ಭಾಷೆಗಳಲ್ಲಿ ಅವ್ಯಯಗಳು ಎನ್ನುವರು. ಇಂತಹ ಶಬ್ದಗಳ ಸಂಖ್ಯೆ ಆ ಭಾಷೆಗಳಲ್ಲಿ ಬಹಳ ಕಡಿಮೆ.

## (ಅ) ಪ್ರಶ್ಲಿಷ್ಟ ಯೋಗಾತ್ಮಕ ಭಾಷೆಗಳು: (Incorporating Languages)

ಯಾವ ಭಾಷೆಗಳ ಪದರಚನೆಗಳಲ್ಲಿ ಪದಗಳು ಬೇರೆ ಬೇರೆ ಪ್ರತ್ಯಯಗಳನ್ನು ತೆಗೆದುಕೊಂಡಾಗ ಅವುಗಳ ಮೂಲರೂಪದಲ್ಲಿಯಾಗಲಿ ಅಥವಾ ಅವುಗಳ ಪ್ರತ್ಯಯಗಳಲ್ಲಿಯಾಗಲಿ ಸಾಕಷ್ಟು ವ್ಯತ್ಯಾಸ ಕಾಣಿಸಿಕೊಳ್ಳುತ್ತದೆಯೋ ಅಂತಹ ಭಾಷೆಗಳನ್ನೇ ಪ್ರಶ್ಲಿಷ್ಟ ಯೋಗಾತ್ಮಕ ಭಾಷೆಗಳು ಎನ್ನುವರು.

ಕೆಲವು ಪದರಚನೆಗಳಲ್ಲಿ ವ್ಯತ್ಯಾಸವನ್ನು ಸುಲಭವಾಗಿ ವಿವರಿಸಿ ತೋರಿಸಬಹುದು. ಮತ್ತೆ ಕೆಲವು ರಚನೆಗಳಲ್ಲಿ ಅವುಗಳ ಮೂಲರೂಪ ಅಥವಾ ಪ್ರತ್ಯಯಗಳಲ್ಲಿ ಉಂಟಾಗಿರುವ ವ್ಯತ್ಯಾಸವನ್ನು ಅಷ್ಟೊಂದು ಸುಲಭವಾಗಿ ನಿರ್ಧರಿಸಿ ವಿವರಿಸಿ ತೋರಿಸಲು ಸಾಧ್ಯವಾಗುವುದಿಲ್ಲ. ಯಾವ ಭಾಷೆಯ ಪದರಚನೆಗಳಲ್ಲಿ ಉಂಟಾಗಿರಬಹುದಾದ ವ್ಯತ್ಯಾಸವನ್ನು ಅಷ್ಟೊಂದು ಸುಲಭವಾಗಿ ನಿರ್ಧರಿಸಿ ವಿವರಿಸಿ ತೋರಿಸಲು ಸಾಧ್ಯವಾಗುವುದಿಲ್ಲವೋ ಅಂತಹ ರಚನೆಗಳುಳ್ಳ ಭಾಷೆಗಳನ್ನೇ ಪ್ರಶ್ಲಿಷ್ಟ ಯೋಗಾತ್ಮಕ ಭಾಷೆಗಳು ಎನ್ನುವರು. ಪ್ರಾಚೀನ ಗ್ರೀಕ್, ಸಂಸ್ಕೃತ, ಲ್ಯಾಟಿನ್ ಮುಂತಾದ ಭಾಷೆಗಳು ಇದಕ್ಕೆ ಉತ್ತಮ ಉದಾಹರಣೆ.

ಪ್ರಶ್ಲಿಷ್ಟ ಯೋಗಾತ್ಮಕ ಭಾಷೆಗಳನ್ನು ಅವುಗಳ ಪದರಚನೆಗಳಲ್ಲಿ ಉಂಟಾಗುವ ವ್ಯತ್ಯಾಸವನ್ನು ಆಧರಿಸಿ ಅವನ್ನು ಮತ್ತೆ ಎರಡು ಉಪವರ್ಗಗಳಲ್ಲಿ ವರ್ಗೀಕರಿಸಿಕೊಳ್ಳ ಬಹುದಾದ ಅವಕಾಶಗಳಿವೆ. ಪದರಚನೆಗಳಲ್ಲಿ ಅವುಗಳ ಮೂಲರೂಪ (ಪ್ರಕೃತಿ) ಮತ್ತು ಪ್ರತ್ಯಯಗಳು ಕೆಲವು ವೇಳೆ ಪೂರ್ಣವಾಗಿ ವ್ಯತ್ಯಾಸಗೊಳ್ಳಬಹುದು, ಮತ್ತೆ ಕೆಲವು ವೇಳೆ ಅವುಗಳಲ್ಲಿ ಅಪೂರ್ಣ ವ್ಯತ್ಯಾಸ ಕಾಣಿಸಿಕೊಳ್ಳಬಹುದು. ಯಾವ ಪದ ರಚನೆಗಳಲ್ಲಿ ಅವುಗಳ ಪ್ರಕೃತಿ ಮತ್ತು ಪ್ರತ್ಯಯಗಳಲ್ಲಿ ಪೂರ್ಣವ್ಯತ್ಯಾಸ ಕಾಣಿಸಿಕೊಳ್ಳುವುದೋ ಅಂತಹ ರಚನೆಗಳನ್ನು ಸಾಮಾನ್ಯವಾಗಿ ಸಂಯೋಗಾತ್ಮಕ ರಚನೆಗಳು ಎನ್ನುವರು. ಇಂತಹ ರಚನೆಗಳಲ್ಲಿ ಅಥವಾ ಅವುಗಳ ಮೂಲರೂಪಗಳನ್ನಾಗಲಿ, ಅವುಗಳ ಪ್ರತ್ಯಯಗಳನ್ನಾಗಲಿ ಕೆಲವುವೇಳೆ ಸ್ಪಷ್ಟವಾಗಿ ನಿರ್ಧರಿಸಿ, ವಿಭಜಿಸಿ, ವಿವರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಇಂತಹ ರಚನೆಗಳು ಪ್ರಾಚೀನ ಇಂಡೋ ಯೂರೋಪಿಯನ್ ಭಾಷೆಗಳಲ್ಲಿ ಸರ್ವೇಸಾಮಾನ್ಯ ಉದಾಹರಣೆಗೆ ಈ ಕೆಳಗಿನ ರಚನೆಗಳನ್ನು ಗಮನಿಸಬಹುದು. ಸಂಸ್ಕೃತ asmi (ನಾನು) ಅರ್ಮೇನಿಯನ್ em, ಲ್ಯಾಟಿನ್ sumಹಳೆಯ ಐರಿಷ್ am ಇಂಗ್ಲಿಷ್ ai ಲಿಥೂಆನಿಯನ್ esm

ಮುಂತಾದ ಪದರಚನೆಗಳು ಈ ವರ್ಗಕ್ಕೆ ಸೇರುತ್ತವೆ. ಇಂತಹ ಪದರಚನೆಗಳು ಜಗತ್ತಿನ ಅನೇಕ ಭಾಷೆಗಳಲ್ಲಿ ದೊರೆಯುತ್ತವೆ.

### ೧. ಪೂರ್ಣಪ್ರಶ್ಲಿಷ್ಟ ಯೋಗಾತ್ಮಕ ಭಾಷೆಗಳು : (Complete Incorporating Language)

ಈ ವರ್ಗಕ್ಕೆ ಸೇರಿದ ಭಾಷೆಗಳಲ್ಲಿ ಪದಗಳಿಗೆ ಬೇರೆ ಬೇರೆ ಪ್ರತ್ಯಯಗಳನ್ನು ಹಚ್ಚಿ ಬೇರೆ ಬೇರೆ ಪದಗಳನ್ನು ರಚಿಸಿಕೊಳ್ಳಲು ಹೊರಟಾಗ ಅವುಗಳ ಮೂಲರೂಪ ಮತ್ತು ಪ್ರತ್ಯಯಗಳು ಪೂರ್ಣವಾಗಿ ವ್ಯತ್ಯಾಸಗೊಳ್ಳುತ್ತವೆ. ಇಂತಹ ರಚನೆಗಳಲ್ಲಿ ಅವುಗಳ ಮೂಲರೂಪವನ್ನಾಗಲಿ, ಅಥವಾ ಅವುಗಳ ಪ್ರತ್ಯಯಗಳನ್ನಾಗಲಿ ಅಷ್ಟೊಂದು ಸುಲಭವಾಗಿ ನಿರ್ಧರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಇಂತಹ ರಚನೆಗಳನ್ನು ಪ್ರಧಾನವಾಗಿ ಹೊಂದಿರುವ ಭಾಷೆಗಳನ್ನೇ ಪೂರ್ಣ ಪ್ರಶ್ಲಿಷ್ಟ ಯೋಗಾತ್ಮಕ ಭಾಷೆಗಳು ಎನ್ನುವರು. ಇಂತಹ ಪದರಚನೆಗಳಲ್ಲಿ ಅವುಗಳ ಧಾತುರೂಪಗಳು ಮತ್ತು ಪ್ರತ್ಯಯಗಳು ಪೂರ್ಣವಾಗಿ ಸಂಯೋಗವಾಗಿಬಿಟ್ಟಿರುತ್ತವೆ. ಈ ಬಗೆಯ ಪದರಚನೆಗಳಲ್ಲಿ ಕೆಲವು ವೇಳೆ ಒಂದೊಂದು ಪದವೇ ಒಂದೊಂದು ವಾಕ್ಯವಾಗಿ ಕಂಡುಬರುತ್ತವೆ. ದಕ್ಷಿಣ ಅಮೆರಿಕದ ಚಿರೂಕಿ ಭಾಷೆ ಇದಕ್ಕೆ ಉತ್ತಮ ಉದಾಹರಣೆ. ಗ್ರೀನ್‌ಲ್ಯಾಂಡ್ ಮತ್ತು ದಕ್ಷಿಣ ಅಮೆರಿಕದ ಕೆಲವು ಮೂಲನಿವಾಸಿಗಳು ಆಡುವ ಭಾಷೆಗಳಲ್ಲಿಯೂ ಕೂಡ ಇಂತಹ ಪೂರ್ಣ ಪ್ರಶ್ಲಿಷ್ಟ ಯೋಗಾತ್ಮಕ ರಚನೆಗಳು ಸಾಮಾನ್ಯವಾಗಿ ಕಂಡುಬರುತ್ತವೆ.

### ೨. ಅಪೂರ್ಣಪ್ರಶ್ಲಿಷ್ಟ ಯೋಗಾತ್ಮಕ ಭಾಷೆಗಳು : (Partial Incorporating Langauges)

ಈ ವರ್ಗಕ್ಕೆ ಸೇರಿದ ಭಾಷೆಗಳ ಪದರಚನೆಗಳಲ್ಲಿ ಪದಗಳಿಗೆ ಬೇರೆ ಬೇರೆ ಪ್ರತ್ಯಯಗಳನ್ನು ಹಚ್ಚಿದಾಗ ಅವುಗಳ ಮೂಲರೂಪ (ಪ್ರಕೃತಿ) ಅಥವಾ ಅವುಗಳ ಪ್ರತ್ಯಯಗಳಲ್ಲಿ ಯಾವುದಾದರೊಂದು ಪೂರ್ಣವಾಗಿಯೂ ಮತ್ತೊಂದು ಅಪೂರ್ಣವಾಗಿಯೂ ಪರಿವರ್ತನೆಗೊಳ್ಳಬಹುದಾದ ಸಾಧ್ಯತೆಗಳಿವೆ. ಇಂತಹ ಪದರಚನೆಗಳಲ್ಲಿ ಯಾವ ರೂಪ ಅಪೂರ್ಣವಾಗಿ ವ್ಯತ್ಯಾಸಗೊಳ್ಳುತ್ತದೆಯೋ ಅಂತಹ ರಚನೆಗಳನ್ನು ಪ್ರಧಾನವಾಗಿ ಹೊಂದಿರಬಹುದಾದ ಭಾಷೆಗಳನ್ನೇ ಅಪೂರ್ಣ ಪ್ರಶ್ಲಿಷ್ಟ ಯೋಗಾತ್ಮಕ ಭಾಷೆಗಳು ಎನ್ನುವರು. ಇದಕ್ಕೆ ಅರಾಬಿಕ್ ಭಾಷೆಯ ಈ ಉದಾಹರಣೆಗಳನ್ನು ಗಮನಿಸಬಹುದು. qutala (ಅವನು ಕೊಂದನು) qutila (ಅವನು ಕೊಲ್ಲಲ್ಪಟ್ಟನು), qatil (ಕೊಲೆ) qitl (ಶತ್ರು) ಇವುಗಳಲ್ಲಿ qtl ಕೊಲ್ಲು ಎಂಬುದು ಮೂಲರೂಪ. ಇವುಗಳ ಮೂಲ ರೂಪವನ್ನು ಸುಲಭವಾಗಿ ನಿರ್ಧರಿಸಿ

ವಿವರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಹೀಗೆ ಕೆಲವು ಪದರಚನೆಗಳಲ್ಲಿ ಅವುಗಳ ಮೂಲರೂಪ ಮತ್ತು ಪ್ರತ್ಯಯಗಳು ಪೂರ್ಣವಾಗಿ ಇಲ್ಲವೇ ಆ ಪೂರ್ಣವಾಗಿ ವ್ಯತ್ಯಾಸಗೊಂಡಿರುತ್ತವೆ. ಇಂತಹ ರಚನೆಗಳು ಪ್ರಧಾನವಾಗಿರುವ ಭಾಷೆಗಳೇ ಅಪೂರ್ವ ಪ್ರಶ್ಲಿಷ್ಟ ಯೋಗಾತ್ಮಕ ಭಾಷೆಗಳು, ಬಾಂಬು ಮತ್ತು ಬಾಸ್ಕ್ ಭಾಷೆಗಳು ಇದಕ್ಕೆ ಉತ್ತಮ ಉದಾಹರಣೆ. ಇಂಗ್ಲಿಷ್, ಫ್ರೆಂಚ್, ಜರ್ಮನ್, ಡಚ್ ಮುಂತಾದ ಭಾಷೆಗಳಲ್ಲಿ ಇಂತಹ ಪದರಚನೆಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಈ ಬಗೆಯ ರಚನೆಗಳನ್ನು ಕೆಲವರು ಆಂಶಿಕ ಅಥವಾ ಪಾರ್ಶ್ವಿಕ ಪ್ರಶ್ಲಿಷ್ಟ ಯೋಗಾತ್ಮಕ ಭಾಷೆಗಳು ಎಂತಲೂ ಕರೆಯುವರು.

## (ಆ) ಅಶ್ಲಿಷ್ಟ ಯೋಗಾತ್ಮಕ ಭಾಷೆಗಳು : (Simple agglutinative languages)

ಈ ವರ್ಗಕ್ಕೆ ಸೇರಿದ ಭಾಷೆಗಳು ಕೆಲವು ಪದರಚನೆಗಳಲ್ಲಿ ಪದಗಳ ಮೂಲರೂಪಗಳಿಗೆ ಬೇರೆ ಬೇರೆ ಪ್ರತ್ಯಯಗಳನ್ನು ಹಚ್ಚಿದಾಗ ಅವುಗಳ ಮೂಲರೂಪದಲ್ಲಿಯಾಗಲಿ, ಅವುಗಳ ಪ್ರತ್ಯಯಗಳಲ್ಲಿಯಾಗಲಿ ಅಂತಹ ಹೆಚ್ಚಿನ ವ್ಯತ್ಯಾಸವೇನೂ ಕಾಣಿಸಿಕೊಳ್ಳುವುದಿಲ್ಲ. ಒಂದು ವೇಳೆ ಅಂತಹ ವ್ಯತ್ಯಾಸ ಕಾಣಿಸಿಕೊಂಡರೂ ಅವುಗಳ ಮೂಲರೂಪ ಮತ್ತು ಪ್ರತ್ಯಯಗಳನ್ನು ಸುಲಭವಾಗಿ ವಿಭಜಿಸಿ, ವಿವರಿಸಿ ತೋರಿಸಬಹುದು. ಇಂತಹ ರಚನೆಗಳು ಪ್ರಧಾನವಾಗಿರುವ ಭಾಷೆಗಳನ್ನೇ ಅಶ್ಲಿಷ್ಟ ಯೋಗಾತ್ಮಕ ಭಾಷೆಗಳು ಎನ್ನುವರು. ಕನ್ನಡ ಭಾಷೆ ಇದಕ್ಕೆ ಉತ್ತಮ ಉದಾಹರಣೆ. ಕೆಳಗಿನ ರಚನೆಗಳನ್ನು ಗಮನಿಸಿ.

| | |
|---|---|
| ಮನೆ+ಅನ್ನು | ಮನೆಯನ್ನು |
| ಮನೆ+ಇಂದ | ಮನೆಯಿಂದ |
| ಮನೆ+ಗೆ | ಮನೆಗೆ |
| ಮನೆ+ಅ | ಮನೆಯ |
| ಮನೆ+ಅಲ್ಲಿ | ಮನೆಯಲ್ಲಿ |

ಮೇಲಿನ ಪದರಚನೆಗಳನ್ನು ಪರಿಶೀಲಿಸಿದಾಗ ಈ ರಚನೆಗಳಲ್ಲಿ ಅವುಗಳ ಮೂಲ ರೂಪಗಳಲ್ಲಿಯಾಗಲಿ ಅಥವಾ ಅವುಗಳ ಪ್ರತ್ಯಯಗಳಲ್ಲಿಯಾಗಲಿ ಅಂತಹ ಹೆಚ್ಚಿನ ವ್ಯತ್ಯಾಸವೇನೂ ಉಂಟಾಗಿಲ್ಲದಿರುವುದು ಕಂಡುಬರುವುದು. ಒಂದು ಪಕ್ಷ ಇವುಗಳಲ್ಲಿ ವ್ಯತ್ಯಾಸ ಕಾಣಿಸಿಕೊಂಡರೂ ಅವುಗಳ ಮೂಲರೂಪ ಮತ್ತು ಪ್ರತ್ಯಯಗಳನ್ನು ಸುಲಭವಾಗಿ ನಿರ್ಧರಿಸಿ ವಿವರಿಸಿ ತೋರಿಸಬಹುದು. ಇಂತಹ ಪದರಚನೆಗಳು ಭಾರತದ ಅನೇಕ ಭಾಷೆಗಳಲ್ಲಿ ಸಾಮಾನ್ಯವಾಗಿ ದೊರೆಯುತ್ತವೆ. ಪದರಚನೆಗಳಲ್ಲಿ

ಅವುಗಳ ಮೂಲರೂಪ ಇಲ್ಲವೇ ಅವುಗಳ ಪ್ರತ್ಯಯಗಳಲ್ಲಿ ಉಂಟಾಗುವ ವ್ಯತ್ಯಾಸವನ್ನು ಆಧರಿಸಿ ಈ ಅಶ್ಲಿಷ್ಟ ಯೋಗಾತ್ಮಕ ಭಾಷೆಗಳನ್ನು ಮತ್ತೆ ಪೂರ್ಣ ಅಶ್ಲಿಷ್ಟ ಯೋಗಾತ್ಮಕ ಭಾಷೆಗಳು ಮತ್ತು ಅಪೂರ್ಣ ಅಶ್ಲಿಷ್ಟ ಯೋಗಾತ್ಮಕ ಭಾಷೆಗಳು ಎಂದು ಎರಡು ಉಪವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾಗಿದೆ.

## ೧. ಪೂರ್ಣ ಅಶ್ಲಿಷ್ಟ ಯೋಗಾತ್ಮಕ ಭಾಷೆಗಳು : (Complete Agglutinative Languages)

ಈ ವರ್ಗಕ್ಕೆ ಸೇರಿದ ಭಾಷೆಗಳ ಪದರಚನೆಗಳಲ್ಲಿ ಅವುಗಳ ಮೂಲರೂಪ ಮತ್ತು ಪ್ರತ್ಯಯಗಳಲ್ಲಿ ಅಂತಹ ಹೆಚ್ಚಿನ ವ್ಯತ್ಯಾಸವೇನೂ ಕಾಣಿಸಿಕೊಳ್ಳದಿದ್ದರೆ ಅಂತಹ ರಚನೆಗಳನ್ನು ಪೂರ್ಣ ಅಶ್ಲಿಷ್ಟ ಯೋಗಾತ್ಮಕ ರಚನೆಗಳು ಎನ್ನುವರು. ಇಂತಹ ರಚನೆಗಳು ಪ್ರಧಾನವಾಗಿರುವ ಭಾಷೆಗಳನ್ನು ಪೂರ್ಣ ಅಶ್ಲಿಷ್ಟ ಯೋಗಾತ್ಮಕ ಭಾಷೆಗಳು ಎಂತಲೂ ಕರೆಯುವರು.

ಪ್ರತ್ಯಯಗಳು ಮುಖ್ಯವಾಗಿ ಮೂರು ಬಗೆಯಲ್ಲಿ ದೊರೆಯುತ್ತವೆ. ಕೆಲವು ಪ್ರತ್ಯಯಗಳು ಧಾತುರೂಪಗಳ ಪರದಲ್ಲಿ ಬಂದರೆ, ಮತ್ತೆ ಕೆಲವು ಧಾತುರೂಪಗಳ ಅಂತ್ಯದಲ್ಲಿ ಬರುತ್ತವೆ. ಇದೇ ರೀತಿ ಕೆಲವು ಪ್ರತ್ಯಯಗಳು ಧಾತುರೂಪದ ಮಧ್ಯದಲ್ಲಿಯೂ ಬರಬಹುದು. ಹಾಗೆ ಪ್ರತ್ಯಯಗಳು ಬರುವ ಸ್ಥಾನವನ್ನು ಆಧರಿಸಿ ಬೇರೆ ಬೇರೆ ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾಗಿದೆ. ಯಾವ ಪ್ರತ್ಯಯಗಳು ಧಾತು ರೂಪಗಳ ಪರದಲ್ಲಿ ಬರಬಲ್ಲವೋ ಅಂತಹ ಪ್ರತ್ಯಯಗಳನ್ನು ಪರಪತ್ಯಗಳು (prefixes) ಎಂದೂ ಯಾವ ಪ್ರತ್ಯಯಗಳು ಧಾತು ರೂಪಗಳ ಅಂತ್ಯದಲ್ಲಿ ಬರಬಲ್ಲವೋ ಅಂತಹ ಪ್ರತ್ಯಯಗಳನ್ನು ಅಂತ್ಯಪ್ರತ್ಯಯಗಳು (Suffixes) ಎಂದೂ, ಯಾವ ಪ್ರತ್ಯಯಗಳು ಧಾತುರೂಪಗಳ ನಡುವೆ ಬರಬಲ್ಲವೋ ಅಂತಹ ಪ್ರತ್ಯಯಗಳನ್ನು ಮಧ್ಯಪ್ರತ್ಯಯಗಳು (Infixes) ಎಂದೂ ಕರೆಯುವರು. ಧಾತುರೂಪಗಳ ಹಿಂದೆ ಅಥವಾ ಮುಂದೆ ಇಲ್ಲವೇ ನಡುವೆ ಬರಬಹುದಾದ ಈ ಪ್ರತ್ಯಯಗಳು ಭಾಷೆಯಿಂದ ಭಾಷೆಗೆ ಬೇರೆ ಬೇರೆಯಾಗಿರುತ್ತವೆ. ಕೆಲವು ಭಾಷೆಗಳಲ್ಲಿ ಅಂತ್ಯ ಪ್ರತ್ಯಯಗಳು ಭಾಷೆಯಿಂದ ಭಾಷೆಗೆ ಬೇರೆ ಬೇರೆಯಾಗಿರುತ್ತವೆ. ಕೆಲವು ಭಾಷೆಗಳಲ್ಲಿ ಅಂತ್ಯ ಪ್ರತ್ಯಯಗಳು ಹೆಚ್ಚು ಬಳಕೆಯಲ್ಲಿದ್ದರೆ, ಇನ್ನೊಂದು ಭಾಷೆಯಲ್ಲಿ ಪರಪ್ರತ್ಯಯಗಳು ಹೆಚ್ಚು ಬಳಕೆಯಲ್ಲಿರುತ್ತವೆ. ಯಾವ ಭಾಷೆಗಳಲ್ಲಿ ಅಂತ್ಯಪ್ರತ್ಯಯಗಳು ಪ್ರಧಾನವಾಗಿವೆ, ಯಾವ ಭಾಷೆಗಳಲ್ಲಿ ಪರಪ್ರತ್ಯಯಗಳು ಪ್ರಧಾನವಾಗಿವೆ ಮತ್ತೆ ಯಾವ ಭಾಷೆಗಳಲ್ಲಿ ಮಧ್ಯಪ್ರತ್ಯಯಗಳು ಪ್ರಧಾನವಾಗಿವೆ ಎಂಬುದನ್ನು ಆಧರಿಸಿ ಭಾಷೆಗಳನ್ನು ಬೇರೆ ಬೇರೆ ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದು. ದ್ರಾವಿಡ ಭಾಷೆಗಳಲ್ಲಿ ಮಧ್ಯ ಪ್ರತ್ಯಯಗಳಿಲ್ಲ. ಅಂತ್ಯ

ಪ್ರತ್ಯಯಗಳು ಹೆಚ್ಚು. ಇಂಡೋಯೂರೋಪಿಯನ್ ಭಾಷೆಗಳಲ್ಲಿ ಯಾವ ಯಾವ ಬಗೆಯ ಪ್ರತ್ಯಯಗಳು ಪ್ರಧಾನವಾಗಿವೆ ಎಂಬುದನ್ನು ಆಧರಿಸಿ ಭಾಷೆಗಳನ್ನು ಪರಪ್ರತ್ಯಯ ಪ್ರಧಾನ ಭಾಷೆಗಳು ಮಧ್ಯ ಪ್ರತ್ಯಯ ಪ್ರಧಾನ ಭಾಷೆಗಳು, ಅಂತ್ಯಪ್ರತ್ಯಯ ಪರಧಾನ ಭಾಷೆಗಳು ಎಂದು ಮೂರು ಉಪವರ್ಗಗಳಲ್ಲಿ ವರ್ಗೀಕರಿಸಿಕೊಂಡಿದ್ದಾರೆ.

## (i) ಪರಪ್ರತ್ಯಯ ಪ್ರಧಾನ ಭಾಷೆಗಳು : (Prefixal Agglutinative Languages)

ಯಾವ ಭಾಷೆಗಳ ಪದರಚನೆಗಳಲ್ಲಿ ಪರಪ್ರತ್ಯಯಗಳು ಪ್ರಧಾನವಾಗಿರುತ್ತವೆಯೋ ಅಂತಹ ಭಾಷೆಗಳನ್ನೇ ಪರಪ್ರತ್ಯಯ ಪ್ರಧಾನ ಭಾಷೆಗಳು ಎನ್ನುವರು. ಇಂಗ್ಲೀಷ್, ಜರ್ಮನ್, ಕಾಫಿರಿ, ಸಂಸ್ಕೃತ, ಗ್ರೀಕ್, ಬಾಂಟು ಮುಂತಾದ ಭಾಷೆಗಳು ಇವಕ್ಕೆ ಉತ್ತಮ ಉದಾಹರಣೆ. ಇಂಗ್ಲೀಷ್, ಫ್ರೆಂಚ್, ಜರ್ಮನ್, ಸಂಸ್ಕೃತ, ಕಾಫಿರಿ ಮುಂತಾದ ಭಾಷೆಗಳಲ್ಲಿ ಪರಪ್ರತ್ಯಯಗಳಿವೆಯಾದರೂ ಇವುಗಳಲ್ಲಿ ಪರಪ್ರತ್ಯಯಗಳೇ ಪ್ರಧಾನವೇನಲ್ಲ. ಇಂತಹ ರಚನೆಗಳನ್ನು ಹೊಂದಿರುವ ಭಾಷೆಗಳನ್ನು ಕೆಲವರು ಪೂರ್ವಯೋಗಾತ್ಮಕ ಭಾಷೆಗಳು ಎಂತಲೂ ಕರೆಯುವರು.

## (ii) ಮಧ್ಯಪ್ರತ್ಯಯ ಪ್ರಧಾನ ಭಾಷೆಗಳು : (Infixal Agglutinative Languages)

ಯಾವ ಭಾಷೆಗಳ ಪದರಚನೆಗಳಲ್ಲಿ ಮಧ್ಯ ಪ್ರತ್ಯಯಗಳು ಹೆಚ್ಚು ಬಳಕೆಯಲ್ಲಿರುತ್ತವೆಯೋ ಅಂತಹ ಭಾಷೆಗಳನ್ನೇ ಮಧ್ಯ ಪ್ರತ್ಯಯ ಪ್ರಧಾನ ಭಾಷೆಗಳು ಎನ್ನುವರು. ಆಸ್ಟ್ರಿಕ್ ಭಾಷಾವರ್ಗಕ್ಕೆ ಸೇರಿದ ಮುಂಡ, ಸಂತಾಲಿ, ಖರಿಯ ಮುಂತಾದ ಭಾಷೆಗಳಲ್ಲಿ ಮಧ್ಯ ಪ್ರತ್ಯಯಗಳು ಹೆಚ್ಚು ಬಳಕೆಯಲ್ಲಿವೆ. ಮಧ್ಯಪ್ರತ್ಯಯಗಳು ಧಾತುರೂಪಗಳ ನಡುವೆ ಬರುವುದು ಸರ್ವೇಸಾಮಾನ್ಯ. ಪದರಚನೆಗಳಲ್ಲಿ ಇಂತಹ ಮಧ್ಯಪ್ರತ್ಯಗಳನ್ನು ಅವುಗಳ ಧಾತುರೂಪದಿಂದ ಸುಲಭವಾಗಿ ವಿಭಜಿಸಿ ವಿವರಿಸಿ ತೋರಿಸಬಹುದು. ಇದಕ್ಕೆ ಖರಿಯ ಭಾಷೆಯ ಕೆಲವು ಉದಾಹರಣೆಗಳನ್ನು ಗಮನಿಸಬಹುದು. Tale (ಕೊಲೆ), Tatle (ಕೊಲೆಗಾರ), Lempa (ಹಿಟ್ಟು), Lemapa (ರೊಟ್ಟಿ), Kunte (ರುಚಿ), Kunente (ಸಿಹಿತಿಂಡಿ) ಹೀಗೆ ಖರಿಯ ಭಾಷೆಯ ಧಾತುರೂಪಗಳ ನಡುವೆ ಬೇರೆ ಬೇರೆ ಪ್ರತ್ಯಯಗಳನ್ನು ಹಚ್ಚುವುದರ ಮೂಲಕ ಬೇರೆ ಬೇರೆ ಪದಗಳನ್ನು ರಚಿಸಿ ತೋರಿಸಬಹುದಾದ ಅವಕಾಶಗಳಿವೆ. ಹಿಂದೂ ಮಹಾಸಾಗರದಿಂದ ಹಿಡಿದು ಆಫ್ರಿಕದವರೆಗೆ ಹರಡಿಕೊಂಡಿರುವ ಅನೇಕ ಭಾಷೆಗಳಲ್ಲಿ ಈ ಬಗೆಯ ಮಧ್ಯಪ್ರತ್ಯಯಗಳು ಹೆಚ್ಚಾಗಿ ಕಂಡುಬರುತ್ತವೆ.

## (iii) ಅಂತ್ಯ ಪ್ರತ್ಯಯ ಪ್ರಧಾನ ಭಾಷೆಗಳು : (Suffixal Agglutinative Langauges)

ಯಾವ ಭಾಷೆಗಳ ಪದರಚನೆಗಳಲ್ಲಿ ಅಂತ್ಯ ಪ್ರತ್ಯಯಗಳು ಹೆಚ್ಚು ಬಳಕೆಯಲ್ಲಿರುತ್ತವೆಯೋ ಅಂತಹ ಭಾಷೆಗಳನ್ನೇ ಅಂತ್ಯ ಪ್ರತ್ಯಯಪ್ರಧಾನ ಭಾಷೆಗಳು ಎನ್ನುವರು. ತುರ್ಕಿ ಮುಂತಾದ ಭಾಷೆಗಳು ಇವಕ್ಕೆ ಉತ್ತಮ ಉದಾಹರಣೆ. ಇಂತಹ ರಚನೆಗಳುಳ್ಳ ಭಾಷೆಗಳನ್ನೇ ಕೆಲವು ವಿದ್ವಾಂಸರು ಅಂತ್ಯ ಯೋಗಾತ್ಮಕ ಭಾಷೆಗಳು ಎಂದೂ ಕರೆಯುವರು. ಈ ಬಗೆಯ ಪದರಚನೆಗಳಲ್ಲಿ ಪ್ರತ್ಯಯಗಳು ಧಾತುರೂಪಗಳ ಅಂತ್ಯದಲ್ಲಿ ಬರುವುದೇ ಹೆಚ್ಚು. ದ್ರಾವಿಡ ಭಾಷೆಗಳಲ್ಲಿ ಇಂತಹ ಅಂತ್ಯ ಪ್ರತ್ಯಯಗಳು ಬಳಕೆಯಲ್ಲಿವೆ. ಇಂತಹ ರಚನೆಗಳನ್ನು ಪ್ರಧಾನವಾಗಿ ಹೊಂದಿರುವ ಭಾಷೆಗಳು ಜಗತ್ತಿನಲ್ಲಿ ಅಧಿಕ ಸಂಖ್ಯೆಯಲ್ಲಿ ದೊರೆಯುತ್ತವೆ. ಯೂರಲ್ ಅಲ್ಟಾಯಿಕ್ ಭಾಷೆಗಳೂ ಕೂಡ ಈ ವರ್ಗಕ್ಕೆ ಸೇರುತ್ತವೆ.

## ೨. ಅಪೂರ್ಣ ಅಶ್ಲಿಷ್ಟ ಯೋಗಾತ್ಮಕ ಭಾಷೆಗಳು : (Partial Agglutinative Languages)

ಈ ವರ್ಗಕ್ಕೆ ಸೇರಿದ ಭಾಷೆಗಳಲ್ಲಿ ಪದರಚನೆಗೆ ಪದಗಳು ಬೇರೆ ಬೇರೆ ಪ್ರತ್ಯಯಗಳನ್ನು ತೆಗೆದುಕೊಂಡರೆ, ಮತ್ತೆ ಕೆಲವು ಪದಗಳು ಯಾವ ಬಗೆಯ ಪ್ರತ್ಯಯಗಳನ್ನು ತೆಗೆದುಕೊಳ್ಳುವುದಿಲ್ಲ. ಇಂತಹ ಎರಡು ಬಗೆಯ ಪದರಚನೆಗಳನ್ನು ಪ್ರಧಾನವಾಗಿ ಹೊಂದಿರುವ ಭಾಷೆಗಳನ್ನೇ ಅಪೂರ್ಣ ಅಶ್ಲಿಷ್ಟ ಯೋಗಾತ್ಮಕ ಭಾಷೆಗಳು ಎನ್ನುವರು. ಹೌಸ, ಜಪಾನಿ ಮುಂತಾದ ಭಾಷೆಗಳು ಇದಕ್ಕೆ ಉತ್ತಮ ಉದಾಹಣೆ. ಭಾರತದ ಅನೇಕ ಭಾಷೆಗಳು ಈ ವರ್ಗಕ್ಕೆ ಸೇರುತ್ತವೆ. ಕನ್ನಡ, ತೆಲುಗು, ತಮಿಳು ಮುಂತಾದ ದ್ರಾವಿಡ ಭಾಷೆಗಳಲ್ಲಿ ಕೆಲವು ಪದಗಳು ಪ್ರತ್ಯಯಗಳನ್ನು ತೆಗೆದುಕೊಂಡರೆ, ಮತ್ತೆ ಕೆಲವು ಯಾವ ಪ್ರತ್ಯಯಗಳನ್ನು ತೆಗೆದುಕೊಳ್ಳದೆ ಅವು ಸ್ವತಂತ್ರವಾಗಿ ಬಳಕೆಗೆ ಬರಬಲ್ಲವು. ಈ ಎರಡು ಬಗೆಯ ಮಿಶ್ರ ರಚನೆಗಳನ್ನು ಹೊಂದಿರುವ ಭಾಷೆಗಳನ್ನು ಕೆಲವರು ಮಿಶ್ರ ಯೋಗಾತ್ಮಕ ಭಾಷೆಗಳು ಎಂತಲೂ ಕರೆಯುವರು. ಈ ಭಾಷೆಗಳು ಯೋಗಾತ್ಮಕ ಮತ್ತು ಅಯೋಗಾತ್ಮಕ ಭಾಷೆಗಳ ಎರಡು ಬಗೆಯ ಲಕ್ಷಣವನ್ನು ಹೊಂದಿರುವ ಭಾಷೆಗಳಾಗಿವೆ. ಆದುದರಿಂದಲೇ ಇವು ಸಾವಯವ ಮತ್ತು ನಿರಾವಯವ ಭಾಷೆಗಳ ನಡುವೆ ನಿಲ್ಲುತ್ತವೆ ಎನ್ನುವುದು. ಇವು ಪೂರ್ಣವಾಗಿ ಯೋಗಾತ್ಮಕ ಭಾಷೆಗಳೂ ಅಲ್ಲ. ಪೂರ್ಣವಾಗಿ ಅಯೋಗಾತ್ಮಕ ಭಾಷೆಗಳೂ ಅಲ್ಲ. ಇಂತಹ ರಚನೆಗಳನ್ನು ಹೊಂದಿರುವ ಭಾಷೆಗಳು ನ್ಯೂಜಿಲೆಂಡ್ ಮತ್ತು ಹವಾಯ್ ದ್ವೀಪಗಳಲ್ಲಿ ಹೆಚ್ಚು ಬಳಕೆಯಲ್ಲಿವೆ.

## ೩. ಶ್ಲಿಷ್ಟ ಯೋಗಾತ್ಮಕ ಭಾಷೆಗಳು : (Inflectional Languages)

ಯಾವ ಯಾವ ಭಾಷೆಗಳ ಪದರಚನೆಗಳಲ್ಲಿ ಪದಗಳ ಮೂಲ ರೂಪಗಳಿಗೆ ಬೇರೆ ಬೇರೆ ಪ್ರತ್ಯಯಗಳನ್ನು ಹಚ್ಚಿದಾಗ ಬೇರೆ ಬೇರೆ ಅರ್ಥ ಕೊಡುವ ಪದಗಳು ಸಿದ್ಧವಾಗುತ್ತವೆಯೋ ಅಂತಹ ರಚನೆಗಳು ಪ್ರಧಾನವಾಗಿರುವ ಭಾಷೆಗಳನ್ನೇ ಶ್ಲಿಷ್ಟ ಯೋಗಾತ್ಮಕ ಭಾಷೆಗಳು ಎನ್ನುವರು. ಇಂತಹ ಪದರಚನೆಗಳಲ್ಲಿ ಅವುಗಳ ಮೂಲ ರೂಪ ಇಲ್ಲವೇ ಅವುಗಳ ಪ್ರತ್ಯಯಗಳಲ್ಲಿ ಅಂತಹ ಹೆಚ್ಚಿನ ವ್ಯತ್ಯಾಸವೇನೂ ಕಾಣಿಸಿಕೊಳ್ಳುವುದಿಲ್ಲ. ಇಂತಹ ರಚನೆಗಳಲ್ಲಿ ಒಂದು ಪಕ್ಷ ವ್ಯತ್ಯಾಸ ಕಾಣಿಸಿಕೊಂಡರೂ ಅವುಗಳನ್ನು ಸುಲಭವಾಗಿ ವಿವರಿಸಿ ತೋರಿಸಬಹುದು. ಈ ಶ್ಲಿಷ್ಟಯೋಗಾತ್ಮಕ ಭಾಷೆಗಳನ್ನು ಮತ್ತೆ ಅವುಗಳ ಪದಗಳಲ್ಲಿ ಕಂಡುಬರುವ ವ್ಯತ್ಯಾಸವನ್ನು ಆಧರಿಸಿ ಅವುಗಳನ್ನು ಅಂತರಮುಖಿ ಶ್ಲಿಷ್ಟ ಯೋಗಾತ್ಮಕ ಭಾಷೆಗಳು ಮತ್ತು ಬಹಿರ್ಮುಖಿಶ್ಲಿಷ್ಟ ಯೋಗಾತ್ಮಕ ಭಾಷೆಗಳು ಎಂದು ಎರಡು ಉಪವರ್ಗಗಳಲ್ಲಿ ವರ್ಗೀಕರಿಸಿಕೊಳ್ಳ ಬಹುದಾದ ಅವಕಾಶಗಳಿವೆ.

### ೧. ಅಂತರ್ಮುಖಿ ಶ್ಲಿಷ್ಟ ಯೋಗಾತ್ಮಕ ಭಾಷೆಗಳು : (Internal Inflectional Languages)

ಯಾವ ಭಾಷೆಗಳ ಪದರಚನೆಗಳಲ್ಲಿ ಅವುಗಳ ಮೂಲ ರೂಪಕ್ಕೆ ಬೇರೆ ಬೇರೆ ಪ್ರತ್ಯಯಗಳನ್ನು ಹಚ್ಚಿದಾಗ ಅವುಗಳ ಮೂಲ ರೂಪದಲ್ಲಿ ವ್ಯತ್ಯಾಸ ಕಾಣಿಸಿಕೊಳ್ಳುವುದೋ ಅಂತಹ ರಚನೆಗಳು ಪ್ರಧಾನವಾಗಿರುವ ಭಾಷೆಗಳನ್ನೇ ಅಂತಹಮುಖಿ ಶ್ಲಿಷ್ಟ ಯೋಗಾತ್ಮಕ ಭಾಷೆಗಳು ಎನ್ನುವರು. ಇಂತಹ ಪದರಚನೆಗಳಲ್ಲಿ ಅವುಗಳ ಪ್ರತ್ಯಯಗಳಲ್ಲಿ ವ್ಯತ್ಯಾಸ ಕಾಣಿಸಿಕೊಳ್ಳುವುದು ಅಪರೂಪ. ಸೆಮೆಟಿಕ್ ಮತ್ತು ಹೆಮೆಟಿಕ್ ಭಾಷೆಗಳು ಇದಕ್ಕೆ ಉತ್ತಮ ಉದಾಹರಣೆ. ಇದಕ್ಕೆ ಅರಬ್ಬಿ ಭಾಷೆಯ ಕೆಲವು ಉದಾಹರಣೆಗಳನ್ನು ಗಮನಿಸಬಹುದು. "ಕಿತಾಬ್" (ಪುಸ್ತಕ) ಕುತುಬ್ (ಪುಸ್ತಕಗಳು) ಈ ರಚನೆಗಳಲ್ಲಿ ಕಿತಾಬ್ ಎಂಬ ಏಕವಚನ ರೂಪವು ಬಹುವಚನದಲ್ಲಿ ಕುತುಬ್ ಎಂಬುದಾಗಿ ಪರಿವರ್ತನೆಯಾಗಿದೆ. ಹೀಗೆ ಪದರಚನೆಗಳಲ್ಲಿ ಅವುಗಳ ಮೂಲರೂಪ ಅಥವಾ ಧಾತುರೂಪದಲ್ಲಿ ಕಾಣಿಸಿಕೊಳ್ಳುವ ವ್ಯತ್ಯಾಸವನ್ನು ಆಧರಿಸಿ ಭಾಷೆಗಳನ್ನು ಮತ್ತೆ ಎರಡು ಉಪವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾಗಿದೆ.

#### ಅ. ಸಂಶ್ಲೇಷಣಾತ್ಮಕ ಅಂತರಮುಖಿ ಶ್ಲಿಷ್ಟ ಯೋಗಾತ್ಮಕ ಭಾಷೆಗಳು : (Synthetic Internal Inflectional Languages)

ಯಾವ ಭಾಷೆಗಳ ಪದರಚನೆಗಳಲ್ಲಿ ಪದಗಳ ಮೂಲ ರೂಪಕ್ಕೆ ಬೇರೆ ಬೇರೆ

ಪ್ರತ್ಯಯಗಳನ್ನು ಹಚ್ಚಿದಾಗ ಅವುಗಳ ಮೂಲ ರೂಪವು ಪೂರ್ಣವಾಗಿ ವ್ಯತ್ಯಾಸಗೊಳ್ಳುತ್ತದೆಯೋ ಅಂತಹ ರಚನೆಗಳುಳ್ಳ ಭಾಷೆಗಳನ್ನೇ ಸಂಶ್ಲೇಷಣಾತ್ಮಕ ಅಂತರಮುಖಿ ಶ್ಲಿಷ್ಟ ಯೋಗಾತ್ಮಕ ಭಾಷೆಗಳು ಎನ್ನುವರು. ಇಂತಹ ಪದರಚನೆಗಳಲ್ಲಿ ಅವುಗಳ ಮೂಲರೂಪವು ಪೂರ್ಣವಾಗಿ ಸಂಯೋಗವಾಗಿ ಹೋಗುವುದರಿಂದ ಅವುಗಳಲ್ಲಿ ಅವುಗಳ ಮೂಲರೂಪ ಅಥವಾ ಧಾತು ರೂಪವನ್ನು ಸುಲಭವಾಗಿ ವಿಭಜಿಸಿ, ವಿವರಿಸಿಕೊಳ್ಳಲು ಕಷ್ಟವಾಗುವುದು. ಇಂತಹ ರಚನೆಗಳು ಜಗತ್ತಿನ ಅನೇಕ ಭಾಷೆಗಳಲ್ಲಿ ದೊರೆಯುತ್ತವೆ. ಅರಾಬಿಕ್ ಮತ್ತು ಸಮೇಟಿಕ್ ಭಾಷೆಗಳು ಇದಕ್ಕೆ ಉತ್ತಮ ಉದಾಹರಣೆ. ಅಂತಹ ರಚನೆಗಳ ಮೂಲ ರೂಪಗಳಲ್ಲಿ ಉಂಟಾಗುವ ವ್ಯತ್ಯಾಸವನ್ನು ಆಧರಿಸಿ ಈ ಭಾಷೆಗಳನ್ನು ಕೆಲವರು ಸಂಯೋಗಾತ್ಮಕ ಅಂತರಮುಖಿ ಶ್ಲಿಷ್ಟ ಯೋಗಾತ್ಮಕ ಮುಂತಾದ ಭಾಷೆಗಳು ಎಂತಲೂ ಕರೆಯುವರು. ಸಂಸ್ಕೃತ, ಸೆಮಿಟಿಕ್, ಹೆಮೆಟಿಕ್ ಮುಂತಾದ ಭಾಷೆಗಳು ಮೊದಮೊದಲು ಸಂಶ್ಲೇಷಣಾತ್ಮಕ ಭಾಷೆಗಳಾಗಿದ್ದು ಇವು ಕಾಲಕ್ರಮೇಣ ವಿಶ್ಲೇಷಣಾತ್ಮಕ ಭಾಷೆಗಳಾಗಿ ಪರಿವರ್ತನೆಗೊಂಡಿದೆ.

**ಆ. ವಿಶ್ಲೇಷಣಾತ್ಮಕ ಅಂತರಮುಖಿ ಶ್ಲಿಷ್ಟ ಯೋಗಾತ್ಮಕ ಭಾಷೆಗಳು : (Analytic Internal Inflectional Languages)**

ಯಾವ ಭಾಷೆಗಳ ಪದರಚನೆಗಳಲ್ಲಿ ಪದಗಳ ಮೂಲರೂಪಗಳಿಗೆ ಬೇರೆ ಬೇರೆ ಪ್ರತ್ಯಯಗಳನ್ನು ಹಚ್ಚಿದಾಗ ಅವುಗಳ ಮೂಲರೂಪಗಳಲ್ಲಿ ಅಂತಹ ಹೆಚ್ಚಿನ ವ್ಯತ್ಯಾಸವು ಕಾಣಿಸಿಕೊಳ್ಳುವುದಿಲ್ಲವೋ ಅಂತಹ ರಚನೆಗಳುಳ್ಳ ಭಾಷೆಗಳನ್ನೇ ವಿಶ್ಲೇಷಣಾತ್ಮಕ ಅಂತರಮುಖಿ ಶ್ಲಿಷ್ಟ ಯೋಗಾತ್ಮಕ ಭಾಷೆಗಳು ಎನ್ನುವರು. ಈ ಪದರಚನೆಗಳಲ್ಲಿ ಅವುಗಳ ಮೂಲರೂಪವು ಪೂರ್ಣವಾಗಿ ವ್ಯತ್ಯಾಸಗೊಳ್ಳುವುದಿಲ್ಲ. ಆದಕಾರಣ ಅವುಗಳ ಮೂಲರೂಪವನ್ನು ವಿಭಜಿಸಿ ವಿವರಿಸಿ ತೋರಿಸಬಹುದು. ಇಂತಹ ರಚನೆಗಳುಳ್ಳ ಭಾಷೆಗಳು ಜಗತ್ತಿನಲ್ಲಿ ಅಧಿಕಸಂಖ್ಯೆಯಲ್ಲಿ ದೊರೆಯುತ್ತವೆ. ಹೀಬ್ರೂ, ಸಂಸ್ಕೃತ, ಹಿಟೈಟ್ ಮುಂತಾದ ಭಾಷೆಗಳು ಇದಕ್ಕೆ ಉತ್ತಮ ಉದಾಹರಣೆ. ಹೀಬ್ರೂ, ಸಂಸ್ಕೃತ ಮುಂತಾದ ಭಾಷೆಗಳು ಆರಂಭದಲ್ಲಿ ಸಂಶ್ಲೇಷಣಾತ್ಮಕ ಭಾಷೆಗಳಾಗಿದ್ದುವು. ಕಾಲಕ್ರಮೇಣ ವಿಶ್ಲೇಷಣಾತ್ಮಕ ಭಾಷೆಗಳಾಗಿ ಪರಿವರ್ತನೆಗೊಂಡವು. ಇಂತಹ ರಚನೆಗಳು ಪ್ರಧಾನವಾಗಿರುವ ಭಾಷೆಗಳನ್ನು ವಿಶ್ಲೇಷಣಾತ್ಮಕ ಅಥವಾ ವಿಯೋಗಾತ್ಮಕ ಅಂತರಮುಖಿ ಶ್ಲಿಷ್ಟಯೋಗಾತ್ಮಕ ಭಾಷೆಗಳು ಎಂತಲೂ ಕರೆಯುವರು.

## ೨. ಬಹಿರ್‌ಮುಖಿ ಶ್ಲಿಷ್ಟ ಯೋಗಾತ್ಮಕ ಭಾಷೆಗಳು : (External Inflectional Languages)

ಯಾವ ಭಾಷೆಗಳ ಪದರಚನೆಗಳಲ್ಲಿ ಪದಗಳ ಮೂಲರೂಪಕ್ಕೆ ಬೇರೆ ಬೇರೆ ಪ್ರತ್ಯಯಗಳನ್ನು ಹಚ್ಚಿದಾಗ ಅವುಗಳ ಪ್ರತ್ಯಯಗಳಲ್ಲಿ ವ್ಯತ್ಯಾಸ ಕಾಣಿಸಿಕೊಳ್ಳುತ್ತದೆಯೋ ಅಂತಹ ರಚನೆಗಳು ಪ್ರಧಾನವಾಗಿರುವ ಭಾಷೆಗಳನ್ನೇ ಬಹಿರ್‌ಮುಖಿ ಶ್ಲಿಷ್ಟ ಯೋಗಾತ್ಮಕ ಭಾಷೆಗಳು ಎನ್ನುವರು. ಅಂತರಮುಖಿ ಶ್ಲಿಷ್ಟಯೋಗಾತ್ಮಕ ಭಾಷೆಗಳ ಪದರಚನೆಗಳಲ್ಲಿ ಅವುಗಳ ಮೂಲ ರೂಪದಲ್ಲಿ ವ್ಯತ್ಯಾಸ ಕಾಣಿಸಿಕೊಂಡರೆ, ಬಹಿರ್‌ಮುಖಿ ಶ್ಲಿಷ್ಟಯೋಗಾತ್ಮಕ ಭಾಷೆಗಳ ಪದರಚನೆಗಳಲ್ಲಿ ಅವುಗಳ ಪ್ರತ್ಯಯದಲ್ಲಿ ಮಾತ್ರ ವ್ಯತ್ಯಾಸ ಕಾಣಿಸಿಕೊಳ್ಳುವುದು. ಇಂತಹ ರಚನೆಗಳು ಇಂಡೋಯುರೋಪಿಯನ್ ಭಾಷೆಗಳಲ್ಲಿ ವಿಶೇಷವಾಗಿ ಕಂಡುಬರುತ್ತವೆ. ಪದರಚನೆಗಳನ್ನು ಮುಖ್ಯವಾಗಿ ಎರಡು ಉಪವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾಗಿದೆ.

### ಅ. ಸಂಶ್ಲೇಷಣಾತ್ಮಕ ಬಹಿರ್‌ಮುಖಿ ಶ್ಲಿಷ್ಟ ಯೋಗಾತ್ಮಕ ಭಾಷೆಗಳು: (Synthetic external Inflectional Languages)

ಯಾವ ಭಾಷೆಗಳ ಪದರಚನೆಗಳಲ್ಲಿ ಅವುಗಳ ಮೂಲರೂಪಗಳಲ್ಲಿ ಯಾವ ವ್ಯತ್ಯಾಸವು ಕಾಣಿಸಿಕೊಳ್ಳದೆ ಅವುಗಳ ಪ್ರತ್ಯಯಗಳಲ್ಲಿ ಪೂರ್ಣವಾಗಿ ವ್ಯತ್ಯಾಸ ಕಾಣಿಸಿಕೊಳ್ಳುತ್ತದೆಯೋ ಅಂತಹ ಭಾಷೆಗಳನ್ನೇ ಸಂಶ್ಲೇಷಣಾತ್ಮಕ ಬಹಿರ್‌ಮುಖಿ ಶ್ಲಿಷ್ಟ ಯೋಗಾತ್ಮಕ ಭಾಷೆಗಳು ಎನ್ನುವರು. ಈ ಬಗೆಯ ರಚನೆಗಳಲ್ಲಿ ವ್ಯತ್ಯಾಸವು ಪೂರ್ಣವಾಗಿ ಕಾಣಿಸಿಕೊಂಡಾಗ ಅವುಗಳ ಪ್ರತ್ಯಯಗಳನ್ನು ಸುಲಭವಾಗಿ ಗುರುತಿಸಿ ವಿವರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಇಂತಹ ರಚನೆಗಳು ಸಂಸ್ಕೃತ, ಗ್ರೀಕ್, ಲ್ಯಾಟಿನ್ ಗಾಲಿಕ್ ಮುಂತಾದ ಭಾಷೆಗಳಲ್ಲಿ ವಿಶೇಷವಾಗಿ ಕಂಡುಬರುತ್ತವೆ. ಈ ರೀತಿಯ ರಚನೆಗಳನ್ನು ಹೊಂದಿರುವ ಭಾಷೆಗಳನ್ನೇ ಸಂಯೋಗಾತ್ಮಕ ಬಹಿರ್‌ಮುಖಿ ಶ್ಲಿಷ್ಟಯೋಗಾತ್ಮಕ ಭಾಷೆಗಳು ಎಂತಲೂ ಕರೆಯುವರು.

### ಆ. ವಿಶ್ಲೇಷಣಾತ್ಮಕ ಬಹಿರ್‌ಮುಖಿ ಶ್ಲಿಷ್ಟ ಯೋಗಾತ್ಮಕ ಭಾಷೆಗಳು : (Analytic External Inflectional Languages)

ಯಾವ ಭಾಷೆಯ ಪದರಚನೆಗಳಲ್ಲಿ ಅವುಗಳ ಪ್ರತ್ಯಯಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವು ಕಾಣಿಸಿಕೊಳ್ಳುವುದಿಲ್ಲವೋ ಅಂತಹ ರಚನೆಗಳುಳ್ಳ ಭಾಷೆಗಳನ್ನೇ ವಿಶ್ಲೇಷಣಾತ್ಮಕ ಬಹಿರ್‌ಮುಖಿ ಶ್ಲಿಷ್ಟ ಯೋಗಾತ್ಮಕ ಭಾಷೆಗಳು ಎನ್ನುವರು. ಇಂತಹ ಪದರಚನೆಗಳಲ್ಲಿ ಅವುಗಳ ಪ್ರತ್ಯಯಗಳಲ್ಲಿ ಉಂಟಾಗಬಹುದಾದ ವ್ಯತ್ಯಾಸವನ್ನು ಸುಲಭವಾಗಿ ವಿವರಿಸಿ

ತೋರಿಸಬಹುದಾಗಿದೆ. ಭಾರತದ ಅನೇಕ ಭಾಷೆಗಳಲ್ಲಿ ಇಂತಹ ರಚನೆಗಳು ವಿಶೇಷವಾಗಿ ಕಾಣಿಸಿಕೊಳ್ಳುತ್ತವೆ. ಇಂಗ್ಲಿಷ್, ಹಿಂದಿ, ಫ್ರೆಂಚ್, ಜರ್ಮನ್ ಮುಂತಾದ ಭಾಷೆಗಳು ಮೊದಮೊದಲು ಸಂಶ್ಲೇಷಣಾತ್ಮಕ ಅಥವಾ ಸಂಯೋಗಾತ್ಮಕ ಭಾಷೆಗಳಾಗಿದ್ದು, ಅವು ಕಾಲಕ್ರಮೇಣ, ವಿಶ್ಲೇಷಣಾತ್ಮಕ ಭಾಷೆಗಳಾಗಿ ವ್ಯತ್ಯಾಸಗೊಂಡಿವೆ. ಇದಕ್ಕೆ ಅವುಗಳ ಪದರಚನೆಗಳಲ್ಲಿ ಉಂಟಾಗಿರುವ ವ್ಯತ್ಯಾಸ ಮುಖ್ಯ ಕಾರಣವಾಗಿದೆ.

**ಇ. ಬಹು ಸಂಶ್ಲೇಷಣಾತ್ಮಕ ಭಾಷೆಗಳು : (Polysynthetic Languages)**

ಯಾವ ಭಾಷೆಗಳ ಪದರಚನೆಗಳಲ್ಲಿ ಅವುಗಳ ಮೂಲರೂಪ ಮತ್ತು ಪ್ರತ್ಯಯ ಎರಡರಲ್ಲಿಯೂ ವ್ಯತ್ಯಾಸ ಕಾಣಿಸಿಕೊಳ್ಳುತ್ತದೆಯೋ ಅಂತಹ ರಚನೆಗಳುಳ್ಳ ಭಾಷೆಗಳನ್ನೇ ಬಹುಸಂಶ್ಲೇಷಣಾತ್ಮಕ ಭಾಷೆಗಳು ಎನ್ನುವರು. ಈ ಬಗೆಯ ಪದರಚನೆಗಳಲ್ಲಿ ಅವುಗಳ ಪದವೇ ಪೂರ್ಣವಾಗಿ ವ್ಯತ್ಯಾಸಗೊಳ್ಳಬಹುದು. ಅಥವಾ ಅವುಗಳ ಪ್ರತ್ಯಯಗಳಲ್ಲಿ ವ್ಯತ್ಯಾಸ ಕಾಣಿಸಿಕೊಳ್ಳಬಹುದು ಇಲ್ಲವೇ ಅವುಗಳ ಎರಡು ರೂಪಗಳಲ್ಲಿಯೂ ವ್ಯತ್ಯಾಸ ಕಾಣಿಸಿಕೊಳ್ಳಬಹುದಾದ ಅವಕಾಶಗಳಿವೆ. ಇಂತಹ ಸಂದರ್ಭಗಳಲ್ಲಿ ಅಂತಹ ಪದರಚನೆಗಳ ಮೂಲರೂಪ ಇಲ್ಲವೇ ಪ್ರತ್ಯಯಗಳನ್ನು ಸ್ಪಷ್ಟವಾಗಿ ಗುರುತಿಸಿ ವಿವರಿಸಿಕೊಳ್ಳಲು ಕಷ್ಟವಾಗುತ್ತದೆ. ಪದಗಳ ಮೂಲರೂಪ ಹಾಗೂ ಪ್ರತ್ಯಯಗಳು ಪೂರ್ಣವಾಗಿ ಇಲ್ಲವೇ ಅಪೂರ್ಣವಾಗಿ ವ್ಯತ್ಯಾಸವಾಗುವುದರಿಂದ ಕೆಲವು ವೇಳೆ ಅಂತಹ ಪದಗಳೇ ವಾಕ್ಯಗಳಾಗಿಯೂ ಕಾಣಿಸಿಕೊಳ್ಳಬಹುದು. ದೊಡ್ಡ ದೊಡ್ಡ ಪದಗಳು ವಾಕ್ಯಗಳಾಗಿಯೂ, ವಾಕ್ಯಗಳೇ ಪದಗಳಾಗಿಯೂ, ಕಾಣಿಸಿಕೊಳ್ಳುವುದರಿಂದ ಇಂತಹ ರಚನೆಗಳಲ್ಲಿ ಪದ ಹಾಗೂ ವಾಕ್ಯ ಇವುಗಳಿಗೆ ಇರುವ ವ್ಯತ್ಯಾಸವನ್ನು ಗುರುತಿಸಿಕೊಳ್ಳಲು ಕಷ್ಟವಾಗುವುದು. ಉತ್ತರ ಅಮೇರಿಕದ ಕೆಲವು ಮೂಲನಿವಾಸಿ ಭಾಷೆಗಳು ಇಂತಹ ರಚನೆಗಳಿಗೆ ಉತ್ತಮ ಉದಾಹರಣೆ. ಈ ಬಾಷೆಗಳ ಪದರಚನೆಗಳಲ್ಲಿ ಅವುಗಳ ಮೂಲರೂಪ ಪದ ಯಾವುದು ವಾಕ್ಯ ಯಾವುದು ಎಂಬುದನ್ನು ನಿರ್ಧರಿಸಿಕೊಳ್ಳಲು ಕೆಲವು ವೇಳೆ ಕಷ್ಟವಾಗುವುದು. ಇಂತಹ ರಚನೆಗಳನ್ನು ಪ್ರಧಾನವಾಗಿ ಹೊಂದಿರಬಹುದಾದ ಭಾಷೆಗಳನ್ನು ಪೂರ್ಣಸಂಯೋಗಾತ್ಮಕ ಭಾಷೆಗಳು ಎಂದು ಕರೆಯುವರು.

ಜಗತ್ತಿನಾದ್ಯಂತ ವ್ಯಾಪಿಸಿಕೊಂಡಿರುವ ಭಾಷೆಗಳನ್ನು ಅವುಗಳ ರಚನಾತ್ಮಕ ಅಂಶಗಳನ್ನು ಆಧರಿಸಿ ಮೇಲಿನಂತೆ ಬೇರೆ ಬೇರೆ ವರ್ಗ, ಉಪವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾದರೂ ಈ ವಿಧಾನದಲ್ಲಿಯೂ ಸಾಕಷ್ಟು ಕುಂದುಕೊರತೆಗಳು ಇವೆ. ಭಾಷೆ ಚಿರಪರಿವರ್ತನಾ ಶೀಲವುಳ್ಳದ್ದು. ಇದು ಕಾಲದಿಂದ ಕಾಲಕ್ಕೆ, ಸ್ಥಳದಿಂದ ಸ್ಥಳಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸಗೊಳ್ಳುತ್ತಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಭಾಷೆಗಳ

ಅನೇಕ ರಚನಾತ್ಮಕ ಅಂಶಗಳು ಪರಿವರ್ತನೆಗೊಳ್ಳುತ್ತಿರುವುದರಿಂದ ಸಂಯೋಗಾವಸ್ಥೆಯಲ್ಲಿದ್ದ ಭಾಷೆಗಳು ವಿಯೋಗಾವಸ್ಥೆಯ ಕಡೆಗೂ, ವಿಶ್ಲೇಷಣಾತ್ಮಕವಾಗಿದ್ದ ಭಾಷೆಗಳು ಸಂಶ್ಲೇಷಣಾತ್ಮಕ ಭಾಷೆಗಳಾಗಿಯೂ, ನಿರಾವಯವಯುಕ್ತ ಭಾಷೆಗಳು ಸಾವಯವಯುಕ್ತ ಭಾಷೆಗಳಾಗಿಯೂ, ಯೋಗಾತ್ಮಕ ಭಾಷೆಗಳು ಅಯೋಗಾತ್ಮಕವಾಗಿಯೂ ಪರಿವರ್ತನೆಗೊಂಡು ಬೆಳೆದುಬರುತ್ತವೆ ಜಗತ್ತಿನ ಭಾಷೆಗಳನ್ನು ಹೆಚ್ಚು ವೈಜ್ಞಾನಿಕ ಹಾಗೂ ಹೆಚ್ಚು ಸಮರ್ಪಕವಾಗಿ ವರ್ಗೀಕರಿಸಿಕೊಳ್ಳಲು ಇಂದಿಗೂ ಸಾಧ್ಯವಾಗಿಲ್ಲ. ಭಾಷೆಯಲ್ಲಿ ಕಂಡುಬರುವ ರಚನಾತ್ಮಕ ಅಂಶಗಳು ಭಾಷೆಯಿಂದ ಭಾಷೆಗೆ ಬೇರೆ ಬೇರೆಯಾಗಿರುತ್ತವೆ. ಭಾಷೆಗಳನ್ನು ಅವುಗಳ ರಚನಾತ್ಮಕ ಅಂಶಗಳನ್ನು ಆಧರಿಸಿ ವರ್ಗೀಕರಿಸಿಕೊಳ್ಳುವುದು, ಹೆಚ್ಚು ಸಮರ್ಪಕ ಹಾಗೂ ಸಮಗ್ರವಾದ ವಿಧಾನವೆಂದು ಕೆಲವರ ಅಭಿಮತ. ಇದರಿಂದ ಭಾಷೆಗಳಿಗೆ ಸಂಬಂಧಿಸಿದ ಅನೇಕ ಹೊಸ ಹೊಸ ಅಂಶಗಳು ಹೊರಬರುತ್ತವೆ ಅಲ್ಲದೆ ವ್ಯಾಕರಣ ವಿಚಾರಗಳು ಭಾಷೆಯಿಂದ ಭಾಷೆಗೆ ಬೇರೆಯಾಗಿರುತ್ತವೆ ಎಂಬುದು ತಿಳಿದು ಬರುವುದು. ಉದಾಹರಣೆಗೆ ಚೀನಿ ಭಾಷೆ ಅಯೋಗಾತ್ಮಕ ಭಾಷೆ ಮಾತ್ರವಲ್ಲದೆ ಅದು ಸ್ಥಾನಪ್ರಧಾನವಾದ ಭಾಷೆಯಾಗಿದೆ. ಇಂತಹ ಕೆಲವು ಲಕ್ಷಣಗಳು ಇಂಗ್ಲಿಷ್, ಹಿಂದಿ, ಕನ್ನಡ ಮುಂತಾದ ಭಾಷೆಗಳಲ್ಲಿಯೂ ಕಂಡುಬರುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಬೇರೆ ಬೇರೆ ಲಕ್ಷಣಗಳುಳ್ಳ ರಚನಾತ್ಮಕ ಅಂಶಗಳಿವೆ. ಆದಕಾರಣ ಇದನ್ನು ಯಾವ ವರ್ಗಕ್ಕೆ ಸೇರಿಸಬೇಕು ಎಂಬುದು ಒಂದು ದೊಡ್ಡ ಪ್ರಶ್ನೆ. ಇಂತಹ ಮಿಶ್ರ ಅಂಶಗಳು ಜಗತ್ತಿನ ಅನೇಕ ಭಾಷೆಗಳಲ್ಲಿವೆ. ಇಂತಹ ಸಂದರ್ಭಗಳಲ್ಲಿ ಜಗತ್ತಿನ ಭಾಷೆಗಳನ್ನು ಅವುಗಳ ರಚನಾತ್ಮಕ ಅಂಶಗಳನ್ನು ಆಧರಿಸಿ ವರ್ಗೀಕರಿಸಿಕೊಳ್ಳುವುದು ಎಲ್ಲಾ ವೇಳೆಯಲ್ಲಿಯೂ ಸಾಧ್ಯವಾಗುವುದಿಲ್ಲ. ಈ ಕಾರಣದಿಂದಲೇ ಭಾಷೆಗಳ ವರ್ಗೀಕರಣ ಇನ್ನೂ ಒಂದು ದೊಡ್ಡ ಸಮಸ್ಯೆಯಾಗಿಯೇ ಉಳಿದುಕೊಂಡಿದೆ. ಈ ಎಲ್ಲಾ ಭಾಷಾ ವರ್ಗೀಕರಣ ವಿಧಾನಗಳ ಬಗ್ಗೆಯೂ ವಿದ್ವಾಂಸರಲ್ಲಿ ಸಾಕಷ್ಟು ಮತಭೇದಗಳಿವೆ.

# ವ್ಯಕ್ತಿಭಾಷೆ ಉಪಭಾಷೆ ಭಾಷೆ ಇವುಗಳ ಪರಸ್ಪರ ಸಂಬಂಧ

ಒಂದು ಭಾಷೆಯನ್ನು ಆಡುವ ಒಬ್ಬ ವ್ಯಕ್ತಿ ಒಂದು ಶಬ್ದವನ್ನು ಉಚ್ಚರಿಸುವಂತೆ ಅದೇ ಭಾಷೆಯನ್ನು ಆಡುವ ಇನ್ನೊಬ್ಬ ವ್ಯಕ್ತಿ ಉಚ್ಚರಿಸುವುದಿಲ್ಲ. ಅಷ್ಟೇ ಅಲ್ಲ. ಒಂದು ಧ್ವನಿಯನ್ನು ಒಬ್ಬ ಒಂದು ಸಾರಿ ಉಚ್ಚರಿಸುವ ರೀತಿಯಲ್ಲಿ ಮತ್ತೊಮ್ಮೆ ಉಚ್ಚರಿಸಲಾರ. ಹೀಗಾಗಿ ಅವರ ಪ್ರತಿ ಉಚ್ಚಾರದಲ್ಲಿಯೂ ಸೂಕ್ಷ್ಮವಾದ ವ್ಯತ್ಯಾಸ ಇದ್ದೇ ಇರುತ್ತದೆ. ಹೀಗೆ ಒಂದು ಅವಧಿಯಲ್ಲಿ ಒಬ್ಬ ವ್ಯಕ್ತಿ ಯಾವುದದರೊಂದು ಭಾಷಾರೂಪವನ್ನು ಆಡುವುದು ಅದು ವ್ಯಕ್ತಿಭಾಷೆ (idiolect) ಎನಿಸಿಕೊಳ್ಳುತ್ತದೆ. ಒಬ್ಬ ವ್ಯಕ್ತಿ ಎಲ್ಲಾ ವೇಳೆಯಲ್ಲಿಯೂ ಒಂದೇ ರೀತಿಯಲ್ಲಿ ಮಾತನಾಡುವುದಿಲ್ಲ ಎಂದಮೇಲೆ ಅವನ ಪ್ರತಿ ಮಾತುಸನ್ನಿವೇಶ ಹಾಗೂ ಪರಿಸ್ಥಿತಿಗೆ ತಕ್ಕಂತೆ ಬೇರೆ ಬೇರೆಯಾಗಿರುತ್ತದೆ. ಆಗ ಅಂತಹ ವ್ಯಕ್ತಿ ಭಾಷೆಯು ಒಂದು ಭಾಷೆಯ ಅತ್ಯಂತ ಲಘುತಮರೂಪವಾಗಿ ಕಾಣಿಸಿಕೊಳ್ಳುವುದು.

ವ್ಯಕ್ತಿಯಿಂದ ವ್ಯಕ್ತಿಗೆ ಅವರು ಆಡುವ ಭಾಷೆಯಲ್ಲಿ ಸ್ವಲ್ಪವಾದರೂ ವ್ಯತ್ಯಾಸ ಇದ್ದೇ ಇರುತ್ತದೆ ಎಂದಮೇಲೆ ವ್ಯತ್ಯಾಸ ವ್ಯಕ್ತಿಗಳ ಗುಂಪಿನಿಂದ ಗುಂಪಿಗೆ, ಕೇರಿಯಿಂದ ಕೇರಿಗೆ, ಊರಿನಿಂದ ಊರಿಗೆ, ತಾಲ್ಲೂಕಿನಿಂದ ತಾಲ್ಲೂಕಿಗೆ, ಜಿಲ್ಲೆಯಿಂದ ಜಿಲ್ಲೆಗೆ ಹಬ್ಬುವುದು. ಈ ವ್ಯತ್ಯಾಸ ಹೊಂದಿರುವ ಅಂತಹ ವ್ಯಕ್ತಿಭಾಷೆಗಳ ಒಂದೊಂದು ಗುಂಪನ್ನು ಸಾಮಾನ್ಯವಾಗಿ ಭಾಷಾ ಪ್ರಭೇದಗಳು ಅಥವಾ ಭಾಷಾ ರೂಪಗಳು (language varietes) ಎಂದ ಕರೆಯಬೇಕಾಗುವುದು.

ಒಬ್ಬ ವ್ಯಕ್ತಿ ಆಡುವ ಮಾತನ್ನು ಇನ್ನೊಬ್ಬ ವ್ಯಕ್ತಿ ಅರ್ಥಮಾಡಿಕೊಳ್ಳುವಂತಿದ್ದರೆ ಮಾತ್ರ ಅಂತಹ ವ್ಯಕ್ತಿ ಭಾಷೆಗಳು ಸಾಮಾನ್ಯವಾಗಿ ಒಂದೇ ಭಾಷೆಯ ಬೇರೆ ಬೇರೆ ರೂಪಗಳಾಗಿರುತ್ತವೆ. ವ್ಯಕ್ತಿ ಭಾಷೆಗಳು ಪರಸ್ಪರ ಅರ್ಥವಾಗುವ ಸ್ಥಿತಿಯಲ್ಲಿಲ್ಲದಿದ್ದರೆ ಅಂತಹ ವ್ಯಕ್ತಿಭಾಷೆಗಳು ಬೇರೆ ಬೇರೆ ಭಾಷೆಗಳು ಅಥವಾ ಬೇರೆ ಬೇರೆ ಉಪಭಾಷೆಗಳಾಗಿರುತ್ತವೆ. ಇಂತಹ ಹಲವಾರು ವ್ಯಕ್ತಿಭಾಷೆಗಳ ಸಮುದಾಯವನ್ನೇ ಇಲ್ಲಿ ಉಪಭಾಷೆಗಳು (dialects) ಎಂದು, ಅಂತಹ ಅನೇಕ ಉಪಭಾಷೆಗಳ ಸಮುದಾಯವನ್ನೇ (Language) ಎಂದು; ವ್ಯಕ್ತಿಭಾಷೆ ಮತ್ತು ಉಪಭಾಷೆ ನಡುವಿನ ಭಾಷಾರೂಪಗಳನ್ನು ಉಪಭಾಷಾ ರೂಪಗಳು (Sub-dialects) ಎಂದು ಸಂದರ್ಭ

ಹಾಗೂ ಪರಿಸ್ಥಿತಿಗೆ ತಕ್ಕಂತೆ ವಿವರಿಸಿಕೊಳ್ಳುವುದು ಹೆಚ್ಚು ರೂಢಿಯಲ್ಲಿದೆ.

ಭಾಷೆ ಮೂಲತಃ ಒಂದೇ ಆಗಿದ್ದರೂ ಅದು ಎಲ್ಲಾ ವ್ಯಕ್ತಿಗಳಲ್ಲಿಯೂ ಎಲ್ಲಾ ಪ್ರದೇಶಗಳಲ್ಲಿಯೂ ಒಂದೇ ರೀತಿಯಲ್ಲಿರುವುದಿಲ್ಲ. ಒಬ್ಬ ವ್ಯಕ್ತಿ ಮನೆಯವರೊಡನೆ ಒಂದು ರೀತಿಯಲ್ಲಿ, ಮಿತ್ರರೊಡನೆ ಇನ್ನೊಂದು ರೀತಿಯಲ್ಲಿ, ತರಗತಿಯಲ್ಲಿ ಮತ್ತೊಂದು ರೀತಿಯಲ್ಲಿ, ರಾಜಕೀಯ ವೇದಿಕೆಗಳ ಮೇಲೆ ಮಗದೊಂದು ರೀತಿಯಲ್ಲಿ ಮಾತನಾಡುವುದು ಸರ್ವೇಸಾಮಾನ್ಯ. ಈ ಕಾರಣದಿಂದ ವ್ಯಕ್ತಿ ಭಾಷೆಯಲ್ಲಿ ಬೇರೆ ಬೇರೆ ಒಳಪ್ರಭೇದಗಳು ಕಾಣಿಸಿಕೊಳ್ಳಲು ಸಾಧ್ಯವಾಗಿದೆ. ವ್ಯಕ್ತಿಯಿಂದ ವ್ಯಕ್ತಿಗೆ ಪ್ರದೇಶದಿಂದ ಪ್ರದೇಶಕ್ಕೆ ಬೇರೆ ಬೇರೆಯಾಗಿ ಕಾಣಿಸಿಕೊಳ್ಳುವ ಈ ಭಾಷಾ ಪ್ರಭೇದಗಳಲ್ಲಿ ಪರಸ್ಪರ ಅರಿವಿನ ಪ್ರಮಾಣ ಕೆಲವು ವೇಳೆ ಸನ್ನಿವೇಶ ಹಾಗೂ ಪರಿಸ್ಥಿತಿಗಳಿಗೆ ತಕ್ಕಂತೆ ಹೆಚ್ಚು ಕಡಿಮೆಯಾಗುತ್ತಾ ಹೋಗಬಹುದು. ವ್ಯಕ್ತಿ ಭಾಷೆಗಳ ಇಂತಹ ಒಳರೂಪಗಳ ವಿಕಾಸಕ್ಕೆ ವ್ಯಕ್ತಿ, ವ್ಯಕ್ತಿಯು ವಾಸಿಸುವ ಸ್ಥಳ, ಜನಜೀವನ, ಆಚಾರ, ಸಮಾಜ, ಸಂಸ್ಕೃತಿ, ಜಾತಿ, ಧರ್ಮ, ವೃತ್ತಿ ಮುಂತಾದವು ಮುಖ್ಯವಾಗಿ ಕಾರಣವಾಗುತ್ತವೆ.

ಭಾಷೆ ಮತ್ತು ಉಪಭಾಷೆಗಳಿಗೆ ಇರುವ ವ್ಯತ್ಯಾಸ ಅತಿ ಸೂಕ್ಷ್ಮವಾದದ್ದು. ಒಂದು ಭಾಷೆಗೆ ಅನೇಕ ಉಪಭಾಷೆಗಳಿದ್ದಾಗ ಅದರ ಒಂದು ಪ್ರಭೇದವನ್ನು ಮಾತ್ರ ಉಪಭಾಷೆ ಎನ್ನುವುದು ರೂಢಿ. ಇಂತಹ ಹಲವಾರು ಉಪಭಾಷೆಗಳ ಸಮುದಾಯವನ್ನು ಆಗ ಭಾಷೆ ಎಂದು ಕರೆಯಬೇಕಾಗುತ್ತದೆ. ಈ ದಿಕ್ಕಿನಲ್ಲಿ ಬೇರೆ ಬೇರೆ ವಿದ್ವಾಂಸರು ಭಾಷೆ ಮತ್ತು ಉಪಭಾಷೆಗಳಿಗಿರುವ ವ್ಯತ್ಯಾಸವನ್ನು ನಾನಾ ರೀತಿಯಲ್ಲಿ ವಿವರಿಸಿಕೊಂಡಿದ್ದಾರೆ.

Dialect may be defined as the variety of a language spoken by the members of a single homogeneous speech community.

ಒಂದೇ ಸಮುದಾಯಕ್ಕೆ ಸೇರಿದ ಜನರು ಆಡುವ ನಾನಾ ವೈವಿಧ್ಯಗಳಿಂದ ಕೂಡಿರುವ ಒಂದು ಭಾಷಾ ಪ್ರಭೇದವನ್ನೇ ಉಪಭಾಷೆ ಎಂದು ಕರೆಯಲಾಗುತ್ತದೆ.

Dialect is an individual variety of a lanugage.

ಉಪಭಾಷೆ ಎಂಬುದು ಒಂದು ಭಾಷೆಯ ಭಾಷಾ ಪ್ರಭೇದ ಅಷ್ಟೆ.

Dialect is constituted by the speech of all those persons in whose utterances, variations are not sensibility perceived or attended to. (Gune)

a form of speech actually in natural use in any community as a mode of communication varying somewhat in the mouths of individuals, but only with in comparatively narrow limits at any one time. (Webster)

ಪರಸ್ಪರ ಅರಿವಿಗೆ ಸಾಮಾನ್ಯ ಭಾಷಿಕಾಂಶಗಳನ್ನು ತಕ್ಕಮಟ್ಟಿಗೆ ಹೊಂದಿರುವ ಅನೇಕ ಅಂಶಗಳಲ್ಲಿ ವ್ಯತ್ಯಾಸ ಪಡೆದ ಹಲವು ಉಪಭಾಷೆಗಳ ಒಂದು ಸಮುದಾಯವನ್ನೇ ಭಾಷೆ ಎಂದು ಕರೆಯಲಾಗುತ್ತದೆ.

Every language is a collection of many dialects all more or less mutually intelligible and sharing a common core of structure but differing from one another in many ways.

ಒಂದು ಭಾಷೆಯ ಬೇರೆ ಬೇರೆ ಪ್ರಭೇದಗಳನ್ನು ಬೇರೆ ಬೇರೆ ಉಪಭಾಷೆಗಳು ಎಂದು ಕರೆಯುವುದು ಸರ್ವೇಸಾಮಾನ್ಯ.

ಸಾಮಾನ್ಯ ಅರ್ಥದಲ್ಲಿ ಉಪಭಾಷೆಗಳ ಒಂದು ಸಮೂಹವನ್ನು ಭಾಷೆ ಎನ್ನಬೇಕಾಗುತ್ತದೆಯಾದರೂ ಉಪಭಾಷೆಗಳನ್ನೆಲ್ಲಾ ಕೆಲವು ವೇಳೆ ಭಾಷೆಗಳು ಎನ್ನುವವರೂ ಇದ್ದಾರೆ.

ವ್ಯಕ್ತಿ ಭಾಷೆಗಳು ಭಾಷೆ ಮತ್ತು ಉಪಭಾಷೆಗಳಿಗಿರುವ ಪರಸ್ಪರ ಸಂಬಂಧ ಹಾಗೂ ವ್ಯತ್ಯಾಸವನ್ನು ನಿರ್ಣಯಿಸಲು ಸಹಾಯಮಾಡುತ್ತವೆ. ಭಾಷೆ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಳ್ಳುವಂತೆ ಬೇರೆ ಬೇರೆ ಜಾತಿ, ವರ್ಗ ಮುಂತಾದವುಗಳಿಗೆ ಅನುಗುಣವಾಗಿ ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಳ್ಳುವುದು ಸರ್ವೇ ಸಾಮಾನ್ಯ. ಈ ಬೇರೆ ಬೇರೆ ಭಾಷಾ ರೂಪಗಳನ್ನು ಸಂದರ್ಭ ಹಾಗೂ ಸನ್ನಿವೇಶಕ್ಕೆ ತಕ್ಕಂತೆ ಪ್ರಾದೇಶಿಕ ಉಪಭಾಷೆಗಳು ಮತ್ತು ಸಾಮಾಜಿಕ ಉಪಭಾಷೆ ಎಂದು ವಿವರಿಸಿ ತೋರಿಸಬಹುದು.

ಉಪಭಾಷೆ ಎಂಬ ಕಲ್ಪನೆ ಇತ್ತೀಚಿನದು. ೧೯ನೇ ಶತಮಾನದಲ್ಲಿ ವಿವರಣಾತ್ಮಕ ಭಾಷಾವಿಜ್ಞಾನ ಆರಂಭಗೊಂಡು ಅದು ನಾನಾ ಮುಖದಲ್ಲಿ ಬೆಳೆದುಬಂದಂತೆಲ್ಲಾ ಉಪಭಾಷೆ ಎಂಬ ಭಾಷಾ ಪ್ರಭೇದದ ಅಸ್ತಿತ್ವ ಸಾಧ್ಯವಾಯಿತು.

ಉಪಭಾಷೆಗಳಲ್ಲಿ ಕೆಲವು ವ್ಯಕ್ತಿ ಭಾಷೆಗಳು ಅವುಗಳಿಂದುಂಟಾದ ಕೆಲವು ಉಪ ಭಾಷಾರೂಪಗಳು ಇದ್ದೇ ಇರುತ್ತವೆ. ಒಂದು ಭಾಷಾ ಪ್ರದೇಶಕ್ಕಿಂತ ಉಪಭಾಷೆಯ ಪ್ರದೇಶ ಸಾಮಾನ್ಯವಾಗಿ ಚಿಕ್ಕದಾಗಿದ್ದರೆ ಒಂದು ಭಾಷಾ ಪ್ರದೇಶ ಒಂದು ಉಪಭಾಷಾ ಪ್ರದೇಶಕ್ಕಿಂತ ದೊಡ್ಡದಾಗಿರುತ್ತದೆ. ಎರಡು ಉಪಭಾಷೆಗಳಲ್ಲಿ ಸಾಕಷ್ಟು ವ್ಯತ್ಯಾಸವಿದೆ ಎನ್ನುವುದಾದರೆ ಅಂತಹ ವ್ಯತ್ಯಾಸವು ಅವುಗಳ ಉಚ್ಚಾರ, ಧ್ವನಿ, ಪದ ಸಮೂಹ, ವ್ಯಾಕರಣ ಮುಂತಾದುವುಗಳಲ್ಲಿ ಕಾಣಿಸಿಕೊಳ್ಳುವುದು. ಈ ವ್ಯತ್ಯಾಸಗಳನ್ನು ಆಧರಿಸಿ ಉಪಭಾಷೆಗಳನ್ನು ಐತಿಹಾಸಿಕವಾಗಿ ಭೌಗೋಳಿಕವಾಗಿ, ಸಾಮಾಜಿಕವಾಗಿ ಬೇರೆ ಬೇರೆ ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದು.

ಒಂದು ಭಾಷಾ ಪ್ರದೇಶದಲ್ಲಿ ಒಂದೇ ಭಾಷೆಗೆ ಸಂಬಂಧಿಸಿದ ಉಪಭಾಷೆಗಳು

ಬಳಕೆಯಲ್ಲಿರಬೇಕೆಂಬ ನಿಯಮವೇನೂ ಇಲ್ಲ. ಒಂದು ಪ್ರದೇಶದಲ್ಲಿ ಬೇರೆ ಬೇರೆ ಭಾಷೆಗಳು ಬೇರೆ ಬೇರೆ ಉಪಭಾಷೆಗಳು ಬಳಕೆಯಲ್ಲಿರಬಹುದು. ಎರಡು ಉಪಭಾಷೆಗಳ ಧ್ವನಿವ್ಯವಸ್ಥೆ ಅವುಗಳ ಉಚ್ಚಾರ, ವ್ಯಾಕರಣ, ಶಬ್ದಕೋಶ ಮುಂತಾದವುಗಳಲ್ಲಿ ಹೆಚ್ಚು ಹೋಲಿಕೆ ಕಂಡುಬಂದರೆ ಸಾಕು ಅವನ್ನು ಒಂದೇ ಭಾಷೆಯ ಉಪಭಾಷೆಗಳು ಎನ್ನಬೇಕಾಗುತ್ತದೆ. ಇಲ್ಲದಿದ್ದರೆ ಅವನ್ನು ಬೇರೆ ಬೇರೆ ಭಾಷೆಗಳು ಅಥವಾ ಉಪಭಾಷೆಗಳು ಎನ್ನಬೇಕಾಗುತ್ತದೆ. ಇಲ್ಲದಿದ್ದರೆ ಅವನ್ನು ಬೇರೆ ಬೇರೆ ಭಾಷೆಗಳು ಅಥವಾ ಉಪಭಾಷೆಗಳು ಎನ್ನಬೇಕಾಗುತ್ತದೆ. ಇಂದಿನ ಉಪಭಾಷೆಗಳು ಕಾಲಕ್ರಮೇಣ ಬೇರೆ ಬೇರೆ ಸ್ವತಂತ್ರ ಭಾಷೆಗಳಾಗಿ ಬೆಳೆದು ಬರಬಹುದಾದ ಅವಕಾಶಗಳು ಇಲ್ಲದೆ ಇಲ್ಲ. ಎಲ್ಲಾ ಉಪಭಾಷೆಗಳು ಹಾಗೆ ಬೇರೆ ಬೇರೆ ಭಾಷೆಗಳಾಗಿ ಬೆಳೆದು ಬರುವುದು ಅಪರೂಪ. ಅವುಗಳಲ್ಲಿ ಕೆಲವು ಉಪಭಾಷೆಗಳು ಮಾತ್ರ ಬೇರೆ ಬೇರೆ ಕಾರಣಗಳಿಂದ ಮುಂದೆ ಸ್ವತಂತ್ರವಾಗಿ ಭಾಷೆಗಳಾಗಿ ಬೆಳೆದು ಬಂದರೆ ಆಶ್ಚರ್ಯವೇನಿಲ್ಲ.

ಉಪಭಾಷೆ ಎನ್ನುವುದು ಪ್ರಾದೇಶಿಕ ಹಾಗೂ ಸಾಮಾಜಿಕ ವೈಶಿಷ್ಟ್ಯವುಳ್ಳ ಭಾಷೆ ಅಷ್ಟೆ. ಇದು ಭಾಷೆಯಲ್ಲಿ ಐತಿಹಾಸಿಕ ಇಲ್ಲವೇ ಭೌಗೋಲಿಕ ಹಾಗೂ ಸಾಮಾಜಿಕವಾಗಿ ಬೇರೆ ಬೇರೆ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಮತೀಯ ಪರಿಸರ, ವೃತ್ತಿ ಪರಿಸರ, ಜಾತಿ ಪರಿಸರ, ಸಮಾಜ ಮತ್ತು ಸಂಸ್ಕೃತಿಗಳ ಪರಿಸರಗಳಿಂದ ಹಾಗೂ ಅನ್ಯಭಾಷಾ ಸಂಪರ್ಕದಿಂದ ಪ್ರದೇಶದಿಂದ ಪ್ರದೇಶಕ್ಕೆ, ಕಾಲದಿಂದ ಕಾಲಕ್ಕೆ ಕಾಣಿಸಿಕೊಳ್ಳುವ ಈ ಪ್ರಭೇದಗಳು ಅವುಗಳ ಮೂಲಭಾಷೆಯಿಂದ ಸಂಪರ್ಕ ಕಡಿಮೆಯಾಗುವಿಕೆಯಿಂದ ಉಪಭಾಷೆಗಳಾಗಬಲ್ಲವು.

ಒಂದು ಭಾಷೆಯ ಉಪಭಾಷೆಗಳನ್ನು ಮುಖ್ಯವಾಗಿ ಎರಡು ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದು. ಅವೇ (೧) ಪ್ರಾಚೀನ ಉಪಭಾಷೆಗಳು (೨) ಆಧುನಿಕ ಉಪಭಾಷೆಗಳು. ಯಾವುದೋ ಒಂದು ನಿರ್ದಿಷ್ಟ ಕಾಲದಲ್ಲಿ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಪ್ರಾಚೀನವಾಗಿ ಕಾಣಿಸಿಕೊಳ್ಳುವ ಉಪಭಾಷೆಗಳೇ ಪ್ರಾಚೀನ ಉಪಭಾಷೆಗಳು (Ancient dialects) ಇವು ಬೇರೆ ಬೇರೆ ಪರಿಸರ ಹಾಗೂ ಪರಿಸ್ಥಿತಿಗಳ ಪ್ರಭಾವದಿಂದ ಕಾಲಕ್ರಮೇಣ ಬೇರೆ ಬೇರೆ ಸ್ವತಂತ್ರ ಭಾಷೆಗಳಾಗಿ ಬೆಳೆದುಬರಬಲ್ಲವು. ಮತ್ತೆ ಕೆಲವು ಬಹಳಕಾಲ ಹಾಗೆಯೇ ಉಳಿಯಬಹುದು ಇಲ್ಲವೇ ಅವು ಇನ್ನೊಂದು ಭಾಷೆಯಲ್ಲಿ ಐಕ್ಯವಾಗಿ ಹೋಗಬಹುದು ಅಥವಾ ಕಾಲಕ್ರಮೇಣ ಕಣ್ಮರೆಯಾಗಿ ಹೋಗಬಹುದಾದ ಸಾಧ್ಯತೆಗಳಿವೆ. ಪ್ರಾಚೀನ ಉಪಭಾಷೆಗಳಿಗೆ ಕನ್ನಡದಲ್ಲಿ ಬಡಗ, ಹವ್ಯಕ, ನಾಡವರ್ ಕನ್ನಡ, ಕೊಡಗು, ಕುರುಬ, ಸೋಲಿಗ ಮುಂತಾದ ಭಾಷೆಗಳನ್ನು ಹೆಸರಿಸಿಕೊಳ್ಳಬಹುದು. ಇವು ಹಳಗನ್ನಡ ಅಥವಾ ನಡುಗನ್ನಡದ ಉಪಭಾಷೆಗಳಾಗಿದ್ದುವು ಎಂಬುದಕ್ಕೆ ಈ ಉಪಭಾಷೆಗಳಲ್ಲಿ ಕಂಡುಬರುವ ಹಳಗನ್ನಡ ಮತ್ತು ನಡುಗನ್ನಡದ ಅನೇಕ

ಭಾಷಿಕಾಂಶಗಳು ಸಾಕ್ಷಿಯಾಗಿವೆ. ಕೆಲವರು ಇವನ್ನೇ ಐತಿಹಾಸಿಕ ಉಪಭಾಷೆಗಳು. (Historical or Temporal dialects) ಎಂದು ಕರೆಯುವರು. ಆಧುನಿಕ ಉಪಭಾಷೆಗಳು (Modern dialects) ಇಂದು ಬಳಕೆಯಲ್ಲಿರುವ ಉಪ ಭಾಷೆಗಳು. ಕನ್ನಡದಲ್ಲಿ ಮೈಸೂರು ಕನ್ನಡ, ಮಂಗಳೂರು ಕನ್ನಡ, ಮುಂತಾದವುಗಳನ್ನು ಆಧುನಿಕ ಉಪಭಾಷೆಗಳು ಎಂದು ಪರಿಗಣಿಸಿಕೊಳ್ಳಬಹುದಾಗಿದೆ. ಇವುಗಳಲ್ಲಿ ಕೆಲವು ಮುಂದೆ ಬೇರೆ ಬೇರೆ ಸ್ವತಂತ್ರ ಭಾಷೆಗಳಾಗಿ ಬೆಳೆದುಬಂದರೆ ಆಶ್ಚರ್ಯವೇನಿಲ್ಲ.

ಒಂದು ಭಾಷೆಯನ್ನಾಡುವ ಜನರು ಬೇರೆ ಬೇರೆ ಪ್ರದೇಶಗಳಲ್ಲಿ ಭೌಗೋಳಿಕವಾಗಿ ವಾಸಿಸುತ್ತಿದ್ದು ಅವರು ಆಡುವ ಭಾಷೆಯಲ್ಲಿ ಬೇರೆ ಬೇರೆ ಭಾಷಾರೂಪಗಳು ಕಾಣಿಸಿಕೊಳ್ಳಬಹುದು. ಅಂತಹ ಪ್ರಭೇದಗಳೇ ಪ್ರಾದೇಶಿಕ ಉಪಭಾಷೆಗಳು (Regional dialects or dialects) ಎನಿಸಿಕೊಳ್ಳುತ್ತವೆ. ಕರ್ನಾಟಕದಲ್ಲಿ ಜಿಲ್ಲೆಗೊಂದರಂತೆ ಕಂಡುಬರುವ ಕನ್ನಡ ರೂಪಗಳನ್ನು ಪ್ರಾದೇಶಿಕ ಉಪಭಾಷೆಗಳು ಎಂದು ಹೆಸರಿಸಿಕೊಳ್ಳಬಹುದಾಗಿದೆ. ಅವುಗಳಲ್ಲಿ ಮೈಸೂರು ಕನ್ನಡ, ಮಂಡ್ಯ ಕನ್ನಡ, ಹಾಸನ ಕನ್ನಡ, ಕೋಲಾರ ಕನ್ನಡ, ರಾಯಚೂರು ಕನ್ನಡ, ಉತ್ತರ ಕನ್ನಡದ ಕನ್ನಡ, ದಕ್ಷಿಣ ಕನ್ನಡದ ಕನ್ನಡ, ಬಳ್ಳಾರಿ ಕನ್ನಡ, ಧಾರವಾಡ ಕನ್ನಡ, ಬೆಳಗಾವಿ ಕನ್ನಡ, ಬೀದರ್ ಕನ್ನಡ ಮುಂತಾದವು ಮುಖ್ಯವಾಗಿವೆ.

ಒಂದು ಭಾಷಾ ಪ್ರದೇಶದಲ್ಲಿ ಸಾಮಾಜಿಕವಾಗಿ ಬೇರೆ ಬೇರೆ ಜಾತಿ, ಜನಾಂಗ, ಧರ್ಮ, ಸಮಾಜ, ಸಂಸ್ಕೃತಿ, ವೃತ್ತಿ ಮುಂತಾದವುಗಳಿಗೆ ಸಂಬಂಧಿಸಿದ ಜನರು ಆಡುವ ಭಾಷೆಯಲ್ಲಿ ಬೇರೆ ಬೇರೆ ಭಾಷಾರೂಪಗಳು ಕಾಣಿಸಿಕೊಳ್ಳಬಹುದು. ಅಂತಹ ಪ್ರಭೇದಗಳು ಸಾಮಾನ್ಯವಾಗಿ ಸಾಮಾಜಿಕ ಉಪಭಾಷೆಗಳು (Social dialects) ಎನಿಸಿಕೊಳ್ಳುತ್ತವೆ. ಅವುಗಳಲ್ಲಿ ಹರಿಜನರ ಕನ್ನಡ, ಕುರುಬರ ಕನ್ನಡ, ಹವ್ಯಕರ ಕನ್ನಡ, ಸಂಕೇತಿ ಕನ್ನಡ, ಗೌಡ ಕನ್ನಡ, ಹಾಲಕ್ಕಿ ಕನ್ನಡ, ಬ್ರಾಹ್ಮಣರ ಕನ್ನಡ, ಬ್ರಾಹ್ಮಣೇತರರ ಕನ್ನಡ, ಒಕ್ಕಲಿಗರ ಕನ್ನಡ, ಚಮ್ಮಾರರ ಕನ್ನಡ, ಬೆಸ್ತರ ಕನ್ನಡ ಮುಂತಾದುವು ಮುಖ್ಯವಾಗಿವೆ. ಒಂದು ಸಮಾಜದ ಜನರು ಆಡುವ ಭಾಷಾ ರೂಪಗಳು ಸಾಮಾಜಿಕ ಉಪಭಾಷೆಗಳು ಎನಿಸಿಕೊಳ್ಳುವಂತೆ, ಜನರ ಸಂಸ್ಕೃತಿಗೆ ಸಂಬಂಧಿಸಿದ ಭಾಷಾ ರೂಪಗಳು ಅವು ಸಾಂಸ್ಕೃತಿಕ ಉಪಭಾಷೆಗಳು (cultural dialects) ಎನಿಸಿಕೊಳ್ಳುತ್ತವೆ. ಅವು ಅವರ ಜಾತಿಗೆ ಸಂಬಂಧಿಸಿದ ರೂಪಗಳಾಗಿದ್ದರೆ ಅವು ಜಾತೀಯ ಉಪಭಾಷೆಗಳು (Caste dialects) ಎನಿಸಿಕೊಳ್ಳಬಲ್ಲವು. ಹಾಗೆಯೇ ಅವು ಅವರ ವರ್ಗಗಳಿಗೆ ಸಂಬಂಧಿಸಿದ ಭಾಷಾರೂಪಗಳಾಗಿದ್ದರೆ ಅವನ್ನು ವರ್ಗೀಯ ಉಪಭಾಷೆಗಳು (Class dialects or Sociolects) ಎಂದು, ಅವು ಅವರ ವೃತ್ತಿಗೆ ಸಂಬಂಧಿಸಿದ ಭಾಷಾರೂಪಗಳಾಗಿದ್ದರೆ ಅವನ್ನು ವೃತ್ತೀಯ ಉಪಭಾಷೆಗಳು (Professional

dialects) ಎಂದು ಇವನ್ನು ಸಂದರ್ಭ ಹಾಗೂ ಸನ್ನಿವೇಶಕ್ಕೆ ತಕ್ಕಂತೆ ವಿವರಿಸಿ ತೋರಿಸಬಹುದು. ಈ ಬೇರೆ ಬೇರೆ ಭಾಷಾರೂಪಗಳಲ್ಲಿ ಕಂಡುಬರುವ ವ್ಯತ್ಯಾಸ ಬಹಳ ಸೂಕ್ಷ್ಮವಾದದ್ದು. ಇವನ್ನು ಮೇಲಿನಂತೆ ಸಂದರ್ಭ ಹಾಗೂ ಸನ್ನಿವೇಶಕ್ಕೆ ತಕ್ಕಂತೆ ಬೇರೆ ಬೇರೆ ರೀತಿಯಲ್ಲಿ ಹೆಸರಿಸಿಕೊಳ್ಳಬಹುದಾದರೂ ಇವುಗಳ ನಡುವಿನ ಅಂತರವನ್ನು ಅಷ್ಟೊಂದು ಸುಲಭವಾಗಿ ವಿವರಿಸಿ ತೋರಿಸಲು ಸಾಧ್ಯವಾಗುವುದಿಲ್ಲ.

ಒಂದು ಭಾಷಾ ಪ್ರಭೇದವನ್ನು ಆಡುವ ವ್ಯಕ್ತಿಗೆ ಇನ್ನೊಬ್ಬ ವ್ಯಕ್ತಿ ಆಡುವ ಮಾತು ನೂರಕ್ಕೆ ನೂರರಷ್ಟು ಅರ್ಥವಾಗುವಂತಿದ್ದರೆ ಅವರಿಬ್ಬರೂ ಆಡುತ್ತಿರುವುದು ಒಂದೇ ಭಾಷೆಯ ಒಂದೇ ಉಪಭಾಷೆ ಎಂದು, ಆ ವ್ಯಕ್ತಿಗಳು ಆಡುವ ಮಾತು ಸಂಪೂರ್ಣವಾಗಿ ಅರ್ಥವಾಗುವ ಸ್ಥಿತಿಯಲ್ಲಿಯೂ ಇರದೆ, ಬಹುಮಟ್ಟಿಗೆ ತಿಳಿಯಬಹುದಾದ ಮಧ್ಯಸ್ಥಿತಿಯಲ್ಲಿರುವ ವ್ಯಕ್ತಿಭಾಷೆಗಳು ಸಾಮಾನ್ಯವಾಗಿ ಒಂದೇ ಭಾಷೆಯ ಬೇರೆ ಬೇರೆ ಉಪಭಾಷೆಗಳಾಗಿರುತ್ತವೆ ಎಂದು ಸುಲಭವಾಗಿ ಊಹಿಸಬಹುದಾಗಿದೆ.

ಉಪಭಾಷಾರೂಪಗಳಲ್ಲಿ ಸ್ಥಳೀಯವಾಗಿಯೂ ಹಾಗೂ ಸಾಮಾಜಿಕವಾಗಿಯೂ ಬೇರೆ ಬೇರೆ ರೂಪಗಳಿರುತ್ತವೆ. ಇವು ಒಂದು ರೀತಿಯಲ್ಲಿ ಕೆಲವೇ ಕೆಲವು ವ್ಯಕ್ತಿ ಭಾಷೆಗಳ ಸಮುದಾಯವಾಗಿರುತ್ತವೆ. ಇಂತಹ ಉಪಭಾಷಾರೂಪಗಳನ್ನು ಅವನ್ನು ಆಡುವ ಜನ ಮತ್ತು ಸ್ಥಳವನ್ನು ಆಧರಿಸಿ ವಿವರಿಸಿಕೊಳ್ಳಬಹುದು. ಇಂತಹ ಉಪಭಾಷಾರೂಪಗಳನ್ನೇ (Sub-dialects) ಎನ್ನುವರು. ಇವು ಸಾಮಾನ್ಯವಾಗಿ ಉಪಭಾಷೆಗಳಿಗಿಂತ ಚಿಕ್ಕ ರೂಪಗಳಾಗಿರುತ್ತವೆ. ಒಂದು ಉಪಭಾಷೆಯಲ್ಲಿ ಇಂತಹ ಉಪಭಾಷಾ ರೂಪಗಳು ಇಷ್ಟೇ ಇರಬೇಕೆಂಬ ನಿಯಮವೇನೂ ಇಲ್ಲ. ಇವು ಆಯಾ ಉಪಭಾಷೆಯ ಪ್ರದೇಶಕ್ಕೆ ತಕ್ಕಂತೆ ಕಂಡುಬರುತ್ತವೆ. ಉದಾಹರಣೆಗೆ ಮೈಸೂರು ಕನ್ನಡವನ್ನು ತೆಗೆದುಕೊಳ್ಳಿ. ಇದರಲ್ಲಿ ಕೊಳ್ಳೆಗಾಲದ ಕನ್ನಡ, ನಂಜನಗೂಡು ಕನ್ನಡ, ಯಳಂದೂರು ಕನ್ನಡ, ಗುಂಡ್ಲುಪೇಟೆ ಕನ್ನಡ, ಹುಣಸೂರು ಕನ್ನಡ, ಪಿರಿಯಾಪಟ್ಟಣದ ಕನ್ನಡ, ಟಿ. ನರಸೀಪುರದ ಕನ್ನಡ ಮುಂತಾದ ಉಪಭಾಷಾರೂಪಗಳಿರುವುದು ಗೋಚರಿಸುತ್ತವೆ. ಇವೆಲ್ಲವೂ ಆ ಮೈಸೂರು ಕನ್ನಡದ ಬೇರೆ ಬೇರೆ ಒಳಪ್ರಭೇದಗಳು. ಇವು ಪ್ರಾದೇಶಿಕ ಹಾಗೂ ಸಾಮಾಜಿಕವಾಗಿ ಬೇರೆ ಬೇರೆಯಾಗಿರುತ್ತವೆ. ಕನ್ನಡದ ಉಪಭಾಷೆಗಳನ್ನು ಈ ದೃಷ್ಟಿಯಲ್ಲಿ ಪರಿಶೀಲಿಸಿದಾಗ ಅವು ಊರಿಗೊಂದರಂತೆ ಜಾತಿಗೊಂದರಂತೆ, ಸ್ಥಳಕ್ಕೊಂದರಂತೆ ಬೇರೆ ಬೇರೆ ಉಪಭಾಷಾ ರೂಪಗಳಿರುವುದು ಕಂಡುಬರುತ್ತವೆ. ಮೇಲೆ ಹೇಳಿದಂತೆ ಉಪಭಾಷೆ ಮತ್ತು ಉಪಭಾಷಾ ರೂಪ ಇವುಗಳಿಗೆ ಇರುವ ವ್ಯತ್ಯಾಸ ಸೂಕ್ಷ್ಮವಾದದ್ದು. ಉಪಭಾಷೆಗಳು ಮತ್ತು ಉಪಭಾಷಾರೂಪಗಳಿಗೂ ಇರುವ ಅಂತರ ಕೆಲವು ವೇಳೆ ಕಡಿಮೆಯಾಗುತ್ತಾ ಬಂದು ಅಂತಹ ಸ್ಥಳೀಯ ರೂಪಗಳೇ ಬೇರೆ ಬೇರೆ ಉಪಭಾಷೆಗಳಾಗಿ ಕಾಣಿಸಿಕೊಳ್ಳಬಹುದಾದ

ಅವಕಾಶಗಳು ಕೂಡ ಇವೆ. ಮಂಡ್ಯ ಕನ್ನಡವನ್ನು ಮಳವಳ್ಳಿ ಕನ್ನಡದೊಡನೆ ಹೋಲಿಸಿ ಪರಿಶೀಲಿಸಿದಾಗ ಮಳವಳ್ಳಿ ಕನ್ನಡ, ಮಂಡ್ಯ ಕನ್ನಡಕ್ಕಿಂತ ಬೇರೆಯಾಗಿ ಕಂಡುಬರುವುದು, ಮೈಸೂರು ಕನ್ನಡವನ್ನು ಮಂಡ್ಯ ಕನ್ನಡದೊಡನೆ ಹೋಲಿಸಿದಾಗ ಅಂತಹ ಹೆಚ್ಚಿನ ವ್ಯತ್ಯಾಸವೇನೂ ಕಾಣಿಸಿಕೊಳ್ಳುವುದಿಲ್ಲ. ಈ ಎರಡು ಉಪಭಾಷಾರೂಪಗಳನ್ನು ಇಲ್ಲಿ ಒಂದೇ ಉಪಭಾಷೆ ಎಂದು ಹೇಳಬಹುದಾದರೂ ಮಳವಳ್ಳಿ ಕನ್ನಡವನ್ನು ಮೈಸೂರು ಕನ್ನಡ ಎಂದು ಹೇಳಲು ಬರುವುದಿಲ್ಲ. ಕಾರಣವೇನೆಂದರೆ ಅದರಲ್ಲಿ ವ್ಯತ್ಯಾಸ ಹೆಚ್ಚು. ಉಪಭಾಷಾ ರೂಪಗಳಲ್ಲಿ ಅಶುದ್ಧವಾದ ಉಚ್ಚಾರಣೆ, ಗ್ರಾಮ್ಯ ಪ್ರಯೋಗಗಳು, ನಿಷಿದ್ಧ ಹಾಗೂ ಅಶ್ಲೀಲ ಶಬ್ದಗಳ ಬಳಕೆ, ವಿಶಿಷ್ಟಪದಪ್ರಯೋಗಗಳು ಹೆಚ್ಚಾಗಿರುವುದರಿಂದ ಅವು ಬೇರೆ ಬೇರೆ ಉಪಭಾಷಾ ರೂಪಗಳಾಗಿ ಕಾಣಿಸಿಕೊಳ್ಳಲು ಕಾರಣವಾಗುತ್ತವೆ. ಸಮಾಜದಲ್ಲಿ ತುಂಬ ಹಿಂದುಳಿದ ಬೇರೆ ಬೇರೆ ಜಾತಿ ಜನರು ಬೇರೆ ಬೇರೆ ಸ್ಥಳಗಳಲ್ಲಿ ವಾಸಿಸುವುದರಿಂದ ಅವರ ಆಡುಭಾಷೆಯಲ್ಲಿಯೂ ಇಂತಹ ಬೇರೆ ಬೇರೆ ಉಪಭಾಷಾರೂಪಗಳು ಜಾತಿಗೊಂದರಂತೆ, ವರ್ಗಕ್ಕೊಂದರಂತೆ, ವೃತ್ತಿಗೊಂದರಂತೆ ಕಾಣಿಸಿಕೊಂಡರೆ ಆಶ್ಚರ್ಯವೇನಿಲ್ಲ.

ಯಾವುದಾದರೊಂದು ಶಬ್ದ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ಬಳಕೆಯಲ್ಲಿರಬಹುದು. ಉದಾಹರಣೆಗೆ ಕರ್ನಾಟಕದಾದ್ಯಂತ ನೆಲಗಡಲೆಕಾಯಿ ಎಂಬ ಕನ್ನಡದ ಶಬ್ದಕ್ಕೆ ಶೇಂಗಾ, ಸೇಂಗ, ಕಡ್ಲೆ, ನೆಲಗಡಲೆ, ನೆಲಗಡ್ಲೆಕಾಯಿ, ಕಡ್ಲೆಕಾಯಿ ಮುಂತಾದ ರೂಪ ಪ್ರಭೇದಗಳಿವೆ. ಇದೇ ರೀತಿ ಕರಟ ಎಂಬ ಶಬ್ದಕ್ಕೆ ಕಂಟಿ, ಚಿಪ್ಪು, ಸಿಪ್ಪು ಮುಂತಾದ ರೂಪ ಪ್ರಭೇದಗಳು, ಪಪ್ಪಾಯಿ ಎಂಬ ಶಬ್ದಕ್ಕೆ ಪರಂಗಿ, ಪಪ್ಪಾಯಿ, ಹತ್ತೊಡ್ಲು, ಅಕ್ಕತಂಗೇರಕಾಯಿ, ಗಂಡಹೆಂಡಿರ್‌ಕಾಯಿ, ಅಳ್ಸಪರಂಗಿ ಮುಂತಾದ ರೂಪ ಪ್ರಭೇದಗಳು ಇರುವುದು ಗೋಚರಿಸುತ್ತವೆ. ಈ ರೂಪಪ್ರಭೇದಗಳು ಸ್ಥಳದಿಂದ ಸ್ಥಳಕ್ಕೆ ಒಂದೇ ರೀತಿಯಲ್ಲಿ ಕಂಡುಬರುವುದಿಲ್ಲ. ಕೆಲವು ಶಬ್ದಗಳಿಗೆ ಇಂತಹ ಯಾವ ಬಗೆಯ ರೂಪ ಪ್ರಭೇದಗಳೂ ಇರದೆ ಅವುಗಳಿಗೆ ಶಬ್ದವೇ ಬಳಕೆಯಲ್ಲಿರಬಹುದು (ಉದಾ: ಅಕ್ಕಿ, ಅಣ್ಣ, ತಮ್ಮ, ಮರ, ಮನೆ ಇತ್ಯಾದಿ) ಕೆಲವು ವೃತ್ತಿ ಸಂಬಂಧಿ ಶಬ್ದಗಳಿಗೆ ಇಂತಹ ಸಾಕಷ್ಟು ರೂಪ ಪ್ರಭೇದಗಳಿರುತ್ತವೆ. (ಉದಾ: ಪೊರಕೆ, ಪರ್ಕೆ, ಪರಕಿ, ಹಿಡಿ, ಬರ್ಲು, ಹಿಡ್‌ಗ್ಲು, ಸೀಬೆ, ಸೀಪೆ, ಚೀಪೆ, ಪೇರ್ಲ, ಪೇರ್ಲೆ, ಜೀಪೆ, ಇತ್ಯಾದಿ) ಮತ್ತೆ ಕೆಲವು ಶಬ್ದಗಳಿಗೆ ಎರಡೇ ಎರಡು ರೂಪ ಪ್ರಭೇದಗಳಿರ;ಬಹುದು (ಉದಾ. ಚಿಮಣಿ ಎಣ್ಣೆ, ಕಲ್ಲೆಣ್ಣೆ, ಸೀಮೆಎಣ್ಣೆ) ಇಂತಹ ರೂಪಪ್ರಭೇದಗಳು ಅವುಗಳಲ್ಲಿ ಪ್ರಾದೇಶಿಕ ಮತ್ತು ಸಾಮಾಜಿಕವೂ ಆಗಿರುತ್ತವೆ. ಇಂತಹ ರೂಪ ಪ್ರಭೇದಗಳಲ್ಲಿ ಕೆಲವು ಬೇರೆ ಬೇರೆ ಭಾಷೆ ಅಥವಾ ಉಪಭಾಷೆಗಳಿಂದ ಸ್ವೀಕಾರವಾಗಿರಬಹುದು. ಇಲ್ಲವೆ ಅವುಗಳಲ್ಲಿ ಕೆಲವು ಹೊಸದಾಗಿ ಸೃಷ್ಟಿಯಾಗಿರಬಹುದು. ಹೀಗೆ ಒಂದ ಶಬ್ದಕ್ಕೆ ಎರಡು ಅಥವಾ ಎರಡಕ್ಕಿಂತ

ಹೆಚ್ಚು ರೂಪ ಪ್ರಭೇದಗಳು ನಾನಾ ಕಾರಣಗಳಿಂದ ಕಾಣಿಸಿಕೊಂಡರೆ ಆಶ್ಚರ್ಯವೇನಿಲ್ಲ. ನಿತ್ಯ ಉಪಯೋಗಿ ಶಬ್ದಗಳಿಗಿಂತ ಸಾಂಸ್ಕೃತಿಕ ಶಬ್ದಗಳಲ್ಲಿ ಇಂತಹ ರೂಪ ಪ್ರಭೇದಗಳು ಹೆಚ್ಚಾಗಿ ಕಂಡುಬರುತ್ತವೆ.

ವ್ಯಕ್ತಿಗಳು ಮಿತ್ರರೊಡನೆ ಆಡುವ ರೀತಿಯಲ್ಲಿ ಮನೆಯವರೊಡನೆ ಮಾತನಾಡುವುದಿಲ್ಲ. ಆಫೀಸಿನಲ್ಲಿ ಆಡುವ ರೀತಿಯಲ್ಲಿ ಕೋರ್ಟಿನಲ್ಲಿ ಮಾತನಾಡುವುದಿಲ್ಲ. ತರಗತಿಯಲ್ಲಿ ಆಡುವ ರೀತಿಯಲ್ಲಿ ನೌಕರರೊಡನೆ ಆಡುವುದಿಲ್ಲ. ಆದಕಾರಣ ವ್ಯಕ್ತಿಯ ಪ್ರತಿ ಮಾತಿನ ಧಾಟಿ, ಸಂದರ್ಭ ಹಾಗೂ ಸನ್ನಿವೇಶಕ್ಕೆ ತಕ್ಕಂತೆ ಬೇರೆ ಬೇರೆಯಾಗಿರುತ್ತದೆ. ಈ ಮಾತಿನ ರೀತಿಯನ್ನೇ ಕೆಲವರು ಶೈಲಿ (Style) ಎಂದು ಹೆಸರಿಸಿಕೊಂಡಿದ್ದಾರೆ. ಬರಹದ ಭಾಷೆಯಲ್ಲಿ ತೋರುವ ಭಷಾ ವೈವಿಧ್ಯವನ್ನು ಒಂದು ಕಡೆ ಬರಹದ ಭಾಷೆಗೆ ಸಂಬಂಧಿಸಿದಂತೆ ಬರಹದ ಶೈಲಿ ಎಂದು, ವ್ಯಕ್ತಿಗಳು ಆಡುವ ಆಡು ಮಾತಿನ ಸ್ವರೂಪವನ್ನು ಆಡು ಮಾತಿನ ಶೈಲಿ ಎಂದು ಕರೆಯುವರು. ಹೀಗೆ ವಿವಿಧ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸನ್ನಿವೇಶಗಳಲ್ಲಿ ವ್ಯಕ್ತಿಗಳು ಬಳಸುವ ಮಾತಿನ ವಿವಧ ಶೈಲಿಯನ್ನು ಕೆಲವರು ನಮನ (Register) ಎಂದು ಕರೆಯುವರು. ತರಗತಿಯಲ್ಲಿ, ಮನೆಯಲ್ಲಿ, ಕೋರ್ಟಿನಲ್ಲಿ, ಆಫೀಸಿನಲ್ಲಿ ಬಳಸುವ ಮಾತಿನ ರೀತಿ ಸಂದರ್ಭಕ್ಕೆ ತಕ್ಕಂತೆ ಬೇರೆ ಬೇರೆಯಾಗುತ್ತಾ ಹೋಗುವುದು. ಹೀಗೆ ಬೇಕಾದಾಗ, ಬೇಕಾದ ರೀತಿಯಲ್ಲಿ ಮಾತನಾಡುವುದು ಕೂಡ ಒಂದು ರೀತಿಯಲ್ಲಿ ಭಾಷಾ ಶೈಲಿ ಎನಿಸಿಕೊಳ್ಳುತ್ತದೆ. ಇದು ಸ್ವಚ್ಛಂದವಾದದ್ದು. ನಮನದಲ್ಲಿ ಹೊರಗಡೆಯ ಯಾವ ನಿರ್ಬಂದವು ಇರದೆ ಸಹಜವಾದ ವಾತಾವರಣದಲ್ಲಿ ಬಳಸುತ್ತಾನೆ. ಕೋರ್ಟಿನಲ್ಲಿ ಹಾಸ್ಯಕ್ಕೆ ಅವಕಾಶವಿಲ್ಲ. ಹಿರಿಯರೊಡನೆ, ಮೇಲ್ಪಟ್ಟ ಅಧಿಕಾರಿಯೊಡನೆ ವ್ಯವಹರಿಸುವಾಗ ಕುಚೋದ್ಯಕ್ಕೆ, ತಲೆಹರಟೆಗೆ ಅವಕಾಶವಿಲ್ಲ. ವಿನಯ ವಿಧೇಯತೆ ಇಲ್ಲಿ ಮುಖ್ಯ. ಇಂತಹ ಸಂದರ್ಭಗಳಲ್ಲಿ ನಮನ ಹೆಚ್ಚು ಕಡಿಮೆ ನಿರ್ದಿಷ್ಟವಾಗಿರುತ್ತದೆ. ವ್ಯಕ್ತಿಭಾಷೆಯಲ್ಲಿ ಕಂಡುಬರುವ ಈ ವ್ಯತ್ಯಾಸ ಸಂದರ್ಭ ಹಾಗೂ ಸನ್ನಿವೇಶಕ್ಕೆ ತಕ್ಕಂತೆ ಬೇರೆ ಬೇರೆ ಶೈಲಿಯಾಗಿ ಕಾಣಿಸಿಕೊಳ್ಳಬಹುದಾದ ಅವಕಾಶಗಳಿವೆ. ಮನುಷ್ಯರಲ್ಲಿ ಅಡಗಿರುವ ಶಬ್ದಕೋಶ ಮತ್ತು ವಾಕ್ಯರಚನೆಯ ರೀತಿಯನ್ನು ವಿವಿಧ ರೀತಿಯಲ್ಲಿ ಹೊರತರುವ ಅವಕಾಶವನ್ನು ಶೈಲಿ ಕಲ್ಪಿಸಿಕೊಡಬಲ್ಲದು.

ಎರಡು ಉಪಭಾಷೆಗಳನ್ನು ಆಡುವ ವ್ಯಕ್ತಿಗಳಲ್ಲಿ ಪರಸ್ಪರ ಅರ್ಥಮಾಡಿಕೊಳ್ಳಲು ಅವುಗಳ ವ್ಯಾಕರಣಕ್ಕಿಂತ ಅವುಗಳ ಶಬ್ದಕೋಶಗಳು ಹೆಚ್ಚು ಸಹಾಯಮಾಡುತ್ತವೆ. ಶಬ್ದಕೋಶ ಭಾಷೆಯಲ್ಲಿ ಸುಲಭವಾಗಿ ಬದಲಾಗುವಂತೆ ವ್ಯಾಕರಣಾಂಶಗಳು ಬದಲಾಗುವುದಿಲ್ಲ. ಇವು ಭಾಷೆಯಲ್ಲಿ ಬದಲಾಗುವುದಿಲ್ಲ ಎಂದರ್ಥವಲ್ಲ. ವ್ಯಾಕರಣ ವಿಚಾರಗಳು ಭಾಷೆಯಲ್ಲಿ ಬದಲಾಗುವುದು ಬಹಳ ನಿಧಾನ. ಶಬ್ದಕೋಶ ಒಂದು

ಉಪಭಾಷೆಯಲ್ಲಿ ಸುಲಭವಾಗಿ ಅಳಿಸಿಹೋಗಬಹುದು ಅಥವಾ ಹೊಸ ಹೊಸ ಶಬ್ದಗಳು ಸನ್ನಿವೇಶಕ್ಕೆ ತಕ್ಕಂತೆ ಸೃಷ್ಟಿಯಾಗಬಹುದು. ಧ್ವನಿ ಮತ್ತು ವ್ಯಾಕರಣ ವಿಚಾರಗಳು ದೀರ್ಘಕಾಲ ಹಾಗೆಯೇ ಉಳಿಯುವಂತಹ ಅಂಶಗಳು. ಆದಕಾರಣ ಶಬ್ದಗಳನ್ನು ಆಧರಿಸಿ ಉಪಭಾಷೆಗಳನ್ನು ವರ್ಗೀಕರಿಸಿಕೊಳ್ಳಲು ಎಲ್ಲಾ ವೇಳೆಯಲ್ಲಿಯೂ ಹೋಗಬಾರದು. ಉಪಭಾಷೆಗಳ ವರ್ಗೀಕರಣದಲ್ಲಿ ಅವುಗಳ ಧ್ವನಿ ಹಾಗೂ ವ್ಯಾಕರಣ ವ್ಯತ್ಯಾಸವನ್ನು ಗಣನೆಗೆ ತಂದುಕೊಳ್ಳಬೇಕಾದುದು ಅತ್ಯಗತ್ಯ.

ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮುಂತಾದವುಗಳ ಮಹತ್ವ ಪಡೆದ ಪ್ರದೇಶದ ಭಾಷೆಯನ್ನು ಮಾತ್ರ ಸಾಮಾನ್ಯವಾಗಿ ಶಿಷ್ಟಬಾಷೆ (Standard Language) ಎಂದು ಕರೆಯುವರು. ಯಾವ ಪ್ರದೇಶದಲ್ಲಿ ಸಂಸ್ಕೃತಿ, ನಾಗರಿಕತೆ ಮುಂತಾದುವು ಉನ್ನತಮಟ್ಟದಲ್ಲಿರುತ್ತವೆಯೋ, ರಾಜಕೀಯ ದೃಷ್ಟಿಯಿಂದ ಯಾವ ಪ್ರದೇಸಕ್ಕೆ ಹೆಚ್ಚಿನ ಮಾನ್ಯತೆ ಇದೆಯೋ ಅಂತಹ ಮಹತ್ವವುಳ್ಳ ಪ್ರದೇಶದ ಭಾಷೆ ಶಿಷ್ಟಭಾಷೆ ಎನಿಸಿಕೊಳ್ಳುತ್ತದೆ. ನ್ಯಾಯಾಲಯ, ಚಲನಚಿತ್ರಗಳು, ದೂರದರ್ಶನ, ವೃತ್ತಪತ್ರಿಕೆಗಳು, ಶೈಕ್ಷಣಿಕ ಹಾಗೂ ಆಡಳಿತದ ಚಟುವಟಿಕೆಗಳು ಮುಂತಾದವುಗಳಿಗೆ ಶಿಷ್ಟಭಾಷೆಯನ್ನು ಬಳಸುವುದು ರೂಢಿ. ಇದು ಸಾಮಾನ್ಯವಾಗಿ ಶಿಷ್ಟಭಾಷೆಯಾಗಿರುವ ಕಾರಣದಿಂದ ಇದು ಒಂದು ನಿರ್ದಿಷ್ಟ ಪ್ರದೇಶದ ಅಥವಾ ಯಾವುದೇ ಒಂದು ಜಾತಿಯ ಇಲ್ಲವೇ ವರ್ಗದ ಉಪಭಾಷೆಯಾಗಿರಬೇಕೆಂಬ ನಿಯಮವೇನೂ ಇಲ್ಲ. ಒಂದು ಉಪಭಾಷೆಯನ್ನು ಜನರು ಶಿಷ್ಟಭಾಷೆಯನ್ನಾಗಿ ಪರಿಗಣಿಸಿಕೊಂಡ ಅನಂತರ ಅದು ಆಗ ಕೇವಲ ಒಂದು ಉಪಭಾಷೆಯಾಗಿ ಉಳಿಯುವುದಿಲ್ಲ. ಇದು ಆಗ ಒಂದು ವಿಶಿಷ್ಟ ರೀತಿಯ ಭಾಷೆಯಾಗಿ ಕಾಣಿಸಿಕೊಳ್ಳುತ್ತದೆ. ಇದು ಇತರ ಪ್ರದೇಶದ ಪ್ರಾದೇಶಿಕ ಹಾಗೂ ಸಾಮಾಜಿಕ ಉಪಭಾಷೆಗಳ ಅನೇಕ ಭಾಷಿಕಾಂಶಗಳನ್ನು ತನ್ನಲ್ಲಿ ಸೇರಿಸಿಕೊಳ್ಳಬಹುದು. ಇದರಿಂದ ಅದು ಹೆಚ್ಚು ಸಂಪದ್ಭರಿತ ಭಾಷೆಯಾಗಿ ಕಾಣಿಸಿಕೊಳ್ಳುತ್ತದೆ. ಇದು ತನ್ನ ಮೂಲ ಲಕ್ಷಣವನ್ನು ಕಳೆದುಕೊಳ್ಳುವುದಿಲ್ಲ. ಅದು ಪ್ರತಿನಿಷ್ಠಿತ ಭಾಷೆ ಎಂಬ ಕಾರಣದಿಂದ ಉಳಿದ ಉಪಭಾಷೆಗಳನ್ನು ಆಡುವ ಜನರು ಅದನ್ನೇ ಅನುಸರಿಸಲು ಪ್ರಯತ್ನಿಸುವರು. ಇದರಿಂದಾಗಿ ಆಕಾಶವಾಣಿ, ದೂರದರ್ಶನ, ರೇಡಿಯೋ, ಚಲನಚಿತ್ರ, ವೃತ್ತಪತ್ರಿಕೆಗಳು ಮುಂತಾದುವು ಬಳಸುವ ಭಾಷೆ ಸಾಮಾನ್ಯವಾಗಿ ಶಿಷ್ಟಭಾಷೆ ಆಗಿರುತ್ತದೆ. ಆದಕಾರಣದಿಂದಲೇ ಇದಕ್ಕೆ ಮಾನ್ಯತೆ ಹೆಚ್ಚು. ಶಿಷ್ಟ ಭಾಷೆಯು ಕೂಡ ಕಾಲದಿಂದ ಕಾಲಕ್ಕೆ ಬದಲಾಗಬಲ್ಲದು. ಅದರ ಕೇಂದ್ರವು ಕೂಡ ನಾನಾ ಕಾರಣಗಳಿಂದ ಬದಲಾಗಬಹುದು. ಆದರೆ ಇದರ ಅಸ್ತಿತ್ವ ಮತ್ತು ಬದಲಾವಣೆ ಎಲ್ಲಾ ಕಾಲದಲ್ಲಿಯೂ ಇದ್ದೇ ಇರುತ್ತದೆ.

ರಾಜಮಹಾರಾಜರುಗಳು ಕಾಲದಿಂದ ಸಾಂಸ್ಕೃತಿಕ ಕೇಂದ್ರವಾಗಿ ಮೆರೆದ

ಮೈಸೂರು ಕನ್ನಡವನ್ನು ಶಿಷ್ಟಭಾಷೆ ಎಂದು ಹಲವಾರು ವರ್ಷಗಳವರೆಗೂ ಕರೆಯಲಾಗುತ್ತಿದ್ದಿತು. ಸ್ವಾತಂತ್ರ್ಯದ ಅನಂತರ ರಾಜಕೀಯ, ವಾಣಿಜ್ಯ ಮುಂತಾದವುಗಳ ದೃಷ್ಟಿಯಿಂದ ಈಗ ಬೆಂಗಳೂರಿಗೆ ಹೆಚ್ಚಿನ ಪ್ರಾಧಾನ್ಯ ದೊರೆತಿದೆ. ಈ ದೃಷ್ಟಿಯಿಂದ ಮೈಸೂರು ಬೆಂಗಳೂರು ಕನ್ನಡವನ್ನು ಈಗ ಸದ್ಯಕ್ಕೆ ಕನ್ನಡದ ಶಿಷ್ಟಭಾಷೆಯನ್ನಾಗಿ ಪರಿಗಣಿಸಿಕೊಳ್ಳಬಹುದಾಗಿದೆ. ಶಿಷ್ಟಭಾಷೆ ಎಂಬುದು ಸರ್ವಜನರ ಸಮ್ಮತವನ್ನು ಪಡೆದ ಭಾಷೆ ಈ ಭಾಷೆಯನ್ನು ಆಡುವವರು ಇತರ ಉಪಭಾಷೆಗಳನ್ನು ಕೀಳು ಎಂಬ ಮನೋಭಾವದಿಂದ ಕಾಣಬಹುದು. ಇದರಿಂದ ಉಳಿದವರಿಗೆ ತಮ್ಮ ಭಾಷೆ ಶಿಷ್ಟವಾದುದಲ್ಲ ಎಂಬ ಭಾವನೆ ಉಂಟಾಗಬಹುದು. ಯಾವುದೇ ಕಾರಣದಿಂದ ಒಂದು ಉಪಭಾಷೆಗೆ ಹೆಚ್ಚಿನ ಮಹತ್ವ ದೊರೆಯಿತೆಂದರೆ ಉಳಿದ ಉಪಭಾಷೆಗಳು ಕೀಳು ಎಂದು ಭಾವಿಸುವುದು ಸಾಧುವಾದುದಲ್ಲ. ಯಾವ ಉಪಭಾಷೆಯೂ ಮೇಲಲ್ಲ. ಯಾವುದೂ ಕೀಳಲ್ಲ. ಹಾಗೆ ಭಾವಿಸುವುದು ಸಾಧುವಾದುದಲ್ಲ. ಯಾವ ಉಪಭಾಷೆಯೂ ಮೇಲಲ್ಲ. ಯಾವುದೂ ಕೀಳಲ್ಲ. ಹಾಗೆ ಭಾವಿಸುವುದು ಅಷ್ಟೊಂದು ಸಮಂಜಸವಾದುದಲ್ಲ. ಜನ ಸಮುದಾಯದ ಅನಿವಾರ್ಯ ಹಾಗೂ ಅಗತ್ಯಗಳಿಂದ ಸಹಜವಾಗಿ ಅನೇಕ ಉಪಭಾಷೆಗಳು ಉದ್ಭವವಾಗುತ್ತವೆ. ಇವುಗಳಿಗೆ ಆಯಾ ಪ್ರದೇಶಗಳಲ್ಲಿ ಕಂಡುಬರುವ ಆಯಾ ವರ್ಗ ಮತ್ತು ಜಾತಿಗಳಲ್ಲಿ ಮಹತ್ವಪೂರ್ಣವಾದ ಸ್ಥಾನ ಇದ್ದೇ ಇರುತ್ತದೆ.

ಶಿಷ್ಟಭಾಷೆ ಸಾಮಾನ್ಯವಾಗಿ ಬರಹದ ಭಾಷೆಗೆ ಬಹಳ ಹತ್ತಿರವಾಗಿರುತ್ತದೆ. ಇದೇ ಸಾಮಾನ್ಯವಾಗಿ ಸಾಹಿತ್ಯಕ ಭಾಷೆಯೂ ಆಗಬಲ್ಲದು. ಒಂದು ಕಾಲದಲ್ಲಿ ಬರಹದ ಭಾಷೆ ಮಾತ್ರ ಶ್ರೇಷ್ಠವಾದದ್ದು, ಉಳಿದ ಆಡುಭಾಷೆಗಳು, ಉಪಭಾಷೆಗಳು ಗ್ರಾಮ್ಯರೂಪಗಳು ತುಂಬ ಕೀಳು ಎಂಬ ಮನೋಭಾವ ವಿದ್ವಾಂಸರಲ್ಲಿ ಬೆಳೆದಿದ್ದಿತು. ಇದಕ್ಕೆ ಸಾಕಷ್ಟು ಆಧಾರಗಳು ದೊರೆಯುತ್ತವೆ. ಕೆಲವರು ಗ್ರಾಮ್ಯಭಾಷೆಯಲ್ಲಿಯೂ ಕತೆ, ಕಾದಂಬರಿಗಳಮನ್ನು ಬರೆದಿರುವ ನಿದರ್ಶನಗಳಿವೆ. ಜನಪ್ರಿಯತೆಯ ದೃಷ್ಟಿಯಿಂದ ಗ್ರಾಮ್ಯಭಾಷೆಯಲ್ಲಿ ಗ್ರಂಥಗಳನ್ನು ರಚಿಸಿಕೊಳ್ಳುವುದು ಹೆಚ್ಚು ಪರಿಣಾಮಕಾರಿಯಾದದ್ದು ಎಂದು ಭಾವಿಸಿದ ಕೆಲವರು ಕನ್ನಡದ ಬೇರೆ ಬೇರೆ ಪ್ರಾದೇಶಿಕ ಹಾಗೂ ಸಾಮಾಜಿಕ ಉಪಭಾಷೆಗಳಲ್ಲಿ ತಮ್ಮ ತಮ್ಮ ಕಾವ್ಯಗಳನ್ನು ರಚಿಸಿಕೊಂಡರು. ಶಿಷ್ಟಭಾಷೆಯಲ್ಲಿಯೇ ಸಾಹಿತ್ಯ ಗ್ರಂಥಗಳ ರಚನೆ ಮಾಡಬೇಕೆಂಬ ಮನೋಭಾವವುಳ್ಳ ವಿದ್ವಾಂಸರು ಆಗಿನ ಕಾಲದಲ್ಲಿ ಇದ್ದರು. ಒಟ್ಟಿನಲ್ಲಿ ಸಾಹಿತ್ಯದ ಭಾಷೆ ಇತರ ಎಲ್ಲಾ ಪ್ರಾದೇಶಿಕ ಹಾಗೂ ಸಾಮಾಜಿಕ ಉಪಭಾಷೆಗಳಿಗಿಂತ ಬಿನ್ನವಾದದ್ದು. ಜಗತ್ತಿನಲ್ಲಿ ಪ್ರತಿಯೊಂದು ಭಾಷೆಯಲ್ಲಿಯೂ ಶಿಷ್ಟಭಾಷೆಗಳ ಪರಿಸ್ಥಿತಿ ಇದೇ ಬಗೆಯದಾಗಿದೆ.

ಒಂದು ಭಾಷೆಯನ್ನಾಡುವ ಜನರ ಸಂಸ್ಕೃತಿ, ನಾಗರೀಕತೆಗಳು ಬೆಳೆದು ಬಂದಂತೆಲ್ಲಾ ಅದರಲ್ಲಿ ಶಬ್ದಗಳ ಕೊರತೆ ಉಂಟಾಗುವುದು ಸರ್ವೇಸಾಮಾನ್ಯ.

ಇಂತಹ ಸಂದರ್ಭಗಳಲ್ಲಿ ಅದರಲ್ಲಿ ದೊರೆಯುವ ಸಾಮಗ್ರಿಯನ್ನು ಬಳಸಿಕೊಂಡು ಹೊಸ ಹೊಸ ಶಬ್ದಗಳನ್ನು ಸೃಷ್ಟಿಮಾಡಿಕೊಳ್ಳಬಹುದಾದ ಅವಕಾಶವಿದೆ.

ಸಾಮಾಜಿಕ ಸಂಬಂಧ ಸ್ಥಾಪಿಸುವಲ್ಲಿ, ಭಾವೈಕ್ಯ ಪಡೆಯುವಲ್ಲಿ ಹೀಗೆ ಬೇರೆ ಬೇರೆ ಸಂದರ್ಭಗಳಲ್ಲಿ ಶಿಷ್ಟಭಾಷೆಯಿಂದ ಆಗುವ ಪ್ರಯೋಜನ ಹೆಚ್ಚು ಪರಿಣಾಮಕಾರಿಯಾದದ್ದು ಎಂದು ಭಾವಿಸಬಹುದಾಗಿದೆ.

ಒಂದು ಉಪಭಾಷೆಯನ್ನಾಡುವ ಜನರು ಇನ್ನೊಂದು ಉಪಭಾಷೆಯನ್ನಾಡುವ ಜನರೊಡನೆ ವ್ಯವಹರಿಸುವಾಗ ಆ ಉಪಭಾಷೆಗಳ ನಿಜವಾದ ವ್ಯವಹಾರ ವ್ಯಕ್ತವಾಗುವುದು. ಒಂದು ಭಾಷೆ ಸಾಮಾಜಿಕವಾಗಿ ಹಾಗೂ ಭೌಗೋಳಿಕವಾಗಿ ಬದಲಾವಣೆ ಹೊಂದುತ್ತಿರುವಾಗ ಅದರ ಬೆಳವಣಿಗೆ ಎಲ್ಲಾ ಕಡೆಗೂ ಒಂದೇ ಬಗೆಯಲ್ಲಿ ವ್ಯಾಪಿಸುವುದಿಲ್ಲ. ಅದು ಸಂದರ್ಭ ಹಾಗೂ ಸನ್ನಿವೇಶಕ್ಕೆ ತಕ್ಕಂತೆ ಬೇರೆ ಬೇರೆಯಾಗಿರುತ್ತದೆ. ಪ್ರಚಾರ ಕಾರ್ಯಗಳು ಜನಮನವನ್ನು ಹೆಚ್ಚು ಪರಿಣಾಮಕಾರಿಯಾಗಿ ತಲುಪಬೇಕಾದರೆ ಅವರು ಆಡುವ ಭಾಷಾರೂಪವನ್ನು ಬಳಸುವುದು ಶಿಷ್ಟಭಾಷೆಗಿಂತ ಹೆಚ್ಚು ಉಪಯುಕ್ತವಾದದ್ದು. ಆಕಾಶವಾಣಿ, ಚಲನಚಿತ್ರ, ದೂರದರ್ಶನ, ವೃತ್ತಪತ್ರಿಕೆಗಳು ಮುಂತಾದ ಮಾಧ್ಯಮಗಳಲ್ಲಿ ಶಿಷ್ಟಭಾಷೆಗಿಂತ ಆಯಾ ಪ್ರದೇಶದ ಪ್ರಾದೇಶಿಕ ರೂಪಗಳನ್ನು ಬಳಸುವುದರಿಂದ ನಿರೀಕ್ಷೆಗಿಂತ ಹೆಚ್ಚಿನ ಲಾಭವಿದೆ. ಹಾಗೆಯೇ ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಕ ಚಟುವಟಿಕೆಗಳಿಗೂ ಆಯಾ ಕ್ಷೇತ್ರದ ಉಪಭಾಷೆಗಳನ್ನು ಬಳಸುವುದರಿಂದ ಹೆಚ್ಚಿನ ಪ್ರಯೋಜನವಿದೆ ಎಂದು ಹೇಳಬಹುದು.

# ಭಾಷೆಯ ಬೆಳವಣಿಗೆ: ಭಾಷಾ ವ್ಯತ್ಯಾಸ

ಜೀವಂತ ಸಮಾಜದ ಪ್ರತಿಬಿಂಬ ಜೀವಂತ ಭಾಷೆ. ಮಾನವನ ಜೀವನ ಅಂತೆಯೇ ಸಮಾಜ ನಿತ್ಯಪರಿವರ್ತಶೀಲ, ಎಷ್ಟೇ ಸಂಪ್ರದಾಯಬದ್ಧ ಎಂದು ಹೇಳಿದರೂ ಸಹ. ಒಂದು ಸಮಾಜ ಎಲ್ಲ ಬಗೆಯ ಸಂಪರ್ಕ ಕಡಿದುಕೊಂಡು ಇದ್ದಾಗ ಮಾತ್ರ ಭಾಷೆಯಲ್ಲಿ ವ್ಯತ್ಯಾಸ, ಬದಲಾವಣೆ ಕಡಿಮೆ. ಆದರೆ ಆಗಲೂ ಸಹ, ಆ ಸಣ್ಣ ಸಮಾಜದಲ್ಲಿಯೇ ವ್ಯಕ್ತಿ ವೈಚಿತ್ರ್ಯಗಳು, ಉಚ್ಚಾರಣೆ ಇತ್ಯಾದಿ ಇಡೀ ಭಾಷೆಯ ಮೇಲೆ ತಿಳಿದೋ ತಿಳಿಯದೆಯೋ ಪ್ರಭಾವ ಬೀರುವುದುಂಟು. ಆಡುನುಡಿಯನ್ನು ಆಡುವ ಪ್ರತಿಯೊಬ್ಬ ವ್ಯಕ್ತಿಯೂ ಅರಿತೂ ಅರಿಯದೆಯೋ ಹೊಸ ಶಬ್ದಗಳನ್ನು ಸೃಷ್ಟಿಸುತ್ತಾನೆ, ಹೊಸ ಉಚ್ಚಾರಣೆಯನ್ನು ನೀಡುತ್ತಾನೆ ಅಥವಾ ಹೊಸ ಅರ್ಥವನ್ನು ಕೊಡುತ್ತಾನೆ. ಅವು ಚಲಾವಣೆಗೆ ಬಂದು ನಿಲ್ಲಬಹುದು, ಇಲ್ಲವೆ ನಶಿಸಬಹುದು. ಹೀಗಾಗಿ ಭಾಷೆಯಲ್ಲಿ ವ್ಯತ್ಯಾಸಗಳು ಮೈದೋರಿ ಶಬ್ದಕೋಶವೂ ಬೆಳೆಯುತ್ತದೆ, ಆಗ ಭಾಷೆಯೂ ಬೆಳೆಯುತ್ತದೆ. "Language is not substance of a finished work but action" ಎಂದು ಒಬ್ಬಾತ ಹೇಳಿದ್ದಾನೆ. ಈ ವ್ಯತ್ಯಾಸಗಳನ್ನು ವಿಕೃತಿ, ವಿಕಾರ, ವಿರೂಪ, ಪರಿವರ್ತನೆ ಎಂದು ವಿಧವಿಧವಾಗಿ ಹೇಳಬಹುದು. ವ್ಯಾಕರಣಕ್ಕೆ ಇಂತಹ ಪರಿವರ್ತನೆಯನ್ನು ತಡೆಯಲು ಸಾಧ್ಯವಿಲ್ಲವಾದರೂ ಒಂದು ಬಿಗಿಯನ್ನು ತರುತ್ತದೆ. ಕೇಶಿರಾಜ ಹಳಗನ್ನಡ ಸ್ವರೂಪ ಉಳಿಸುವ ಪ್ರಯತ್ನ ಮಾಡಿ ವಿಫಲನಾದ.

ಈ ವ್ಯತ್ಯಾಸಗಳು ನಿಯಮಬದ್ಧ ಎಂಬಂತೆ ನಡೆಯುವುದನ್ನು ಗಮನಿಸಬಹುದು. ಪ್ರಪಂಚದ ಭಾಷೆಗಳ ಅಧ್ಯಯನದಿಂದ ಭಾಷಾವಿಜ್ಞಾನಿಗಳು ಇವುಗಳಿಗೆ ಸೂತ್ರಗಳನ್ನು ರೂಪಿಸಿದ್ದಾರೆ. ಭಾಷೆಯಲ್ಲಿ ಹೀಗೆ ವ್ಯತ್ಯಾಸಗಳು ನಡೆಯಲು ಹಲವು ಕಾರಣಗಳನ್ನು ಹೇಳುತ್ತಾರೆ. ಸೋಮಾರಿತನ, ಸೌಲಭ್ಯಾಕಾಂಕ್ಷೆ, ಉಚ್ಚಾರಣೆಯ ಕಷ್ಟ, ಅಜ್ಞಾನ, ಭ್ರಮೆ, ಸುಧಾರಣೆಗಳು, ನಾಗರಿಕತೆ, ಹೊಸ ಆವಿಷ್ಕಾರಗಳು ಇತ್ಯಾದಿ ಮುಖ್ಯ ಕಾರಣಗಳು. ಹಳಗನ್ನಡ ಹೊಸಗನ್ನಡಕ್ಕೆ ತಿರುಗಿದಾಗ ಆದ ಬದಲಾವಣೆಗಳನ್ನು ಹಿಂದೆ ಹೇಳಿದೆ. ೞ > ಳ, ಱ > ರ, ಪ > ಹ, ವ್ಯಂಜನಾಂತ > ಸ್ವರಾಂತ, ವಿಜಾತೀಯ ಸಂಯುಕ್ತಾಕ್ಷರ > ಸಜಾತೀಯ ಸಂಯುಕ್ತಾಕ್ಷರ, ಲಾಂತ > ಳಾಂತ, ಬಿಂದುಲೋಪ, ಆ–ಏ > ಯಾ, ಓ > ವಾ ಇತ್ಯಾದಿ. ಇವೂ ಸಹ ಭಾಷಾವ್ಯತ್ಯಾಸಗಳಲ್ಲಿಯೇ ಸೇರುತ್ತವೆ. ಇಲ್ಲಿ ಮುಂದೆ ಧ್ವನಿಯಲ್ಲಾಗುವ ವ್ಯತ್ಯಾಸಗಳು, ಅರ್ಥದಲ್ಲಾಗುವ ವ್ಯತ್ಯಾಸಗಳು, ಸಾದೃಶ್ಯಕಾರಣ

ಭ್ರಮೆಯಿಂದಾಗುವ ವ್ಯತ್ಯಾಸಗಳನ್ನು ವಿವರಿಸಿದೆ. ಶಬ್ದಕೋಶದ ಬೆಳವಣಿಗೆಯಲ್ಲಿ ಇತರ ಪ್ರಭಾವಗಳನ್ನು, ಪರಭಾಷಾ ಸ್ವೀಕರಣಗಳನ್ನು, ಪ್ರತ್ಯೇಕವಾಗಿ ವಿವೇಚಿಸಲಾಗುವುದು.

## ಧ್ವನಿ ವ್ಯತ್ಯಾಸ

ಭಾಷೆಯಲ್ಲಿ ನಡೆಯುವ ಧ್ವನಿಗಳಿಗೆ ಸಂಬಂಧಿಸಿದ ವ್ಯತ್ಯಾಸಗಳನ್ನು ಧ್ವನಿ ವ್ಯತ್ಯಾಸಗಳು ಎನ್ನುತ್ತಾರೆ. ಭಾಷೆಗಳ ಇತಿಹಾಸವನ್ನು ಗಮನಿಸಿದರೆ ಬಳಕೆಯಲ್ಲಿದ್ದ ಒಂದು ಧ್ವನಿ ಅಥವಾ ಧ್ವನಿಗಳ ಗುಂಪು ಬೇರೆ ಧ್ವನಿ ಅಥವಾ ಧ್ವನಿಗುಂಪಾಗಿ ಮಾರ್ಪಾಟಾಗಿರುವುದನ್ನು ಗುರುತಿಸಬಹುದು. ಈ ಬದಲಾವಣೆಗಳನ್ನು ಧ್ವನಿನಿಯಮ (phonetic law) ಎಂದು ಸಾಮಾನ್ಯವಾಗಿ ಕರೆಯಲಾಗಿದೆ. ಈ ಧ್ವನಿ ವ್ಯತ್ಯಾಸ ಕಾರ್ಯವು ಗಮನಕ್ಕೆ ಬಾರದಂತೆ ನಡೆಯುತ್ತದೆ. ಕೆಲವರ ಮಾತಿನಲ್ಲಿ ಹೀಗೆ ಆದ ಬದಲಾವಣೆ ಕ್ರಮೇಣ ಎಲ್ಲ ಕಡೆಗೂ ಹರಡಿಕೊಂಡು ಕೊನೆಗೆ ನಿಯತವಾದ ಬದಲಾವಣೆ ಹೊಂದಿಬಿಡುತ್ತದೆ. ಇಲ್ಲಿ ಧ್ವನಿವ್ಯತ್ಯಾಸವಾಗುತ್ತದೆಯೇ ಹೊರತು ಅರ್ಥವ್ಯತ್ಯಾಸವಲ್ಲ. ಈ ಧ್ವನಿಬದಲಾವಣೆಯನ್ನು ನಿಯಮ ಎಂದು ಕರೆದರೂ ಇದು ದಿಕ್ಸೂಚಿ ತತ್ತ್ವ ಮಾತ್ರ. ಉದಾ: ಇಂಗ್ಲಿಷಿನಲ್ಲಿ (o) ಧ್ವನಿ (u) ಧ್ವನಿಯಾಯಿತು. Cool, moon, doom. ಇಲ್ಲೆಲ್ಲ ಉಚ್ಚಾರಣೆ u ಆದರೂ ಬರವಣಿಗೆಯಲ್ಲಿ o ಉಳಿದಿದೆ. ಈ ಬದಲಾವಣೆಗಳು ಭೌತವಿಜ್ಞಾನದ ನಿಯಮಗಳಂತಲ್ಲ. ಊಹೆಯಾದರೂ ತರ್ಕಬದ್ಧವಾಗಿರುತ್ತವೆ. ಅಪವಾದಗಳಿದ್ದರೆ ಕಂಡುಹಿಡಿಯಲು ನೆರವಾಗುತ್ತವೆ.

**೧. ಮಿತವ್ಯಯಾಸಕ್ತಿ (Economy of effort):** ಸೌಲಭ್ಯಾಕಾಂಕ್ಷೆ ಎಂದೂ ಹೇಳಬಹುದು. ಉಚ್ಚಾರಣೆಯಲ್ಲಿ ಕಷ್ಟನಿವಾರಣೆ ಮಾಡಿಕೊಂಡು ಸುಲಭಗೊಳಿಸಿ ಕೊಳ್ಳುವುದು. ದೀರ್ಘಶಬ್ದಗಳನ್ನು ಮೊಟಕುಗೊಳಿಸಿಕೊಳ್ಳುವುದು, ಮಹಾಪ್ರಾಣದ ಉಚ್ಚಾರಣೆಯನ್ನು ಅಲ್ಪಪ್ರಾಣ ಮಾಡಿಕೊಳ್ಳುವುದು ಇದರ ಪರಿಣಾಮ. ಉದಾ: ಸ್ನೇಹ > ನೇಹ, ಸ್ಕಂಭ > ಕಂಬ, ಎಳ್‌ನೆಯ್ > ಎಣ್ಣೆ, ಪೊಸಂತಿಲ್ > ಹೊಸಲು (ಪೊಸಂತು = ಹೊಸದು. ಹಾಗೇ 'ಹಿತ್ತಲು' ಎಂದಾಗ 'ಇಲ್' ಮನೆಯ 'ಪಿಂತು' ಹಿಂಭಾಗ ಎಂದರ್ಥ). ಚರ್ಮಪಟ್ಟಿಕಾ > ಚಮ್ಮಟಿಗೆ > ಚಾವಟಿ > ಚಾಟಿ, ತಣ್+ಕೂಟ್–ತಣ್ಗೂಟ್ > ತಂಗಳ್, ಶ್ರೀನಿವಾಸ > ಸೀನ, ಬಂದಿತು > ಬಂತು, ಉಪಾಧ್ಯಾಯ > ಉವಜ್ಝಾಯ > ಉವಜ > ಓಜ, ಕಮ್ಮಾರ, ಚಮ್ಮಾರ (<ಕರ್ಮಕಾರ, ಚರ್ಮಕಾರ) ಇತ್ಯಾದಿ.

**೨. ಸ್ವರ ಪ್ರಾರಂಭ (Prosthesis):** ಸಂಯುಕ್ತಾಕ್ಷರ ಅಥವಾ ವ್ಯಂಜನಗಳಿಂದ ಪ್ರಾರಂಭವಾಗುವ ಶಬ್ದಗಳ ಮೊದಲು ಸ್ವರ ಸೇರಿಸುವುದು. ಇದಕ್ಕೆ ಉಚ್ಚಾರಣೆಯ ಅನುಕೂಲವೇ ಕಾರಣ. ಉದಾ: ಸ್ಕೂಲ್ > ಇಸ್ಕೂಲು, ಇಸ್ಕ್ರೂ, ಇಸ್ಟಾಪ್, ಇಸ್ಪಾನರ್

ಇತ್ಯಾದಿ. ಉರ್ದುವಿನಲ್ಲಿ ಸಂಯುಕ್ತಾಕ್ಷರಗಳಿಂದ ಶಬ್ದ ಪ್ರಾರಂಭವಾಗುವ ರೂಢಿ ಇಲ್ಲ. ಆದ್ದರಿಂದ ಉರ್ದು ಮಾತನಾಡುವವರಲ್ಲಿ ಈ ಬಗೆಯ ಉಚ್ಚಾರಣೆ ಹೆಚ್ಚು. ತಮಿಳಿನಲ್ಲಿ ಯ, ರ, ಲ ಗಳಿಂದ ಪ್ರಾರಂಭವಾಗುವ ಶಬ್ದಗಳ ಮೊದಲ ಸ್ವರ ಸೇರುತ್ತದೆ. ರಾಜನ್ > ಅರಶನ್ (> ಅರಸ, ಕನ್ನಡಕ್ಕೆ ತಮಿಳು ಮೂಲಕ ಬಂದದ್ದು), ಲೋಕಂ > ಉಲೋಕಂ > ಉಲಗಂ, ರಾಮಂ > ಇರಾಮಂ, ಲಕ್ಷಣ > ಇಲಕ್ಕಣಂ ಇತ್ಯಾದಿ. ಮರಾಠಿಯಲ್ಲಿ ಸ್ನಾನ > ಆಸ್ಥಾನ ಆಗಿದೆ.

**೩. ಅವಧಾರಣೆ (Emphasis):** ಕೆಲವು ಶಬ್ದಗಳಲ್ಲಿ ಅನಾವಶ್ಯಕವಾಗಿ ಹೊಸ ಅಕ್ಷರ ಸೇರಿಸಿ ಅವಧಾರಣೆ ತರುವುದುಂಟು. ಇದರ ಹಿಂದೆ ಅರ್ಥವನ್ನೋ ಉಚ್ಚಾರಣೆಯನ್ನೋ ಸುಸ್ಪಷ್ಟಪಡಿಸಬೇಕು ಎಂಬ ಮನೋಭಾವ ಇರುವಂತೆ ತೋರುತ್ತದೆ. ಇಂಗ್ಲಿಷಿನಲ್ಲಿ soun > sound, len > lend ಆಗಿವೆ, d ಹೊಸ ಅಕ್ಷರ. Passage, message ಶಬ್ದಗಳು ವ್ಯಾಕರಣ ನಿಯಮಪ್ರಕಾರ passanger, messager ಆಗಬೇಕು; ಆದರೆ ನಡುವೆ ಅವಧಾರಣೆಗಾಗಿ 'n' ಸೇರಿ passenger, messenger ಆಗಿವೆ. Admiral ಗೆ ಮೂಲ ಪಾರಸಿ 'ಅಮೀರ' ಶಬ್ದ. ಹಳೆ ಇಂಗ್ಲಿಷಿನಲ್ಲಿ Ammiral ಎಂದೇ ಇದೆ. ಆದರೆ ಅನಂತರ 'd' ಸೇರಿ Admiral ಆಯಿತು. 'ದೊಡ್ಡ' ಗುಣವಚನಕ್ಕೆ 'ತನ' ಪ್ರತ್ಯಯ ಸೇರಿಸಿ ಭಾವನಾಮ ಮಾಡಿದರೆ (ಪೆಣ್ + ತನ = ಪೆಣ್ತನ ಎಂಬಂತೆ) ದೊಡ್ಡತನ ಆಗಬೇಕು. ಅವಧಾರಣೆ ಕಾರಣ ದೊಡ್ಡಸ್ತನ, ದೊಡ್ಡಸ್ತಿಕೆ ಆಗಿವೆ. ಸಂಸ್ಕೃತದ ಉಷ್ಟ್ರ ತದ್ಭವವಾದಾಗ 'ಒಟ್ಟೆ'ಯಾಗಬೇಕು (ವಡ್ಡಾರಾಧನೆಯಲ್ಲಿ 'ಒಟ್ಟೆಯ ಸೇರಿ' ಪ್ರಯೋಗವಿದೆ), ಆದರೆ 'ಒಂಟೆ'ಯಾಗಿ ರೂಢಿಯಾಯಿತು. ಇಲ್ಲಿ ಅನುನಾಸಿಕ ಅವಧಾರಣೆಯಾಗಿ ಬಂದಿದೆ. ಇಷ್ಟಿಕಾ > ಇಟ್ಟಿಗೆ ಎಂಬುದು ಕೆಲವೆಡೆ 'ಇಟ್ಟಂಗಿ'ಯಾಗಿ ರೂಢಿಯಲ್ಲಿದೆ. ಸುಟ್ಟುರೆಗಾಳಿ > ಸುಂಟರಗಾಳಿ, ಕುಟ್ಟಿನಿ ('ಕುಟ್ಟಿನೀ ಮತ')>ಕುಂಟಿನಿಯಾಗಿವೆ. ರಾ. ನರಸಿಂಹಾಚಾರ್ಯರು ಪೆಣ್ + ತಿ = ಪೆಣ್ತಿಯಾಗಬೇಕು, ಹೆಂಡತಿಯಾಗಿದೆ; 'ಡ' ಅವಧಾರಣೆ ಎನ್ನುತ್ತಾರೆ.

**೪. ಪರಿಹಾರದೀರ್ಘ (Compensatory lengthening):** ದುರ್ಬಲವಾದ ವ್ಯಂಜನ ಲೋಪವಾಗುವುದುಂಟು. ಆಗ ಅದಕ್ಕೆ ಪರಿಹಾರವೆಂಬಂತೆ ಹಿಂದಿನ ಸ್ವರ ದೀರ್ಘವಾಗುತ್ತದೆ. ಉಚ್ಚಾರ ಸೌಲಭ್ಯ ಇದಕ್ಕೆ ಕಾರಣ. ಕನ್ನಡದಲ್ಲಿ ಸ್ವರಾಘಾತ (accent) ಮೊದಲ ಸ್ವರದ ಮೇಲೆ ಬೀಳುವುದೂ ಕಾರಣವೆನ್ನಬಹುದು. ಮಯಣ > ಮೇಣ, ಮಯೂರು > ಮೋರ, ಇಷ್ಟು > ಈಟು, ಎಷ್ಟು > ಏಟು ಇತ್ಯಾದಿ. ತೆಲುಗಿನಲ್ಲಿ $v_1c_1v_2$–ಸೂತ್ರದಂತೆ ಈ ಕಾರ್ಯ ನಡೆಯುತ್ತದೆ. ಸ್ವರಾದಿ ಶಬ್ದದ ಮೊದಲ ಸ್ವರ ವ್ಯಂಜನದ ಮುಂದೆ ಬಂದು ದೀರ್ಘವಾಗುತ್ತದೆ–ಎರಗು > ರೇಗು,

ಒರಲ್ > ರೋಲು, ಅವರು > ವಾರು, ಉಗುರು > ಗೋರು (ಇಲ್ಲಿ ಉ > ಓ) ಆಗಿವೆ. ಕನ್ನಡದ ಗ್ರಹಚಾರ > ಗಾಚಾರ ಆಗಿರುವುದೂ ಹೀಗೆ.

**೫. ರೂಪಸಾಮ್ಯ (Analogy):** ಸೋಮಾರಿತನ, ಸೌಲಭ್ಯಾಕಾಂಕ್ಷೆಗಳಿಂದ ಶಬ್ದಗಳು ಸವೆದು ನಶಿಸುತ್ತವೆಯಾದರೆ, ರೂಪಸಾಮ್ಯ ಅಥವಾ ಸಾಮ್ಯರೂಪದಿಂದ, ಭ್ರಮಾಮೂಲವಾಗಿ ಅಜ್ಞಾನ ಕಾರಣವಾಗಿ ಹೊಸ ಶಬ್ದಗಳು ಸೃಷ್ಟಿಯಾಗುತ್ತವೆ. ಶಬ್ದದ ಸ್ವರೂಪ ಹಾಗೂ ಅರ್ಥವನ್ನು ಎಚ್ಚರಿಕೆಯಿಂದ ತಿಳಿದು ಶಬ್ದ ಸೃಷ್ಟಿಸುವ ಬದಲು ಸಾದೃಶ್ಯ ನೋಡಿ ಯಾವುದೊ ಶಬ್ದದಂತೆ ಮತ್ತೊಂದು ಶಬ್ದ ಸೃಷ್ಟಿಸುವುದು ಸಾಮ್ಯರೂಪ ಶಬ್ದಗಳಿಗೆ ಕಾರಣ. ಹೊದೆದು ಅಥವಾ ಹೊದ್ದು ಕ್ರಿಯಾಪದದ ಮೂಲ ಧಾತು 'ಹೊದಿ' ಅಥವಾ 'ಹೊದೆ' ಎಂದು. ಅದರ ಸಾಮ್ಯದಿಂದ ಕದ್ದು ಎಂಬುದರ ಧಾತು 'ಕಳ್' ಆದರೂ 'ಕದಿ' ಧಾತುವನ್ನು ಸೃಷ್ಟಿಸಲಾಗಿದೆ. ಹಾಗೇ 'ಗೆದ್ದು'ವಿನ ಮೂಲಧಾತು 'ಗೆಲ್' > ಗೆದಿ ಆಗಿದೆ (ಮನಗೆದ್ದು ಮಾರು ಗೆದಿಬೇಕು). ನಿಲ್ > ನಿಂತು, ಅದರಂತೆ 'ಕೂರು' ಕುಳಿತು ಆಗಬೇಕಿದ್ದುದು 'ಕುಂತು' ಆಗಿದೆ. ದಿವಸ್ಪತಿಯ ಭ್ರಮೆಯಿಂದ 'ವನಸ್ಪತಿ' ಸಿದ್ಧವಾಗಿದೆ. ಬಾ, ಬರ್‌ಗಳ ಗೌರವರೂಪ 'ಬನ್ನಿ', ಅದರಂತೆ ಸಲ್ > ಸನ್ನಿ ಗೌರವ ರೂಪ ಬಂದಿದೆ. (ಬಡಭಕ್ತರು ಬಂದರೆ ಎಡೆ ಇಲ್ಲವಯ್ಯ, ಅತ್ತ ಸನ್ನಿ ಎಂಬರು–ಬಸವಣ್ಣ) ಮದುವೆಯ ಕರೆಯೋಲೆಯಲ್ಲಿ 'ಸೌ॥' ಎಂದರೆ ಸೌಭಾಗ್ಯವತಿ. ಇಂಗ್ಲಿಷಿನಲ್ಲಿ ಇದನ್ನು ಅನುಕರಣೆಯ ಭ್ರಮೆಯಿಂದ 'Sow' ಎಂದು ಮುದ್ರಿಸುತ್ತಾರೆ. Sow ಎಂದರೆ ಹೆಣ್ಣುಹಂದಿ ಎಂದರ್ಥ.

**೬. ಸಮರೂಪಧಾರಣೆ (Assimilation):** ಉಚ್ಚಾರಣೆಯ ತೊಂದರೆ ಇದಕ್ಕೆ ಕಾರಣ. ಒಂದು ಶಬ್ದದಲ್ಲಿ ಎರಡು ಬಗೆಯ ಸ್ವರೋಚ್ಚಾರ ಅಥವಾ ವ್ಯಂಜನೋಚ್ಚಾರ ಇದ್ದಲ್ಲಿ ಎರಡು ಬಗೆಯ ಸ್ವರ ಅಥವಾ ವ್ಯಂಜನ ಒಂದೇ ರೂಪಧಾರಣೆ ಮಾಡುವುದು. ಇಲ್ಲಿ ವಿಜಾತೀಯ ಸಂಯುಕ್ತಾಕ್ಷರಗಳು ಸಜಾತೀಯವಾಗುತ್ತವೆ. ಗಟ್ದೆ > ಗರ್ದೆ > ಗದ್ದೆ, ಪೊಟ್ತು > ಪೊರ್ತು > ಪೊತ್ತು > ಹೊತ್ತು, ಕೊರ್ಬು > ಕೊಬ್ಬು, ಪುಟ್ಗಿ > ಪುಗ್ಗಿ > ಹುಗ್ಗಿ, ಕೊಸ್ತುಂಬರಿ > ಕೊತ್ತುಂಬರಿ, ಕಟೆವು > ಕಳಹು, ಹಸಿರು > ಹಸುರು, ಬಿರಿಕು > ಬಿರುಕು, ಉಸಿರು > ಉಸುರು, ಮುರಿಕು > ಮುರುಕು, ಚೆದರು > ಚೆದುರು > ಇತ್ಯಾದಿ.

**೭. ಅಕ್ಷರಪಲ್ಲಟ (Metathesis):** ಇದನ್ನು ವರ್ಣಪಲ್ಲಟ, ವರ್ಣವ್ಯತ್ಯಯ ಎಂದೂ ಕರೆಯುತ್ತಾರೆ. ಹಳಗನ್ನಡ–ಹೊಸಗನ್ನಡಗಳನ್ನು ಹೋಲಿಸಿದಾಗ, ಈ ವ್ಯತ್ಯಾಸ ಸ್ಪಷ್ಟವಾಗುತ್ತದೆ. ಸ್ವರ ಅಥವಾ ವ್ಯಂಜನಗಳು ಪಲ್ಲಟ ಅಥವಾ ಸ್ಥಳಾಂತರಗೊಳ್ಳುವುದು, ಅಲರ್ > ಅರಲ್, ಅಸಗ > ಅಗಸ, ವಾರಣಾಸಿ > ಬಾರಣಾಸಿ > ಬನಾರಸ್, ಎಲರ್ > ಮಲರ್, ಮಟಿಲ್ > ಮರಳ್ (ಮರಳು,

ಮಳಲು, ಮಣಲು), ಕೊಪ್ಪುಳ್ > ಪೊಕ್ಕುಳ್ (ಹೊಕ್ಕಳು), ಪಡರ್ > ಹರಡು, ನಾಲಿಕೇರ > ನಾರಿಕೇಲ, ಅಹುದು > ಹುಉದು > ಹೌದು, ಎಹಗೆ > ಹೇಗೆ, ಫಲಾಹಾರ > ಫರಾಳ, ಪಾದರಸ > ಪಾರದ, ಕಾಗದ > ಕಾದಗ, ಕಾಗಜ್ > ಕಾಜಗ ಇತ್ಯಾದಿ.

**೮. ಏಕವರ್ಣಲೋಪ (Haplotogy):** ಸದೃಶಾಕ್ಷರ ಲೋಪವೆಂದೂ ಹೇಳಬಹುದು. ಒಂದು ಶಬ್ದದಲ್ಲಿ ಒಂದೇ ಧ್ವನಿಯ ಅಕ್ಷರಗಳು ಬಂದಾಗ ಒಂದು ಅಕ್ಷರ ಬಿಟ್ಟು ಹೋಗುತ್ತದೆ. ಬೆಳಕು + ಕಿಂಡಿ > ಬೆಳಕಿಂಡಿ, ವೀರರಾಜಪೇಟೆ > ವಿರಾಜಪೇಟೆ, ಚೆನ್ನಪ್ಪಪಟ್ಟಣ > ಚೆನ್ನಪಟ್ಟಣ, ಬೀಸಿ + ಇಡು > ಬೀಸಿಡು > ಬಿಸುಡು ಇತ್ಯಾದಿ.

**೯. ದ್ವಿರುಕ್ತಿ–ಪುನರುಕ್ತಿ (Tautology):** ಒಂದು ಶಬ್ದದ ಅರ್ಥವು ಅಸ್ಪಷ್ಟವಾದಾಗ, ತಿಳಿಯದಾಗ ಅದೇ ಅರ್ಥದ ಅನ್ಯಭಾಷೆಯ ಶಬ್ದವನ್ನು ಅದರೊಂದಿಗೆ ಸೇರಿಸುವುದು. ಇದು ಅಜ್ಞಾನದಿಂದಾಗುವಂಥದು, ಆದರೂ ರೂಢಿಯಲ್ಲಿ ಅಂಥ ಶಬ್ದಗಳು ಇವೆ. ಕವಿರಾಜಮಾರ್ಗಕಾರ ಇದನ್ನು ಪುನರುಕ್ತದೋಷ ಎಂದಿದ್ದಾನೆ. ಇದನ್ನು ಪ್ರತಿಧ್ವನಿ ರೂಪಸಮಾಸ (Echo compounds) ಎಂದೂ ಕರೆಯುತ್ತಾರೆ. ಅವಳಿಜವಳಿ, ಕೂಡಲಸಂಗಮ, ಹಳದೀಪೀತಾಂಬರ (ಪೀತ = ಹಳದಿ), ಎಳ್ಳೆಣ್ಣೆ (ಎಳ್ + ಎಳ್ + ನೆಯ್ = ಜಿಡ್ಡು, ತುಪ್ಪ), ಅರೆಬಂಡೆ (ಅಜೆ = ಬಂಡೆ), ಹುಳುಹುಪ್ಪಟೆ, ಅಮಾವಾಸ್ಯೆಕತ್ತಲು, ತಲೆಶಿರೋಭಾರ, ತಿಂಡಿತಿನಿಸು, ಕಾಂಪೌಂಡುಗೋಡೆ, ಗೇಟ್ ಬಾಗಿಲು, ಪದಚರಣ, ಹಾಲುಖೀರು (ಕ್ಷೀರ > ಖೀರು ಖೀರುವಿಗೆ ಈಗ ಅರ್ಥ ಬೇರೆ). ಇಂಥವು ಎಲ್ಲ ಭಾಷೆಗಳಲ್ಲೂ ಕಾಣಬರುತ್ತವೆ. ಸಂಸ್ಕೃತದಲ್ಲಿ ಮಲಯಪರ್ವತ, ಮಲಯಗಿರಿ ಇವೆ. ಮಲಯ < ಮಲೈ (ದ್ರಾವಿಡ) ದಿಂದ ಬಂದದ್ದು. ತಂಗಳನ್ನ ತಣ್+ಕೂಳ್+ಅನ್ನದಿಂದ ಆದದ್ದು (ಕೂಳ್ = ಅನ್ನ), ಹಣ್ಣುಹಂಪಲದಲ್ಲಿ ಹಣ್ಣು+ಹಣ್ (<ಪಣ್)+ಫಲ ಸೇರಿವೆ. ರೋಗರುಜಿನ, ನಡುಮಧ್ಯೆ, ಕಾಗದಪತ್ರ, ಗೊಡ್ಡುಹರಟೆ (ಗೊಡ್ಡು=ಹರಟೆ ಎಂದರ್ಥ. ಗೋಷ್ಠಿ > ಗೊಟ್ಟಿ > ಗೊಡ್ಡು. ಪಂಪಭಾರತದಲ್ಲಿ ಗೊಟ್ಟಿ, ಗೊಡ್ಡು ಎರಡು ಪ್ರಯೋಗಗಳೂ ಇವೆ. 'ಮಿಜ್ತಿಗೊಡ್ಡ' ಎಂಬುದನ್ನು fatal talk ಎಂಬರ್ಥದಲ್ಲಿ ಪ್ರಯೋಗಿಸಿದ್ದಾನೆ).

**೧೦. ತಪ್ಪು ಸಾಹಚರ್ಯ (False association):** ಬೇರೆ ಭಾಷೆಯ ಶಬ್ದಗಳು ಕಿವಿಗೆ ಬಿದ್ದಾಗ, ಅವನ್ನು ಸರಿಯಾಗಿ ಕೇಳಿಸಿಕೊಳ್ಳದೆಯೋ, ಸರಿಯಾಗಿ ಉಚ್ಚರಿಸಲು ಬಾರದೆಯೋ ಆ ಅರ್ಥವನ್ನೇ ಹೇಳಬೇಕಾದಾಗ, ತಾವು ಕೇಳಿದ್ದ ಶಬ್ದದ ಸಮೀಪ ಉಚ್ಚಾರಣೆಯನ್ನೋ ಅಥವಾ ಆ ಶಬ್ದರೂಪದ ಅನುಕರಣೆಯನ್ನೋ ಮಾಡುವುದುಂಟು. ಇದರಿಂದ ಅನೇಕ ಹೊಸ ಶಬ್ದಗಳು ರೂಢಿಗೆ ಬರುತ್ತವೆ. ಜನ್ಮ>ಜಲ್ಮ, ನೋಟೀಸು

> ಲೋಟೀಸು, ನೋಟು > ಲೋಟು, ನರ್ಸ್ > ನರಶಿ–ನರಸಮ್ಮ, ಡ್ರೆಸ್>ದಿರಿಸು, ಬ್ರಷ್ > ಬುರುಸು. Sovereign ಎಂಬ ಶಬ್ದ ಮೂಲತಃ ಇಟಾಲಿಯನ್ Sovran ಶಬ್ದ. ಎಂದರೆ ಸಾರ್ವಭೌಮ, ಆಳುವವನು. ಆಳುವುದು ಎಂಬರ್ಥದ reign ಶ ಇಂಗ್ಲೀಷ್‌ನಲ್ಲಿದೆ. ತಪ್ಪು ಸಾಹಚರ್ಯದಿಂದ Sovran ಗೂ reignಗೂ ಸಂಬಂಧ ಉಂಟಾಗಿ Sovereign ಆಯಿತು. ಮೇರಿ, ಮರಿಯಾ ಮರಿಯಮ್ಮ, ಮಾರಿಯಮ್ಮ ಸಹ ಉಂಟು. ಇದಕ್ಕೆ ಕನ್ನಡ ಮರಿ, ಮಾರಿ ಶಬ್ದಗಳ ತಪ್ಪುಸಾಹಚರ್ಯ ಕಾರಣ. ಗ್ಲೋಬ್ > ಗುಳಾಪು ಆಗಿದೆ.

**೧೧. ಅಂತ್ಯಾಕ್ಷರ ಲೋಪ (Apocope):** ಅನೇಕ ಶಬ್ದಗಳಲ್ಲಿ ಅವುಗಳ ಕೊನೆಯ ಅಕ್ಷರ ಬಿಟ್ಟು ಹೋಗುವುದುಂಟು. ಬಂದನು > ಬಂದ, ತಂದನು > ತಂದ, ಅವನು > ಅವ, ಇವನು > ಇವ (ಇಲ್ಲಿ 'ವ' ಅನುನಾಸಿಕೋಚ್ಚಾರಣೆ ಪಡೆವುದೂ ಉಂಟು). ಇಲ್ಲಿ ಪುಲ್ಲಿಂಗ ಶಬ್ದಗಳೇ ಹೀಗಾಗಿವೆ. ಸ್ತ್ರೀಲಿಂಗ ಶಬ್ದಗಳ ಅಂತ್ಯಾಕ್ಷರ ಲೋಪವಾದರೆ ಅರ್ಥ ಅಸ್ಪಷ್ಟವಾಗುತ್ತದೆ. ಆದ್ದರಿಂದ ಅವು ಬಂದ್ಲು, ಹೋದ್ಲು, ಅವ್ಳು ಆಗುತ್ತವೆ. ಇನ್ನು ಕೆಲವು: ಉಪದ್ರವ > ಉಪದ್ರ, ತಾಪತ್ರಯ > ತಾಪತ್ರೆ, ಬೆಳ್ + ನೆಯ್ > ಬೆಣ್ಣೆ.

**೧೨. ಪದಮಧ್ಯಾಕ್ಷರ ಲೋಪ (Syncope):** ಮಿತವ್ಯಯಾಸಕ್ತಿ ಕಾರಣ ಶಬ್ದದ ಮಧ್ಯಾಕ್ಷರ ಬಿಟ್ಟುಹೋಗುತ್ತದೆ. ಬಂದಿತು > ಬಂತು, ಬೀಟ್ ಧಾತುವಿನಿಂದ ಬಿಟ್ಟಿದು > ಬಿದ್ದಿತು > ಬಿತ್ತು, ಇರುಳು > ಇಳ್ಳು, ಮಹಾಸತಿ > ಮಾಸತಿ > ಮಾಸ್ತಿ ಮಹದೇವ > ಮಾದೇವ, ನೆನಪು > ನೆಪ್ಪು, ಪಂಕ್ತಿ > ಪಂತಿ > ಹಂತಿ, ಆವು+ಕಳ್ > ಆಕಳು (ಕಳ್, ಗಳ್ ಬ.ವ. ಪ್ರತ್ಯಯ, ಆವು = ಹಸು) ಇತ್ಯಾದಿ.

**೧೩. ಆದಿ ಸ್ವರಲೋಪ (Aphoersis or Procope):** ಆದಿಯ ಸ್ವರ ಅಥವಾ ಅಕ್ಷರ ಬಿಟ್ಟು ಹೋಗುವುದು. ಆಚಾರ್ಯ > ಆಚಾರಿ > ಚಾರಿ ಇತ್ಯಾದಿ.

**೧೪. ಸ್ವರಭಕ್ತಿ (Anaptyxis):** ದ್ವಿತ್ವಾಕ್ಷರಗಳ ನಡುವೆ ಉಚ್ಚಾರಣಾ ಸೌಲಭ್ಯದಿಂದ ಸ್ವರ ಆಗಮವಾಗಿ, ಶಬ್ದವನ್ನು ವಿರಳಗೊಳಿಸಿ ಹೇಳುವುದು. ಖಡ್ಗ > ಖಡುಗ, ಯುಕ್ತಿ > ಯುಕುತಿ, ದುರ್ಗ > ದುರುಗು, ಭಕ್ತಿ > ಭಕುತಿ, ಹರ್ಷ > ಹರುಷ, ಬ್ರಹ್ಮ > ಬ್ರಮ್ಮ > ಬರುಮ ಇತ್ಯಾದಿ.

**೧೫. ಧ್ವನಿಜಾರು (Glide):** ಮೇಲಿನ ಸ್ವರಭಕ್ತಿಯಲ್ಲಿ ಸ್ವರಬಂದು ಶಬ್ದ ವಿರಳವಾದರೆ ಇಲ್ಲಿ ಹೊಸಧ್ವನಿ ಆಗಮವಾಗಿ, ಆದೇಶವಾಗಿ ಬರುವುದುಂಟು. ಉಚ್ಚಾರಸೌಲಭ್ಯ ಇದಕ್ಕೆ ಕಾರಣ. ಆಂ+ವಡೆ > ಆಂಬೊಡೆ, ತಾಮ್ರ > ತಾಂಬ್ರ, ಶವ > ಶ್ರವ, ತೊಂಬತ್ತು > ತೊಂಬತ್ತು. ಉಣ್+ವಳಿ > ಉಂಬಳಿ.

ಇವೇ ಅಲ್ಲದೆ ಇನ್ನೂ ಹಲವು ಬಗೆಯ ಧ್ವನಿವ್ಯತ್ಯಾಸಗಳನ್ನು ಗುರುತಿಸಬಹುದು.

ದಂತು>ಜಂತ, ಗೆಳೆಯ > ಗೆಣೆಯ > ಗೆಣ್ಯಾ, ಡಾಬು > ದಾಬು, ಬಹಳ > ಬಾಳ (phonetic shift), ಮಲಗಿ > ಮನಗಿ ಇತ್ಯಾದಿ. ಧ್ವನಿವ್ಯತ್ಯಾಸ ಕಾರಣವಾಗಿ ಹಳಗನ್ನಡದ ಅಕ್ಷರಗಳೂ ಬಿಟ್ಟುಹೋಗಿವೆ. ಱ, ೞ ಗಳಿಂದ ಕೂಡಿದ ಶಬ್ದಗಳು ಳ, ರ ಜೊತೆ ಸೇರಿಹೋಗಿದ್ದರೂ ಕೆಲವು ಶಬ್ದಗಳು ಮೂಲದ ಅರ್ಥ ಸಮೇತ ಮರೆಯಾಗಿವೆ.

## ಅರ್ಥವ್ಯತ್ಯಾಸ

ಇದುವರೆಗೆ ಬಾಷಾವ್ಯತ್ಯಾಸದಲ್ಲಿ ಮುಖ್ಯವಾಗಿ ಧ್ವನಿವ್ಯತ್ಯಾಸಗಳನ್ನು ತಿಳಿಸಲಾಯಿತು. ಈಗ ಅರ್ಥವ್ಯತ್ಯಾಸವನ್ನು ಗಮನಿಸಬಹುದು. ಭಾಷೆಯ ಹುಟ್ಟನ್ನು ಕುರಿತು ಹೇಳುವಾಗ ಶಬ್ದಕ್ಕೂ ಅರ್ಥಕ್ಕೂ ಇರುವ ಸಂಬಂಧದ ಬಗ್ಗೆ ಇರುವ ವಾದ, ಚರ್ಚೆಗಳನ್ನು ಉಲ್ಲೇಖಿಸಿದೆ. ಒಂದು ಶಬ್ದಕ್ಕೆ ಇದೇ ಅರ್ಥ ಎಂದು ಹೇಗೆ ಆಯಿತು? ಶಬ್ದಕ್ಕೂ ಅರ್ಥಕ್ಕೂ ಆಂತರಿಕ ಸಂಬಂಧವಿದೆಯೇ? ಇದ್ದರೆ ಅದು ತಾತ್ಕಾಲಿಕವೇ, ನಿತ್ಯವೆ? ಈ ಪ್ರಶ್ನೆಗಳಿಗೆ ಪ್ರಾಚೀನ ಭಾರತೀಯರು ಹಾಗೂ ಆಧುನಿಕ ಭಾಷಾವಿಜ್ಞಾನಿಗಳು ಬೇರೆಬೇರೆ ಉತ್ತರ ನೀಡಿದ್ದಾರೆ. ಶಬ್ದದ ಅರ್ಥ ಹೊಳೆಯುವ ಬಗೆಯನ್ನು ಪ್ರಾಚೀನ ಭಾರತೀಯ ವಿದ್ವಾಂಸರು ಸ್ಫೋಟವಾದದಲ್ಲಿ ಹೇಳಿದ್ದಾರೆ. ಆ ಅರ್ಥ ಹೊಳೆಯಲು ಸಂಪ್ರದಾಯಪ್ರಜ್ಞೆ ಅವಶ್ಯಕ ಎನ್ನುತ್ತಾರೆ. ಅಂದರೆ ರೂಢಿ ಎಂದೇ ಆಗುತ್ತದೆ. ಆಧುನಿಕರಲ್ಲಿ 'ಅರ್ಥವಿಜ್ಞಾನ' (Semantics) ಪ್ರತ್ಯೇಕ ಶಾಖೆಯಾಗಿ ಬೆಳೆದಿದೆ. ಭಾಷೆ ಅನುಕರಣವೆ, ಯಾದೃಚ್ಛಿಕವೆ ಎಂಬ ಚರ್ಚೆಗಳೂ ಆಗಿವೆ. ಶಬ್ದ–ಅರ್ಥ ಸಂಬಂಧ ಸಹಜವಲ್ಲ, ಆಂತರಿಕವಲ್ಲ, ನಿತ್ಯವಲ್ಲ ಎಂದು ಕೆಲವರ ಅಭಿಪ್ರಾಯ. ಅವರ ಪ್ರಕಾರ 'ಭಾಷೆ' ಎಂಬುದು ಒಂದು ಸಾಮಾಜಿಕ ಒಪ್ಪಂದ (ಅಂದಾಕ್ಷಣ ಜನ ಸೇರಿ ಒಪ್ಪಿ ತೀರ್ಮಾನಿಸಿದರು ಎಂದಲ್ಲ, ರೂಢಿಗೆ ಸಂಬಂಧಿಸಿದ್ದು). ಒಂದು ಸಂಕೇತಕ್ಕೆ ಒಂದು ಅರ್ಥ, ಪರಂಪರೆಯಿಂದ ಸಂಕೇತ ಅರ್ಥ ಬಂದಿರಬಹುದು. ಯಾದೃಚ್ಛಿಕ (Arbitrary) ಎಂದರೆ ಒಪ್ಪಿ ಸ್ವೀಕರಿಸಿದ್ದು; ನೇರ, ಆಂತರಿಕ ಸಂಬಂಧ ಇಲ್ಲದ್ದು.*

---

* ಉದಾಹರಣೆಗೆ ಮನೆಯ ಮಕ್ಕಳನ್ನು ಗಮನಿಸಿ. ಸಮಾಜದ ಭಾಷೆಯಂತೆ ಮನೆಯಲ್ಲಿ ಮಕ್ಕಳದೇ ಒಂದು ಭಾಷೆ ಇರುತ್ತದೆ. ಬಹುವಾಗಿ ಅನುಕರಣ ಶಬ್ದಗಳದ್ದು, ಯಾದೃಚ್ಛಿಕ ಅರ್ಥಉಳ್ಳವೂ ಇರುತ್ತವೆ. ಅದನ್ನು ಗಮನಿಸಿದರೆ ಭಾಷೆಯ ಹುಟ್ಟೂ ಸ್ಪಷ್ಟವಾಗಬಹುದು. ಗ್ರೀಷ್ಮ ಒಂದೂವರೆ ವರ್ಷದ ಮಗು. ಮಾತು ಬರತೊಡಗಿದೆ. ಒಂದೊಂದೇ ಶಬ್ದದಿಂದ ಇಡೀ ವಾಕ್ಯದ ಅರ್ಥ ಸೂಚಿಸಬಲ್ಲುದು. ಆದರದೇ ಪದಕೋಶ ಪ್ರಾರಂಭವಾಗುತ್ತದೆ. ಮಿಯಾವ್, ಬೌಬೌ, ಕಾಕಾ, ಅಂಬಾ ಮುಂತಾದ ಅನುಕರಣ ಶಬ್ದಗಳ ಜೊತೆಗೆ ಈಯ, ಜಿಜ್ಜಿ, ಕಕ್ಕ, ಛೀ, ಗುಮ್ಮ, ತಾಚಿ, ಮಮ್ಮ, ಪಪ್ಪ, ಮುಂತಾದ ಶಬ್ದಗಳನ್ನು ಹಿರಿಯರೂ ಮಗುವಿನೊಂದಿಗೆ ಬಳಸುತ್ತಾರೆ. ಒಂದೊಂದು ಮನೆಯಲ್ಲೂ ಬೇರೆ ಬೇರೆ ಶಬ್ದಗಳಿರಬಹುದು. ಆದರೆ ಆಯಾ ಮನೆಯ ಮಗುವಿಗೆ ಅರ್ಥವಾಗುತ್ತೆ. ಮಗು ಬೆಳೆಯುವವರೆಗೂ

ಒಂದು ಶಬ್ದ ಒಂದು ಸನ್ನಿವೇಶದಲ್ಲಿ ಒಂದು ಅರ್ಥ ಪಡೆದಿದ್ದು, ಕೆಲ ಕಾಲಾನಂತರ ಬೇರೊಂದು ಸನ್ನಿವೇಶದಲ್ಲಿ ಬೇರೆ ಅರ್ಥ ಪಡೆಯಬಹುದು. ಶಬ್ದದ ಅರ್ಥ ವಿಸ್ತರಿಸಬಹುದು, ಸಂಕುಚಿತವಾಗಬಹುದು. ಆದ್ದರಿಂದ ಶಬ್ದದ ಅರ್ಥ ನಿತ್ಯವೂ ಅಲ್ಲ ಎನ್ನಬಹುದು. ಹೀಗೆ ಶಬ್ದದ ಅರ್ಥಗಳಲ್ಲಿ ಕಾಣಬರುವ ಬದಲಾವಣೆಯನ್ನು 'ಅರ್ಥವ್ಯತ್ಯಾಸ' ಎನ್ನುವುದು ಉದಾ: ಕನ್ನಡದಲ್ಲಿ 'ಅಮ್ಮ' ಶಬ್ದಕ್ಕೆ ತಂದೆ ಎಂಬ ಅರ್ಥವಿತ್ತು ಈಗ ತಾಯಿ ಎಂದಾಗಿದೆ. ಅಮ್ಮನ ಗಂಧವಾರಣ, ಕೃಷ್ಣಮಾಚಾರಿ ಶಬ್ದಗಳಲ್ಲಿ ಅಪ್ಪ ಎಂದೇ ಅರ್ಥ. ಸೀರೆ ಎಂದರೆ ವಸ್ತ್ರಸಾಮಾನ್ಯ, ಕುಮಾರವ್ಯಾಸ 'ಕೃಷ್ಣನ ಸೀರೆ'ಯನ್ನು ಹೇಳುತ್ತಾನೆ. ಈಗ ಹೆಂಗಸರು ಉಡುವುದಕ್ಕೆ ಮಾತ್ರ ಅರ್ಥಸೀಮಿತವಾಗಿದೆ. ಹೀಗೆ ಆಗುವ ಅರ್ಥವ್ಯತ್ಯಾಸಗಳಿಗೆ ನಿಯಮ ಹೇಳುವುದು ಸಾಧ್ಯವಿಲ್ಲವಾದರೂ ಕೆಲವು ಬಗೆಗಳನ್ನು ವಿಂಗಡಿಸಿ ವಿವರಿಸಲು ಸಾಧ್ಯವಿದೆ.

**೧. ಸೌಮ್ಯೋಕ್ತಿ, ಭಾಷಾಗೌರವ (Euphemism):** ಅಮಂಗಳ, ಅಶುಭ, ಅಸಹ್ಯ, ಕೆಟ್ಟುದನ್ನು ಬಳಸಾಗಿ ಹೇಳುವುದು ಸೌಮ್ಯೋಕ್ತಿ. ಸ್ತ್ರೀಯರು ಇಂತಹ ಶಬ್ದಗಳನ್ನು ಹೆಚ್ಚು ಪ್ರಯೋಗಿಸುತ್ತಾರೆ; ಸೃಷ್ಟಿಸುತ್ತಾರೆ ಎನ್ನಲೂಬಹುದು.

ಮರಣಹೊಂದು ಎನ್ನುವುದನ್ನು ಕೈಲಾಸವಾಸಿಯಾಗು, ಸ್ವರ್ಗಸ್ಥನಾಗು, ದಿವಂಗತ, ಕೀರ್ತಿಶೇಷ, ಬಯಲಾಗು, ಮುಕ್ತಿಹೊಂದು, ವೈಕುಂಠವಾಸಿಯಾಗು, ಪರಮಪದ ಸೇರು, ಸಾಯುಜ್ಯಹೊಂದು ಇತ್ಯಾದಿಯಾಗಿ ಹೇಳಬಹುದು ಇಂಗ್ಲಿಷಿನಲ್ಲಿ ವ್ಯಂಗ್ಯವಾಗಿ kicked the bucket ಎಂಬುದಿದೆ. ಹೆಣ್ಣುಮಕ್ಕಳು ಬಳೆ ಒಡೆದಾಗ ಬಳೆ ಹೆಚ್ಚಿತು ಎನ್ನುತ್ತಾರೆ. ಕುಂಕುಮ ಹೆಚ್ಚಿತು ಎಂದರೆ ಮುಗಿಯಿತು ಎಂದರ್ಥ. ಊಟಕ್ಕೆ ಕುಳಿತಾಗ ಅಥವಾ ಶುಭಕಾರ್ಯ ನಡೆಸುವಾಗ ದೀಪಶಾಂತವಾಗುತ್ತದೆ, ಆರುವುದಿಲ್ಲ. ಹಾವು ಕಚ್ಚಿತು ಎಂಬುದನ್ನು ಹುಳುಮುಟ್ಟಿತು ಎನ್ನುತ್ತಾರೆ. ಕ್ಷೌರಿಕನನ್ನು ನಾಪಿತ, ಹಜಾಮ

---

ಅದರ ಜೊತೆಗೆ ಮನೆಯವರೆಲ್ಲ ಅದರ ಭಾಷೆಯನ್ನೇ ಬಳಸುತ್ತಾರೆ. ಗ್ರೀಷ್ಮಳಿಗೆ ಟಿ.ವಿ. ವಾರ್ತೆಯ ಪ್ರಾರಂಭದ ಸಂಗೀತ ತುಂಬ ಇಷ್ಟ. ಆಕಸ್ಮಿಕವಾಗಿ ಫ್ರೆಂಡು ಶಬ್ದ ಕಿವಿಗೆ ಬಿತ್ತು. ಆ ಸಂಗೀತವನ್ನು ಅದರಿಂದಲೇ ಗುರುತಿಸುವುದು ರೂಢಿಯಾಗುತ್ತದೆ. ನಿನ್ನ ಫ್ರೆಂಡು ಬರುತ್ತೆ ಎಂದರೆ ಟಿ.ವಿ. ಮುಂದೆ ಹಾಜರು, ಸಂಕೇತ (ಸಿಗ್ನಲ್) ಸಂಗೀತ ಕೇಳಲು, ಮಗು ಬೆಳೆದಂತೆ ಮುಂದೆ ಫ್ರೆಂಡ್ (ವಾಸ್ತವವಾಗಿ ಫ್ರೆಂಡ್ ಎಂದರೆ ಪ್ರೀತಿಸು, ಪ್ರೀತಿ ಎಂದರ್ಥ. ಹಳೆಯ ಇಂಗ್ಲಿಷ್‌ನ freonನಿಂದ (ಪ್ರೀತಿಸು) ಬಂದದ್ದು, ಮಿತ್ರ ಎಂಬುದರ ಅರ್ಥ ವಿಸ್ತರಣೆ.) ಶಬ್ದ ಬೇರೆ ಸನ್ನಿವೇಶದ ಅರ್ಥ ನಿಡತೊಡಗುತ್ತೆ. ಸಮಾಜದ ಬಳಕೆಯ, ರೂಢಿಯ ಶಬ್ದಗಳನ್ನು ತನ್ನ ಭಾಷೆಯ ಶಬ್ದಗಳಿಗೆ ಬದಲಾಗಿ ಬಳಸುವುದನ್ನು ಆ ಮಗುವೂ ಕಲಿಯುತ್ತದೆ. ಅಂದರೆ, ಮಗುವಿನ ಭಾಷೆಗೂ ಆಯಾ ವಸ್ತು, ಕ್ರಿಯೆಗೂ ಯಾವ ನೇರ ಆಂತರಿಕ ಅರ್ಥಸಂಬಂಧವೂ ಇಲ್ಲ. ಮಗು ಮತ್ತು ಆ ಮನೆಯವರಿಗೆ ಮಗು ಬಳಸುವ ಶಬ್ದಗಳ ಅರ್ಥಾ ಯಾದೃಚ್ಛಿಕ, ಮನೆಯವರೆಲ್ಲ ಸ್ವೀಕರಿಸಿ ಒಪ್ಪಿ ಬಳಸಿದ್ದು.

ಎಂದು ಹೇಳುವ ಬದಲು ಹೆಸರಿಲ್ಲದವನು, ಕೆಲಸಿಗ ಎನ್ನುತ್ತಿದ್ದರು, ಈಗ ಬಾರ್ಬರ್ ಎಂದು ಇಂಗ್ಲಿಷ್ ಬಳಸುತ್ತಾರೆ. ಹಳ್ಳಿಗಳಲ್ಲಿ ಹಿಂದಿನ ರೀತಿಯೇ ಉಳಿದಿದೆ. ತಮಿಳಿನಲ್ಲಿ, 'ಅಂಬಟ್ಟನ್' ಎನ್ನುತ್ತಾರೆ. ಅದಕ್ಕೆ ವೈದ್ಯ ಎಂದರ್ಥ, ಕ್ಷೌರಿಕನಿಗೆ ಬಳಸುತ್ತಾರೆ. ಸೌಮ್ಯವಾಗಿ ಹೇಳಲು ನೀರು ಹಾಕಿಕೊ, ಹೊರಗಾಗು ಶಬ್ದಗಳು ರೂಢಿಗೆ ಬಂದಿವೆ. ಒಂದಕ್ಕೆ, ಎರಡಕ್ಕೆ ಹೋಗು, ವಿದ್ಯಾರ್ಥಿಗಳಲ್ಲಿ ಚಾಲ್ತಿಯಲ್ಲಿರುವ ಲಂಡನ್‌ಗೆ ಹೋಗು, ಬಾರತ ಓದು ಇತ್ಯಾದಿ ಸಹ ಅಷ್ಟೆ. ಅಮಂಗಳ ದಿನ ಮಂಗಳವಾರವಾಗುತ್ತದೆ. ವಿಧವೆ ದೀರ್ಘ ಸುಮಂಗಲಿ, ವೇಶ್ಯೆ ನಿತ್ಯ ಸುಮಂಗಲಿಯರಾಗುತ್ತಾರೆ. ಕ್ಷೌರಮಾಡಿಸಿಕೊಳ್ಳುವುದು ಪಟ್ಟಾಭಿಷೇಕವಾಗುತ್ತದೆ, ವ್ಯಂಗ್ಯವಾಗಿ, ತಲೆಬೋಳಿಸಿಕೊಳ್ಳುವುದನ್ನು ಕಲಾಯ್ ಎನ್ನುವುದುಂಟು.

**೨. ವ್ಯಂಗ್ಯೋಕ್ತಿ: Euphemism** ವರ್ಗಕ್ಕೆ ಸೇರಿದರೂ ಇಲ್ಲಿ ವ್ಯಂಗ್ಯ ಪ್ರಧಾನ. ಒಳ್ಳೆಯ ಅರ್ಥದ ಶಬ್ದಗಳನ್ನು ಅದರ ವಿರುದ್ಧಾರ್ಥದಲ್ಲಿ ಪ್ರಯೋಗಿಸುವುದು. ಅವನೊಬ್ಬ ಬೃಹಸ್ಪತಿ, ಪಂಡಿತಪುತ್ರ, ಸರಸ್ವತೀ ಮುರುಕು ಎಂದಾಗ ದಡ್ಡ ಎಂದರ್ಥ. ಅಶೋಕನ ಶಾಸನಗಳ 'ದೇವಾನಾಂ ಪ್ರಿಯ' ಶಬ್ದ ಸಹ ಮೂರ್ಖ ಅರ್ಥದಲ್ಲಿ ಪ್ರಯೋಗವಾಗತೊಡಗಿತು. ಪುರಂದರದಾಸರು ಬರುತ್ತಿದ್ದಾರೆ ಎಂದಾಗ ಕಡುಬಡವ ಎಂದೇ ಅರ್ಥ. ಕಡಲೆಕಾಯಿ ಬಡವರ ಬಾದಾಮಿ. ಧರ್ಮದ ಗೊಡ್ಡು, ಕರ್ಣನ ತುಂಡು, ಹರಿಶ್ಚಂದ್ರನ ಮಗ ಇವೆಲ್ಲ ವ್ಯಂಗಾರ್ಥ ಸೂಚಕವೇ ಆಗಿವೆ.

೩. ಅವಧಾರಣೆಯ ಅತಿಶಯೋಕ್ತಿ ಇದೂ ವ್ಯಂಗ್ಯೋಕ್ತಿಗೆ ಹತ್ತಿರವಾದದ್ದು. ಆದರೆ ಇಲ್ಲಿ ವ್ಯಂಗ್ಯಕ್ಕಿಂತ ಒತ್ತಿ ಹೇಳುವುದು ಮುಖ್ಯ. ಸಣ್ಣ, ಸಾಮಾನ್ಯವಿಷಯವನ್ನು ಅತಿಮಾಡಿ ಹೇಳುವುದು, ಅದಕ್ಕಾಗಿ ದೊಡ್ಡ ವಿಶೇಷ ಶಬ್ದಗಳನ್ನು ಬಳಸುವುದು. ಜಗಳ, ಕಲಹ ಎಂಬರ್ಥದಲ್ಲಿ, ಕುರುಕ್ಷೇತ್ರ ಪ್ರಾರಂಭವಾಯಿತು ಎನ್ನುವುದು. ಹಿಂದೆ ಹೇಳಿದಂತೆ ಇಸ್ಪೀಟಾಟಕ್ಕೆ ಭಾರತ ಓದುವುದು, ಗೀತಾ ಪಾರಾಯಣ ಇತ್ಯಾದಿ ಬಳಸುವುದುಂಟು. ಅಶ್ವಮೇಧ ಎಂದರೆ ಕುದುರೆ ಜೂಜು. ಅವರ ಮನೆಯಲ್ಲಿ ಇಂದು ಕುಕ್ಕುಟಯಾಗ ಎಂದರೆ ಕೋಳಿ ಅಡಿಗೆ ಎಂದರ್ಥ. ಸಸ್ಯಾಹಾರಿಗಳೆದುರು ಮಾಂಸಾಹಾರಿಗಳು ಮಾತನಾಡುವಾಗ ಇಂಥ ಸಂಕೇತ ಶಬ್ದಗಳು ಹೆಚ್ಚು. ಸೈಕಲ್ ಎಂದರೆ ಕೋಳಿ, ಕಾರ್=ಕುರಿ, ಸಬ್‌ಮೆರೀನ್=ಮೀನು ಇತ್ಯಾದಿ.

೪. ಅಲಂಕಾರಿಕ ಭಾಷೆ: ಅರ್ಥದ ಸ್ಪಷ್ಟತೆಗಾಗಿ, ಆಡಂಬರಕ್ಕಾಗಿ, ಚಾತುರ್ಯದ ಮಾತಿಗಾಗಿ ಅಲಂಕಾರಗಳನ್ನು ಮಾತಿನಲ್ಲಿ ಬಳಸುವುದುಂಟು. ಹೆಚ್ಚು ರೂಢಿಯಲ್ಲಿರುವ ಅಲಂಕಾರವೆಂದರೆ ರೂಪಕ (Metaphor). ಇವು ವ್ಯಂಗ್ಯಾರ್ಥವಿಲ್ಲದೆಯೂ ತೀರ ಸಹಜವಾಗಿ ಸಂಭಾಷಣೆಯಲ್ಲಿ ಸೇರಿಸುವುದುಂಟು. ಭಗೀರಥ ಪ್ರಯತ್ನ ಒಂದು ರೂಪಕವಾಗಿ ವ್ಯಕ್ತಿ ಕೆಲಸ ಸಾಧಿಸಲು ಪಡುತ್ತಿರುವ ಕಷ್ಟವನ್ನು ತಿಳಿಸುತ್ತದೆ. ಹಿತ್ತಾಳೆ

ಕಿವಿ, ಬಂಗಾರ ಮನುಷ್ಯ, ಹೂವಿನ ಸರ ಎತ್ತಿದಂತೆ, ಉದರ ವೈರಾಗ್ಯ, ಬೆಣ್ಣೆಯಲ್ಲಿ ಕೂದಲು ತೆಗೆ, ಮೊಸರಲ್ಲಿ ಕಲ್ಲು ಇತ್ಯಾದಿ ಈ ವರ್ಗಕ್ಕೆ ಸೇರುತ್ತವೆ.

ಇನ್ನೊಂದು ವರ್ಗದ ಶಬ್ದಗಳಿವೆ. ತಮ್ಮ ಕೋಶಾರ್ಥ ಬಿಟ್ಟು ಬೇರೆ ಬೇರೆ ಅರ್ಥಗಳಲ್ಲಿ ಪ್ರಯೋಗವಾಗುತ್ತವೆ. ಮುಂದೆ ಅಂತಹ ಶಬ್ದಗಳಿಗೆ ಅರ್ಥ ದೃಷ್ಟಿಯಿಂದ ಉಂಟಾಗುವ ವಿವಿಧ ಅವಸ್ಥೆ ಅಥವಾ ಅರ್ಥವ್ಯತ್ಯಾಸವನ್ನು ಗಮನಿಸಬಹುದು. ಈ ವರ್ಗದಲ್ಲಿ ಐದು ಬಗೆಗಳಿವೆ: ಅರ್ಥವಿಕಾಸ, ಅರ್ಥಸಂಕೋಚ, ಉತ್ತಮಾರ್ಥ ಅಥವಾ ಅರ್ಥಶ್ರೀಮಂತಿಕೆ, ಹೀನಾರ್ಥ ಅಥವಾ ಅಪಕರ್ಷ ಅಥವಾ ಅಪಮೌಲ್ಯ, ಕೊನೆಯದು ಅರ್ಥಾಂತರ.

**೫. ಅರ್ಥವಿಕಾಸ (Widening or extension of meaning):** ಒಂದು ಶಬ್ದಕ್ಕೆ ಮಿತವಾದ ಖಚಿತವಾದ ನಿರ್ದಿಷ್ಟವಾದ ಅರ್ಥವಿದ್ದು ಕಾಲಕ್ರಮೇಣ ಅದು ವಿಕಾಸ ಹೊಂದಿ ವಿಶಾಲಾರ್ಥ ಪಡೆಯಬಹುದು.

ಎಣ್ಣೆ ಎಂಬುದು ಎಳ್+ನೆಯ್‌ನಿಂದಾದದ್ದು. ಎಳ್ಳಿನ ಜಿಡ್ಡು ಎಂಬರ್ಥವಿತ್ತು. ಈಗ ಎಣ್ಣೆ=ಜಿಡ್ಡು ಎನ್ನುವ ವಿಶಾಲಾರ್ಥ ಪಡೆದಿದೆ. ಬೇವಿನೆಣ್ಣೆ, ಹೊಂಗೆಯೆಣ್ಣೆ, ಕಡಲೆಕಾಯೆಣ್ಣೆ, ಕೊಬ್ಬರಿಯೆಣ್ಣೆ ಇತ್ಯಾದಿ. ಸಾಲದ್ದಕ್ಕೆ 'ಎಣ್ಣೆ'ಯ ಮೂಲ 'ಎಳ್' ಎಂಬುದು ಮರೆತು ಹೋಗಿ ಎಳ್ಳೆಣ್ಣೆ, ಹುಚ್ಚೆಳ್ಳೆಣ್ಣೆ, ಅಚ್ಚೆಳ್ಳೆಣ್ಣೆ ಪ್ರಯೋಗದಲ್ಲಿದೆ. ಆಗ ಎಳ್+ಎಳ್+ನೆಯ್=ಎಳ್ಳೆಣ್ಣೆ ಆಗುತ್ತದೆ. ಹಾಗೆ 'ಓಲೆ' ಶಬ್ದ. ಓಲೆ ಎಂದರೆ ಎಲೆಯಿಂದ ಮಾಡಿದ, ಸುರುಳಿಸುತ್ತಿ ಮಾಡಿದ ಕಿವಿಯ ಆಭರಣ ಎಂದರ್ಥ. ಬೆಂಡು+ಓಲೆ=ಬೆಂಡೋಲೆ ಎಂಬಲ್ಲಿ ಬೆಂಡಿನಿಂದ ಮಾಡಿದ ಕಿವಿಯಾಭರಣ. ಈಗ ಎಲೆ, ಬೆಂಡುಗಳು ಮಾತ್ರವಲ್ಲದೆ ಚಿನ್ನದೋಲೆ, ವಜ್ರದೋಲೆಗಳಾಗಿವೆ. ಸಾಲದು ಎಂಬಂತೆ ಬೆಂಡನ್ನು ಸೇರಿಸಿ ಮುತ್ತಿನ ಬೆಂಡೋಲೆ, ವಜ್ರದ ಬೆಂಡೋಲೆ ಎನ್ನುವುದೂ ರೂಢಿಯಾಗಿದೆ. ನಿರ್ದಿಷ್ಟ ಅರ್ಥದ ಓಲೆ ವಿಶಾಲಾರ್ಥ ಪಡೆಯಿತು. ಓಲೆಗೆ ಕಿವಿಯ ಆಭರಣ ಅರ್ಥವಲ್ಲದೆ ಪತ್ರ – letter–ಅರ್ಥವೂ ಬಂದು (ಎಲೆಯ ಮೇಲೆ ಬರೆಯುತ್ತಿರುವುದರಿಂದ), ಮಾರೋಲೆ (reply) ಸುತ್ತೋಲೆ (circular) ಅರ್ಥಗಳಿಗೂ ವ್ಯಾಪಿಸಿದೆ.

ಚೊಂಬು ಶಬ್ದ ಸಹ ಅಷ್ಟೆ. ಚೆಂಬು ಚೆನ್+ಪೊನ್‌ನಿಂದಾದ ಶಬ್ದ. ಚೆನ್ < ಕೆನ್ ಕೆಂಪಾದ ಎಂದರ್ಥ. ಪೊನ್ ಎಂದರೆ ಲೋಹಸಾಮಾನ್ಯ ಅರ್ಥವಿತ್ತು. ಚೆಂಬು ಶಬ್ದದಲ್ಲಿ ಎರಡು ಬಗೆಯ ಕ್ರಿಯೆ ನಡೆದಿದೆ. ಒಂದು: ಪೊನ್ ಎಂದರೆ ಲೋಹ ಎಂಬ ಸಾಮಾನ್ಯಾರ್ಥ, ವಿಶಾಲಾರ್ಥ ಇದ್ದುದು ಸಂಕುಚಿತವಾಗಿ 'ಚಿನ್ನ' ಎಂಬ ನಿರ್ದಿಷ್ಟ ಅರ್ಥ ಪಡೆದ ಕಾರಣ ಲೋಹ ಎಂಬರ್ಥ ಜನರ ಮನಸ್ಸಿನಿಂದ ಮರೆಯಾಯಿತು. ಎರಡು: ಚೆನ್ ಪೊನ್ ಎಂದರೆ ಕೆಂಪಾದ ಲೋಹ, ತಾಮ್ರ ಎಂಬರ್ಥವಿತ್ತು. ಅದರಿಂದ

ಮಾಡಿದ ಪಾತ್ರೆ ಚೆನ್ಬು. ಮೂಲಾರ್ಥ ಮರೆಯಾಗಿ ಅಥವಾ ಅರ್ಥವಿಕಾಸ ಹೊಂದಿ ಬೆಳ್ಳಿ ಚೆಂಬು, ಹಿತ್ತಾಳೆ ಚೆಂಬು, ಚಿನ್ನದ ಚೆಂಬು ಆದುವು. ಚೆಂಬು ಪಾತ್ರೆ ಎಂಬ ಸಾಮಾನ್ಯಾರ್ಥ ಪಡೆದುದರಿಂದ ತಾಮ್ರದ ಚೆಂಬು ಎಂದೂ ಹೇಳುತ್ತೇವೆ. ಇದು ದ್ವಿರುಕ್ತಿಯೂ ಆಗುತ್ತದೆ. ಚೆಂಬು > ಚೊಂಬು ಎಂದು ಸಮರೂಪಧಾರಣೆಯೂ (assimilation) ಮಾಡಿದೆ.

'ಓ' ಎಂದರೆ ರಕ್ಷಿಸು, ಓಪ=ರಕ್ಷಕ. ಆದರೆ ಪ್ರಿಯ ಎಂಬರ್ಥ ಪಡೆದಿದೆ. ಇಂಗ್ಲಿಷಿನ Virtue ಶಬ್ದ ಮೂಲತಃ ಶೌರ್ಯ ಎಂಬರ್ಥದ್ದು. ಮಿಲ್ಟನ್ ಸೈತಾನನ virtue ಹೇಳುತ್ತಾನೆ. Vir(ವೀರ) ಎಂಬ ಲ್ಯಾಟಿನ್ ಮೂಲದಿಂದ ಬಂದದ್ದು. ಈಗ ಸದ್ಗುಣ ಅರ್ಥ ಪಡೆದು ವಿಕಾಸ ಹೊಂದಿದೆ. Salaryಯ ಕಥೆ ತಮಾಷೆಯಾಗಿದೆ. "A salary is an allowance for 'Sal', 'Salt'". ಉಪ್ಪಿನ ಭತ್ಯ ಎಂಬುದು ಅರ್ಥವಿಕಾಸ ಹೊಂದಿ ಸಂಬಳ, ವೇತನ, ಪಗಾರವಾಯಿತು. ಮೈಸೂರ ಕಡೆ 'ಬೆರಕಿ' ಎಂದರೆ ಒಂದು ಬೈಗುಳ, ಬೇರೆ ಬೇರೆ ಜಾತಿಗೆ ಹುಟ್ಟಿದವನು ಎಂಬರ್ಥದಲ್ಲಿ ಬೆರಸು–ಮಿಶ್ರಣ. ಉತ್ತರ ಕರ್ನಾಟಕದಲ್ಲಿ 'ಬೆರಕಿ' ಜಾಣ ಎಂಬರ್ಥ ಪಡೆದಿದೆ.

ಅರ್ಥವಿಕಾಸದಲ್ಲಿ ಇನ್ನೊಂದು ಗುಂಪಿನ ಶಬ್ದಗಳಿವೆ. ಅವು ವ್ಯಕ್ತಿನಾಮ ಜನ್ಮ ಶಬ್ದಗಳು. ಎಷ್ಟೋ ವ್ಯಕ್ತಿಗಳು ತಾವು ಸತ್ತನಂತರವೂ ತಮ್ಮ ವ್ಯಕ್ತಿತ್ವದ ಕಾರ್ಯದ ವೈಶಿಷ್ಟ್ಯ ಬಿಟ್ಟು ಹೋಗುತ್ತಾರೆ. ಅದು ಒಳ್ಳೆಯದಾಗಿರಬಹುದು, ಕೆಟ್ಟದಾಗಿರಬಹುದು. ಆ ಗುಣಕ್ಕೆ, ಆ ರೀತಿಗೆ ಅವರ ಹೆಸರೇ ರೂಢಿಯಾಗುತ್ತದೆ. ಹೊಸ ಅರ್ಥ ಪಡೆಯುತ್ತದೆ. ವಾತ್ಸಾಯನ ಕಾಮಶಾಸ್ತ್ರ ಬರೆದವನು. ಕಾಮಶಾಸ್ತ್ರಕ್ಕೆ ವಾತ್ಸಾಯನ ಹೆಸರು ಬಂದಿದೆ. ಹಾಗೇ ಶಾಲಿಹೋತ್ರ, ಪಾಲಗಾಪ್ಯ ಅಶ್ವಶಾಸ್ತ್ರ, ಗಜಶಾಸ್ತ್ರಗಳ ಹೆಸರಾಗಿವೆ. ಅವನೊಬ್ಬ ಚಾಣಕ್ಯ, ಶಕುನಿ, ಶಿಖಂಡಿ, ಮೀರ್ ಸಾದಕ್ ಎನ್ನುತ್ತೇವೆ. ಶ್ರೀಮಂತ Sad ಎಂಬುವನಿಂದ Sadism (ದೈಹಿಕ ಹಿಂಸೆ ಮಾಡುವುದರಿಂದ ಸಂತೋಷ ಪಡೆಯುವುದು) ಬಂದಿದೆ. ತಾಟಕಿ, ಕೀಚಕ ಶಬ್ದಗಳೂ ಈ ಬಗೆಯವು.

**೬. ಅರ್ಥಸಂಕೋಚ (Narrowing of meaning or contraction):** ವಿಕಾಸಕ್ಕೆ ವಿರುದ್ಧವಾದುದು ಸಂಕೋಚ. ವಿಶಾಲಾರ್ಥ ಪಡೆದಿದ್ದ ಶಬ್ದಗಳು ಯಾವುದಾದರೂ ಒಂದು ವಿಶಿಷ್ಟ, ನಿರ್ದಿಷ್ಟ ಅರ್ಥದಲ್ಲಿ ಸೀಮಿತವಾಗಿ ಪ್ರಯೋಗವಾಗುತ್ತವೆ. ತಮಿಳಿನಲ್ಲಿ (ಕನ್ನಡದಲ್ಲೂ ಸಹ) 'ನೆಯ್' ಎಲ್ಲ ಜಿಡ್ಡು (oil) ಗಳಿಗೂ ಅನ್ವಯಿಸುತ್ತಿತ್ತು. ಈಗ ಹಸುವಿನ ತುಪ್ಪ ಎಂಬರ್ಥಕ್ಕೆ ಸೀಮಿತವಾಗಿದೆ. ಕನ್ನಡದಲ್ಲಿ ಎಣ್ಣೆ, ಬೆಣ್ಣೆ (ಬೆಳ್+ನೆಯ್) ಮುಂತಾದ ಸಮಾಸಪದಗಳಲ್ಲಿ ಮಾತ್ರ ಉಳಿದು, ಸ್ವತಂತ್ರ ಬಳಕೆಯಾಗಿ 'ನೆಯ್' ತಪ್ಪಿಹೋಗಿದೆ. ಸಂಧ್ಯಾ ಎಂದರೆ ಸಂಧಿ ಸಮಯ; ಪ್ರಾತಃಸಂಧ್ಯಾ, ಸಾಯಂಸಂಧ್ಯಾ ಎರಡಕ್ಕೂ ಅನ್ವಯಿಸುತ್ತಿತ್ತು. ಈಗ ಸಾಯಂಕಾಲ, ಸಂಜೆ (< ಸಂಧ್ಯಾ) ಅರ್ಥದಲ್ಲಿ

ಮಾತ್ರ ಬಳಸಲಾಗುತ್ತಿದೆ. ಹಿಂದೆ ತಿಳಿಸಿದಂತೆ 'ಪೊನ್' ಅರ್ಥ ಲೋಹ ಎಂಬುದು ಸೀಮಿತವಾಗಿ ಚಿನ್ನ, ಹೊನ್ನು ಎಂದಾಗಿದೆ (ಕೆನ್ > ಚೆನ್ + ಪೊನ್=ಚೆಂಬೊನ್, ತಾಮ್ರ, ಕರ್+ಪೊನ್ = ಕರ್ಪೊನ್, ಕಬ್ಬಿಣ)

'ಕೂಸು' ಎಂದರೆ ಮಗು, ಶಿಶು ಎಂಬರ್ಥ ಬಂದಿದೆ. ಹಿಂದೆ ಇದಕ್ಕೆ 'ಸ್ತ್ರೀ' ಎಂಬರ್ಥವಿತ್ತು. ಕೊಡಗೂಸಿನಲ್ಲಿ ಈಗಲೂ ಆ ಅರ್ಥವಿದೆ. ಕೊಡಲಿರುವ ಕೂಸು ಕೊಡಗೂಸು=ಹೆಣ್ಣು. ಪೆಣ್+ಕೂಸು ಸೇರಿ ಪೆಣ್ಗೂಸು > ಹೆಂಗುಸು > ಹೆಂಗಸು ಆಗಿದೆ. ಇದು ದ್ವಿರುಕ್ತಿಯೆ. ವಡ್ಡಾರಾಧನೆ, ಪಂಪನ ಕೃತಿಗಳಲ್ಲೂ ಹರೆಯದ ಹುಡುಗಿ ಅರ್ಥವಿದೆ. ಶಬ್ದಮಣಿದರ್ಪಣಕಾಲಕ್ಕೆ ಚಿಕ್ಕದು, ಕಿರುದು ಅರ್ಥ ಬಂದಿತು. "ಪ್ರಾಯಂ ಕೂಸಾದೊಡೆ ಅಭಿಪ್ರಾಯ ಕೂಸಕ್ಕುಮೆ."

ಸಂಸ್ಕೃತ 'ಚೀರ'ದ ತದ್ಭವ 'ಸೀರೆ'. ಚೀರವೆಂದರೆ ವಸ್ತ್ರಸಾಮಾನ್ಯ. ಕನ್ನಡದಲ್ಲಿ ಈಗ ಹೆಂಗಸರು ಉಡುವುದು ಮಾತ್ರವಾಗಿದೆ. "ಊರ ಸೀರೆಗೆ ಅಗಸ ತಡವಡಗೊಂಬಂತೆ", "ಒಂದು ದಮ್ಮಕ್ಕಾದೊಡಮ್ ಸೀರೆಯಮ್ ಕುಡಿಯಿಮ್" ಇತ್ಯಾದಿ ಸಾಮಾನ್ಯ ವಸ್ತ್ರ ಅರ್ಥದ ಪ್ರಯೋಗಗಳು ಚೀರ > ಸೀರೆ, ಅರ್ಥ ಸಂಕುಚಿತವಾಯಿತು. ಅದರಂತೆ ಕುಪ್ಪಸ, ಸಂಸ್ಕೃತ ಕೂರ್ಪಾಸದಿಂದ ಬಂದದ್ದು. ಕವಚ ಎಂದರ್ಥ. ಯೋಧರು ಕುಪ್ಪಸ ಧರಿಸುತ್ತಿದ್ದರು. ಈಗ ಹೆಂಗಸರು ಧರಿಸುವುದು ಮಾತ್ರವಾಗಿದೆ. ಇಂಗ್ಲಿಷಿನಲ್ಲೂ ಸಹ ಹೆಚ್ಚು ಬಳಕೆಯ ಶಬ್ದಗಳೇ ಹೀಗಾಗಿವೆ. Meat ಎಂದರೆ ಆಹಾರ ಎಂಬ ವಿಶಾಲಾರ್ಥ (Sweet meat stall) ಇದ್ದುದು ಮಾಂಸ ಎಂದಾಗಿದೆ. Wife ಎಂದರೆ ಸ್ತ್ರೀ ಎಂಬ ವಿಶಾಲಾರ್ಥ, ಈಗ ಹೆಂಡತಿಗೆ ಸಂಕುಚಿತಗೊಂಡಿದೆ. ಈಗಲೂ housewife, midwifeಗಳಲ್ಲಿ ಹಿಂದಿನರ್ಥವಿದೆ. Deer ಎಂದರೆ ಪ್ರಾಣಿಸಾಮಾನ್ಯ, ಜಿಂಕೆ ಎಂದು ಅರ್ಥಸಂಕೋಚ ಪಡೆಯಿತು.

**೭. ಉತ್ತಮಾರ್ಥ, ಅರ್ಥಶ್ರೀಮಂತಿಕೆ (Elevation of meaning or Amelioration):** ಒಂದು ಕಾಲಕ್ಕೆ ಹೀನಾರ್ಥ, ಕೀಳು ಅರ್ಥ ಪಡೆದಿದ್ದ ಶಬ್ದಗಳು ಉತ್ತಮಾರ್ಥ ಪಡೆದು ರೂಢಿಯಲ್ಲಿವೆ. ಕೆಲವು ಶಬ್ದಗಳಿಗೆ ಒದಗುವ ಈ ಅರ್ಥಶ್ರೀಮಂತಿಕೆ ಅಪಮೌಲ್ಯಕ್ಕೆ ವಿರುದ್ಧವಾದುದು. 'ಹೊಂದು' ಎಂದರೆ ಸಾಯುವುದು ಎಂದರ್ಥವಿತ್ತು, ಹಳಗನ್ನಡದಲ್ಲಿ. ಈಗ ಪಡೆಯುವುದು ಎಂದಾಗಿದೆ. ತಮಿಳಿನ 'ಕಳಿಪ್ಪು' ಶಬ್ದಕ್ಕೆ ಸುರಾಪಾನದಿಂದಾಗುವ ಸಂತೋಷ ಎಂಬಂರ್ಥವಿತ್ತು. ಈಗ ಎಲ್ಲ ಬಗೆಯ ಸುಖ, ಸಂತೋಷ, ಭೋಗಕ್ಕೆ ಅನ್ವಯಿಸುತ್ತದೆ. ಸಭೆಯಲ್ಲಿರುವವನು 'ಸಭ್ಯ'. ಈಗ ಯೋಗ್ಯ, gentleman ಎಂಬರ್ಥ. ಪೀತಾಂಬರ ಎಂದರೆ ಹಳದಿ ವಸ್ತ್ರ ಮಾತ್ರವಾಗಿತ್ತು. ಈಗ ಶ್ರೀಮಂತರ ಜರಿ ಕೂಡಿದ ವಸ್ತ್ರ ಅರ್ಥ ಪಡೆದಿದೆ. ಮೂಗುತಿ ಎಂದರೆ ಮೂಗು+ಕುತ್ತಿ=ಮೂಗು ಚುಚ್ಚಿ ಎಂದರ್ಥ. ಆದರೆ ಮೂಗಿನಲ್ಲಿ ತೊಡುವ

ಒಡವೆಯಾಯಿತು. Lord ಮತ್ತು Lady ಎಂದರೆ ಬ್ರೆಡ್ಡು, ರೊಟ್ಟಿಯ ರಕ್ಷಕ, ರೊಟ್ಟಿ ನೀಡುವವಳು ಎಂಬರ್ಥವಿದ್ದದ್ದು ಶ್ರೀಮಂತ ಅರ್ಥ ಪಡೆಯಿತು. ಈಗ ಅವರು ರಾಜಮಾನ್ಯರು. Knight ಎಂದರೆ ಸೇವಕ ಎಂದು ಅರ್ಥವಿತ್ತು. ಈಗ ಶ್ರೇಷ್ಠ, ವೀರ ಎಂಬರ್ಥ ಪಡೆದು ಪ್ರಶಸ್ತಿಯ ಹೆಸರೂ ಆಗಿದೆ (Knighthood). ಮೂಲತಃ Fame ಎಂದರೆ ವರದಿ, ಈಗ ಪ್ರಸಿದ್ಧಿ, ಕೀರ್ತಿ, 'ಸಭಿಕ' ಎಂದರೆ ಕುಡುಕ ಎಂಬರ್ಥ ಹೋಗಿ ಈಗ ಸಭಾಸದ ಎಂದಾಗಿದೆ.

**೮. ಹೀನಾರ್ಥ, ಅಪಮೌಲ್ಯ (Degeneration of meaning):** ಒಂದು ಕಾಲಕ್ಕೆ ಉತ್ತಮ, ಶ್ರೇಷ್ಠ ಅರ್ಥ ಕೊಡುತ್ತಿದ್ದ ಶಬ್ದಗಳು ಕೀಳರ್ಥ, ಹೀನಾರ್ಥ ಪಡೆಯುವುದುಂಟು. ಇದನ್ನು ಶಬ್ದದ ಅಪಕರ್ಷ, ಅಪಮೌಲ್ಯ ಎನ್ನುತ್ತಾರೆ. ಇವುಗಳಲ್ಲಿ ಮೂರು ಬಗೆ ಉಂಟು. ಒಂದನೆಯದು: ಒಳ್ಳೆಯ ಅರ್ಥವನ್ನು ಕೊಡುತ್ತಿದ್ದ ಶಬ್ದಗಳು, ಪಡೆನುಡಿಗಳು ಲಕ್ಷಣಾರ್ಥ ಕಾರಣ ಅಣಕಕ್ಕೆ ಎಡೆಗೊಡುತ್ತವೆ. ಉದಾ: ಪೂಜೆ ಮಾಡು, ಮಂಗಳಾರತಿ ಆಗು, ಮೂರುನಾಮ ಹಾಕು, ಟೋಪಿ ಹಾಕು, ಕುಂಬಕೋಣಂ ಆಯಿತು, ತಿರುಪತಿ ಕ್ಷೌರ ಇತ್ಯಾದಿ. ಇವೆಲ್ಲ ನಿಂದನೆಗೆ, ಮೋಸಕ್ಕೆ, ವಂಚನೆಗೆ ಪ್ರಯೋಗವಾಗುತ್ತಿವೆ. ಯುದ್ಧದಲ್ಲಿ "ಶಂಖಂ ಪಾಂಚಜನ್ಯಂ ಪೂರಯಿತ್ವಾ" ಸಿಂಹನಾದ ಮಾಡುವುದು ಹೋಗಿ ಶಂಖಬಾರಿಸು ಎಂದರೆ ಬಾಯಿ ಬಡಿದುಕೊಂಡು ಅಳು, ತೀವ್ರ ದುಃಖ ಇತ್ಯಾದಿ ಅರ್ಥ ಬಂದಿದೆ. ಒಂದೇ ಅರ್ಥದ ಎರಡು ಶಬ್ದಗಳು ಇದ್ದಾಗ ಒಂದನ್ನು ಒಳ್ಳೆಯ, ಗೌರವದ ಅರ್ಥದಲ್ಲೂ ಇನ್ನೊಂದನ್ನು ಕೀಳು ಎಂಬಂತೆಯೂ ಬಳಸುವುದುಂಟು. ಆಫೀಸು–ಕಛೇರಿ, ಮನೆ–ಝೋಪಡಿ, ಪರ್ವತ (ದೊಡ್ಡದು)–ಬೆಟ್ಟ (ಚಿಕ್ಕದು), ಅನ್ನ–ಕೂಳು, ಚಪ್ಪಲಿ–ಕೆರ ಇತ್ಯಾದಿ.

ಮೂರನೆಯದಾಗಿ, ಉಳಿದ ಎಲ್ಲ ಶಬ್ದಗಳು; ನಿಯಮವನ್ನು ಹೇಳಲಾಗದುವು. ಶಬ್ದಗಳು ಭಾರತದ ರೂಪಾಯಿಯಂತೆ, ಮನುಷ್ಯನಂತೆ ಬೆಲೆ ಕಳೆದುಕೊಳ್ಳುತ್ತವೆ. Hooligan ಎಂಬುದು ಐರ್ಲೆಂಡಿನ ಒಂದು ಮನೆತನದ ಹೆಸರು. ಅವರು ಇತಿಹಾಸ ಕಾಲದಲ್ಲಿ ಗದ್ದಲ ಎಬ್ಬಿಸಿದವರು. ಇಂದು ಅದಕ್ಕೆ ಗೂಂಡಾ ಅರ್ಥ ಬಂದಿದೆ. ಗೂಂಡಾ ಶಬ್ದ ಸಹ ಪಾರಸಿ ಗುಂಡಾ, ಗುಂಡ್=ತಂಡ, ಜಂಗುಳಿ, ಸೈನ್ಯ ಅರ್ಥವಿದ್ದುದು ಭಾರತದಲ್ಲಿ ಸೈನಿಕರು ಪುಂಡಾಟ ನಡೆಸಿದ್ದರಿಂದ ಪುಂಡರು ಅರ್ಥ ಪಡೆಯಿತು. Rivals ಎಂದರೆ ನದಿಯ ಆಚೆ–ಈಚೆ ದಡದವರು ಎಂಬರ್ಥವಿತ್ತು. ಈಗ ಪ್ರತಿಸ್ಪರ್ಧಿಗಳು, ವೈರಿಗಳು ಎಂದಾಗಿದೆ. God-sib ಎಂದರೆ ದೇವರಿಗೆ ಸಂಬಂಧ ಪಟ್ಟುದು, ಸುಖವಾದದ್ದು. ಅದು gossip ಆಗಿ ಪಿಸುಮಾತು, ಹರಟೆಯಾಗಿದೆ. Lambart'la Begue ಎನ್ನುವವನು ಸ್ಥಾಪಿಸಿದ ಧರ್ಮ ಪಂಥದವನು beggar. ಈಗ ಭಿಕ್ಷುಕ.

‘ಗಮಾರ’ ಎಂದರೆ ಹಳ್ಳಿಯವನು, ಆದರೆ ದಡ್ಡ, ಅಸಂಸ್ಕೃತ ಅರ್ಥ ಪಡೆದಿದೆ. ಆಳ್ ಎಂದರೆ ಮನುಷ್ಯ, ಶೂರ, ಯೋಧ ಮೊದಲಾದ ಅರ್ಥಗಳಿದ್ದುವು. ಈಗ ಸೇವಕ ಅರ್ಥ ಬಂದಿದೆ. ಸಂಸ್ಕೃತ ಶಬ್ದ ಅನ್ನ ರೂಢಿಗೆ ಬಂದಮೇಲೆ ಕನ್ನಡದ ಸಮಾನಾರ್ಥಕ ಶಬ್ದ ಕೂಳ್ ಬಳಕೆ ತಪ್ಪಿ, ಪಿಂಡ ಎಂಬರ್ಥದಲ್ಲಿ (ಹಿಂಡೇ ಕೂಳು) ಮತ್ತು ತಂಗಳನ್ನ (ತಣ್+ಕೂಳ್+ಅನ್ನ) ಎಂಬಲ್ಲಿ ಉಳಿದಿದೆ. ಓಜ < ಉಪಾಧ್ಯಾಯದಿಂದ ಬಂದದ್ದು. ಉವಜ್ಝಾಯ, ಒವಜ ಶಬ್ದಗಳಿವೆ. ಕವಿರಾಜಮಾರ್ಗಕಾರ ‘ಗುರು’ ಅರ್ಥದಲ್ಲಿ ಬಳಸಿದ್ದಾನೆ. ಪಂಪ ‘ಬಿಲ್ಲೋಜ’ ಎಂದು ಗುರುಗಳನ್ನು ಕರೆದಿದ್ದಾನೆ. ಈಗ ಅಕ್ಕಸಾಲಿಗ, ಕಲ್ಲುಕುಟಿಗ ಆಗಿದೆ. ಹೊಯ್ಸಳರ ಕಾಲಕ್ಕೆ ದಾಸೋಜ ಮೊದಲಾದ ಶಿಲ್ಪಿಗಳ ಹೆಸರು ರೂಢಿಯಲ್ಲಿತ್ತು. ದೆವ್ವ, ದೇಗುಲ < ದೇವ, ದೇವಕುಲದಿಂದ ಬಂದುವು. ಬೇರೆಯೇ ಅರ್ಥ ಪಡೆದಿವೆ. ಕನ್ನಡದಲ್ಲಿ ನಾರು ಎಂದರೆ ಸುವಾಸನೆ, ಕಂಪು, ಪರಿಮಳ ಅರ್ಥವಿತ್ತು. ನರುಗಂಪು ಎಂಬಲ್ಲಿ ಈಗಲೂ ಈ ಅರ್ಥವಿದೆ. ಈಗ ನಾರುತ್ತದೆ ಎಂದರೆ ದುರ್ಗಂಧ. ‘ನಾತ’ ಎಂದರೂ ನಾರುವಿನಂತೆ ಸುವಾಸನೆಯೆ. ಅದೂ ಕೊಳೆತು ಕೆಟ್ಟನಾತ ಅರ್ಥ ಪಡೆದಿದೆ. ಕೊಳೆತ ಶಬ್ದಕ್ಕೂ ಆಗತಾನೆ ಬಿರಿದ, ಪರಿಮಳಯುಕ್ತ ತಾಜಾ ಅರ್ಥವಿತ್ತು. ‘ಹಾರುವ’ನಿಗೆ ತುಂಬ ಗೌರವ ಇತ್ತು. ಪಾರ್=ನೋಡು, ಪಾರ್ವ=ನೋಡುವವನು, ದ್ರಷ್ಟಾರ. ಪ > ಹ ಆಯಿತು, ಜೊತೆಗೆ ಅರ್ಥವೂ ಬದಲಾಗಿ ಬಡಹಾರುವನಾದ. ಬಿನ್ನಾಣ < ವಿಜ್ಞಾನದ ತದ್ಭವ, ಬಿನ್ನಾಣಗಿತ್ತಿ ಎನ್ನುವಾಗ ಅಪಮೌಲ್ಯ ಹೊಂದಿತು. ಭೂರಿಭೋಜನದ ‘ಭೂರಿ’ಗೆ ಉತ್ತರ ಕರ್ನಾಟಕದಲ್ಲಿ ಶ್ರಾದ್ಧದ ಊಟ ಎಂಬರ್ಥ ಬಳಕೆಯಲ್ಲಿದೆ. ‘ಪುಣ್ಯತಿಥಿ’ಗೂ ಶ್ರಾದ್ಧ ಅರ್ಥ ಬಂದಿದೆ. ಶನಿ ಒಳ್ಳೆಯದನ್ನೂ ಮಾಡಬಲ್ಲ, ಆದರೂ ಶನಿಕಾಟ ಎಂಬ ಬಳಕೆಯೇ ಹೆಚ್ಚು. ಕಿರುಕುಳ ಎಂದರೆ ಸಣ್ಣ ತೆರಿಗೆ ಎಂಬರ್ಥವಿತ್ತು. ಬಹುಶಃ ಅಂಥ ಕಿರುಕುಳಗಳ ಹೊರೆ ಹೆಚ್ಚಾಗಿ ಹಿಂಸೆ ಅರ್ಥ ಬಂದಿರಬೇಕು. (ಈಗ ಧಾರವಾಡದ ಕಡೆ ಕಿರುಕುಳ ರಜೆ ಎಂದರೆ ಸಾಂದರ್ಭಿಕ ರಜೆ ಎಂದರ್ಥ) ಅಗ್ಗ < ಅರ್ಘದಿಂದ ಬಂದದ್ದು. ಅಗ್ಗಳ ಎಂದರೆ ಶ್ರೇಷ್ಠ ಎಂದರ್ಥ. ಶಬ್ದದ ಬೆಲೆಯೂ ಅಗ್ಗವಾಯಿತು. ವಿರಾಗಿ > ಬೈರಾಗಿಯಾಗಿದೆ, ಅರ್ಥ ಬೇರೆ. ಸಂಸ್ಕೃತದ ಹಲವು ಶಬ್ದಗಳು ಹೀಗೆ ಕನ್ನಡದಲ್ಲಿ ಹೀನಾರ್ಥ ಪಡೆದಿವೆ. ಮುಂಡ ಪದ ಸಂಸ್ಕೃತದಲ್ಲಿ ಜನಾಂಗವಾಚಿ, ಕಾಬೂಲಿ, ಕಾಂಭೋಜದ ಜನರನ್ನು ತಲೆ ಬೋಳಿಸಿಕೊಂಡವರು ಎಂದು ಶಾಸನಗಳಲ್ಲಿ ಹೇಳಲಾಗಿದೆ. ಮಹಾಭಾರತದಲ್ಲೂ ಜನಾಂಗವಾಚಿಯಾಗಿ ಬಂದಿದೆ. ಅದರಿಂದ ಕನ್ನಡದ ‘ಮುಂಡೆ’ ತಲೆಬೋಳಿಸಿಕೊಂಡವಳು, ವಿಧವೆ ಎಂಬ ಅರ್ಥ ಬಂದಿರಬಹುದು. ‘ಕೋರಿ’ಯ ಮೂಲ ಕೋಜಿ, ‘ಉಡುಗೊಜಿ’ ಯಲ್ಲಿದೆ. ಎಲ್ಲ ಬಗೆಯ ಅರಿವೆಗೆ, ವಸ್ತ್ರಕ್ಕೆ ‘ಕೋರಿ’ ಬಳಕೆಯಾಗುತ್ತಿತ್ತು. ಈಗ ಚಿಂದಿವಸ್ತ್ರ, ಕಂಬಳಿ ಅರ್ಥ ಬಂದಿದೆ. ‘ಜಾರ’ ಎಂದರೆ

ಪ್ರಿಯ, ಓಪ, ಈಗ ಸ್ತ್ರೀಲಂಪಟ, ಹಡಪ ಎಂದರೆ ಸಂಚಿ ಸಾಮಾನ್ಯ ಚೀಲ, ಹಳಗನ್ನಡದಲ್ಲಿ ಉತ್ತಮ ಅರ್ಥವಿತ್ತು. ಈಗ ಹಡಪದ ಎಂದರೆ ನಾಪಿತ, ಕ್ಷೌರಿಕ. ಅಬ್ಬಾ > ಅಬ್ಬೆ > ಅಬೆ = ತಾಯಿ ಅರ್ಥ. ಅಬ್ಬೇ ಎಂಬುದು ಹೀನಾರ್ಥದಲ್ಲಿ ಬಳಕೆಯಾಗುತ್ತಿದೆ. ಅಮ್ಮ ಎಂದರೆ ಹಳಗನ್ನಡದಲ್ಲಿ ತಂದೆ ಅರ್ಥವಿತ್ತು. “ಅಮ್ಮನ ಗಂಧವಾರಣ.” ತಂದೆ ಅರ್ಥ ಹೋಗಿ ತಾಯಿ ಅರ್ಥ ಬಂದಿತು. ಉತ್ತರ ಕರ್ನಾಟಕದಲ್ಲಿ ವಿಧವೆ ಅರ್ಥ ಸೂಚಿಸುತ್ತದೆ. ಅಲ್ಲಿ ‘ಅವ್ವ’ ಗೌರವಾರ್ಥ ಕೊಡುತ್ತದೆ. ಕಾವಲಿ ಕಾಲುವೆ ಅಕ್ಷರ ಪಲ್ಲಟವಾಗಿ ಆಗಿದೆ (ಕಾಲ್ + ವಾಯ್=ಕಾಲುವೆ), ಉತ್ತರ ಕರ್ನಾಟಕದಲ್ಲಿ ಗಟಾರ ಅರ್ಥದಲ್ಲಿದೆ. ಮೈಸೂರು ಕಡೆ ದೋಸೆ ಹೆಂಚು. ಇಂದು ಅಡಕೆಯ ಬೆಲೆ ದುಬಾರಿ ಇರಬಹುದು. ಆದರೆ ಮಾತಿನಲ್ಲಿ ಅಡಕೆಗೆ ಹೋದ ಮಾನ, ಅಡಕೆ ಯೋಗ್ಯತೆಯೂ ಇಲ್ಲ ಎನ್ನುವಲ್ಲಿ ಕ್ಷುಲ್ಲಕಾರ್ಥ ಪಡೆಯುತ್ತದೆ.

೯. **ಅರ್ಥಾಂತರ:** ಕೆಲವು ಶಬ್ದಗಳು ಅರ್ಥದಲ್ಲಿ ಏರಿಳಿತ ಪಡೆಯದೆ, ಅಂದರೆ ಉತ್ತಮಾರ್ಥ ಹೀನಾರ್ಥ ಪಡೆಯದೆ, ತಮ್ಮ ವಿಶಿಷ್ಟ ಅರ್ಥದ ಗುಣವನ್ನು ಪ್ರಕಾಶಿಸುವ ಬೇರೆ ಅರ್ಥವನ್ನು, ವಾಚ್ಯಾರ್ಥದ ಜೊತೆಗೆ ಸೂಕ್ಷ್ಮಾರ್ಥ್ಯವನ್ನೂ ಕೊಡುತ್ತವೆ. ಇದಕ್ಕೆ ಅರ್ಥಾಂತರ ಎನ್ನುತ್ತಾರೆ. ಉದಾ: ಪಾದರಸ, ಆಮೆ, ಕುಂಟು ಕುದುರೆ, ಕತ್ತೆ, ಚೌಕಟ್ಟು, ಕತ್ತರಿ ಕೊರಿ (bore), ವಕ್ರ, ಸಪ್ಪೆ ಊಟ, ಬರೆ ಎಳೆ, ಕೊಕ್ಕೆ, ನೇಣು, ಎತ್ತಂಗಡಿ ಇತ್ಯಾದಿ. ಇವುಗಳಲ್ಲಿ ವಾಚ್ಯಾರ್ಥವಲ್ಲದೆ ಸ್ವಭಾವ, ಗುಣ, ಕ್ರಿಯೆಗೆ ಸಂಬಂಧಿಸಿದಂತೆ ಸೂಕ್ಷ್ಮ ಅರ್ಥವೂ ಸೇರಿರುತ್ತದೆ. ಆಮೆಯ ನಡಿಗೆ ನಿಧಾನ, ಪಾದರಸ ಚುರುಕು, ಚಂಚಲ, ಕತ್ತೆಯ ಮೊಂಡುತನ, ದಡ್ಡತನ, ಕತ್ತರಿಯ ಕ್ರಿಯಾರ್ಥ, ಖಾರದ ಊಟದಲ್ಲಿ ಮಾಂಸಾಹಾರ ಊಟದ ಖಾರ ಇತ್ಯಾದಿ ಸೂಕ್ಷ್ಮಾರ್ಥಗಳೂ, ವಿಶೇಷಾರ್ಥಗಳೂ ಸೂಚಿತವಾಗುತ್ತವೆ.

೧೦. ಪರಿಸರಾರ್ಥ ಮೌಲ್ಯ: ಸ್ಥಳ, ಪರಿಸರದ ಕಾರಣ ಕೆಲವು ಶಬ್ದಗಳು ಬೇರೆ ಅರ್ಥವನ್ನು ಪಡೆಯುತ್ತವೆ. ಉಷ್ಟ್ರ ಎಂದರೆ ಕಾಡುಕೋಣ. ಜನ ವಲಸೆ ಹೋದಾಗ ಅಲ್ಲಿಯ ಪ್ರಾಣಿಯನ್ನು ಉಷ್ಟ್ರ ಎಂದರು (ಉಷ್ಟ್ರ > ಒಂಟೆ). ಚರ್ಚಿನ ಆವರಣದಲ್ಲಿ ಫಾದರ್, ಮದರ್‌ಗೆ ಬೇರೆ ಅರ್ಥ ಸೂಚಿತ. ಆಸ್ಪತ್ರೆಯಲ್ಲಿ ಸಿಸ್ಟರ್ ಶಬ್ದಕ್ಕೂ ಅರ್ಥ ಬೇರೆ. ಓಲೆ, ಪತ್ರ ಎಂದರೆ ಎಲೆ (ಓಲೆಗರಿ, ಪದ್ಮಪತ್ರ). ಬರೆಯಲು ಬಳಸುವುದು. ಈಗ ಮೂಲಾರ್ಥ ಹೊಳೆಯುವುದೇ ಇಲ್ಲ. ಕಾಗದದ ಮುದ್ರಿತ ಕರೆಯೋಲೆಗಳು, ಪತ್ರ ಬರೆಯುವುದು ಇತ್ಯಾದಿ. ಹಾಗೇ ಅಮೂರ್ತ ಭಾವನೆಗಳನ್ನು ಮೂರ್ತ ಪದಗಳ ಮೂಲಕ ಸೂಚಿಸುವುದೂ ಪರಿಸರ ಮಹಿಮೆಯಿಂದಲೆ. ಉದಾ: ತೂಕದ ಮನುಷ್ಯ, ಬೆಲೆಯುಳ್ಳ ಮಾತು, ಹರಿತ ಬುದ್ಧಿ, ಮಂಕುಬುದ್ಧಿ, ವಕ್ರಬುದ್ಧಿ ಇತ್ಯಾದಿ.

ಮನುಷ್ಯನಂತೆ ಶಬ್ದಗಳಿಗೂ ಇತಿಹಾಸ ಉಂಟು, ಏರಿಳಿತ ಉಂಟು, ಬಣ್ಣ ಬದಲಾವಣೆ ಉಂಟು. ಆದ್ದರಿಂದಲೇ ಭಾಷೆಯು ಜೀವಂತ ಎನ್ನುವುದು.

# ಗದ್ಯಸೌರಭ

# ೧. ಕಾರ್ತಿಕ ಋಷಿಯ ಕಥೆ

ಅಗ್ನಿರಾಜನ ಮಗನಪ್ಪ ಸ್ವಾಮಿ ಕಾರ್ತಿಕ ಋಷಿಯ ಕಥೆಯಂ ಪೇೞ್ವೆಂ:
ಗಾಹ ॥ ರೋಹೇದಯಮ್ಮಿ । ಸತ್ತೀವಿ ಹದೋ ಕೊಂಚೇಣ ಅಗ್ಗಿದಯಿದೋ ಏ।
ತವ್ವೇದಣಮಧಿಯಾಸಿಯ ಪಡಿವಣ್ಣೋ ಉತ್ತಮಂ ಅಟ್ಟಂ॥

[ರೋಹೇದಯಮ್ಮಿ_ರೋಹೇದಕಮೆಂಬ ಪೊೞಲೊಳ್, ಸತ್ತೀಏ ಹದೋ–ಶಕ್ತಿಯೆಂಬಾಯುಧದಿಂದಿಱಿಯೆ ಪಟ್ಟೊನಾಗಿ, ಕೊಂಚೇಣ–ಕ್ರೌಂಚನೆಂಬರಸಿ ನಿಂದಂ, ಅಗ್ಗಿದಯಿದೋ ಏ–ಅಗ್ನಿರಾಜನ ಕಾದಲಿಸೆಪಡುವ ಮಗಂ, ತವ್ವೇದಣಂ–ಆ ವೇದನೆಯಂ, ಅಧಿಯಾಸಿಯ–ಲೇಸಾಗಿ ಸೈರಿಸೆ, ಪಡಿವಣ್ಣೋ–ಪೊರ್ದಿದೊಂ, ಉತ್ತಮಂ ಅಟ್ಠಂ–ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಾ ರಾಧನೆಯಂ]

ಅದೆಂತೆಂದೊಡೆ: ೧೦

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಲಾಳವಿಷಯದೊಳ್ ಕೃತಿಕಾ ಪುರಮೆಂಬುದು ಪೊೞಲಸದನಾಳ್ವೊನಗ್ನಿರಾಜನೆಂಬರಸನಾತನ ಮಹಾದೇವಿ ವೀರಮತಿ ಯೆಂಬೊಳಾಯಿರ್ವರ್ಗ್ಗಂ ಮಕ್ಕಳ್ ಬಂಧುಮತಿ ಶಿವಸೇನೆ ಶ್ರೀಮತಿ ಸ್ವಯಂಪ್ರಭೆ ಲಕ್ಷ್ಮೀಮತಿ ಕೃತಿಕೆಯೆಂದಿಂತಱುವರ್ ಪೆಣ್ಗೂಸುಗಳಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತೊಂದು ದಿವಸಂ ಫಾಲ್ಗುಣ ಮಾಸದ ನಂದೀಶ್ವರದಂದಱುವರುಂ ಕೊಡಗೂಸುಗಳುಪವಾಸಂಗೆಯ್ದು ಬಸದಿ ಗರ್ಚನೆಯಂ ಕೊಂಡುಪೋಗಿ ದೇವರನರ್ಚಿಸಿ ನಂದೀಶ್ವರಂಗೆಯ್ದು ಬಂದಿಸಿ ರಿಸಿಯರ್ಕಳುಮಂ ಗುರುಪರಿವಿಡಿಯಂ ವಂದಿಸಿ ವ್ರತಂಗಳನೇಱಿಸಿಕೊಂಡು ಸಿದ್ಧ ಶೇಷೆಯಂ ಕೊಂಡುಬಂದು ತಾಯ್ಗಂ ತಂದೆಗಂ ಕೊಟ್ಟು ಪೋಷಾಗಳರಸಂ ಕಿಱಿಯ ಮಗಳಪ್ಪ ಕೃತ್ತಿಕೆಯ ರೂಪುಂ ತೇಜಮುಂ ಗಾಡಿಯುಮಂ ಕಂಡಾಕೆಗಾಟಿಸಿ ಸಾಮಂತ ಮಹಾಸಾಮಂತರ್ಕ್ಕಳ್ಗಂ ಪರಿವಾರಕ್ಕಂ ಮಂತ್ರಿವರ್ಗಕ್ಕಂ ವೀರಮತಿ ಮಹಾದೇವಿಗಮೆಲ್ಲ ಸಮಯಿಗಳ್ಗಂ ಬೞಿಯಟ್ಟಿ ಬರಿಸಿಯರಸನಿಂತೆಂದನೆನ್ನಾಳ್ವ ಮಂಡಳಂಗಳೊಳ್ ಪುಟ್ಟಿ ಲೇಸಪ್ಪ ವಸ್ತುವಾರ್ಗಕ್ಕುಮೆಂದು ಬೇಱೆವೇಱೆಯ ಯರಸನನಿಬರುಮಂ ಬೆಸಗೊಂಡೊಡವರ್ಗ್ಗಳೆಲ್ಲ ಮಿಂತೆಂದರೊಳ್ಳಿತಪ್ಪಾನೆಯುಂ ಕುದುರೆಯುಂ ಮುತ್ತುಂ ಮಾಣಿಕಮುಂ ಸ್ತ್ರೀರತ್ನಮುಂ ಮೊದಲಾಗೊಳ್ಳಿತಪ್ಪಗ್ಗಳ ವಸ್ತುವೆಲ್ಲಂ

ಪೃಥ್ವಿಯನಾಳ್ವೊಂಗಕ್ಕುಮೆಂದು ಪೇೞ್ದೊಡರಸಂ ಋಷಿಯರುಮಂ ಬೆಸಗೊಂಡೊಡೆ ಋಷಿಯರೆಂದರಾವ ವಸ್ತು ಪೇೞಿಂ ಪೇೞ್ದೊಡೆ ತಕ್ಕುದು ತಗ[2]ದುದುಮನಱಿಯಲಕ್ಕು ಮೆಂದೊಡರಸನಿಂತೆಂದನಿವರೆಲ್ಲರ ಪೇೞ್ವಂತು ಪೇೞ್ವರೆಲ್ಲರೊಡಂಬಡುವರಲ್ಲರ್ ಬಹುಪ್ರಳಾಪಿಗಳಿವರಂ ಪೊೞಲಿಂದಟ್ಟಿ ಕಳೆಯಿಮೆಂದಟ್ಟಿ ಕಳೆದುೞಿದರೆಲ್ಲರುಮಂ ಬೆಸಗೊಂಡೊಡನಿಬರುಮೊಡಂಬಟ್ಟೊಳ್ಳಿತ್ತಪ್ಪ ವಸ್ತು ನಿನಗಕ್ಕುಮೆಂದೊಡೆ ಅರಸನೆನಗಕ್ಕುಂ ಬಲಮೆಂದು ಮೂಱು ಸೂೞ್ವರು ಸಾಱೆ ನುಡಿದೊಡಂಬಡಿಸಿ ವೀರಮತಿ ಮಹಾದೇವಿಯಂ ಬೇಡಿ ಕೃತ್ತಿಕೆಯಪ್ಪ ಕಿಱಿಯ್ಮ ಮಗಳಂ ಮದುವೆನಿಂದೊನಾ ದಿವಸಮೆ ವೀರಮತಿ ಮಹಾದೇವಿಯುಂ ಬ್ರಹ್ಮಚರ್ಯ ವ್ರತಮಂ ಕೈಕೊಂಡು ನೆಗೞ್ದಿಳ್.

ಮತ್ತೆ ಕೃತ್ತಿಕೆಗೆ ನವಮಾಸಂ ಗರ್ಭಮಾದಂದು ಸರಮಣವೆಂಬುದ್ಯಾನ ವನದೊಳಗಣ ಸರವಣಮೆಂಬ ಬಾವಿಯೊಳ್ ಜಲಕ್ರೀಡೆಯಾಡಲ್ ಬಯಕೆ ಯಾದುದೆಂದರಸಂಗಱಿಪಿದೊಡರಸನನುಮತದಿಂ ಜಲಕ್ರೀಡೆಯಾಡಿ ಮಗನಂ ಪೆತ್ತೊಡಾತಂಗೆ ಸ್ವಾಮಿ ಕಾರ್ತ್ತಿಕನೆಂದು ಪೆಸರನಿಟ್ಟರ್ ಮೆತ್ತಾತನಿಂ ಬೞಿಯುಂ ಪೆಣ್ಗೂಸಮಂ ಪೆತ್ತೊಡೆ ಆಕೆಗೆ ವೀರ ಶ್ರೀಯೆಂದು ಪೆಸರನಿಟ್ಟು ಬಳೆದೊಡಾಕೆಯಂ ಕೋಗಳಿಯನಾಳ್ವ ಕ್ರೌಂವಚನೆಂಬರಸಂಗೆ ಕೊಟ್ಟರಿಂತು ಕಾಲಂ ಸಲೆ ಮತ್ತಿತ್ತ ನಮಿ ಮೊದಲಾಗೊಡೆಯ ತಮ್ಮಂದಿರಪ್ಪ ಕುಮಾರರೊಡನೆ ಸ್ವಾಮಿ ಕಾರ್ತ್ತಿಕಂ ಬಳೆದು ಪದಿನಾಱು ವರುಷದ ಪ್ರಾಯಮಾದಂದು ಮತ್ತೊಂದು ದಿವಸಮನಿಬರುಂ ಕುಮಾರರ್ಕ್ಯಳುದ್ಯಾನವನಕ್ಕೆ ವನಕ್ರೀಡೆಯಾಡಲ್ ಪೋಗಿಯಾಡುತ್ತಿರ್ಪನ್ನೆಗಮೆಲ್ಲಾ ಕುಮಾರರ್ಕ್ಗಳ್ಗಂ ತಾಯ್‌ತಂದೆಯಜ್ಜರ್ಕ್ಗಳ ಮನೆಯಿಂದಂ ಪೂಸಲುಮುಡಲುಂ ತುಡಲುಂ ಪೂವುಂ ತುಂಬುಲಮುಂ ತಿಂಬಡಂಗಳುಂ ಬಂದುವು ಸ್ವಾಮಿ ಕಾರ್ತ್ತಿಕಂಗಾರುಮಟ್ಟದಿರ್ದೊಡೆ ಮನದೊಳ್ ಬೞ್ದಿದೊನಾಗಿ ವನಕ್ರೀಡೆಯನಾಡಿ ಮನೆಗೆ ವಂದು ತಾಯನಿಂತೆಂದನಬ್ಬಾ ನಿಮ್ಮ ತಂದೆಯಪ್ಪೆಮ್ಮಜ್ಜನೊಳನೊ ಇಲ್ಲೆಯೊ ಎಂದು ಬೆಸಗೊಂಡೊಡೆ ತಾಯ್ ಮನದೊಳ್ ಬೞ್ದಿದೊಳಾಗಿ ಏನಂ ಪೇೞ್ವೆಂ ಮಗನೆ ನಿನಗೆ ತಂದೆಯಪ್ಪಾತನೆನಗಂ ತಂದೆಯೆಂದು ಪೇೞ್ದೊಡದಂ ಕೇಳ್ದು ಅದುವೆ ವೈರಾಗ್ಯ ಕಾರಣಮಾಗಿ ಶ್ರೀವರರೆಂಬಾಚಾರ್ಯರ ಪಕ್ಕದೆ ತಂಪಂಬಟ್ಟಾಗಮಂಗಳೆಲ್ಲಮಂ ಕಲ್ತು ಗುರುಗಳಂ ಬೆಸಗೊಂಡವರನುಮತದಿಂದೇಕ ವಿಹಾರಿಯಾಗಿ ಗ್ರಾಮನಗರಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ತೆಂಕನಾಡ ಕಿಷ್ಕಿಂಧಮೆಂಬ ಪರ್ವತ[1]ಮನೆಯ್ದಿಯದಱ ಮೇಗೆ ರಾತ್ರಿ ಪ್ರತಿಮಾಯೋಗಂ ಗೆಯ್ದೊರಾ ಇರುಳ್ ಪಿರಿದೊಂದು ಮೞೆ ಕೊಂಡು ಮೆಯ್ಯ ಮಳಮೆಲ್ಲಮಂ ಕರ್ಚಿ ಕಳೆದು ಪಾಷಾಣಮೆಂಬ ಮಡುವಂ ನೀರ್ ಪೊಕ್ಕಾಗಳಾ ಮಡವಿನ ನೀರ್ ಸರ್ವೌಷಧಿ

ಯಾದೊಡಂತಲ್ಲಿಯ ನೀರಂ ಮಿಂದವರ್ಗ್ಗೆಲ್ಲಾ ವ್ಯಾಧಿಯುಂ ಕಿಡುವುವಾದುವಲ್ಲಿಂ ತೊಡಗಿ ದಕ್ಷಿಣಾಪಥದೊಳದು ತೀರ್ಥಮಾಯ್ತು.

ಮತ್ತೆ ಸ್ವಾಮಿ ಕಾರ್ತ್ತಿಕ [3]ಋಷಿ[3]ಯುಂ ವಿಹಾರಿಸುತ್ತಂ ಬಂದು ಕೋಗಳಿಯ ನೆಯ್ದಿಯಲ್ಲಿಯ ಬಸದಿಯೊಳ್ ಪಂಥಾತಿಚಾರ ನಿಯಮಂಗೆಯ್ದು ದೇವರಂ ಬಂದಿಸಿ ಮಧ್ಯಾಹ್ನದಾಗಳ್ ಚರಿಗೆವೊಕ್ಕು ಚಾತುರ್ವರ್ಣ್ಯದ ಮನೆಗಳುಮಂ ತೊೞಲುತ್ತಂ ಬಂದರಮನೆಯಂ ಪೊಕ್ಕಾಗಳಾ ಪ್ರಸ್ತಾವದೊಳ್ ಕುರುಮಾಡದ ಮೇಗಣ ನೆಲೆಯೊಳಿರ್ದ್ದ ವೀರಶ್ರೀ ಮಹಾದೇವಿಯರಸನ ತಲೆಯಂ ರನ್ನ ತೊಡೆಯ ಮೇಲಿಟ್ಟುಗುರಿಸುತ್ತಿರ್ದ್ದಾಕೆ ಭಟಾರರ ಬರವಂ ಕಂಡೞಿದೆಮ್ಮಣ್ಣಂಗಳಪ್ಪ ಭಟಾರರ್ ಚರಿಗೆವಂದ ಪ್ರೊರೆಂದು ಮಱಲುಂದಿದರಸನ ತಲೆಯಂ ಕೞಗೊಂದಾಧಾರಮನಿಟ್ಟು ನಿಱಿಸಲೆಂದು ಕುರುವಾಡದಿಂದಿೞದು ಪರಿತರ್ಪನ್ನೆಗಂ ಭಟಾರರ್ ವಂದರಮನೆಯುಂಗಣಮಂ ಪೊಕ್ಕು ಮಗುೞ್ದುಪೋಗಿ ಬಾಗಿಲ್ಮಾಡಮನೆಯ್ದಿದಾಗಳರಸಿ ಪೆಱಗಣಿಂ ಪರಿ ತಂದು ಬಂದು ಮುಂದೆ ನಿಂದು ಕೈಗಳಂ ಮುಗಿದೆಱಗಿ ನಿಲ್ಕೆ ಭಟಾರಾ ಎಂದು ನಿಱಸಿದೊಡೆ ಭಟಾರರೆಂದರಬ್ಬಾ ಮನೆಯಂ ಪೊಕ್ಕು ಬಂದೊಮಿನ್ನೆಮಗೆ ನಿಲಲಾಗದೆಂದೊಡರಿಯಿಂತೆಂದಳ್ ಭಟಾರಾ ನೀಮೆನಗೆ ದಯೆಗೆಯ್ದಮೋಘಂ ನೀಲಲ್ವೇೞ್ಕುಮೆಂದು ಪೋಗಲೀಯದೆ ಕಾಲಂ ಪಿಡಿದು ತಾಂಗುತ್ತಿರ್ಪನ್ನೆಗಮ್.

ಇತ್ತರಸನೆೞ್ಚತ್ತು ದೆಸೆಗಳಂ ನೋಡಿಯರಸಿಯಂ ಕಾಣದರಸಿಯೆಲ್ಲಿರ್ದ್ದೊಳೆಂದು ಕೆಲದವರಂ ಬೆಸಗೊಂಡೊಡವರೆಂದೊರರರಸಿಯೊರ್ವ ಸವಣಂ ಬಂದೊಡಾತನಂ ಕಂಡು ಕುರುಮಾಡದಿಂದಿೞದು ಪರಿದು ಬೞಿಯಂ ತಗುಳ್ದು ಬಾಗಿಲ್ ಮಾಡದಲ್ಲಿ ಸವಣನೊಡನಾ ಪೋರುತ್ತಿರ್ಪ್ಪೊಳ್ ನೋಡಿಮೆಂದರಸಂಗೆ ತೋಱಿ ದೊಡರಸಂ ಕಂಡೆನ್ನನಗಲ್ದು ನಿಚ್ಚಲೀ ಸವಣನಲ್ಲಿಗೆ ಪರಿವಳೆಂದು ಕಿನಿಸಿ ಕರುಮಾಡದಿಂದಿೞದು ರಿಸಿಯರಿರ್ದಲ್ಲಿಗೆವೋಗಿ ಶಕ್ತಿಯೆಂಬಾಯುಧದಿಂದುರಮ ನುರ್ಚಿಪೋಗಿಟ್ಟರಸಿಯುಮಂ ತಲೆನವಿರಂ ಪಿಡಿದು ದಱದಱನೆೞದುಕೊಂಡು ಬಂದು.

ಸ್ವಾಮಿ ಕಾರ್ತ್ತಿಕಋಷಿಯುಂ ಕ್ಷಮೆಯಂ ಭಾವಿಸಿ ನೆತ್ತರೊಕ್ಕು ಬಸಮೞದು ಬೇಸಗೆಯ ಕಡುವಿಸಿಲಿಂದಂ ಝಳದಿಂದಂ ಬೆಂಕೆಯಿಂದಂ ನೀರಟ್ಕೆಯಯಧಿಕಮಾಗಿ ತಣ್ಪಿನೊಳೊಳ್ಪಿತ್ತು ಸಮಾಧಿಯಕ್ಕುಮೆಂದು ಮನದೊಳ್ ಬಗೆದಿರ್ದ್ದನನ್ನೆಗಂ ತಮ್ಮಜ್ಜಿಯಪ್ಪ ವೀರಮತಿ ಮಹಾದೇವಿ ಬ್ರಹ್ಮಚರ್ಯವ್ರತಮಂ ಕೊಂಡು ಕಾಲಂ ಗೆಯ್ದು ವ್ಯಂತರದೇವತೆಯಾಗಿ ಪುಟ್ಟಿದಾಕೆಗಾಸನಕಂಪಮಾರ್ಗಿಯಱದು ಬಂದು ಭಟಾರಾ ಬೆಸನೇನಿವರೆಲ್ಲರುಮಂ ಕೊಂದಪ್ಪೆನೆಂದೊಡೆ ಭಟಾರರೆಂದ ರಂತೇನುಂ ಬೇಡ ನೀನೆಮ್ಮಂ ತಣ್ಪಿನೆಡೆಗೆ ಕೊಂಡುಪೊಗೆಂದೊಡೆ ದೇವತೆ ನವಿಲ

ರೂಪಿನಿಂದೆತ್ತಿಕೊಂಡು ಬೆನ್ನೊಳಿಟ್ಟು ಕೋಗಳಿಯ ಮೂಡಣ ದೆಸೆಯ ಪರ್ವತದ ಕೊಳದ ತಡಿಯೊಳ್ ಲತಾಮಂಟಪದೊಳಿರಿಸಿ ಪೋದೊಡೆ ಬೆಟ್ಟದ ಮೇಗಣಿಂ ಪಾಯ್ತರ್ಪ ನಿರ್ಝರಶೀಕರಂಗಳಿಂ ಮೆಯ್ಯಾಪ್ಯಾಯಾನಮಾಗಿ ಸಂನ್ಯಸನಂ ಗೆಯ್ದು ಶುಭಪರಿಣಾಮದಿಂ ಮುಡಿಪಿ ಸರ್ವಾರ್ಥಸಿದ್ಧಿಯೊಳ್ ಮೂವತ್ತುಮೂಱು ಸಾಗರೋಪಮಾಯುಷ್ಯಮನೊಡೆಯೊನಹಮೀಂದ್ರನಾಗಿ ಪುಟ್ಟಿದೊಂ.

ಮತ್ತಿತ್ತ ಭಟಾರರ ತಂಗೆಯಪ್ಪ ವೀರಶ್ರೀಯುಂ ಹಾ ಭಟಾರ ಎಂದಿರುಳುಂ ಪಗಲುಂ ಪಲವು ದಿವಸಮೊಂದೆ ಪಾಂಗಿನೊಳ್ ಪ್ರಳಾಪಿಸಿ ದುಃಖಂಗೆಯ್ಯೆ ಅರಸನು ಮಾಕೆಗೆ ಕಡುನಲ್ಲನಪ್ಪುದಱಿಂದಾದಮಾನುಮುಬ್ಬೆಗಂ ಬಟ್ಟಿರ್ದ್ದಿಂತೆಂದನಾರೊರ್ವ ರರಸಿಯಟ್ಕೆಯ ಮಟ್ಗಿಸಿ ದುಃಖಮಂ ಮಯಿಱಿಸುವೊರವರ್ಗೊಸಗೆಯಂ ಮಾಡುವೆನೆಂದು ಪೊೞಲೊಳಗೆ ಗೋಸಣೆಯಂ ತೊೞಲ್ಚಿದೊಡದಂ ಕೇಳ್ದು ಲೋಗರ್ ಪಗರಣಿಗರಾಗಿ ಎನಿತಾನುಂ ತೆಱದ ರೂಪುಗಳಂ ಕೈಕೊಂಡು ಮರ ಮೊಗಂಗಳನಿಟ್ಟು ಬಂದು ಮುಂದೆ ಆಡಿಯುಂ ಪಾಡಿಯುಂ ನಗಿಸಿಯುಮೆಂತುಮಟ್ಕೆ ಮಟ್ಗಿದಿರ್ದೊಡೊರ್ವಂ ಕರಿಯ ಕಚ್ಚುಟಮನುಟ್ಟು ಮೈಯ್ಯೆಲ್ಲಂ ಮಸಿಯಂ ಪೂಸಿ ಬೋೞದಲೆವೆರಸು ಬಾಯೊಳ್ ಕವಡಿಕೆಗಳಂ ಪಲ್ಗಳಂತೆ ಮಾಡಿ ಕುಂಚಮುಂ ಗುಂಡಿಗೆಯುಮುಂ ಪಿಡಿದು ಬರ್ಪೊನನರಸಂ ಕಂಡಿತೆಂದನೆಲೆಯರಸಿ ನಿನ್ನ ಸಹೋದರಂಗಳಪ್ಪ ಭಟಾರರಾ ಬರ್ಪೊರೆಯೆಂದು ಪೇೞ್ದಾಗಳೆಲ್ಲಿರ್ದರೆಂದೆೞ್ದು ನೋಡಿ ಕಾಣದಾ ರೂಪಂ ಕಂಡು ನಕ್ಕು ದುಃಖಮಂ ಮಱೆದೊಳಾಗಳಾ ನಗಿಸಿದ ಪಗರಣಿಗಂಗೆ ಪಿರಿದು ಕಸವರಮನಿತ್ತೊನಂದಿಂದಿತ್ತ ಬಾದುಬ್ಬೆಯ ಪರ್ವಮುಂ ಪಗರಣದಾಟಪಾಟಮುಮಾದುವು ಮತ್ತೆ ಸ್ವಾಮಿ ಕಾರ್ತ್ತಿಕ ಋಷಿಯರ್ ಮುಡುಪಿದಲ್ಲಿಯವರ ತಂಗೆಯಪ್ಪ ವೀರಶ್ರೀ ಬಸದಿಯಂ ಮಾಡಿದೊಡಂದಿಂದತ್ತ ಸ್ವಾಮಿಯೆಂಬ ತೀರ್ಥಮಾಯ್ತು ಮತ್ತಿತ್ತ ಕೃತ್ತಿಕೆಯೆಂಬ ಪೊೞಲನಾಳ್ವಗ್ನಿರಾಜನೆಂಬರಸಂ ತನ್ನ ಮಗಳಂ ತಾನೆ ಕೊಂಡು ಮೊಱೆಯಟೆದನಪ್ಪುದಱಿಂದಲ್ಲಿಯ ಜನಮುಂ

ಶ್ಲೋಕ॥ ರಾಜ್ಞಿ ಧರ್ಮಿಣಿ ಧರ್ಮಿಷ್ಠಾಃ ಪಾಪೇ ಪಾಪಸಮಾಶ್ರಿತಾಃ ।
ರಾಜಾನಮನುವರ್ತಂತೇ ಯಥಾ ರಾಜಾ ತಥಾ ಪ್ರಜಾಃ ॥

ಎಂದರಸನಂ ಕಂಡು ಮೊಱೆಯಱಿದು ನೆಗೞಲ್ ತಗಳ್ದೊಡಾ ಪೊೞಲ್ಗೆ ಬೋಗಂಕಾಕಾರೋಹಣಮೆಂದು ಪೆಸರನಿಟ್ಟರಿದು ಸ್ವಾಮಿ ಕಾರ್ತ್ತಿಕ ಋಷಿಯ ಕಥೆ ಮತ್ತೆ ಪೆಱರುಂ ಪರಮ ಸಹಜ ರತ್ನತ್ರಯಂಗಳನಾರಾಧಿಸುವವರ್ಗ್ಗಳ್ ಸ್ವಾಮಿ ಕಾರ್ತ್ತಿಕ ಋಷಿಯರಂ ಮನದೊಳ್ ಬಗೆದೇಱುಂ ಪುಣ್ಣುಂ ವ್ಯಾಧಿಯುಂ ಪಸಿವು ನೀರಟ್ಕೆ ಶೀತವಾತೋಷ್ಣಂಗಳುಮಂ ಸೈರಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ.

# ೨. ಎರಡು ಗಿಣಿಗಳ ಕಥೆ

ಶ್ರೀಧರನಿಭನೆನೆ ನೆಗೆಟ್ದಿಜ
ನೋದಯನೆಂಬರಸನೊರ್ಮೆ ಬೇಂಟೆಯನಾಡಲ್
ಪೋದುದನಱಿದಾತನ ದಾ
ಯಾದಂ ಕೊಲಲೆಂದು ಮೇಲೆ ಬರ್ಪುದುಮಾಗಳ್

ಅಂತಾತನ ಬರವಂ ದೂರದೊಳೆ ಕಂಡು ಪಗೆವನಪ್ಪುದಂ ನಿಶ್ಚಯ ಮಾಗಲಱಿತು ನಿಷ್ಕಾರಣಂ ಸಾವುದಾದ ಕಾರಣಂ. 'ಬರ್ದನೆ ಬಂಟಂ' ಎಂಬ ನಾಣ್ನುಡಿಯುಂಟು. 'ಶರೀರಮಾದ್ಯಂ ಖಲುಧರ್ಮ ಸಾಧನಂ' ಎಂಬ ಪುರಾಣವಾಕ್ಯಮುಂಟಪ್ಪುದಱಿಂ ತಾನೇಱಿದ ಜಾಯತ್ವಮಂ ಕೀಱೆ ಬಿಟ್ಟಿಕ್ಕಲೊಡಮದು ಗಾಳಿಗೆ ಗಱಿಮೂಡಿದಂತೆಯುಂ ಮನಮನೆಡಗ ಲಸಿದಂತೆಯೇವಾಗಿ ಪಿರಿದಂತರಮಂ ಪೋಗಿಯೊಂದು ಶಬರಶಿಬಿರಮನೆಯ್ದುವುದುಮದಂ ಕಂಡಲ್ಲಿ ನಿಲಲ್ವಗೆದು ಬರ್ಪ ರಾಜಪುತ್ರನಂ ಪುಳಿಂದಮಂದಿರದೊಳೊಂದು ಪಂಜರಗತನಾಗಿರ್ದ ಶುಕಪತತ್ರಿ ಕಂಡು ನಿಜಾಧಿಪನಪ್ಪ ಕಿರಾತಾಧೀಶಂಗಿಂತೆಂದುದು :

ಎಲೆ ಶಬರರಾಜ ನೋಡಿದೆ
ಪಲವುಂ ಪೊಂದುಡಿಗೆದೊಟ್ಟು ಬಂದೊರ್ವಂ ವ್ಯಾ
ಕುಲವಾಗಿರ್ಪಂ ನೀಂ ವ್ಯಾ
ಕುಲನಲ್ಲದೆ ಬಂದು ಪಿಡಿದುಕೊಳ್ಳೀ ಧನಮಂ

ಎಂದು ಗಱಿಪುವರಗಿಳಿಯ ಸರಮನಾಲಿಸಿ ಕೇಳ್ದಲ್ಲಿಯುಂ ನಿಲಲಣ್ಮದೆ ಮತ್ತಂ ಕಿಱಿದಂತರಮಂ ಬರ್ಪುದುಮಾ ಮಹಾಗಹನ ಮಧ್ಯದೊಳಂಬರವರೆಗಂ ಬೆಳೆದ ಮರದುಱುಗಲ ನಡುವೆ ನೀಳ್ದೊಪ್ಪಿ ದಿವಕ್ಕೆ ಪೋಪ ಬಟ್ಟೆಗೆ ಸೋಪಾನಂಗಟ್ಟಿದಂತೆ ತೆಱತೆಱದಿಂ ನೆಗೆದೊಗೆವ ಪೊಗೆಯಂ ಕಂಡು ಮತ್ತ ಮದಂ ಬೇಡರ ಪಳ್ಳಿಯೆಂದೆ ಬಗೆದು ಭಯಂಗೊಂಡು ತನ್ನಿಷ್ಟದೈವಮಂ ಸ್ಮರಿಸಿ ತನ್ನಪ್ಪುದಕ್ಕೆ ಇನ್ನೆತ್ತಂ ಪೋಪಂ, ಕುದುರೆಯುಂ ಜವಂಗೆಟ್ಟುದು, ನಾಂ ಪಥಶ್ರಾಂತನಾದೆನಗೆ ದೈವಮೇ ಶರಣೆಂದು ಕಂಠಗತಪ್ರಾಣನಾಗಿ ಮುನಂಗುಂದಿ ಬರ್ಪಜನೋದಯು ನೃಪಂಗೆ ಪ್ರಾಣವಾಯುಬರ್ಪಂತೆ ಹೋಮ ಧೂಮ ಧೂಷಿತ ದಿವ್ಯಗಂಧಾಮೃತಂ ಬೆರಸು

ವಿದಳಿತ ಪುಷ್ಪಸೌರಭಮನಾವಗಮಿರ್ಕುಳಿಗೊಂಡು ಕೊಂಡು ಪ
ಟ್ಟದ ಪದಪದ್ಮಿನೀನಿನಹಶೈತ್ಯದೊಳೊಯ್ಯನೆ ಕೂಡಿಕೂಡಿ ಮಾ
ಣದೆ ವಿವಿಧ ದ್ರಮೋತ್ಕರದಿರುಂಬಿನೊಳಿಂಬೆನೆ ನಿಂದುನಿಂದು ತೀ
ಡಿದುದಘಹಾರಣಂ ಪಥಪರಿಶ್ರಮವಾರಣನಾ ಸಮೀರಣಂ

ಅಂತು ಬಂದ ಮಂದಮಾರುತನಿಂದಾಪ್ಯಾಯಿತ ಶರೀರನಾಗಿ ತದ್ರೂಪ ವಾಸನೆಯಿಂದಿದು ಋಷ್ಯಾಶ್ರಮಮೆಂದು ನಿಶ್ಚೈಸಿ ತದಾಶ್ರಮಭಿಮುಖನಾಗಿ ಬರುತ್ತುಮಾಶ್ರಮಿಗಳ ಹೋಮಕಾರ್ಯಕ್ಕೆ ಕಱೆವ ಕಾಮಧೇನುಗಳಂತೆ ಕಱೆವ ಹೋಮಧೇನುಗಳಂ ಕಿಡಲೀಯದೆ ಕಾದು ಪಾಲಾಶಾಶ್ವತ್ಥೌದುಂಬ ರಾರ್ಕ ನ್ಯಗ್ರೋಧ ಶಮ್ಯಪಾಮಾರ್ಗ ಖದಿರಾದಿ ಶುಷ್ಕ ಸಮಿತ್ತುಗಳುಮಂ ಕುಶಾಶ್ವಲಾಯನ ವಿಶ್ವಮಿತ್ರಾದಿ ದೂರ್ವಾಂಕುರ ಪವಿತ್ರ ವಸ್ತುಗಳಮಂ ಕೊಂಡು ಧೇನುಗಳಂ ಮುಂಕೊಂಡು ಬರ್ಪ ಶಿಷ್ಯಸಮೂಹಂಗಳುಮಂ, ಕುಂದ ಮುಚುಕುಂದ ಮಂದಾರೇಂದೀವರ ನಂದ್ಯಾವರ್ತ ತ್ರಿಸಂಧ್ಯಾ ಬಂಧೂಕ ಕದಂಬ ಕನಕ ಕರವೀರ ಕರ್ಣಿಕಾರ ಕುಮುದ ವಕುಳ ಕುರವಕ ಕಮಲ ತಿಲಕ. ಚಂಪಕ ಪಾಟಲಿ ಪಾರಿಜಾತ ಜಾತಿ ಪುನನಾಗ ಮಲ್ಲಿಕಾದ್ಯನೇಕ ಸುರಭಿ ಕುಸುಮಂಗಳಂ ಸಜ್ಜುಕಮಪ್ಪುವಂ ಪುಟ್ಟಿಯೊಳ್ ತೀವಿಕೋಡು, ದಧಿ ಮಧುಘೃತಕ್ಷೀರ ಗೋಮಯ ಗೋಮೂತ್ರಂಗಳುಮಂ ಪುಣ್ಯತೀರ್ಥೋದಕಗಳುಮಂ ಕಲಶಂಗಳೊಳ್ ತೀವಿಕೊಂಡು, ತಪೋಧನರ ದೇವತಾರಾಧನೆಗೆ ಕಾಲಾತಿಕ್ರಮಮಾಗಲೀಯದೆ ಧಾಳಾಧಾಳಿಯಲ್ಲಿ ಬರ್ಪ ಪರಿಚಾರಕರ ನೆರವಿಯಮಂ ಕಂಡವರ ಪಿಂದುಪಿಂದನ್ನೆ ಬಂದು ಮುನಿವನಮನೆಯ್ದುವು ದುಮಾ ವನದೊಳಾ ವನಕ್ಕಿಕ್ಕಿದ ಬಾಟ್ವೇಲಿಯಂತೆ ರಸರಸಾಯನಂಗಳಂ ತೀವಿ ನೇಱೆದ ಪೊಂಗಳಸಂಗಳಂತಪ್ಪ ನವಫಲಂಗಳಿಂ ನೆಱೆದೊಪ್ಪುವ ಮಾತು ಲಂಗದ ಪೊದಱುಗಳುಮನಾ ಪೊದಱ ಮೊದಲೊಳೊದವಿ ಬೆಳೆದುಬೀಗಿ ತಮ್ಮಿಂ ತಾವೆ ಬಿರಿದು ಬಿರಿವಟ್ಟು ಸುರಿವ ದಾಳಿಂಬದ ಪಣ್ಗಳ ತನಿರಸದ ಪರಿವೊನಲೆ ಪರಿನೀರಾಗೆಯಂಕುರವೊತ್ತಿ ಬೆಳೆಯುತಿರ್ದ ಕರ್ಬಿನ ಮಡಲ್ಗಳುಮಂ, ಅಲ್ಲಿಂದೊಳಗೆ ಕಲ್ಪವೃಕ್ಷದೊಳ್ ವಿಕಲ್ಪಮಿಲ್ಲೆನಿಸಿ ಬೇರಿಂತೊಟ್ಟು, ತುದಿಗೊಂಬುವರ ಮೋರಂತೆ ನೇಱೆದುವಾಗಿರ್ದೆಲೆಯಿಂ ತುಱುಗಿ ಫಲವಾದ  ಮರಂಗಳುಮಂ, ಭೂತಳಕ್ಕತಿಪ್ರೀತಿಕರಮಾಗಿ ಪೂತಂ ಪಣ್ತೆಱಗಿದರನೇಱೆಲುಂ ಇಮ್ಮಾವಿನ ತೆಂಗಿನ ನಾರಂಗದ ಮರಂಗಳ್ ಮೊದಲಾಗಿ ಫಲಂಗಳಿಂ ನೆಱೆದೊಪ್ಪುವನೇಕ ವೃಕ್ಷಂಗಳುಮಂ, ಆ ಮರಂಗಳ ಶಾಖಾಗ್ರಂಗಳ ತಳಿರ ತುಱುಗಲೊಳಿರ್ದು ಪಾಪರೂಪನಿದಂ ಪುಗಲ್ವೇಡೆಂಬಂತೆ– ಪುಗಿಲ್ಬುಗಿ ಲೆನುತಿರ್ಪ ಪುಷ್ಪಪರಪುಷ್ಪಂಗಳಮಂ, ಮೃದುಮಧುರ ಗಂಭೀರರವದಿಂ ಸಾಮವೇದವನನುವಾದಂ ಗೆಯ್ವುಂತಿರ್ಪ ಮಧುಕರ ಪ್ರಕರಮುಮಂ ವೇದಾಂತ ಸಿದ್ಧಾಂತ ಪ್ರಮಾಣ ಶಾಸ್ತ್ರಂಗಳನೋದಿ ತರ್ಕಿಸುವ ಪಂಡಿತರ್ಕಳೊಡನೆ

ತೊಡರ್ದು ನುಡಿದು ಸದುತ್ತರಂಗುಡುತಿರ್ಪ ಶುಕಶಾರಿಕಾನಿಕಾಯಂ ಗಳುಮಂ, ಪಂಚಾಗ್ನಿ ತಾಪತಪ್ತ ಮಾನಸರಪ್ಪ ತಪೋಧನಜನಕ್ಕೆ ತಪನತಾಪ ಮನಾಗಲೀಯದೆ ತಳಿರ್ದುಱಿಗಲಂ ಪೊತ್ತು ನಭದೊಳ್ ನಲಿದಾಡುವ ಸೋಗೆ ನವಿಲ್ಗಳ ಪಿಂಡುಗಳುಮಂ, ಅಗ್ನಿಹೋತ್ರೋಪಚರಣ ಪರಿಣತಾಂತಃ ಕರಣರಪ್ಪ ಆಹಿತಾಗ್ನಿಗಳ ಮೆಯ್ಯೊಳೊಗೆದ ಶ್ರಮಸ್ವೇದಬಿಂದುಗಳುಮಂ ತಂತಮ್ಮೆಱಂಕೆಯ ಗಾಳಿಯೊಳಾಱಿಸುತ್ತಿರ್ಪ ರಾಜಹಂಸೆಗಳುಮಂ, ದೇವತಾ ರಾಧನಂಗೆಯ್ವ ತಪೋಧನರ್ಗೆರದೆ ಗದ್ದುಗೆಗಳಂ ಕಟ್ಟಿ ಧೂಪದೀಪಂಗಳುಮಂ ಕೊಟ್ಟು ಪರಿಯುಷ್ಟಿಗೆಯ್ವ ಪಟುತರ ಮರ್ಕಟಸಮೂಹಂಗಳುಮಂ, ಕೃಚ್ಛ್ರಾತಿಕೃಚ್ಛ್ರ ಚಾಂದ್ರಾಯಣ ಸಾಂತಪನಾದಿ ಮಹಾತಪಂಗಳಿಂ ತಪ್ತರಾಗಿ ಕ್ಷೀಣಧಾತುಗಳಾಗಿಯುಂ ಮಾಣದೆ ನಡೆಪಾಡುತಿರ್ದೆಡವಿ ಕಡೆವ ಜರತ್ತಾಪಸರ ಕಯ್ಯಂ ಪಿಡಿದೊಯ್ಯನೆತ್ತುವ ಗೋಲಾಂಗೂಲ ಜಾಲ ಮುಮಂ, ಹೋಮಾಗ್ನಿಯಂ ನಂದಿಸಲುಂ ಕುಂದಿಸಲುಮೀಯದೆ ಶುಷ್ಕ ಸಾಧನಂಗಳಂ ಸಂಧಿಸುವ ಕರಿಕರೇಣುಗಳುಮಂ, ಸ್ನಾತಕವ್ರಾತಕ್ಕೆ ಶೌಚ ಕಾರ್ಯ ನಿಮಿತ್ತಂ ದರಿಯ ಮಣ್ಣಂ ಕೋಡೊಳೆತ್ತಿ ತಂದವರ ಮುಂದಿಕ್ಕುವ ಭದ್ರ ಗಜವ್ರಜಮುಮಂ, ತೀರ್ಥ ಸ್ನಾನಾರ್ಥಂ ಪರಸ್ಥಾನಂಗೆಯ್ವ ವಾನಪ್ರಸ್ಥ ಜನಂಗಳಧೌತವಸ್ತ್ರ ಪವಿತ್ರಾಕ್ಷಸೂತ್ರಂಗಳಂ ತಮ್ಮ ಕವಲ್ಗೊಂಬುಗಳೊಳ್ ನೇಱಿಸಿ ಕೊಂಡಿಂಬಿನೊಳವರೊಡನೆ ನಡೆವ ಸಾರಂಗ ಸಮೂಹಮುಮಂ, ಭಿಕ್ಷುಗಳ ಭೈಕ್ಷಂಗಳೊಳ್ ಮಕ್ಷಿಕಾ ಸಂಗತಿಯಾಗಲೀಯದೆ ತಮ್ಮ ಬಾಲಂಗಳೊಳ್ ಬೀಸುತ್ತುಂ ವೋಪ ಚಮರೀಮೃಗಂಗಳುಮಂ, ಕಾಂತಾರ ಭೈಕ್ಷಾಹಾರಿಗಳಪ್ಪ ಭಿಕ್ಷುಗಳ್ಗೆ ವೃಕ್ಷರೂಪದೊಳಿರ್ದು ಭಿಕ್ಷಮನಿಕ್ಕುವ ಯಕ್ಷದೇವತೆಯರುಮಂ, ಯೋಗಾಭ್ಯಾಸಂಗೆಯ್ವ ಯೋಗೀಂದ್ರ ಬೃಂದಕ್ಕೆ ಯೋಗಾಸನಮಾಗಿ ಸುತ್ತುಗೊಂಡು ಬಿತ್ತರಂಗೆಯ್ವಂತಿರ್ದ ಭೋಗೀಂದ್ರ ವೃಂದ ಮುಮಂ, ಬಾಲಕರಂತೆ ಕಂದಮೂಲ ಫಲಂಗಳಂ ಪೆಱರ್ ತಂದಿಕ್ಕೆ ತಿಂದಾನಂದ ಮನಸ್ಕರಾಗಿ ನಿಂದ ತಪೋಧನರುಮಂ, ಚಕ್ಷುಶ್ರುತಿಗಳಂತೆ ವಾಯುಭಕ್ಷಕರಾಗಿರ್ದ ಮುಮುಕ್ಷುನಿಕರಮುಮಂ, ನೀರ್ಮಾನಸರಂತೆ ನಿರೋಳ್ ನೆಲಸಿರ್ದುದಕವಾಸಿಗಳುಮಂ, ಸಂಸಾರ ಸಾಗರಮುಮನೀಯಂದದಿಂ ದಾಂಟುವುದೆಂದು ತೋಱುವಂದದಿಂದೊಂದೆ ಕಾಲೊಳ್ ನಿಂದಿರ್ದೇಕ ಪಾದ ವ್ರತಸ್ಥರುಮಂ, ಸಗ್ಗದ ಬಟ್ಟೆಯಂ ಸುಟ್ಟಿ ತೋಱುವಂತೆ ಕಯ್ಯನೆತ್ತಿ ನಿಂದೂರ್ಧ್ವ ಬಾಹುವ್ರತಿಗಳುಮಂ, ಪಸರಿಸಿದ ಕುಸುಮದೆಸಳ ಕಸವರಂ ದೆಸೆದೆಸೆಗೆ ಮಸುಳೆ ಮಲಯಾನಿಳಂ ಬೀಸಿ ಕಳೆಯೆ ತ್ರಿಕಾಲದೊಳಂ ಶಾಸ್ತ್ರ ವ್ಯಾಖ್ಯಾ ನಂಗೆಯ್ವ ಮುನಿಮುಖ್ಯರ ಪಕ್ಕದೊಳಾಗಳುಮಗಲದ ಕರಿರರು ಹರಿಣ ಶಶಕ ಸಾರಂಗಮೆ ಮೊದಲಾದ ಮೃಗಂಗಳೊಡನೆ ಬದ್ಧ ವೈರಮಂ ಪತ್ತುವಿಟ್ಟು ಒಂದೊಂದನವುಂಕಿನೊಂಕಿ ಪತ್ತಿ ಕಿವಿಯಿತ್ತೊಱಲ್ದು ಕೇಳ್ವ ಸಿಂಹ ಶರಭ ಶಾರ್ದೂಲ

ವ್ಯಾಳಾದ ಕ್ರೂರಮೃಗನಿವಹಮುಮಂ ಕಂಡಾ ತಪೋಧನರ ತಪೋವನದ ತಪಃ ಪ್ರಭಾವಕ್ಕಮಲ್ಲಿಯ ಪಶುಮೃಗ ಪಕ್ಷಿ ಜಾತಿಗಳ್ ಮೊದಲಾದ ಚರಾಚರಂಗಳ್ಗೆ ಪುಟ್ಟಿದುವಶಮಾದಿ ಗುಣಕ್ಕಂ ಚೋದ್ಯಂಬಟ್ಟು ನೋಡುತಿರ್ದ ರಾಜಕುಮಾರನಂ ಅಲ್ಲಿರ್ದುದೊಂದು ರಾಜ ಕೀರಂ ಕಂಡು, ಎಲೆ ಮಹಾಪುರುಷ! ನೀನುಂ ಕುದುರೆಯುಂ ಕರಂ ಬಟಲ್ದಿರ್, ಇಂದಿನದಿವಸಮನೀ ಋಷ್ಯಾಶ್ರಮದೊಳ್ ವಿಶ್ರಮಿಸಿ ಪೋಗಿಮೆಂಬುದುಂ ಆ ಪಕ್ಷಿಯ ಮಾತು ತನ್ನ ಮನಕ್ಕೆ ಬಂದು ಒಂದು ಪೂಗೊಳದ ತಡಿಯ ಮಾಮರದಡಿಯೊಳ್ ಹಲ್ಲಣಮಂ ಬಿಟ್ಟು ಕುದುರೆಯಂ ನೀರಂ ಕುಡಿಸಿ ತಾನುಂ ಸ್ನಾನಾದಿ ನಿತ್ಯ ನಿಯಮಂಗಳಂ ತೀರ್ಚಿಯಾ ಪೂಗೊಳದಿಂ ಪೊಱಮಟ್ಟು ತದಾಶ್ರಮದ ಗುರುಗಳ ಸಮೀಪಕ್ಕೆ ಬಂದವರ್ಗೆ ವೃದ್ಧಾನು ಕ್ರಮದಿಂ ಪೊಡೆಮಟ್ಟು, ನಿಮ್ಮಡಿ ದೇವತಾಸ್ವರೂಪಂ ತತ್ತ್ವಂ ತಪಂ ಧರ್ಮವೆಂಬಿವೆಂತಪ್ಪುವವನೆನಗಱಿಯೆ ಬೆಸಸಿಮೆನೆ ಮುನೀಶ್ವರನಿಂತೆಂದ :

ಸಾವುಂ ಪುಟ್ಟುಮದಿಲ್ಲದ
ನಾವನವಂ ದೇವನಾತನೆಂದುದೆ ತತ್ತ್ವಂ
ಜೀವದಯೆ ಧರ್ಮಮಿಂದ್ರಿಯ
ಸೇವನೆಯಂ ಬಿಟ್ಟೊಡದುವೆ ತಪಮುಪಶಮದಿಂ

ಎಂದು ಯೋಗೀಶ್ವರನಾತನಭಿಪ್ರಾಯಮಂ ಕಿಱಿದಱೊಳೆ ನೆಱೆಯೆ ಪೇೞ್ದುದುಮರಸಂ ಸಂತಸಂಬಟ್ಟು ಕುಳ್ಳಿರ್ಪನ್ನೆಗಮಾ ರಾಜಕೀರಂ ರಾಜ ಜಂಬೂ ರಂಭಾದಿ ಸ್ವಾದು ಫಲಂಗಳಂ ತಂದೀಯೆ, ಅವನಾಸ್ವಾದಿಸಿ ವಿಗತ ಶ್ರಮನಾಗಿ ಮಿತ್ರನಪ್ಪ ಶುಕಪತತ್ರಿಗಿಂತೆಂದಂ :

ತನುರುಚಿ ರೂಪ ಸನ್ನುತ ವಯಃಸ್ವರ ಚೇಷ್ಟೆಗಳಿಂದಮೊಂದಿ ನಿ
ನ್ನನೆ ನೆಱೆಪೋಲ್ತುದೊಂದು ಗಿಳಿ ಬೇಡರಪಳ್ಳಿಯೊಳಿರ್ದು ಕಂಡುಮೆ
ನ್ನನೆ ಪಿಡಿ ಕಟ್ಟು ಕೊಲ್ಲಿವನನೆಂದುದು ದುರ್ಣಯದಿಂ ಸಮಂತು ನೀ
ನೆನಗುಪಕಾರಮಂ ವಿನಯದಿಂ ನೆಱೆಮಾೞ್ಪುದಿದೇಂ ಸುಮಿತ್ರಪೇೞ

ಎಂಬುದುಂ;

ಶ್ಲೋ ॥ ಮಾತಾಪ್ಯೇಕಾ ಪಿತಾಪ್ಯೇಕೋ ಮಮತಸ್ಯ ಚ ಪಕ್ಷಿಣ।
ಅಹಂ ಮುನಿಭಿರಾನಿತೋ ನೀತಸ್ಸತು ಗವಾಶನೈಃ

ಟೀ ॥ ಎನಗಮಾ ಪಕ್ಷಿಗಂ ತಾಯುಮೊರ್ವಳ್ ತಂದೆಯುಮೊರ್ವಂ
ಎನ್ನನೀ ಮುನಿಗಳ್ ಕೊಂಡುಬಂದರ್. ಆ ಪಕ್ಷಿಯಂ ಕ್ರೂರರುಂ
ಮ್ಲೇಚ್ಛರುಮಪ್ಪ ಬೇಡರ್ ಕೊಂಡು ಪೋದರ್.

ಮತ್ತಮಲ್ಲದೆಯುಂ;

ಶ್ಲೋ ॥ ಅಹಂ ಮುನೀನಾಂ ವಚನಂ ಶೃಣೋಮಿ
ಶೃಣೋತ್ಯಸೌ ಕ್ರೂರ ಗವಾಶನಾನಾಂ
ಪ್ರತ್ಯಕ್ಷಮೇತದ್ಭವತಾಪಿ ದೃಷ್ಟಂ
ಸಂಸರ್ಗಜಾ ದೋಷ ಗುಣಾ ಭವಂತಿ

ಟೀ ॥ ನಾಂ ಮುನಿಗಳ ವಚನಮಂ ಕೇಳ್ವೆಂ. ಆ ಪಕ್ಷಿ ಕ್ರೂರಮಪ್ಪ ಮ್ಲೇಚ್ಛರ ಮಾತಂ ಕೇಳ್ವುದು. ಇದು ಪ್ರತ್ಯಕ್ಷಮಾಗಿ ನಿನ್ನಿಂದಮೆ ಕಾಣಲ್ಪಟ್ಟುದು. ಸಂಸರ್ಗದಿಂ ದೋಷಗುಣಂಗಳಹವು

ಎಂದು ರಾಜಕೀರಂ ಪೇೞ್ದುದಱಿಂದೆಂತಪ್ಪ ಬುದ್ಧಿವಂತನುಂ ಸಂಸರ್ಗ ವಶದಿಂ ನಿಸರ್ಗಗುಣಮಂ ಪತ್ತುವಿಡುವುದು ಕಡುದಿಟಂ.

# ೩. ಶ್ರೀಮತಿ ಸ್ವಯಂವರ

ಅಂತಿರ್ಪ ಭೂಭೃದ್ವರನೊಳ್ ಸೈಪಿನ ಬಿತ್ತಿನಂತೆ ಶ್ರೀಮತಿಯೆಂಬೊಂದು ಪೆಣ್ಮಣಿ ಪುಟ್ಟಿದುದು. ಬಹುಕಾಲಕೆ ಪೆತ್ತಣುಗಿಯಂ ಮುದ್ದುಗೆಯ್ದು ಅರೆಗಳಿಗೆ ಯಾದೊಡಮಲಗಲದಾವಗಂ ತೊಡೆಯೊಳಿರಿಸಿಕೊಂಡು ಪಟ್ಟವಣೆಯೊಳಂ ಸೆಜ್ಜೆವನೆಯೊಳಂ ಸೊಗಯಿಸುತಿರ್ದಂ.

ಅನ್ನೆಗೆಮೊರ್ಮೆ ರಾಯನೊಡ್ಡೋಲಂಗೊಟ್ಟು ಅಣುಗಿವೆರಸಿರ್ಪಿನಿಂ; ಪೊಗೆ ಯುಟಿದಗ್ಗಿಯುವೊಲೊಂದಡೆಯೊಳ್, ತಣ್ಪುಗೊಂಡ ನೇಸಱವೋಲ್ ಪೆಱತೊಂದಡೆಯೊಳ್, ಬೆಳಗುವ ನಾರದಪರ್ವತರೆಂಬಿರ್ವರ್ ಮುನಿಗಳ್ ಏಕಕಾಲದೊಳಾಗಸದತ್ತಣಿ ನಂಬರೀಷನರಮನೆಗೆಯ್ತಂದರ್, ಕಂಡಾಗಳ್ ಭಕ್ತಿಮೆಱೆಯೆ ಆಸನದಿಂದಿೞಿ ದೊಡನೆಯೆ ಪೋಗಿ ಕರೆತಂದು ಅರ್ಘ್ಯಪಾದ್ಯಂಗಳನಿತ್ತು, ಸಮರ್ಪಿಸಿ, ತಾನುಮವರ ಕೆಲದೊಳ್ ಮಂಡಿಸಿ, ಮೆದುನುಡಿಯಿಂ ಕುಶಲಮಂ ಬೆಸಗೊಳುತಿಂತು ಪಚರಿಸುತಿರ್ದಂ.

ಬೞಿಕವರಭ್ಯಾಗತರಿರ್ವರುಂ ರಾಯನ ಸನಿಯದೊಳೊಪ್ಪಿರ್ದ ಬಾಲಿಕೆಯಂ ದಿಟ್ಟಿಸುತಂ ತಮ್ಮೊಳ್–ಪಱಮೆಯಂತೆ ಕರ್ಪಿಡಿದ ಮುಂಗುರುಳುಂ, ಪಾವಿನ ಪೆಡೆಯಂತೆ ಸರಿಗೊಂಡ ಜಡೆಯಂ, ಚಂದಿರರಂತೆ ಸಂತಸಮಂ ಪುಟ್ಟಿಪ ಮೊಗಮುಂ, ಕಾವನ ಸಿಂಗಾಡಿಯಂತೆ ಬಾಗಿರ್ಪ ಪುರ್ಬುಂ, ನೀರ್ವೂವೆಸವಳಂತೆ ನೀಳಮಪ್ಪ ಕಣ್ಣುಂ, ಸಂಪಗೆಮೊಗ್ಗೆಯಂತೆ ಸೊಗಸುದೋರ್ಪಮೂಗುಂ, ತೊಂಡೆವಣ್ಣಂತೆ ಕೆಂಪೆಸೆವ ಬಾಯ್ದೆಱೆಯುಂ, ದಾಳಿಂಬದ ಬಿತ್ತಿನಂತೆ ಸಾಲ್ಗೊಂಡೆಸೆವ ಪಲ್ಗಳುಂ ಕನ್ನಡಿಯಂತೆ ಪೊಳೆವ ಕೆಕ್ಕೆಯುಂ, ಬೆಳ್ದಿಂಗಳಂತೆ ಪಸರಿಪ ನಗೆಯುಂ, ಬಲಮುರಿ ಸಂಕಿನಂತೆ ಗುಜ್ಜುಗೊಂಡು ರಂಜಿಪ ಕೊರಲುಂ, ಸೊಂಡಿಲಂತೆ ದಟ್ಟಮಾದ ತೋಳುಂ, ಕೆಂದಳಿರಂತೆ ಕೆಚ್ಚನೆಯ ಮುಂಗೈಯ್ಯುಂ, ಗಱಿವೂವಂತೆ ಮೊನೆಗೊಂಡುಗುರುಂ, ಸಿಂಗದ ನಡುವಿನಂತೆ ಬಡತನಮೊದವಿದ ನಡುವುಂ, ಮಟಿಲೊಟ್ಟಿಲಂತೆ ಬೆಟ್ಟಿತಪ್ಪ ಪೊಱವಾಱುಂ, ದಿಂಡಿನಂತೆ ಬಲಿತು ಪೊಳೆವ ತೊಡೆಯುಂ, ಕೆಂದಾವರೆಯಂತೆ ಬಣ್ಣ ಮೊಂದಿದಡಿಯುಂ, ಒಂದಱಮೇಲೊಂದಟ್ಟಜಮಂ ಪುಟ್ಟಿಪವು. ಆರಪ್ಪಳೀ ಕನ್ನೆಯೆಂದು ಸಂಕಿಸುತೆ, ಅವರೊಳ್ ಕಲಹಾಶನಂ ತಾಂ ರಾಯನೊಡನೆ ಸರ್ವಾಂಗ ಸುಂದರಿಯಪ್ಪೀಕನ್ನೆ ಆರೆಂದಾರಯ್ಯೆ; ರಾಜಂ ಕೆಯ್ಮುಗಿದು–"ಜೀಯ ಇವಳೆನ್ನಣುಗಿ; ಶ್ರೀಮತಿಯೆಂಬ

ಪೆಸರ್. ಪ್ರದಾನಸಮಯಮಂ ಮುಟ್ಟಯಿಸಿ ಬಂದುದು; ಅದುದಱಿಂ ಯೋಗ್ಯಪಾತ್ರಮನಾರಯ್ಯಲ್ ತಕ್ಕುದು" ಎಂದು ಬಿನ್ನಯಿಸಿದಂ.

ನುಡಿಯಿದಂ ಕೇಳುತವರಿರ್ವರಭ್ಯಾಗತಗುಂ ಬಿರ್ದನವರಪ್ಪ ಬಯಕೆ ಪುಟ್ಟಿದುದು. ನಿಕ್ಕುವಮಾಗಲವರಿರ್ವರಮಾ ಪೆಣ್ಗೆ ಕಣ್ಣಿಟ್ಟರ್. ಅಂತು ಮೊರ್ವನ ಮನಂ ಪೆಱತೊರ್ವಂಗೆ ತಿಳಿಯಲಾದುದು. ಅನಿತಱೊಳೆ ನಾರದಂ ವ್ಯಾಜ್ಯಂತರದಿನಾ ರಾಜನಂ ಬೇಱೊಂದೆಡೆಗೆ ಕರೆದುಯ್ದೆಕ್ಕಟಿಯೊಳ್ ಹದನನಿದನುಸಿರ್ದಂ, ಪರ್ವತನುಮಂತೆಯೆ ಕೇಳ್ದಂ.

ಅದರ್ಕಂಬರೀಷಂ ಮನಂಬೆರ್ಚುತೆ ದಾಕ್ಷಿಣ್ಯದೊಳ್ ಸಿಲ್ಕಿ ಬಟಿಕಮಾಲೋಚಿಸುತವರ್ಗೆಂದಂ "ತಾಮಿರ್ವರುಮೊಂದೆ ಪೆಣ್ಗೆಯೆ ಬಯಸಿದಪಿರ್. ಮಾರ್ನುಡಿಯಲ್ ಬಗೆ ಪರಿಯದು. ಆದೊಡಂ ನಿಮ್ಮೊಳಾರ್ಗೀ ಬಾಲೆಯೊಲಿವಳವರ್ಗವಳನಿತ್ತಪೆಂ, ಸಂದೇಹಮಿಲ್ಲಂ." ಇಂತೊರೆದ ರಾಯನುಕ್ತಿಯಂ ಕೇಳ್ದಿರ್ವರುಂ- "ನಾಳೆ ಬಂದು ಕಜ್ಜಮಂ ಸಜ್ಜುಗೆಯ್ವಜ್ಜುಗಮನುಸಿರ್ವೆವು" ಎಂದು ಬೀಱ್ಕೊಂಡರ್.

ಇತ್ತಲಿವರೊಳ್ನಾರದಂ ತನ್ನ ಬಯಕೆಯು ಮೇಲ್ಗೈಯುಪ್ಪಂತೆ ಹರಿಯಂಬಲಗೊಳ್ವೆನೆಂದು ಮನೋವೇಗದಿನೊಡನೆಯೆ ವಿಷ್ಣುಲೋಕಕೆಯ್ತೆಂದು ವೈಕುಂಠಂಗೆ ಬಿನ್ನಯಿಸಿದನಿಂತು:

"ಕೇಳ್ವೈ ಮುಕುಂದ, ನಿನ್ನಿನೆನಗೊಂದು ಮೇಲಕ್ಕುಮೆಂದಱಿತಾನಿಲ್ಲಿಗೆಯ್ತಂದೆಂ. ಅಂತದಂ ನೀಂ ಬಲ್ಲೆಯಾದೊಡಂ ಲೋಕರೀತಿಯಿನೊರೆವೆನೇನೆನೆ: ಅಯೋಧ್ಯಾಪತಿಯಪ್ಪ ನಿನ್ನ ಭಕ್ತನಂಬರೀಷರಾಯಂಗೆ ಶ್ರೀಮತಿ ವೆಸರ ಪೆಣ್ಮಗಳುಂಟು. ಕಾರ್ಯಾಂತರದಿನಿಂದಾನಲ್ಲಿಗೆ ಪೋಗಿರೆ ಸುಶೀಲೆಯಾ ಬಾಲೆಯಂ ಕಂಡು ಪರಿಣಯದೆ ವರಿಸಿಕೊಳ್ವುದೆಂಬ ಮನಮೆನಗಾದುದು. ಈ ಪರಿಯ ಬಯಕೆ ಅಲ್ಲಿಗೆ ಏಕಕಾಲದೊಳ್ ಬಂದ ಸತ್ಕೃತನಾದ ಪರ್ವತಂಗಂ ಪುಟ್ಟಿದುದು. ಇಂತಪ್ಪ ಬಯಕೆಯಿನಾಮಿರ್ವರುಂ ರಾಯನಂ ಕೇಳೆ, ಇನಿಸುಂ ಪೊಟ್ತು ಜಾನಿಸಿ ಬಟಿಯಂ-ನಿಮ್ಮೊಳಾರನಿವಳಾ ಮೆಚ್ಚುವಳೋ ಅವರ್ಗವಳೆಂದಂ. ಆ ನುಡಿಗೆ-ನಾಳೆ ಬರ್ಪೆವೆಂದಿರ್ವರುಂ ಪೊಱಮಟ್ಟೆವು. ಇಂತಿದು ಪೂರ್ವ ವೃತ್ತಾಂತಂ. ಆದುದಱಿಂ ಸ್ವಯಂವರಕೆ ನಾಳೆ ನೆರವಾಗಲ್, ಪೆಣ್ ಪರ್ವತಂಗೊಲಿಯದಂತವನ ಮೊಗಮಂ ಮಂಕಡಮೊಗದಂತೆ ಮಾರ್ಪಡಿಸಲಪ್ಪುದು. ಅದೊಡೀ ಕುಱುವು ಶ್ರೀಮತಿಗೊರ್ವಳ್ಗೆಯೆ ತೋಱಲಕ್ಕುಮಲ್ಲದೆ ಪೆಱರ್ಗೆ ಕಾಣಿಸಲಾಗದು. ಇನಿತೊಂದುಪಕೃತಿಯನೆಸಗಲ್ ವೇಱ್ಕುಂ.

ಇಂತು ಕೆಯ್ಜೋಡಿಸುತೆ ಬಲ್ಬಗೆಯಿಂ ಬೇಡಿಕೊಳ್ವ ಮುನಿಯ ಕಿಟ್ಟಿಗೆಗೆ ನಕ್ಕು, ದೇವಂ- "ಅಂತಕ್ಕೆ" ಎಂದು ಮನ್ನಿಸಿ ಕಳುಪಿದಂ ಸಮನಂತರದೊಳ್ ಪರ್ವತನುಂ ಪದ್ಮನಾಭನ ಪದದೊಲ್ಮೆಯಂ ಪಡೆದು ಪವಣಱಿತು ಪೆಣ್ಣಂ ಪಿಡಿದಪೆನೆನುತೆ ಪಾಲ್ಗಡಲೆಡೆಗೆ

ಪರಿತಂದಂ. ಬಂದೆಱಗಿದ ತಪೋನಿಧಿಯಂ ಕರುಣಾನಿಧಿಯೊಲ್ದುಪಚರಿಸುತೆ ತನ್ನೆಡೆಗೆ ಬರಲ್ಕಾರಣಮಂ ಬೆಸಗೊಂಡಂ ತಾನುಸಿರ್ಮದಿದುವೆ ಪೊಸಬಿನ್ನಪಮೆಂದು ಮುನ್ನಂ ನಾರದಂ ಪೇೞ್ದಂತೆಯೆ ಪೂರ್ವೋತ್ತರಂಗಳನಱಿಕೆಗೆಯ್ದು– "ದೇವ, ನೀಂ ಪಿರಿಯಂ ಆರ್ಗೇನೆಣಿಕೆಯಿರ್ಪುದ ದನೀಯಲ್ತಕ್ಕವಂ. ನಾೞಿನ ಪಂತದೊಳ್ ಬಾಲೆಗೆ ನಾರದನೊಳ್ ಬೇಸಱ್ ಪುಟ್ಟುವ ವೊಲ್ ಮೊಗಂ ಕೋಡಗ ಮೊಗದಂತೆ ಪುಟ್ಟುಗೆ. ಅಂತ ದನ್ಯರ್ಗೆ ತಿಳಿಯಲ್ಬಾರದು. ಇಂದೊಂದು ದಯೆಗೆಯ್ದೊಡಾಂ ಗೆಲ್ದೆಂ" ಎನೆ, ಕರುಣಾಳು ತಾಂ– "ಆಃ! ಇವರಿರ್ವರ್ಗಂ ಮನಮುಂ ಮೇಣ್ ಗುಮಮುಮೊಂದೆ ಗಡಂ ತಕ್ಕುದನುಣ್ಗೆ" ಎಂದು ತನ್ನೊಳ್ ಪರಿಭಾವಿಸಿ "ತಥಾಸ್ತು" ಎನುತೆ, ಈ ಸಮಾಚಾರಮಂ ನಾರದಂಗುಸಿರ ದಿರೆಂದಪ್ಪಣೆಯಿತ್ತಟ್ಟಿದಂ.

ಮಾಧವನಾಣತಿವಡೆದಿಂಗಡಲಿಂ ತಳರ್ದು ಅಯೋಧ್ಯೆಗೆಯ್ತರ್ಪ ಬಟ್ಟೆಯೊಳ್ ಪರ್ವತಂ ತಾಂ ತನ್ನೊಳೆ–"ಗೆಲ್! ಗೆಲ್! ಪೆಣ್ದೊಂದೆನ್ನ ಕೌಂಕುೞಯೊಳ್ ಸಿಲ್ಕಿದುಮ; ಅಂತಪ್ಪ ಮಂಗಮುಸುಡಂ ಕಂಡು ಕನ್ನೆ ನಾರದನಂ ಒಲಿವಳೇ? ಉಃ! ಎಂದುಂ ಮೆಚ್ಚಳ್; ಒಳಿತಾದುದು" ಎಂದು ಪಲವಂ ಪಂಬಲಿಸುತಿರ್ದಂ. ಪೆಱತೊಂದೆಡೆಯೊಳ್ ನಾರದನುಂ– "ಆ ಬಾಲೆ ಪರ್ವತನಂ ಕಂಡೆನಿತು ಹಾಸ್ಯಂಗೆಯ್ವಳೋ ಮೇಣದರ್ಕವನೆನಿತು ನಾಣ್ಚುವನೋ ಕಾಣ್ಬೆಂ" ಎನುತಾಲೋಚಿಸುತೆ ಅಯೋಧ್ಯೆಗೆ ಬರುತುಮಿರ್ದಂ.

೪

ಆಲಿಸೈ ಮುನಿಪುಂಗವ, ಅತ್ತ ಅಂಬರೀಷಂ ನಿಜಸುತೆಯ ಸ್ವಯಂವರಕೆಂದು ಪತ್ತನದೆಲ್ಲೆಡೆಗಳಂ ಮಂಡಪತೋರಣಧ್ವಜಪತಾಕೆಗಳಿಂ ಸಿಂಗರಿಪಂತೆಯುಂ, ಬೀದಿಗಳಂ ಗಂಧೋದಿಕದಿಂ ಸಾರಣೆಗೆಯ್ದು ರಂಗವಲ್ಲಿಗಳನ್ನಿಟ್ಟು ಪೂಜಲ್ಲಿಗಳಂ ಬಿಟ್ಟು ಸೊಗಯಿಸುವಂತೆಯುಂ, ಅರಮನೆಯಂ ನವರತ್ನಾದಿಳಿನಲಂಕರಿಪಂತೆಯುಂ ಆಣೆಗೆಯ್ದು ಮಿಕ್ಕ ಸನ್ನಣದೊಳಿರ್ದಂ.

ಇಂತೊಪ್ಪುವ ನಾಡ ಸೊಬಗಂ ಕಾಣುತೆ ರಿಸಿಗಳಿರ್ವರ್ ಸಂತಸಂಗೊಂಡು ಪೇೞ್ದಿಗಡುವಿಂಗೆ ತಪ್ಪದೆಯ್ತುರುವರನರಸಂ ಸನ್ಮಾನಿಸಿ ಬೞಿಯಂ ಕುವರಿಯಂ ಸ್ವಯಂವರ ಮಂಡಪಕೆ ಕರೆತಂದು, ಮಗಳ್ಗೆ–"ಎಲೌ ಬಾಲೆ, ಇವರೀರ್ವರುಂ ನಿನ್ನಂ ಬಯಸಿದಪರ್; ಆದೊಡೆ ಪೆಣ್ಣೊರ್ವಳೊರ್ವಂಗಲ್ಲದೆ ಇರ್ವರ್ಗಮಾಗದುದರಿಂ ನೀನಾರನೊಲಿವೆ, ಅವರ್ಗೀವೆಂ ನಿನ್ನಂ. ಆದುದಱಿನಿವರೊಳಾರಪ್ಪರವರ ಕೊರಲ್ಗೆ ಈ ಪೂಸರಮನಿಡುವುದು" ಎಂದುಸಿರ್ದಂ.

ಅಯ್ಯನಾಣತಿಯನಾಂತಣುಗಿ ಎನಸುಂ ನಾಣ್ಚಿ ಕರದೊಳ್ ಪೂಮಾಲೆಗೊಂಡು ಪಿಡಿನಡೆಯಂತೆ ಸಹಚರಿಯರ್ವೆರಸು ಮೆಲ್ಲನವರೀರ್ವರ ಸನಿಯಮಂ ಸಾರ್ದು

ಕಣ್ಬೊಗರನಿರ್ವರೊಳಂ ಪಸರಿಸಿ ಇನಿಸುಂ ಜಾನೆಸಿ ಮೇಣ್ ನೆಲನಂ ನೋಡುತುಸಿಕ ನಿರ್ದಳ್.

ಬಾಲೆಯಿಂತು ಸುಮ್ಮನೆ ನಿಲ್ತಿರೆ; ಕಂಡು ರಾಯಂ–"ಏಂ ಮಗಳೆ ಮನಂಬಂದಂಗೆ ಮಾಲೆಯಿಕ್ಕನೆ ಮಾಣ್ದೌ; ಪೆಱತೇನನೆಣ್ಣದಿರ್. ಇರ್ವರುಂ ಬೇದಬಿಜ್ಜೆಗಂಗೆ ಸರಿಮಿಗಿಲೆನಿಪರ್; ಮಾದೇವನಂತೆ ಮೈ ಮೆಯುಳ್ಳವರ್; ಸಿರಿಯರಸನಂತೆ ಸೊಗಸುಳ್ಳವರ್;ನ್ನಾಡಾಡಿ ಕಿತ್ತಡಿಗಳಲ್ತು; ಸಂದೆಯಮಣಮಿಲ್ಲದೆ ಇವರೊಳ್ ಮನಬಂದವನ ನೊಲಿಸಿಕೊಳ್ವುದು" ಎಂದಱಿಪಲಾಬಾಲೆ ಬೆದುರ್ದು, ಪಿತಂಗೆ– "ಬೊಪ್ಪ! ನೀನೊರೆವಂತೆ ರಿಸಿಗಳಾರುಂ ತನಗೆ ಕಾಣಿಸರ್; ಮಂಗ ಕೋಡಗ ಮುಸುಡಿನವರಾರೊ ಇರ್ವರ್ ತನ್ನಿದಿರ್ಗೆನಿಂದಂತೆ ತೋರ್ಪುದು. ಆದೊಡಿವರ ನಡುವೆ ಸರ್ವಾಭರಣ ಸಂಯುಕ್ತನುಂ, ವಿಶಾಲಾಕ್ಷನುಮಾಜಾನುಬಾಹುವುಂ, ತುಂಗೋರಸ್ಥಲಮಪ್ಪ ಷೋಡಶ ವರ್ಷದ ವರನೊರ್ವನಂ ಕಾಣ್ಬೆಂ. ಅಂತಿರ್ಪನ ಪೀತಾಂಬರಮು, ಶ್ಯಾಮಾಂಗಮುಂ ಶುಭಗಾತ್ರಮುಂ ಮನಂಗೊಳ್ವುದು; ಪದ್ಮಲೋಚನಂಗಳಿನೆನ್ನನೆ ದಿಟ್ಟಿಪಂ; ಮೇಣ್ ನಗುವಂ. ಕುಂದಕುಟ್ಮಲದಂತಿರ್ಪ ಪಲ್ಗಳ್ ಸ್ಪಷ್ಟಂ ತೋರ್ಪುವು. ಮತ್ತಮಾಪುರುಷಂ ಬಲಗೈಯನೆನ್ನ ಕರಮಂ ಪಿಡಿಯಲೆಂಬೋಲ್ ಮುಂದೆ ನೀಡಿರ್ಪಂ" ಎಂದು ಮಾರ್ನುಡಿದಳ್.

ಬಱಿಯಂ ಬಾಲೆಯ ಭಾಷಣಮಂ ಭಾವಿಸಿ ನಾರದಂ ಕಟ್ಟಚ್ಚರಿಯೊಳ್–"ಎಲೈ ಕನ್ಯಾಮಣಿಯೆ ಅಂತು ನೀಂ ನೋೞ್ಪವಂಗೆ ತೋಳ್ಗಳೆನಿತಿರ್ಪುವು? ಕಂಡಂತುಸಿರಾ" ಎನಲ್, "ಎರಡೆ" ಎಂದಳ್. ಆಗಳ್ಮಗುೞ್ದು–"ಆತನ ವಕ್ಷಸ್ಥಲದೊಳೇನಂ ಕಂಡಪೆ? ಮತ್ತಂ ಕರದೊಳೇನಂ ಪಿಡಿದಿರ್ಪಂ? ಎಂದು ಬೆಸಗೊಂಡೊಡೆ;– "ವಿಶಾಲವಕ್ಷ ಸ್ಥಲದೊಳ್ ದಿವ್ಯಮಾಲಿಕೆಯಂ ಶುಭಹಸ್ತಂಗಳೋಳ್ ಕಾರ್ಮುಕ ಸಾಯಕಂಗಳು ಮೆಸೆದಿರ್ಪುವು" ಎಂದಱಿಪಿದಳ್.

ಶ್ರೀಮತಿಯ ನುಡಿಗಿರ್ವರುಚ್ಚರಿವಡುತಾತ್ಮಗತಚಿಂತೆಯೊಳ್ ಬಹುದೂರಂ ಜಾನಿಸಿ–ಮಾಯಿಕವಿದು, ಮಾಧವನಿನಲ್ಲದೆ ಪೆಱರಿನಾಗದೆಂದು, ನಾರದಂ–ಆತನ ವನಲ್ಲದೊಡೆ ತನ್ನ ಮೊಗಮಿಂತೇಕಾಕೆಗೆ ಕಾಣಲಾದುದೆನುತೆ ಪರ್ವತಂ ನಾರದನ ಮೊಗಮಂತಿರ್ಪುದು ತಕ್ಕುದು. ಆದೊಡೆನ್ನತೇಕಿಂತು ತೋರ್ಪುದೆನುತೆ; ಇರ್ವರುಂ ನುಡಿಯುತಿರ್ದರ್.

ಇಂತಿರಲಂಬರೀಷನವರ್ಗೆಱಗುತೆ– "ಪೂಜ್ಯರೇ, ಬಗೆಯಿತೆಱದೊಳ್ ಮರುಳ್ಗೊಳಲೇಗೆಯ್ದಿರ್? ಎನ್ನಯ ಕನ್ನೆಯೊಳ್ ಮನಮಿಟ್ಟು ಬಂದಿರ್ಪಿರಾದೊಡೆ ಕೊಂಚ ಸ್ವಸ್ಥಮಿರ್ಪುದು. ಪವಣಱಿತು ಪೇೞಿಂ" ಎಂದೊಡೆ, ನಸುಮುನಿಸಿಂ– "ಮಱುಳ್ಗೊಳಿಸಿದವರಾವಲ್ತು; ನೀನೇ ಈ ಪೆಣ್ಣೆಮ್ಮನೊಲಿಯದೊಲೆಂತೊ ಕಪಟಮಂ ಕುವರಿಗೊರೆದೊ, ನೀನೆಯೋ ಎಸಗಿರ್ಪೆ?" ಎನುತೆ ಮಱುಮಾತಾಡಿದರ್.

ಈ ಬಿಱುನುಡಿಯಂ ಲಾಲಿಸುತಾ ಬಾಲೆ–ಇವರ್ ತಾತಂಗೇನಾನುಂ ಶಾಪಮಿತ್ತಪರೆಂದು ತಳಮಳಗೊಂಡು ಮುನ್ನಂ ಕಾಣಿಸಿಕೊಂಡ ದಿವ್ಯಪುರುಷನಂ ಮನದೊಳ್ ಜಾನಿಸಿ, ತವಸಿಗಳೊಳೊರ್ವಂಗೆ ಸರವನಿಕ್ಕುವೆನೆಂದು ಮುಂದಡಿಯಿಟ್ಟಳ್ ದೈವಸಂಕಲ್ಪಮನಾರ್ ಮೀರ್ವರ್/ ಅಂತವರೊಳೊರ್ವಂಗೆ ಮಾಲೆಯಿಕ್ಕುವೆನೆನುತೆ ಪಜ್ಜೆಯಿಕ್ಕಿದ ಪೆಣ್ ಮಗುಟ್ಟಿದ್ದಮಾ ಸುಂದರ ಮೂರ್ತಿಯಂ ಮೋಹಿಸುತೊಡನಾತಂಗೆಯೆ ಸರಮಂ ಹಾಯ್ಕಿದಳ್. ಅನಿತಱೊಳಚ್ಚರಿಗೆ ತಕ್ಕಂತೆ ಆ ಕನ್ಯೆಯುಂ ಮೇಣಾ ದಿವ್ಯ ಪುರುಷನುಂ ಕಾಣಿಸದಾದರ್.

ಚಿತ್ತಯಿಸೈ, ಮುನಿಯೆ, ಆ ಬಾಲೆಯನುಯ್ದವನಾರೆಂದು ಬಲ್ಲೈ? ಸಾಜಮಾದ ಭಗವಂತಂ. ಆತನುಂ ನಿರ್ವ್ಯಾಜಂ ಪಡೆದನಲ್ತು. ಆ ಪೆಣ್ಗೆಯೆ ಅನಿಶಂ ತಪಮೆಸಗಿ ಪೂರ್ವಸಂಕಲ್ಪಾನುರೂಪಂ ಪೊಂದಿದಂ.

ಇತ್ತಲಿರ್ವರು ದುಃಖಾಕುಲರ್ ವೈಕುಂಠನೊಳೆ ಇಂತೀಪರಿಯುಂ ನಿರ್ಧರಿಪುದೆಂದು ಗಳ್ಕನೆ ವೈಕುಂಠಕೆಯ್ತರಲಿತ್ತಲ್ ಶ್ರೀಹರಿ ತಾಂ ಶ್ರೀಮತಿಯಂ ಕುಱಿತು– "ಎಲೆ ಮೋಹನಾಂಗಿ! ನಿನ್ನಿಂ ವಂಚಿತರಾದಾ ತವಸಿಗಳೀಗಳಿದೆಕೊಳ್ ಬರ್ಪರಿತ್ತಲ್. ಆದುದಱಿಂ ನೀನೆತ್ತನಂತರಂಗದೊಳ್ಗುಪ್ತಳಾಗು"ಎನೆ ನಸುನಗುತಂತೆಯೆ ಒಳಪೊಕ್ಕಳ್.

ಸಮನಂತರದೊಳ್ ನಾರದನುಂ ಪರ್ವತನುಂ ಪುರಾಣಪುರುಷನಂ ಕಂಡೆಱಗುತವನೊಳ್ ಮೊದಲನೆಯಂ–"ದೇವ, ಇಂದೆಮಗಿರ್ವರ್ಗುಂ ಒಳ್ನುಡಿಯಿನೊಪ್ಪಂ ಬೂಸಿದೈ! ಇಂತೆಮ್ಮನಟಿಲಿಸಿ ಬಟಿಲಿಸಲ್ಬಹುದೆ? ನಿಶ್ಚಯಂ ನೀನೆ ಆ ಪೆಣ್ಣಂ ಕಳ್ದು ತಂದವಂ ಚಿಃ! ವಿಶ್ವಾಸಘಾತಕಮನಾರ್ಗುಮೆಸಗಬಾರದು, ಸಾಲ್ಗುಂ ಜೀಯ! ನೀಂ ಪಿರಿಯಂ" ಎನೆ; ಕಿವಿ ಮುಚ್ಚಿ ಪುಸಿ ಮುನಿಸಿಂ–"ಇನ್ನೆಗಂ ನೀಂ ಯೋಗ್ಯನೆಂದೆಣಿಸಿರ್ದಂ. ಈಗಳ್ ಸೊರ್ಕಿ ನೀನೆಂತಾನುಂ ಗಟಿಪುವುದಂ ಕಾಣುತೆ ಋಷಿಸ್ವಭಾವಮನೆನಿತುಂ ಲಕ್ಷಿಸೆಂ. ಎಲೆ ಮುನಿಪ! ನೀನುಸಿರ್ವುದು ಸಾಜವಲ್ಲಂ; ಮೇಣಂತು ಕಾರಣಮುಮಿಲ್ಲಂ" ಎಂದು ಸಿರಿಯರಸನೊರೆದಂ. ಅದರ್ಕೆ ನಾರದಂ– "ಅಂತಾದೊಡೆನ್ನ ಮೊಗಂ ಮಂಗಮಸುಡಂತೇಕೆ ವಿಕಾರಮಾಯ್ತು? ಎಂದು ಕೇಳೆ; ನಾರಾಯಣಂ–"ಅಯಃ! ಪಲವುಂ ಕಾಲಮೆನ್ನ ಭಜಿಸುತಿರ್ದೊಡಂ ನೀನೆನ್ನ ಮೈಮೆಯ ನೆಲೆಯಂ ಕಂಡುದಿಲ್ಲಂ. ಆಂ ಭಕ್ತಾಧೀನನಪ್ಪೆಂ. ಸರ್ವರುಂ ಸಮಂ. ನೀನೆಂತು ಆ ಪೆಣ್ಣ ಕತದಿಂ ಬೇಡಿದೆ ಅಂತೆ ಈ ಪರ್ವತನುಂ ಕೇಳ್ದಂ. ಅದಱೆನಿರ್ವರ್ಗುಮಿಂತಾದುದು. ದೂಱೆಗಾರುಮಿಲ್ಲಂ, ಆರ್ ಏಂ ಬೇಟ್ಪರವರ್ಗೆ ಅದನೀವುದೆನ್ನ ಬಿರುದು. ಆಂ ಸತ್ಯಸಂಧಂ. ಸತ್ಯಬಲದಿಂದಿಯೆ ಚಕ್ರಮಿದು ಕೈಸೇರ್ದುದು" ಎಂದಂ.

ನಾರಾಯಣನಾಜ್ಞೆಯಂ ನಾರದನಾಲಿಸಿ–"ನಿನ್ನಪ್ಪಣೆಯನಿತುಂ ನಿಜಮಾದೊಡಂ

ಸ್ವಯಂವರಮಂಡಪದೊಳ್ ಎಮ್ಮೊಳೊರ್ವನನಾರಿಸಿಕೊಳೆ ಬಂದಾ ಬಾಲೆಗೆ ಎಮ್ಮೆಡೆಯೊಳೊರ್ವಂ ಧನುರ್ಬಾಣಂಗಳನಿರ್ಕೆಯ್ಗಳೊಳ್ ಪಿಡಿದಿರ್ದವಂ ಬಾಲಸುಂದರಂ ಗಡ; ಆರೆಂದಾರ್ಕೈದುದಿಲ್ಲ; ಅಂತುಮವನೆ ಕಳ್ದುಯ್ದುದು ದಿಟಂ" ಎಂದು ಪೇೞ್ದಂ.

ಇದರ್ಕೆ ಜನಾರ್ದನಂ–"ಅಕ್ಕುಂ. ಲೋಕದೊಳ್ ಮಹಾತ್ಮರೆನಿಪರೊಳ ನೇಕರ್ ಮಾಯಾವಿಗಳೊಳರ್, ಅಂತಪ್ಪವರೊಳಾರೊ ಕನ್ನೆಯಂ ಕಳ್ದೊಯ್ದಿರವೇೞ್ಕು ಮಲ್ಲದೆ ಎನ್ನಿನಾದ ಕಜ್ಜಮಲ್ತು. ಏತರ್ಕೆನೆ, ಆನೇಗಳುಂ ಚತುರ್ಭುಜನುಂ, ಚಕ್ರಪಾಣಿಯು ಮಾಗಿರ್ಪೆನಲ್ತೆ: ಪುಸಿಯುಸಿರಲ್ ಕಜ್ಜಮಿಲ್ಲ" ಎನೆ, ರಿಸಿಗಳಿರ್ವರು ಮೊಂಡಂಬಂತೆ– "ನಿನ್ನೊಳಾವ ತೆಱದ ಸಂದೆಯಮುಂ ಕಾಣಿಸದು. ಅವಿವೇಕಿಗಳೆ ಮತಪರಾಧಮಿದಂ ಕ್ಷಮಿಸಿ ಕೂರ್ಮೆಯಿಂ ಪೊರೆವುದು" ಎಂದೆಱಗಿ ಅಂಬರೀಷನೆ ತಮ್ಮಂ ವಂಚಿಸಿರ್ಪನೆಂದು ಕಡುಗಿ ಮರಟ್ದಿಯೋಧ್ಯೆಗೆ ತೆರಳ್ದರ್.

ಭಾರದ್ವಾಜ, ಒಡನೆಯೆ ಮುನಿಗಳಂಬರೀಷನೆಡೆಗೆಯ್ತಂದು ರಾಯನೊಡನೆ ಕೋಪದ ಬಿಂಕಂ "ಎಲೆಲೆ! ಪಿಡಿ ಪಿಡಿ ಶಾಪಮಂ. ಎಮ್ಮೊಳೊರ್ವಂಗಾಪೆಣ್ಣ ನೀವೆನೆಂದು ನಂಬಿಸುತೆ ಬರಿಸಿದ ಕತದಿಂ ಮೇಣ್ ನುಡಿಗೆ ಪುಸಿದಟವಟದಿಂದನ್ಯರ್ಗೆ ಕನ್ನೆಯನಿತ್ತೆಮ್ಮನೇಳಿಸಿದ ಕಾರಣದಿಂದೆ ನಿನಗೆ ತಮೋಜ್ಞಮಕ್ಕೆ. ಈ ಯೋಗದಿನಾತ್ಮಜ್ಞಾನಂ ಮಱೆತು ಪೋಕೆ" ಎಂದು ಶಪಿಸಿದಾಗಳೇನೊರೆವೆಂ! ಅಂಧಕಾರದಂತವ ನಿದಿರ್ಗೆ ತಮೋರಾಶಿಯಾವಿರ್ಭವಿಸಿದುದು. ಎಂತಾದೊಡಂ ಭಗವದ್ಭಕ್ತರ್ಗೆ ಬವಣೆ ಬರ್ಪುದೆ! ರಥಾಂಗ ಪ್ರಭಾವದಿಂ ರಾಯಂಗಿನಿಸು ತೊಡರ್ ತೋರ್ದುದಿಲ್ಲ. ತಮೋರಾಶಿಯಂ ಋಷಿಗಳುಮಂ ಬೆಂಬತ್ತಿ ಪೋದುದಾ ಚಕ್ರಂ.

ಇಂತು ಬಹುದೂರಮಟ್ಟುತುಪದ್ರವವನೀಯುತಿರಲವರ್ಗೆ ಪೆಣ್ಣಿನಾಸೆಯು ಮಿಲ್ಲಂ ಮಣ್ಣಿನಾಸೆಯುಮಿಲ್ಲಂ; ಮೇಣೊರ್ಮೆ ಸ್ವಾಮಿಯಂ ಕಾಣ್ಬುದೊಂದೆ ಬಯಕೆ ಪಿರಿದಾಯ್ತು. ಅಂತುಮಿಂತುಂ ಮುಂತಿವರುಂ ತಮೋರಾಸಿಯುಂ ಪಿಂತಾಪಾಱಿಘುಂಬಳೆಯುಂ ಬರೆ, ಮತ್ತಂ ವಿಷ್ಣುವೆಡೆಗೆ ಬಂದು ಮಣಿದು–ಜನಾರ್ದನಾ, ಪದ್ಮನಾಭಾ, ಪುರುಷೋತ್ತಮಾ, ಲೋಕನಾಥಾ, ನೀನೆ ಎಮ್ಮಂ ಕಾವುದು" ಎಂದರ್.

ಭಕ್ತಾಧೀನಂ ತನ್ನೊಳೆ–ಬಲ್ಬಟಿಲ್ದರಿವರೆನ್ನಿಂ: ಅಂಬರೀಷರಾಯನೆಂತಂತಿವರುಂ ಕೇವಲ ಭಕ್ತರ್: ಇನ್ನುಂ ದಣಿಸಲಾಗದು; ಮುಂತಣಾಟಿ ಕಡ್ಡಿಯಕ್ಕುಮೆನುತೆ ಮನಂದಂದು, ಚಕ್ರಬಾಧೆಯಂ ಮೇಣಂಧಕಾರಮಂ ತೊಲಗಿಸಿ, ನಾರದಪರ್ವತರ್ಕಳಂ ಕುಱಿತು– ತಾಪಸೋತ್ತಮರಿರಾ, ಪೆಣ್ಗಾಗುತೆ ಸೋಲ್ತಿರ್ೖ; ನಂಬಿದನಂ ಪೊರೆಯಲೆಸಗಿದ ಇಂತಪ್ಪ ಕೃತ್ಯಕೆ ಎನ್ನುಮಂ ಮೇಣ್ ಚಕ್ರಮುಮನೀಗಳ್ ಮನೀಗಳ್ ಕ್ಷಮೀಶೀಲರಪ್ಪುದಱಿಂ ಮನ್ನಿಪುದು" ಎಂಬುದಂ; ಉರಿಗಿಚ್ಚಿಗೆ ನೆಯ್ಯೆಱೆಯೆ ಕೆದರ್ವಂತೆ ಕೋಪಂ ಕೆದಱೆ

ನಿಲ್ತಿರ್ವರುಂ– "ನೀನೇ ಶ್ರೀಮತಿಯಂ ಮಾಯೆಯಿಂ ಕಳ್ದುತಂದವಂ, ನಿಜಂ, ಅಕ್ಕೆ: ಆವ ರೂಪದಿನಾಪೆಣ್ಣಂ ಮೋಸದಿಂ ಕೊಂಡೊಯ್ದೆಯೊ, ಅಂತೆ ಇರ್ತೋಳಂ ತಳೆದು ಆ ಅಂಬರೀಷ ರಾಜವಂಶದೊಳೆ ದಶರಥಂಗೆ ಪುಟ್ಟು! ಶ್ರೀಮತಿಯುಂ ಮಗುಟ್ದಿ ತಿರೆಗೆ ಜನಿಸುಗೆ! ಮಿಥಿಲಾಧಿಪಂ ಜನಕವನವಳಂ ಮೇಣ್ ಪೊರೆಗೆ! ಎಂತೆಮ್ಮಂ ವಂಚಿಸಿ ಆ ಪೆಣ್ಣಂ ಕಳ್ದುಯ್ದೆಯೊ, ಅಂತು ನಿನ್ನ ದ್ವಿತೀಯೆಯನವಳನೊರ್ವ ರಕ್ಕಸಂ ಕೊಂಡುಯ್ಗೆ ಮೇಣೀಗಳಿವಳ ಸಂಬಂಧದಿನಾಮುಮೆಂತು ದುಗುಡದಿಂ ಬಟಲ್ದೆವದಱಿಂ ಪಿರಿದು ನೀಂ ದುಃಖದಾಳ್" ಎಂದು ಶಪಿಸಿದರ್.

ಭಕ್ತರ ನುಡಿಯೆ ತನ್ನ ನುಡಿಯೆಂಬೋಲ್ ಇಂದಿರೆಯರಸನವರ ಶಾಪಮಂ ಪೊರೆವೆನೆಂದು–"ಅಕ್ಕುಂ ನೀಮ್ರುಸಿದಂತೆಯೆ ಅಂಬರೀಷರಾಜನವರ ವಂಶದೊಳೆ ಯಶಸ್ವಿಯುಂ ಧಾರ್ಮಿಕನುಮಪ್ಪ ದಶರಥಭೂಪಾಲಂಗೆಯೆ ಪಿರಿಯಂ ರಾಮವೆಸರಿಂ ಪುಟ್ಟುವೆಂ. ಆಗಳೀಗಳೀಮಿಕ್ಕಿರ್ದ ತೋಳ್ಗಳೊಳ್ ಬಲದೋಳ್ ಭರತನುಂ ಎಡದೋಳ್ ಶತ್ರುಘ್ನನುಂ ಮೇಣೀ ಶೇಷಂ ಲಕ್ಷ್ಮಣನುಮಾಗೆ ಸೋದರರುಂ ಪುಟ್ಟುವರ್. ಎಂದೆಮ್ಮೆವತಾರಮಪ್ಪುದು ಅಂದು ನೀವೆಮ್ಮಂ ಕಾಣಲಕ್ಕುಂ. ಅಂದುಪರ್ಯಂತ ಮಂಬರೀಷನ ನಾಡೊಳಲ್ಲದೆ ಪೆಱತೆಲ್ಲಿಯುಂ ಯಥೇಚ್ಚಮಿರ್ಪುದು ರಿಸಿಸಾಪಂ ಪುಸಿಯಾಗದು" ಎಂದು ಅಂಧಕಾರಮಂ ಮೇಣ್ ಶಾಪಮಂ ತಿಳಿಪಿದಂ. ಆಗಳಾ ತವೋರಾಶಿಯುಂ ಋಷಿಶಾಪಮುಮಡಂಗಿದುವು. ಚಕ್ರಮುಂ ಮುನ್ನ ಮಾಗಿರ್ದುದವರೊಳ್ ಸೇರ್ದುದು.

ಇಂತೀಪರಿಯಂ ಕಾಣುತೆ ಪಿತ್ತಮಿಱಿಯೆ ಮುನಿಗಳಿರ್ವರುಂ ಬೆದರ್ದು– "ಏತರ್ಕಾಪೆಣ್ಣಂ ಬಯಸಿದುದು; ಓರ್ವಂ ಮೇಓರ್ವನಂ ವಂಚಿಸಲೇಕೆಣಿಸಿದುದು; ಮೇಣಂಬರೀಷಂಗುಂ ಜನಾರ್ದನುಂಗುಂ ಶಪಿಸಿದುದೇಕೆ" ಎಂದು ಚಿಂತಿಸುತೆ– "ಚಿಃ! ಮುಂದಿಂತಿರಲಾಗದು. ಇಂದು ಮೊದಲ್ಗೊಂಡು ದೇಹಾಂತಪರ್ಯಂತಂ ಕನ್ಯಾಪರಿಗ್ರಹರಿಗೆಯ್ವುದಿಲ್ಲಂ. ಈ ನುಡಿಗೆ ಭಗವಂತತೇ ಸಾಕ್ಷಿಯಿಕೆ!" ಎಂದು ಪ್ರತಿಜ್ಞೆಗೈದು ಮುನ್ನಿನಂತೆ ತಮ್ಮಾಶ್ರಮಂಗಳ್ಗೆ ತಪಮನೆಸಗೆ ಪೋದರ್.

ಅಂಬರೀಷರಾಯನುಂ ಬಹುಕಾಲಮರಸುಗೆಯ್ದು ಪುಣ್ಯಾತ್ಮಂ ಪುಣ್ಯ ಲೋಕಮಂ ಪೊರ್ದಿದಂ ಕೇಳ್ಗೈಮುನಿಪ, ಅಂಬರೀಷನ ಮಾನರಕ್ಷಣಾರ್ಥಮುಂ ನಾರದಪರ್ವತರ ಪ್ರತಿಷ್ಠಾರ್ಥಮುಂ ನರರೂಪವಂ ತಾಳ್ದಪರಿಯಂ. ಆಃ! ಮಾಯೆ ತೋರ್ದುದಱಿಂ ಮಹಾವಿಷ್ಣುವಿಂಗಾದೊಡಂ ಮಾನುಷಜನ್ಮಮಾದುದು ಗಡ! ಇಂತಿರೆ ಕಱಿವಾನಿಸರ್ ಕಪಟಮಂಗೆಯ್ದೊಡೆ ಆವ ಜನ್ಮಂ ಬರ್ಕುಂ ಪೇಳ್; ಕಪಟಮಾರ್ಗಂ; ಸಲ್ಲದೈ.

# ಟಿಪ್ಪಣಿಗಳು

## ೧. ಕಾರ್ತಿಕ ಋಷಿಯ ಕಥೆ

ವಡ್ಡಾರಾಧನೆಯಲ್ಲಿ ಬರುವ ಹನ್ನೊಂದನೆಯ ಕಥೆ ಕಾರ್ತಿಕ ಋಷಿಯ ಕಥೆ. ಪ್ರಜ್ಞಾಪೂರ್ವಕವಾಗಿಯೇ ರೂಪವ್ಯಾಮೋಹಿತನಾಗಿ ಅಗ್ನಿರಾಜ ತನ್ನ ಕಿರಿಯಮಗಳಾದ ಕೃತ್ತಿಕೆಯನ್ನು ಮದುವೆಯಾಗುತ್ತಾನೆ. ಸ್ವಾಮಿ ಕಾರ್ತಿಕ ಅವರಿಬ್ಬರ ಮಗ. ಈ ಸಂಬಂಧಗಳ ಪರಿಣಾಮವೇ ಕಥಾವಸ್ತು. ಇದು ಈಡಿಪಸ್ಸನ ಪಾಪಪ್ರಜ್ಞೆಯನ್ನು ನೆನಪಿಗೆ ತರುವ ಭಾರತೀಯ ಮೂಲದ ಅಪರೂಪದ ಕಥೆಯಾಗಿದೆ.

ಪೊಟಿಲ್ = ಪಟ್ಟಣ. ನಂದೀಶ್ವರ = ನಂದೀಶ್ವರವೆಂಬ ಹಬ್ಬ. ಕೊಡಗೂಸು = ಮದುವೆಯಾಗಲಿರುವ ಕನ್ಯೆ, ಬಸದಿ = ಜಿನಾಲಯ. ಗೆಯ್ದು = ಮಾಡಿ, ಆಚರಿಸಿ, ಪರಿವಿಡಿ = ಅನುಕ್ರಮ. ವ್ರತಂಗಳನೇಱಿಸಿಕೊಂಡು = ವ್ರತಗಳನ್ನು ಸ್ವೀಕರಿಸಿ. ಸಿದ್ಧ ಶೇಷೆಯಂ = ಪೂಜೆ ಮಾಡಿದ ಹೂವು ಮುಂತಾದ ಪ್ರಸಾದವನ್ನು ಸ್ವೀಕರಿಸಿ, ಗಾಡಿಯುಮಂ = ಚೆಲುವು ಆಟಿಸಿ = ಬಯಸಿ, ಪ್ರೀತಿಸಿ, ಎಲ್ಲ ಸಮಯಿಗಳ್ಗಂ = ಎಲ್ಲಾ ಮತಧರ್ಮದವರಿಗೂ, ಬಟಿಯಟ್ಟಿ = ದೂತರನ್ನು ಕಳುಹಿಸಿ. ಮಂಡಳ = ಪ್ರದೇಶ. ಬಹುಪ್ರಳಾಪಿಗಳ್ = ಬಹು ಮಾತನಾಡುವವರು. ಮೂಱು ಸೂಟ್ವರಂ = ಮೂರು ಬಾರಿಯವರೆಗೆ. ಸಾಱೆ ನುಡಿದು = ಘೋಷಿಸಿ ಮಾತಾಡಿ. ಸರವಣ = ಒಂದು ಬಗೆಯ ಜೊಂಡು ಹುಲ್ಲು. ಕೊಗಳಿ = ಕೋಗಳಿ ಎಂಬ ಐನೂರು ಗ್ರಾಮಗಳ ನಾಡಿನ ರಾಜಧಾನಿ ಕೋಗಳಿ ಎಂಬ ಪಟ್ಟಣ. ಪ್ರಸಿದ್ಧ ಜೈನಕ್ಷೇತ್ರವಾಗಿತ್ತು. ಈಗ ಬಳ್ಳಾರಿ ಜಿಲ್ಲೆಯ ಒಂದು ಊರು, ಪೂಸಲಂ = ಬಳಿದುಕೊಳ್ಳಲು. ತಂಬುಲಮುಂ = ಅಡಕೆವೀಳ್ಯ, ತಾಂಬೂಲ, ತಿಂಬಡಂಗಳುಂ = ತಿನ್ನುವ ಪದಾರ್ಥಗಳು, ಬೇಯಿಸಿದ ತಿಂಡಿಗಳು, ಬಟ್ದೆದೊನಾಗಿ = ಸಾಯುವಷ್ಟು ವ್ಯಥೆಗೊಂಡವನಾಗಿ. ಕಿಷ್ಕಿಂಧ = ಕಿಷ್ಕಿಂಧೆಯೆಂಬ ತುಂಗಭದ್ರೆಯ ತೀರದಲ್ಲಿ ಹಂಪೆಯ ಬಳಿ ಇರುವ ಬೆಟ್ಟ. ಗ್ರಾಮ = ಹಳ್ಳಿ. ನಗರ = ರಾಜಧಾನಿ. ಖೇಡ = ಎತ್ತರವಾದ ಕೋಟೆಯನ್ನುಳ್ಳ ಊರು. ಖರ್ವಡ = ಕ್ಷುಲ್ಲಕ ಗೋಡೆ ಆವರಿಸಿರುವ ಊರು, ಮಡಂಬ = ದೂರಸ್ಥಲ, ಗಡಿ ಬಳಿಯ ಪುರ. ದ್ರೋಣಾಮುಖ = ಜಲಸ್ಥಲ ಮಾರ್ಗವುಳ್ಳ ಪುರ. ಪತ್ತನ ಪಟ್ಟಣ, ಬಂಡಿ ಅಥವಾ ನಾವೆಗಳಲ್ಲಿ ಸೇರಬಹುದಾದ ಸಮುದ್ರ ತೀರದ ಪುರ, ಮಟಿಕೊಂಡು = ಮಳೆ ಸುರಿದು, ಕರ್ಚಿ = ತೊಳೆದು, ಸರ್ವೌಷಧಿ = ಎಲ್ಲ ರೋಗಗಳಿಗೂ ಮದ್ದು.

ತೊೞಲುತ್ತಂ = ಸುತ್ತಾಡುತ್ತ, ಪಂಥಾತಿಚಾರನಿಯಮಂಗೆಯ್ = ಚರಿಗೆಯಿಂದ ಹಿಂದಿರುಗಿ ದಾರಿಯಲ್ಲಾಗಿದ್ದ ಅತಿಚಾರಗಳ ಶುದ್ಧಿಗಾಗಿ ಆಚರಿಸುವ ನಿಯಮವನ್ನು ಮಾಡಿ. ಕರುಮಾಡ = ಉಪ್ಪರಿಗೆ. ಉಗುರಿಸು = ಉಗುರಿನಿಂದ ಕೆರೆಯುವುದು, ಉಗುರಾಡಿಸುವುದು. ಚರಿಗೆ = ಭಿಕ್ಷೆ. ಮೆಱಲುಂದು = ಮೈಮರೆತು ನಿದ್ದೆ ಮಾಡು. ನಿಱಿಸಲೆಂದು = ಪಾರಣೆಗೆ. ಭಿಕ್ಷಕ್ಕೆ ನಿಲ್ಲಿಸಬೇಕೆಂದು. ಪರಿತರು=ಓಡಿಬರು. ಬಾಗಿಲ್ಮಾಡ = ಹೊರಬಾಗಿಲಿನ ಎಡೆ. ನಿಲ್ಕೆ=ಭಿಕ್ಷಕ್ಕೆ ನಿಲ್ಲಿರಿ. ತಾಂಗು=ತಡೆಯುವುದು. ಸವರ್ಣ=ಜೈನ ಯತಿ. ಪೋರು=ಹೋರಾಡು. ಬೞಿಯಂ ತಗುಳ್ದು = ಹಿಂದೆ ಹಿಂದೆಯೇ ಹೋಗಿ. ನಿಚ್ಚಲ್ = ನಿತ್ಯವೂ. ಕಿನಿಸಿ = ಕೆರಳಿ. ಉರಮಂ = ಎದೆಯನ್ನು. ಉರ್ಚೆ ಪೋಗಿಟ್ಟು = ಭೇದಿಸಿಕೊಂಡು ಹೋಗುವಂತೆ ಹೊಡೆದು. ತಲೆವಿರನಂ = ತಲೆಗೂದಲನ್ನು.

ನೆತ್ತರೊಕ್ಕು = ರಕ್ತ ಸುರಿದು. ಬಸಮೞಿದು = ಶಕ್ತಿಗುಂದಿ. ಕಾಲಂಗೆಯ್ದು = ಸತ್ತು. ಬೆಸನೇನ್ = ಅಪ್ಪಣೆಯೇನು, ಕೆಲಸವೇನು. ಪಾಯ್ತರ್ಪ = ಹರಿದು ಬರುವ ಶೀಕರ=ತುಂತುರು. ಆಪ್ಯಾಯನ = ಹಿತ. ಮುಡಿಪಿ = ಸತ್ತು. ಸರ್ವಾರ್ಥ ಸಿದ್ಧಿ = ಸಿದ್ಧ ಶಿಲೆಯ ಕೆಳಗಿರುವ ಸ್ವರ್ಗದ ಹೆಸರು. ಒಂದೆ ಪಾಂಗಿನೊಳ್ = ಒಂದೇ ರೀತಿಯಾಗಿ. ಆದಮಾನಂ = ವಿಶೇಷವಾಗಿ. ಉಬ್ಬೆಗಂ ಒಟ್ಟು = ದುಃಖಪಟ್ಟು, ಅೞಿ = ಆಳು. ಮಟ್ಗಿಸಿ = ಕುಗ್ಗಿಸಿ. ಮಱೆಯಿಸು = ಮರೆಯುವಂತೆ ಮಾಡು. ಒಸಗೆ = ಸಂತೋಷ, ಅನುಗ್ರಹ, ಗೋಸಣೆ = ಘೋಷಣೆ, ಸಾರು, ಡಂಗೂರ ಹೊಡೆಯಿತು. ತೊೞಲ್ಚು ಎಲ್ಲಾ ಕಡೆ ಸುತ್ತಾಡಿ (ಡಂಗೂರ ಹೊಡೆಯಿಸು). ಲೋಗರ್ = ಜನರು, ಪಗರಣಿಗರಾಗಿ – ಪಗರಣವೆಂಬ ಆಟವಾಡುವವರಾಗಿ. ಮರಮೊಗಂಗಳ್ = ಮರದ ಮುಖವಾಡಗಳು. ಕಚ್ಚುಟ = ಕೌಪೀನ. ಕವಡಿಕೆ = ಕವಡೆ ಕುಂಡ = ನವಿಲುಗರಿಯದೊಂದೆ. ಗುಂಡಿಗೆ = ಕುಂಡಿಕಾ, ಕಮಂಡಲು. ಕಸವರ = ಚಿನ್ನ, ಬಾದುಬ್ಬೆಯ ಪರ್ವ = ಬಾದುಬ್ಬೆ ಎಂಬ ಹಬ್ಬ, ಬಾದುಂಬೆ ಎಂಬುದು ಒಂದು ದೇವತೆಯ ಹೆಸರು, ಆ ದೇವತೆಯ ಹಬ್ಬ. ಮಱೆಯಟೆ = ಬಾಂಧವ್ಯವನ್ನು ಹಾಳುಮಾಡು.

ಶ್ಲೋಕ ॥ ಪ್ರಜಾ: = ಪ್ರಜೆಗಳು. ಧರ್ಮಿಣಿ ರಾಜ್ಞಿ = ಧರ್ಮವಂತನಾದ ರಾಜನಲ್ಲಿ. ಧರ್ಮಿಷ್ಠಾಃ = ಧರ್ಮದಲ್ಲಿರುವವರು. ಪಾಪೇ = ಪಾಪಿಷ್ಠನಾದ ರಾಜನಲ್ಲಿ. ಪಾಫಸಮಾಶ್ರಿಕಾಃ = ಪಾಪವನ್ನು ಆಶ್ರಯಿಸುವವರು. ರಾಜಾನಂ = ರಾಜನನ್ನು. ಅನುವರ್ತಂತೇ = ಅನುಸರಿಸುತ್ತಾರೆ. ಯಥಾರಾಜಾ = ರಾಜನು ಹೇಗೋ. ತಥಾ ಪ್ರಜಾಃ = ಹಾಗೇ ಪ್ರಜೆಗಳು. ರಾಜನು ದರ್ಮವಂತನಾದರೆ ಪ್ರಜೆಗಳೂ ಧರ್ಮದಲ್ಲಿರುವವರಾಗುತ್ತಾರೆ. ರಾಜನು ಪಾಪಿಯಾಗಿದ್ದರೆ ಪ್ರಜೆಗಳೂ

ಪಾಪವನ್ನು ಆಶ್ರಯಿಸುವವರಾಗುತ್ತಾರೆ. ಪ್ರಜೆಗಳು ರಾಜನನ್ನು ಅನುಸರಿಸುತ್ತಾರೆ. ರಾಜನು ಹೇಗೋ ಪ್ರಜೆಗಳೂ ಹಾಗೆಯೇ.

ನೆಗಟಿಲ್ = ಆಚರಿಸಲು. ಬೋಗಂಕಾರೋಹಣ = ಭೋಗದ ಕಾರೋಹಣ. ಕಾರೋಹಣ ಎಂಬುದು ಊರ ಹೆಸರು. ಏಱು = ಗಾಯ. ಪುಣ್ಣು = ಹಣ್ಣು ಅಪವರ್ಗ = ಮೋಕ್ಷ.

## ೨. ಎರಡು ಗಿಣಿಗಳ ಕಥೆ

ಎರಡು ಸಾವಿರ ವರ್ಷಗಳ ಅವಧಿಯಲ್ಲಿ ಪ್ರಪಂಚದ ಅನೇಕ ಭಾಷೆಗಳಿಗೆ ಬೇರೆ ಬೇರೆ ರೂಪ ತಳೆದು ಅನುವಾದಗೊಂಡ ಕೃತಿ ಪಂಚತಂತ್ರ. ವಿಷ್ಣುಶರ್ಮ ಅದರ ಕರ್ತೃ. ಮೂಲ ಪಂಚತಂತ್ರ ಕ್ರಿ.ಶ.ದ ಆರಂಭದಲ್ಲಿ ರಚಿತವಾಗಿರಬೇಕೆಂದು ವಿದ್ವಾಂಸರು ಊಹಿಸಿದ್ದಾರೆ. ವಿಷ್ಣುಶರ್ಮನ ಪಂಚತಂತ್ರದಿಂದ ಭಿನ್ನವಾದ ಒಂದು ಸಂಪ್ರದಾಯ ವಸುಭಾಗ ಭಟ್ಟ ಎಂಬಾತನಿಂದ ಆರಂಭವಾಯಿತು ಎಂದು ತಿಳಿಯುತ್ತದೆ. ಈತನ ಸಂಪ್ರದಾಯದ ಪಂಚತಂತ್ರವೇ ಜಾವಾ, ಥಾಯ್ಲೆಂಡ್, ಜಪಾನ್ ಮುಂತಾದ ಪೂರ್ವ ದೇಶಗಳಲ್ಲಿ ಪ್ರಚಾರಗೊಂಡಿತು. ದಕ್ಷಿಣ ಭಾರತದಲ್ಲೂ, ಬಹುಶಃ ಆತ ದಕ್ಷಿಣದವನಾಗಿದ್ದ ಕಾರಣ, ಆತನ ಕೃತಿಯೇ ಪ್ರಚಲಿತವಾಗಿದ್ದಿರಬೇಕು. ಆದರೆ ಆತನ ಕೃತಿ ದೊರೆತಿಲ್ಲ. ಕ್ರಿ.ಶ. ೧೦೩೦ ರಲ್ಲಿದ್ದ ದುರ್ಗಸಿಂಹನ 'ಕರ್ನಾಟಕ ಪಂಚತಂತ್ರ'ವೂ ಈ ಸಂಪ್ರದಾಯಕ್ಕೆ ಸೇರಿದ್ದಾಗಿದೆ. ಅರ್ಥಶಾಸ್ತ್ರವನ್ನು, ರಾಜನೀತಿಯನ್ನು, ಲೋಕಾನುಭವವನ್ನು ಆಕರ್ಷಕ ಕಥೆಗಳ ಮೂಲಕ ಹೇಳುವುದು ಪಂಚ ತಂತ್ರದ ಉದ್ದೇಶ. ದುರ್ಗಸಿಂಹನ ಪಂಚ ತಂತ್ರವು ಪದ್ಯಗದ್ಯ ಮಿಶ್ರಿತವಾದ ಕೃತಿಯಾದರೂ ಗದ್ಯ ನಿರೂಪಣೆಯೇ ಹೆಚ್ಚಾಗಿದೆ. ಚಂಪೂ ಶೈಲಿಯ ಗದ್ಯಕ್ಕಿಂತ ಬೇರೆಯಾದ ಕಥನ ಶೈಲಿ ದುರ್ಗಸಿಂಹನದು. ಕ್ರಿಯೆಗೆ, ಸಂಭಾಷಣೆಗೆ ಪ್ರಾಧಾನ್ಯವಾದ್ದರಿಂದ ಸರಳವಾದ ಚಿಕ್ಕವಾಕ್ಯಗಳೇ ಹೆಚ್ಚು. ಆದರೆ ವರ್ಣನೆಯ ಭಾಗಗಳಲ್ಲಿ ಸಂಸ್ಕೃತ-ಕನ್ನಡಗಳ ಪದವಾದ ಬಳಕೆಯಿದೆ.

ಇಲ್ಲಿ 'ಎರಡು ಗಿಣಿಗಳ ಕಥೆ'ಯನ್ನು ಆರಿಸಿದೆ. ಒಂದೇ ತಾಯಿಯ ಮಕ್ಕಳಾದರೂ ಪರಿಸರ ಮತ್ತು ವಾತಾವರಣದ ಪ್ರಭಾವ ಹೇಗೆ ವ್ಯಕ್ತಿತ್ವವನ್ನು ರೂಪಿಸುತ್ತದೆ ಎಂಬದನ್ನು ನಿರೂಪಿಸಲಾಗಿದೆ. ಆಶ್ರಮದ ದೀರ್ಘ ವರ್ಣನೆಯೂ ಔಚಿತ್ಯವನ್ನು ಪಡೆಯುತ್ತದೆ.

ನಿಭ = ಸಮಾನ, ನೆಗಟ್ದಿ = ಪ್ರಸಿದ್ಧನಾದ. ಬರ್ದನೆ = ಬದುಕಿದವನೆ. ಕೀಱು = ಧ್ವನಿಮಾಡು, ಚುಚ್ಚು ಸವರು. ಶಬರ = ಬೇಡ. ಪುಳಿಂದ = ಬೇಡ. ಪತತ್ರಿ = ಪತತ್ರ = ರೆಕ್ಕೆ ಉಳ್ಳುದು, ಹಕ್ಕಿ. ಜವಂಗೆಡು = ಶಕ್ತಿಗುಂದು. ಶ್ರಾಂತ = ದಣಿಪು, ಆಯಾಸ. ಧೂಷಿತ =? ವಿದಳಿತ = ಬಿರಿದ. ಇರ್ಕುಳಿಗೊಳ್ = ಆಕರ್ಷಣ. ಇಱುಂಬು = ಇಕ್ಕಟ್ಟು, ಸಂದು. ಇಂಬು = ಆಶ್ರಯ, ನೆಲೆ, ಅತಿಶಯ. ಅಘ = ಸಂಕಟ,

ಪಾಲಾಶ = ಮುತ್ತುಗ. ಔದುಂಬರ = ಅತ್ತಿ. ನ್ಯಗ್ರೋಧ = ಆಲ. ಅಪಾಮಾರ್ಗ = ಉತ್ತರಾಣಿ. ಖದಿರ = ಕಾಚಿನ ಮರ. ಕುಂದ = ಮೊಲ್ಲೆ. ಮುಚುಕುಂದ = ನಿತ್ಯ ಮಲ್ಲಿಗೆ, ತ್ರಿಸಂಧ್ಯಾ = ದೇವಕುಸುಮ. ಬಂಧೂಕ = ದಾಸವಾಳ. ಕನಕ = ದತ್ತೂರ, ಕರವೀರ = ಕಣಗಿಲೆ, ಕರ್ಣಿಕಾರ = ಬೆಟ್ಟದಾವರೆ. ಕುನವಕ = ಗೋರಂಟಿ, ಮದರಂಗಿ. ಪಾಟಲಿ = ಪಾದರಿ. ಪುನ್ನಾಗೆ = ಸುರಹೊನ್ನೆ. ದಧಿ = ಮೊಸರು. ಬಾಟ್ವೇಲಿ = ಜೀವಂತ ಬೇಲಿ. ತೀವಿ = ತುಂಬಿಕೊಂಡು. ಮಾತುಲಂಗ = ಮಾದಳ, ಮೊದಲೊಳ್ = ಬುಡದಲ್ಲಿ. ಮಡಲ್ = ವಿಸ್ತರಣೆ, ಎತ್ತರಕ್ಕೆ ಬೆಳೆದದ್ದು. ಪನಸು = ಹಲಸು. ನಾರಂಗ = ಕಿತ್ತಳೆ. ಪರಪುಷ್ಪ = ಕೋಗಿಲೆ. ಆಹಿತಾಗ್ನಿ = ಅಗ್ನಿಹೋತ್ರ ಮಾಡುವ ಬ್ರಾಹ್ಮಣ. ಸ್ವೇದ = ಬೆವರು. ಪರಿಯಷ್ಟಿ = ಸೇವೆ. ಕ್ಷೀಣದಾತು = ನಿಶ್ಯಕ್ತಿ. ಜರತ್ = ವೃದ್ಧ. ಗೋಲಾಂಗೂಲಿ = ಕಪ್ಪು ಮುಖದ ಕೋತಿ, ಮುಸುವ. ಕರೇಣು = ಹೆಣ್ಣಾನೆ. ದರಿ = ಕೊಳ್ಳ, ಕಂದರ. ಧೌತ = ಒಗೆದ, ಶುಭ್ರಗೊಳಿಸಿದ. ಮಕ್ಷಿಕಾ = ನೊಣ. ಭೋಗೀಂದ್ರ = ಸರ್ಪರಾಜ. ಚಕ್ಷುಶ್ರುತಿ = ಹಾವು. ಮುಮುಕ್ಷು = ಮೋಕ್ಷಾಪೇಕ್ಷಿ. ಖಲ್ವಾಯಿತ = ಮನೆ ತೊಳೆಯುವವನು, ಸಾರಿಸುವವನು. ರುರು=ಚಿಗರೆ, ಶಶಕ = ಮೊಲ. ವ್ಯಾಳ = ಸರ್ಪ, ರಾಜಜಂಬೂ = ಅರನೇರಿಳೆ. ರಂಭಾ = ಬಾಳೆ. ರುಚಿ = ಕಾಂತಿ. ಗವಾಶನ = ಮ್ಲೇಚ್ಛ.

## ೩. ಶ್ರೀಮತಿ ಸ್ವಯಂವರ

ಹೊಸಗನ್ನಡ ಸಾಹಿತ್ಯದ ಅರುಣೋದಯ ಕಾಲದಲ್ಲಿ ಮೊದಲು ಸ್ವರವೆತ್ತಿದ ಕೋಗಿಲೆ ನಂದಳಿಕೆ ಲಕ್ಷ್ಮೀನಾರಾಯಣ ಮುದ್ದಣನೆಂದೇ ಅಚ್ಚುಮೆಚ್ಚಾದವನು. ಕಾಲ ೧೯ನೆಯ ಶತಮಾನ, 'ಅದ್ಭುತ ರಾಮಾಯಣಂ', 'ಶ್ರೀ ರಾಮಾಶ್ವಮೇಧಂ' ಗದ್ಯ ಕೃತಿಗಳು. 'ರಾಮಪಟ್ಟಾಭಿಷೇಕ' ಕಾವ್ಯ.

ಅದ್ಭುತ ರಾಮಾಯಣದ ಮೂಲ ಸಂಸ್ಕೃತ. ಇದರಲ್ಲಿ ಕಥಾಭಾಗಕ್ಕಿಂತ ವೇದಾಂತ ಭಾಗವೇ ಹೆಚ್ಚು. ಶಾಕ್ತ ಪರಂಪರೆಯ ಈ ಕೃತಿಯಲ್ಲಿ ಆದಿ ಮಾಯೆಗೆ, ಸೀತೆಗೇ ಪ್ರಾಧಾನ್ಯ. ಇಂಥ ಒಂದು ವಸ್ತುವನ್ನು ಸ್ವೀಕರಿಸಿ ಕವಿ ಅದನ್ನು ಅಚ್ಚಗನ್ನಡದಲ್ಲಿ ನಿರೂಪಿಸಿದ್ದಾನೆ. ಸಂಸ್ಕೃತ ಪದಗಳಿಗೆ ಕನ್ನಡ ಸಮನಾರ್ಥಕ ಪದಗಳನ್ನು ರೂಢಿಯಲ್ಲಿ ಇಲ್ಲದಿದ್ದರೂ ಸೃಷ್ಟಿಸಿ ಹೇಳುವ ಮುದ್ದಣನ ವಿಶಿಷ್ಟತೆ ಇಲ್ಲಿ ಕಂಡುಬರುತ್ತದೆ.

ಶ್ರೀಮತಿ ಸ್ವಯಂವರದ ಈ ಕಥಾ ಸಂದರ್ಭ ಅತ್ಯಂತ ಸ್ವಾರಸ್ಯಕರವಾದುದು. ಶ್ರೀರಾಮನ ಜನಪದ ಹಿನ್ನೆಲೆ ಪ್ರಸ್ತುತ ಕಥೆಯ ವಸ್ತು. ಮುದ್ದಣನ ವಿಶಿಷ್ಟವಾದ ಗದ್ಯಶೈಲಿ ಹಾಗೂ ಕಥನ ಕ್ರಮಕ್ಕೆ ನಿದರ್ಶನವಾಗಿದೆ ಈ ಗದ್ಯಭಾಗ. ಅಷ್ಟೇ ಅಲ್ಲ, ಕನ್ನಡ ಸಾಹಿತ್ಯದ ಕೆಲವು ಹಾಸ್ಯ ಪ್ರಸಂಗಗಳಲ್ಲಿ ಒಂದಾಗಿದೆ.

ಭೂಭೃದ್ವರ=ಅರಸ; ಬಿತ್ತು=ಬೀಜ; ಅಣುಗಿ=ಮಗಳು; ಅಗ್ಗಿ=ಅಗ್ನಿ; ವಱಮೆ= ದುಂಬಿ; ಸಿಂಗಾಡಿ=ಬಿಲ್ಲು; ಕೆಕ್ಕೆ=ಕೆನ್ನೆ; ಗಜೆವೂ=ಕೇದಗೆ ಹೂ; ಪೊಱವಾಱು=ನಿತಂಬ; ಅಟ್ಕಿಜ=ಅಸೂಯೆ; ಕಲಹಾಶನ=ನಾರದ; ಬಿರ್ದು=ಔತಣ; ನಿಕ್ಕುವ=ನಿಶ್ಚಯಃ; ಮಂಕಡ= ಕಪಿ; ಕೋಡಗ=ಮಂಗ; ಇಂಗಡಲು=ಕ್ಷೀರ ಸಮುದ್ರ; ಪಿಡಿ=ಹೆಣ್ಣಾನೆ; ಕಣ್ಬೊಗರ್= ಕಣ್ಣಿನ ಕಾಂತಿ; ಕಿತ್ತಡಿ=ಮುನಿ; ಕುಂದ ಕುಟ್ಮಲ=ಮಲ್ಲಿಗೆ ಮೊಗ್ಗು; ಪವಣು=ಕಾರಣ; ನಿರ್ವ್ಯಾಜಂ=ಕಾರಣವಿಲ್ಲದೆ; ಒಪ್ಪಂಬೂಸು=ಒಳ್ಳೆಯ ಮಾತಿನಿಂದ ಮರುಳ್ಗೊಳಿಸು; ಕೂರ್ಮೆ=ಪ್ರೀತಿ; ಅಟವಟ=ಮೋಸ; ತಮೋಜ್ಞ=ತಮೋಗುಣದಿಂದ ಹುಟ್ಟಿದ ಅಜ್ಞಾನ; ಪಾಱಂಬಳೆ=ಚಕ್ರ; ನೆಯ್=ತುಪ್ಪ; ಕುಜೆವಾನಿಸರ್=ಕುರಿಯಂಥ ಮನುಷ್ಯರು.

# ಅನುಬಂಧ–೧

## ತುಮಕೂರು ವಿಶ್ವವಿದ್ಯಾನಿಲಯ

## ಮಾದರಿ ಪ್ರಶ್ನೆ ಪತ್ರಿಕೆ ಸ್ವರೂಪ

**ಬಿ.ಎ. ಐದನೆಯ ಸೆಮಿಸ್ಟರ್ ಸಿ.ಬಿ.ಸಿ.ಎಸ್. ಐಚ್ಛಿಕ ಕನ್ನಡ ಭಾಷಾ ಪತ್ಯ**

## ಸಾಹಿತ್ಯ ಸೌರಭ–೫

## ಪತ್ರಿಕೆ–೫

## ಕನ್ನಡ ವ್ಯಾಕರಣ ಪರಂಪರೆ, ಶಬ್ದಮಣಿದರ್ಪಣ, ಕನ್ನಡ ಭಾಷೆಯ ಸ್ವರೂಪ ಮತ್ತು ಗದ್ಯ ಸೌರಭ

ಸಮಯ: ೩ ಗಂಟೆಗಳು | ಅಂಕಗಳು: ೮೦

### ಭಾಗ–೧ ಕನ್ನಡ ವ್ಯಾಕರಣ ಪರಂಪರೆ – ಶಬ್ದಮಣಿದರ್ಪಣ

೧) **ಅ. ಒಂದು ಭಾಗದ ಮಹತ್ವವನ್ನು ವಿವರಿಸಿ.** **೧ x ೬=೬**

೧.

೨ .

**ಆ. ಮೂರನ್ನು ಸಂದರ್ಭ ಸಹಿತ ವಿವರಿಸಿ** **೩ x ೩=೯**

೧.

೨.

೩.

೪.

**ಇ. ಎರಡಕ್ಕೆ ಟಿಪ್ಪಣಿ ಬರೆಯಿರಿ** **೨ x ೫=೧೦**

೧.

೨.

೩.

೨. **ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ** **೧ x ೧೦=೧೦**

೧.

೨.

## ಭಾಗ–೨: ಕನ್ನಡ ಭಾಷೆಯ ಸ್ವರೂಪ

೩. ಅ) ಒಂದು ವಾಕ್ಯದಲ್ಲಿ ಉತ್ತರಿಸಿ **೧ x ೫=೫**

೧.
೨.
೩.
೪.
೫.

ಆ) ಎರಡಕ್ಕೆ ಟಿಪ್ಪಣಿ ಬರೆಯಿರಿ **೨ x ೫=೧೦**

೧.
೨.
೩.

ಇ) ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ **೨ x ೧೦=೨೦**

೧.
೨.
೩.

## ಭಾಗ–೩: ಗದ್ಯ ಸೌರಭ

೪. ಅ) ಒಂದು ವಾಕ್ಯದಲ್ಲಿ ಉತ್ತರಿಸಿ **೧ x ೫=೫**

೧.
೨.
೩.
೪.
೫.

ಅ) ಒಂದಕ್ಕೆ ಟಿಪ್ಪಣಿ ಬರೆಯಿರಿ **೧ x ೫=೫**

೧.
೨.
೩.

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ **೧ x ೧೦=೧೦**

೧.
೨.

# ಅನುಬಂಧ – ೨

## ಬಿ.ಎ. ಐದನೆಯ ಸೆಮಿಸ್ಟರ್ ಐಚ್ಛಿಕ ಕನ್ನಡ ಭಾಷಾ ಪಠ್ಯ

## ಸಾಹಿತ್ಯ ಸೌರಭ–೫

## ಪತ್ರಿಕೆ–೫

## ಕನ್ನಡ ಭಾಷೆಯ ಸ್ವರೂಪ, ಶಬ್ದಮಣಿದರ್ಪಣ ಮತ್ತು ಗದ್ಯ ಸಂಗ್ರಹ ಪಠ್ಯ ಬೋಧನಾ ಅವಧಿ, ಹಾಗೂ ಅಂಕಗಳು

| | | |
|---|---|---|
| ೧. ಭಾಗ–೧ ಕನ್ನಡ ವ್ಯಾಕರಣ ಪರಂಪರೆ | | |
| ಶಬ್ದಮಣಿದರ್ಪಣ | ೩೦ ಗಂಟೆಗಳು | ಅಂಕಗಳು–೩೫ |
| ೨. ಭಾಗ–೨ | | |
| ಕನ್ನಡ ಭಾಷೆಯ ಸ್ವರೂಪ | ೩೦ ಗಂಟೆಗಳು | ಅಂಕಗಳು–೩೫ |
| ೨. ಭಾಗ–೩ | | |
| ಗದ್ಯಸೌರಭ | ೧೫ ಗಂಟೆಗಳು | ಅಂಕಗಳು–೨೦ |
| ಆಂತರಿಕ ಮೌಲ್ಯಮಾಪನ | | ಅಂಕಗಳು–೧೦ |
| ಪತ್ರಿಕೆಗೆ ನಿಗದಿಯಾದ ಒಟ್ಟು ಅಂಕಗಳು | | ೧೦೦ |

ಪರೀಕ್ಷಾ ಅವಧಿ – ೩ ಗಂಟೆಗಳು

## ಅನುಬಂಧ – ೩

# ಪರಾಮರ್ಶನ ಕೃತಿಗಳು


೧. ಶಬ್ದಮಣಿದರ್ಪಣ – ಡಿ.ಎಲ್. ನರಸಿಂಹಾಚಾರ್

೨. ದರ್ಪಣ ವಿವರಣ – ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ

೩. ಶಬ್ದಮಣಿದರ್ಪಣ – ತ.ಸು.ಶಾಮರಾವ್ ಮತ್ತು

೪. ಪ್ರತಿಫಲನ – ಶ್ರೀಮತಿ ಬೀಳಗಿ

೫. ಶಬ್ದಮಣಿದರ್ಪಣ ನೂರೊಂದು ಸೂತ್ರಗಳು – ಪ್ರೊ. ಎ.ಎಸ್. ಜಯರಾಂ, ಪ್ರೊ. ಕ.ಪು. ಮಹಾದೇವಪ್ಪ

೬. ದರ್ಪಣ ವ್ಯಾಖ್ಯಾನ – ಅಬ್ದುಲ್ ಬಷೀರ್

೭. ಆಲೋಕ – ಹೆಚ್.ಎಸ್. ಬಿಳಿಗಿರಿ

೮. ಹಳೆಯ ಗದ್ಯ ಸಾಹಿತ್ಯ–೨ ಸಂ: ಎಂ.ಎಚ್. ಕೃಷ್ಣಯ್ಯ, ಕಮಲಾ ಹಂಪನಾ

೯. ಕನ್ನಡ ಕೈಪಿಡಿ ಸಂಪುಟ ೧

೧೦. ಶಬ್ದಮಣಿದರ್ಪಣ ಸಂಗ್ರಹ : ಪ್ರೊ. ಬಿ.ಟಿ. ಸಾಸನೂರು ಮತ್ತು ಎಂ.ಎಂ. ಕಲಬುರ್ಗಿ

೧೧. ಶಬ್ದಮಣಿದರ್ಪಣ ಸಂಗ್ರಹ : ಇಟಗಿ ಈರಣ್ಣ

೧೨. ಭಾಷಾ ವಿಜ್ಞಾನ – ಲೇ. ಪ್ರೊ. ಕೆ. ಕೆಂಪೇಗೌಡ

೧೩. ಭಾಷಾ ವಿಜ್ಞಾನದ ಮೂಲ ತತ್ವಗಳು – ಪ್ರೊ. ಎಂ. ಚಿದಾನಂದಮೂರ್ತಿ

೧೪. ಭಾಷೆ – ಕೆ.ವಿ. ನಾರಾಯಣ – ಹಂಪಿ ವಿಶ್ವವಿದ್ಯಾಲಯ

೧೫. ಸಂಕ್ಷಿಪ್ತ ಕನ್ನಡ ಭಾಷಾ ವಿಜ್ಞಾನ – ಕೆ.ಎಂ. ಕೃಷ್ಣಯ್ಯ

೧೬. ದ್ರಾವಿಡ ಭಾಷಾ ವಿಜ್ಞಾನ – ಹಂಪ ನಾಗರಾಜಯ್ಯ

# ಸಾಹಿತ್ಯ ಸೌರಭ–೫

## ಪತ್ರಿಕೆ–೬

## ಕಾದಂಬರಿ: ವೈಶಾಖ, ಆಯ್ದ ಸಣ್ಣಕತೆಗಳು ಮತ್ತು ಜೀವನಚರಿತ್ರೆ: ಲೋಹಿಯಾ

**ಬಿ.ಎ.ಐದನೆಯ ಸೆಮಿಸ್ಟರ್ ಸಿ.ಬಿ.ಸಿ.ಎಸ್. ಕನ್ನಡ ಪಠ್ಯ**

**೨೦೧೮–೧೯ನೇ ಶೈಕ್ಷಣಿಕ ವರ್ಷದಿಂದ ಅನುಷ್ಠಾನಗೊಳಿಸಲು ನಿಗದಿಗೊಳಿಸಿದ ಸಿಬಿಸಿಎಸ್ ಹೊಸಪಠ್ಯ**


ಪ್ರಧಾನ ಸಂಪಾದಕರು

**ಪ್ರೊ. ಅಣ್ಣಮ್ಮ**

ಅಧ್ಯಕ್ಷರು, ಕನ್ನಡ ಅಧ್ಯಯನ ಮಂಡಳಿ

ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಸಂಪಾದಕರು

**ಡಾ. ಎ. ರಘುರಾಂ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ

ಮಹಾರಾಣಿ ಮಹಿಳಾ ಕಾಲೇಜು

ಬೆಂಗಳೂರು – ೧

**ಡಾ. ಮಂಜುಳ ಬಿ. ಎಸ್.**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ

ಶ್ರೀ ಸಿದ್ಧಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜು

ತುಮಕೂರು



**ಪ್ರಸಾರಾಂಗ**

**ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು**

**ಸಾಹಿತ್ಯ ಸೌರಭ–೫**
**ಕಾದಂಬರಿ: ವೈಶಾಖ, ಆಯ್ದ ಸಣ್ಣಕತೆಗಳು ಮತ್ತು ಜೀವನಚರಿತ್ರೆ: ಲೋಹಿಯಾ**
**ಬಿ.ಎ.ಐದನೆಯ ಸೆಮಿಸ್ಟರ್ ಸಿ.ಬಿ.ಸಿ.ಎಸ್. ಕನ್ನಡ ಪಠ್ಯ**

ಪ್ರಧಾನ ಸಂಪಾದಕರು
**ಪ್ರೊ. ಅಣ್ಣಮ್ಮ**
ಅಧ್ಯಕ್ಷರು, ಕನ್ನಡ ಅಧ್ಯಯನ ಮಂಡಳಿ
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಸಂಪಾದಕರು
**ಡಾ. ಎ. ರಘುರಾಂ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮಹಾರಾಣಿ ಮಹಿಳಾ ಕಾಲೇಜು
ಬೆಂಗಳೂರು – ೧

**ಡಾ. ಮಂಜುಳ ಬಿ. ಎಸ್.**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಶ್ರೀ ಸಿದ್ಧಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜು
ತುಮಕೂರು

ಪ್ರಕಾಶಕರು : **ಪ್ರಸಾರಾಂಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು**

ಪ್ರಥಮ ಮುದ್ರಣ :೨೦೧೮

ಪುಟಗಳು : x + ೪೫ = ೫೫

ಹಕ್ಕುಗಳು : **ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು**

ಬಳಸಿದ ಕಾಗದ : ೬೦ ಜಿ.ಎಸ್.ಎಮ್

ಬೆಲೆ : ರೂ. /–

ಛಾಯಾಕ್ಷರ ಜೋಡಣೆ : **ಶ್ರೀಧರ್**

ಮುಖಪುಟ ವಿನ್ಯಾಸ :

ಮುದ್ರಣ :

# ಕುಲಪತಿಗಳ ಮಾತು

ತುಮಕೂರು ವಿಶ್ವವಿದ್ಯಾನಿಲಯವು ಹಲವು ಪ್ರಥಮಗಳತ್ತ ದಾಪುಗಾಲಿಟ್ಟಿದೆ. ಪ್ರಸ್ತುತ ೨೦೧೬–೧೭ನೇ ಶೈಕ್ಷಣಿಕ ವರ್ಷದಿಂದ ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕ ವಿದ್ಯಾರ್ಥಿಗಳಿಗೆ ಆಯ್ಕೆ ಆಧಾರಿತ ಕ್ರೆಡಿಟ್ ಪದ್ಧತಿಯನ್ನು ಅಳವಡಿಸಿಕೊಂಡು, ಪಠ್ಯಪುಸ್ತಕ ರಚನೆಗೆ ಚಾಲನೆ ನೀಡಲಾಗಿದೆ. ಸರ್ಕಾರದಿಂದ ಸಿಬಿಸಿಎಸ್ ಶಿಕ್ಷಣ ಪದ್ಧತಿಗೆ ಅನುಮೋದನೆಯೂ ದೊರೆತಿದೆ. ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಎಲ್ಲ ಸ್ನಾತಕ ವಿಷಯಗಳ ಪಠ್ಯಗಳನ್ನು ಅಧ್ಯಾಪಕರು ಉತ್ಸಾಹದಿಂದ, ಶ್ರಮಪಟ್ಟು ರಚಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರು, ಮಂಡಲಿಯ ಅಧ್ಯಕ್ಷರಾದ ಪ್ರೊ. ಅಣ್ಣಮ್ಮನವರ ಪ್ರಧಾನ ಸಂಪಾದಕತ್ವದಲ್ಲಿ ಪಠ್ಯಪುಸ್ತಕಗಳನ್ನು ಡಾ. ಎ. ರಘುರಾಂ ಮತ್ತು ಡಾ. ಮಂಜುಳ ಬಿ.ಎಸ್. ಬಹಳ ನೈಪುಣ್ಯದಿಂದ ಸಿದ್ಧಪಡಿಸಿಕೊಟ್ಟಿದ್ದಾರೆ.

ಇಲ್ಲಿ ಸಂಕಲನವಾದ ಎಲ್ಲ ಲೇಖನಗಳೂ ಸಕಾಲಿಕವಾಗಿದ್ದು, ವಿದ್ಯಾರ್ಥಿಗಳು ಸತತ ಅಭ್ಯಾಸ ನಿರತರಾಗಲು ಪ್ರೇರೇಪಿಸುವಂತಿವೆ. ಹಾಗಾಗಿ ಈ ಪುಸ್ತಕಗಳು ವಿದ್ಯಾರ್ಥಿಗಳಿಗೆ ಹೆಚ್ಚು ಉಪಯುಕ್ತವಾಗಿವೆ ಎನ್ನುವ ನಂಬಿಕೆ ನನ್ನದು. ಈ ಪಠ್ಯಗಳನ್ನು ಸಕಾಲಕ್ಕೆ ಸಿದ್ಧಪಡಿಸಲು ನೆರವಾದ ಎಲ್ಲ ಅಧ್ಯಾಪಕರಿಗೂ ತುಮಕೂರು ವಿಶ್ವವಿದ್ಯಾನಿಲಯ ಆಭಾರಿಯಾಗಿದೆ.

**ಪ್ರೊ. ವೈ. ಎಸ್. ಸಿದ್ಧೇಗೌಡ**
ಕುಲಪತಿಗಳು
ತುಮಕೂರು ವಿಶ್ವವಿದ್ಯಾನಿಲಯ

## ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

## ಕನ್ನಡ ಅಧ್ಯಯನ ಮಂಡಳಿ

ಡಾ. ಅಣ್ಣಮ್ಮ – ಅಧ್ಯಕ್ಷರು

ಡಾ. ಮಂಜುಳ ಬಿ. ಎಸ್. – ಸದಸ್ಯರು

ಶ್ರೀ ಟಿ. ಎಸ್. ಕಾಂತರಾಜಯ್ಯ – ಸದಸ್ಯರು

ಡಾ. ಎ. ರಘುರಾಂ – ಸದಸ್ಯರು

ಡಾ. ಗೀತಾ ವಸಂತ – ಸದಸ್ಯರು

# ಅಧ್ಯಕ್ಷರ ನುಡಿ

ಕನ್ನಡ ಭಾಷೆಗೆ ಸುಮಾರು ೨೦೦೦ ವರ್ಷಗಳ ಇತಿಹಾಸವಿದೆ. ಕನ್ನಡ ಸಾಹಿತ್ಯವನ್ನು ಅಭ್ಯಸಿಸಿದ ಎಲ್ಲರೂ ಕವಿರಾಜ ಮಾರ್ಗವನ್ನು ಪ್ರಥಮ ಕಾವ್ಯವೆಂದು ಒಪ್ಪಿದ್ದಾರೆ. ಆದಿ ಕವಿ ಪಂಪನಿಂದ ಆರಂಭವಾದ ಕನ್ನಡ ಸಾಹಿತ್ಯ ಹಾಗೂ ಮಧ್ಯಕಾಲೀನ ಕನ್ನಡ ಸಾಹಿತ್ಯದವರೆಗೂ ಒಂದೇ ರೀತಿ, ಶೈಲಿಯಿದ್ದದ್ದು ನಿಧಾನವಾಗಿ ಪ್ರವಹಿಸಿ ಇಂದು ಕನ್ನಡ ಸಾಹಿತ್ಯ ವಿಶ್ವಮಟ್ಟದಲ್ಲಿ ಮಾನ್ಯತೆ ಗಳಿಸಿದೆ. ಶಾಸ್ತ್ರೀಯ ಭಾಷೆಯ ಸ್ಥಾನಮಾನ ಗಳಿಸಿಕೊಂಡಿದೆ.

ಪ್ರಾದೇಶಿಕ ಭಾಷೆಯಾಗಿಯೂ ಮನ್ನಣೆ ಪಡೆದು ಬೆಳೆಯುತ್ತಿರುವ ಕನ್ನಡ ಭಾಷೆಯ ಸಾಹಿತ್ಯ, ವಿಚಾರ, ವಿಮರ್ಶೆಯಿಂದ ಸಮೃದ್ಧವಾಗಿ ಕಥೆ, ಕಾದಂಬರಿ, ಕವನ, ನಾಟಕ, ಕಥನಕವನ, ಕಿರುಕಾದಂಬರಿ ಹೀಗೆ ಎಲ್ಲ ಪ್ರಕಾರಗಳಲ್ಲಿಯೂ ನಿರಂತರ ಬೆಳವಣಿಗೆಯನ್ನು ಪಡೆದು ಸಾಗಿದೆ. ಆಧುನಿಕೋತ್ತರ ಪ್ರಸ್ತುತ ಯುಗದಲ್ಲಿ ಕನ್ನಡ ಭಾಷೆಗೆ ಗಣಕ ಯಂತ್ರದ ಮೂಲಕವೂ ಸಾಕಷ್ಟು ಕೊಡುಗೆ ಸಿಕ್ಕಿದೆ. 'ಗೂಗಲ್' (ವೆಬ್‌ಸೈಟ್‌ನಲ್ಲಿ) ಜಾಲತಾಣದಲ್ಲಿಯೂ ಕನ್ನಡಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಅನೇಕ ವಿಷಯಗಳನ್ನು ಪಡೆದುಕೊಳ್ಳಬಹುದಾಗಿದೆ. ಇಷ್ಟೆಲ್ಲ ಹೆಮ್ಮೆಯಿಂದ ಮೈದುಂಬಿ ಪ್ರವಹಿಸುತ್ತಿರುವ ಕನ್ನಡ ಸಾಹಿತ್ಯ ಎಂಟು ಜ್ಞಾನಪೀಠ ಪ್ರಶಸ್ತಿಯ ಗರಿಯನ್ನು ತನ್ನ ಮುಡಿಗೇರಿಸಿಕೊಂಡಿದೆ. ಕನ್ನಡಮ್ಮ ಎನ್ನುವುದು ಬರಿಯ ಮಾತಾಗದೆ, ಸಾಧನೆಯ ಶಿಖರವಾಗಿದೆ.

೨೦೧೬-೧೭ನೇ ಶೈಕ್ಷಣಿಕ ವರ್ಷಕ್ಕೆ ತುಮಕೂರು ವಿಶ್ವವಿದ್ಯಾನಿಲಯದ ಪದವಿ ವಿದ್ಯಾರ್ಥಿಗಳಿಗೆ ಆಯ್ಕೆ ಆಧಾರಿತ ಕ್ರೆಡಿಟ್ ಪದ್ಧತಿ (Choice Based Credit system)ಯನ್ನು ಅಳವಡಿಸಿಕೊಳ್ಳುವ ಮೂಲಕ ತುಮಕೂರು ವಿ.ವಿ. ಶೈಕ್ಷಣಿಕ ಸುಧಾರಣೆ ತರುತ್ತಿರುವುದು ಹೆಮ್ಮೆಯ ವಿಚಾರವಾಗಿದೆ. ಸರ್ಕಾರದಿಂದ ಸಿ.ಬಿ.ಸಿ.ಎಸ್. ಶಿಕ್ಷಣ ಪದ್ಧತಿಗೆ ಅನುಮೋದನೆ ದೊರೆತದ್ದು ಸಹ ಸಂತಸದ ಸಂಗತಿಯೇ. ಆಯ್ಕೆ ಆಧಾರಿತ ಕ್ರೆಡಿಟ್ ಪದ್ಧತಿಗೆ ಅನುಗುಣವಾಗಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಕಲಿಕೆಯ ಅವಕಾಶಗಳನ್ನು ಕಲ್ಪಿಸಿಕೊಡುವ ಸಲುವಾಗಿ ಎಲ್ಲ ವಿಷಯಗಳ ಸ್ನಾತಕ ಪಠ್ಯಕ್ರಮಗಳನ್ನು ನನ್ನ ನೇತೃತ್ವದಲ್ಲಿ ಅಧ್ಯಯನ ಮಂಡಳಿಯ ಸದಸ್ಯರು ಆಯ್ಕೆಮಾಡಿದ್ದಾರೆ.

ಈ ಹಂತದಲ್ಲಿ ನನಗೆ ದೊರಕಿದ ಆದೇಶದಂತೆ, ಸಮಿತಿಯ ಸಹಕಾರ ಪಡೆದು, ಅನೇಕ ಸಭೆ ನಡೆಸಿ, ಚರ್ಚಿಸಿ ಸದಸ್ಯರ ತೀರ್ಮಾನದಂತೆ ಪ್ರಥಮ, ದ್ವಿತೀಯ, ತೃತೀಯ, ಚತುರ್ಥ, ಪಂಚಮ ಸೆಮಿಸ್ಟರ್‌ನ ಬಿ.ಎ. ಐಚ್ಛಿಕ ಬಿ.ಎ., ಬಿ.ಎಸ್ಸಿ., ಬಿ.ಕಾಂ, ಬಿ.ಬಿ.ಎಂ, ಬಿ.ಎಫ್.ಎ, ಬಿ.ವಿ.ಎ., ಪಠ್ಯಗಳನ್ನು ಶ್ರಮವಹಿಸಿ ಆಲೋಚನೆ ಮಾಡುವುದರ ಮೂಲಕ ಕಾರ್ಯರೂಪಕ್ಕೆ ತಂದಿದ್ದೇವೆ.

ಈ ಪಠ್ಯ ೨೦೧೮–೧೯ನೇ ಸಾಲಿಗೆ ಚಾಲನೆಗೆ ಬರುತ್ತದೆ. ಈ ಸದವಕಾಶದಲ್ಲಿ ಭಾಗಿಗಳಾದ ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞಳಾಗಿದ್ದೇನೆ.

ಈ ಪಠ್ಯಪುಸ್ತಕದ ಯಶೋಗಾಥೆಯ ಹಿಂದೆ ನಮ್ಮ ತುಮಕೂರು ವಿಶ್ವವಿದ್ಯಾನಿಲಯದ ಸನ್ಮಾನ್ಯ ಕುಲಪತಿಗಳೂ, ಸಾಹಿತಿಯೂ ಆಗಿರುವ ಪ್ರೊ. ವೈ. ಎಸ್. ಸಿದ್ಧೇಗೌಡ ಅವರ ಕಾಳಜಿ ಎದ್ದುಕಾಣುತ್ತದೆ. ಬಹು ತಾಳ್ಮೆಯಿಂದ, ಕಾಳಜಿಯಿಂದ ಅಧ್ಯಾಪಕರನ್ನು ಆಹ್ವಾನಿಸಿ, ಪಠ್ಯಕ್ರಮದ ಬಗ್ಗೆ ಚರ್ಚಿಸಿ, ಸಮಾಲೋಚಿಸಿ, ಹೆಚ್ಚಿನ ಅರಿವು ಮೂಡಿಸಿದ್ದಾರೆ. ಪ್ರತಿ ಹಂತದಲ್ಲಿಯೂ ನಮ್ಮನ್ನು ತಿದ್ದಿ, ನಮ್ಮ ಕೆಲಸವನ್ನು ಶ್ಲಾಘಿಸಿದ್ದಾರೆ. ಎಲ್ಲ ಪಠ್ಯ ಪುಸ್ತಕಗಳು ಸಕಾಲಕ್ಕೆ ಮುದ್ರಣವಾಗಿ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳ ಕೈಸೇರುವಂತೆ ಮಾಡಿದ ಸನ್ಮಾನ್ಯ ಕುಲಪತಿಗಳಾದ ಪ್ರೊ. ವೈ. ಎಸ್. ಸಿದ್ಧೇಗೌಡ ಅವರಿಗೆ ಅನಂತ ಕೃತಜ್ಞತೆಗಳು.

ಈ ಸಂದರ್ಭದಲ್ಲಿ ನಮಗೆ ಸೂಕ್ತವಾದ ಮಾರ್ಗದರ್ಶನ ಮಾಡಿ, ಪಠ್ಯಪುಸ್ತಕ ಪ್ರಕಟಿಸಲು ಪ್ರೋತ್ಸಾಹಕೊಟ್ಟು ನೆರವಾದ ಸನ್ಮಾನ್ಯ ಕುಲಸಚಿವರಾದ ಪ್ರೊ. ಬಿ. ಎಸ್. ಗುಂಜಾಳ ಅವರ ಸಹಕಾರ ಅವಿಸ್ಮರಣೀಯ. ಅವರಿಗೆ ಅಧ್ಯಯನ ಮಂಡಳಿ ಪರವಾಗಿ ಕೃತಜ್ಞತೆಗಳು.

ಸಿಬಿಸಿಎಸ್ ಪಠ್ಯಕ್ರಮ ರೂಪಿಸುವ ಸಂದರ್ಭದಲ್ಲಿ ಹಾಜರಿದ್ದು, ಸಕ್ರಿಯವಾಗಿ ಕೆಲಸದಲ್ಲಿ ತೊಡಗಿಸಿಕೊಂಡಿದ್ದ ಸ್ನಾತಕ ಅಧ್ಯಯನ ಮಂಡಳಿಯ ಎಲ್ಲ ಅಧ್ಯಾಪಕರಿಗೂ, ಕರಡು ತಿದ್ದಿದ ಡಾ. ನಟರಾಜರವರಿಗೂ ಪಠ್ಯಪುಸ್ತಕವನ್ನು ಅಂದವಾಗಿ ಅಕ್ಷರೀಕರಣ ಮಾಡಿದ ಶ್ರೀಯುತ ಆರ್. ಎಸ್. ಶ್ರೀಧರ್ ಅವರಿಗೂ ನನ್ನ ನಮನಗಳು.

**ಪ್ರೊ. ಅಣ್ಣಮ್ಮ**
ಅಧ್ಯಕ್ಷರು, ಕನ್ನಡ ಅಧ್ಯಯನ ಮಂಡಳಿ
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

# ಪ್ರಸ್ತಾವನೆ

ಐದನೆಯ ಸೆಮಿಸ್ಟರ್ ಐಚ್ಛಿಕ ವಿದ್ಯಾರ್ಥಿಗಳಿಗಾಗಿ ಸಿದ್ಧಪಡಿಸಿದ ಪಠ್ಯಪುಸ್ತಕವಿದು. ಪತ್ರಿಕೆ–೬ 'ಕಾದಂಬರಿ: ವೈಶಾಖ, ಆಯ್ದ ಸಣ್ಣ ಕತೆಗಳು, ಲೋಹಿಯಾ ಜೀವನ ಚರಿತ್ರೆ' ಎನ್ನುವ ಶೀರ್ಷಿಕೆಯನ್ನು ಹೊಂದಿದೆ. ಆಧುನಿಕ ಕನ್ನಡ ಸಾಹಿತ್ಯದ ಕಾದಂಬರಿ, ಕತೆ ಹಾಗೂ ಜೀವನ ಚರಿತ್ರೆಯನ್ನು ಪರಿಚಯಿಸುವುದರಿಂದ ವಿದ್ಯಾರ್ಥಿಗಳು ಈ ಮೂಲಕ ಆಧುನಿಕ ಕನ್ನಡ ಸಾಹಿತ್ಯದಲ್ಲಿ ರಚನೆಗೊಂಡ ಸೃಜನಶೀಲ ಸಾಹಿತ್ಯದ ಬಗ್ಗೆ ಸಾಕಷ್ಟು ತಿಳಿವಳಿಕೆಯನ್ನು ಪಡೆಯುತ್ತಾರೆ. ಈಗಾಗಲೇ ಕಾವ್ಯ ಸೌರಭ–೧, ಕಾವ್ಯ ಸೌರಭ–೨, ಕಾವ್ಯ ಸೌರಭ–೩, ಕಾವ್ಯ ಸೌರಭ–೪ ಪುಸ್ತಕಗಳ ಮೂಲಕ ಸಾಕಷ್ಟು ತಿಳಿವಳಿಕೆಯನ್ನು ಪಡೆದಿದ್ದಾರೆ. ಹೊಸಗನ್ನಡದ ಈ ಪ್ರಕಾರಗಳಲ್ಲಿ ನಡೆದಿರುವ ವಿಶೇಷ ತಿಳಿವಳಿಕೆಯನ್ನು ಅಧ್ಯಾಪಕರು ವಿದ್ಯಾರ್ಥಿಗಳಿಗೆ ನೀಡುವುದರಿಂದ ವಿದ್ಯಾರ್ಥಿಗಳಿಗೆ ಮುಂದಿನ ಸ್ನಾತಕ ಅಧ್ಯಯನದಲ್ಲಿ ಸಂಶೋಧನಾತ್ಮಕ ನಡೆಯನ್ನು ರೂಪಿಸಿಕೊಳ್ಳಲು ಆಸಕ್ತಿಯನ್ನು ಮೂಡಿಸುತ್ತದೆ. ಪಠ್ಯದ ಜೊತೆಗೆ ಗ್ರಂಥಾಲಯದ ನೆರವಿನೊಂದಿಗೆ ಓದನ್ನು ವಿಸ್ತರಿಸಿಕೊಳ್ಳುತ್ತಾರೆ ಎನ್ನುವ ನಂಬಿಕೆ ನಮ್ಮದು. ಅಧ್ಯಾಪಕರು, ವಿದ್ಯಾರ್ಥಿಗಳು, ಈ ದಿಸೆಯಲ್ಲಿ ನಮ್ಮ ಆಲೋಚನೆಗಳನ್ನು ಗಟ್ಟಿಗೊಳಿಸಲು ಸಹಕರಿಸಬೇಕು ಆಗ ಮಾತ್ರ ಉದ್ದೇಶ ಸಫಲವಾಗುತ್ತದೆ. ತುಮಕೂರು ವಿಶ್ವವಿದ್ಯಾಲಯದ ಅಧ್ಯಾಪಕ ವೃಂದ ಆ ರೀತಿಯ ಚಟುವಟಿಕೆಯಲ್ಲಿ ತೊಡಗಿರುವುದು ಸಂತೋಷದ ಸಂಗತಿ.

ಈ ಪಠ್ಯ ಪುಸ್ತಕವನ್ನು ಸಿದ್ಧಪಡಿಸಲು ನಮಗೆ ಅವಕಾಶ ನೀಡಿದ ಮಾನ್ಯ ಕುಲಪತಿಗಳಿಗೆ, ಕುಲಸಚಿವರಿಗೆ, ಕನ್ನಡ ಅಧ್ಯಯನ ಮಂಡಳಿಯ ಅಧ್ಯಕ್ಷರು, ಸದಸ್ಯರು, ಕಮ್ಮಟದಲ್ಲಿ ಪಾಲ್ಗೊಂಡು ಸೂಕ್ತ ಸಲಹೆಗಳನ್ನು ನೀಡಿದ ಅಧ್ಯಾಪಕರಿಗೆ, ಈ ಪಠ್ಯವನ್ನು ಅಭ್ಯಾಸ ಮಾಡಲು ತೊಡಗುವ ವಿದ್ಯಾರ್ಥಿಗಳಿಗೆ ನಮ್ಮ ಕೃತಜ್ಞತೆಗಳು.

**ಡಾ. ಎ. ರಘುರಾಂ**

**ಡಾ. ಬಿ. ಎಸ್. ಮಂಜುಳ**

ಸಂಪಾದಕರು

# ತುಮಕೂರು ವಿಶ್ವವಿದ್ಯಾನಿಲಯ
## ಬಿ.ಎ. ಐದನೆಯ ಸೆಮಿಸ್ಟರ್ ಐಚ್ಛಿಕ ಕನ್ನಡ ಪತ್ಯ
## ೨೦೧೮–೧೯ನೇ ಶೈಕ್ಷಣಿಕ ವರ್ಷದಿಂದ ಅನುಷ್ಠಾನಗೊಳಿಸಲು ನಿಗದಿಗೊಳಿಸಿದ
## ಸಿಬಿಸಿಎಸ್ ಹೊಸಪತ್ಯ

## ಸಾಹಿತ್ಯಸೌರಭ–೫

## ಪತ್ರಿಕೆ–೬
## ಕಾದಂಬರಿ–ವೈಶಾಖ, ಆಯ್ದ ಸಣ್ಣಕತೆಗಳು ಮತ್ತು ಲೋಹಿಯ ಜೀವನಚರಿತ್ರೆ

**ಪತ್ರಿಕೆ–೫** **೭೫ ಗಂಟೆಗಳು**

# ಪರಿವಿಡಿ

### ಭಾಗ–೧ ಕಾದಂಬರಿ ವೈಶಾಖ–ಚದುರಂಗ

**೩೦ ಗಂಟೆಗಳು** **೩೫ ಅಂಕಗಳು**

**(ವಾರಕ್ಕೆ ೨ ಗಂಟೆ)**

### ಭಾಗ–೨ ಆಯ್ದ ಸಣ್ಣಕತೆಗಳು

**೩೦ ಗಂಟೆಗಳು** **೩೫ ಅಂಕಗಳು**

(ವಾರಕ್ಕೆ ೨ ಗಂಟೆ)


೧. ವೆಂಕಟಿಗನ ಹೆಂಡತಿ – ಮಾಸ್ತಿ ವೆಂಕಟೇಶ ಅಯ್ಯಂಗಾರ್ ೧

೨. ಯಾರೂ ಅರಿಯದ ವೀರ –ಕುವೆಂಪು ೧೫

೩. ಗರ್ಜನೆ –ಬೆಸಗರಹಳ್ಳಿ ರಾಮಣ್ಣ ೨೭

೪. ಮೃಗ ಮತ್ತು ಸುಂದರಿ –ಪಿ.ಲಂಕೇಶ್ ೩೪


### ಭಾಗ–೩ ಜೀವನಚರಿತ್ರೆ: ಲೋಹಿಯಾ

**೧೫ ಗಂಟೆಗಳು** **೨೦ ಅಂಕಗಳು** (ವಾರಕ್ಕೆ ೧ ಗಂಟೆ)

(ವೈಶಾಖ –ಚದುರಂಗ ಮತ್ತು ಲೋಹಿಯಾ – ಜೀವನಚರಿತ್ರೆ ಈ ಎರಡೂ ಪುಸ್ತಕಗಳು ಮಾರುಕಟ್ಟೆಯಲ್ಲಿ ಲಭ್ಯ.

**ಅನುಬಂಧಗಳು**


೧. ಮಾದರಿ ಪ್ರಶ್ನೆಪತ್ರಿಕೆ ಸ್ವರೂಪ ೪೨

೨. ಪತ್ಯ ಬೋಧನಾ ಅವಧಿ, ಪರೀಕ್ಷಾ ಅವಧಿ ಮತ್ತು ಅಂಕಗಳು ೪೪

೩. ಪರಾಮರ್ಶನ ಗ್ರಂಥಗಳು ೪೫

# ಆಯ್ದ ಸಣ್ಣಕತೆಗಳು

# ೧. ವೆಂಕಟಿಗನ ಹೆಂಡತಿ

**–ಮಾಸ್ತಿ ವೆಂಕಟೇಶ ಅಯ್ಯಂಗಾರ್**

ಮೊನ್ನೆ ಶಿವರಾತ್ರಿಯ ದಿನ ನಾನೂ ಪುರೋಹಿತನೂ ಶ್ರೀರಾಮ್ ಅವರನ್ನು ನೋಡುವುದಕ್ಕೆ ಶಂಕರಪುರಕ್ಕೆ ಹೋದೆವು. ಅವರು ಬೆಳಗಿನ ಸುತ್ತಾಟ ಮುಗಿಸಿ ಹಿಂದಕ್ಕೆ ಬಂದಿರಲಿ, ಮನೆಯಲ್ಲಿ ಕಾಣೋಣ, ಎಂದು ನಾವು ಸ್ವಲ್ಪ ಸಾವಕಾಶವಾಗಿ ಹೋದರೆ, ನಾವು ಅವರ ಮನೆಯನ್ನು ಮುಟ್ಟುವ ಹೊತ್ತಿಗೆ ಸರಿಯಾಗಿ ಅವರು ಹೊರಕ್ಕೆ ಬಂದರು. ಅವರು ಆಗತಾನೆ ಸುತ್ತುವುದಕ್ಕೆ ಹೊರಟಿರುವುದನ್ನು ಕಂಡು ನಾವೂ ಜೊತೆಗೆ ಬರುತ್ತೇವೆಂದೆವು. ಸ್ವಲ್ಪವೇ ದೂರ ಸುತ್ತಿ ಹನುಮನ ಗಿರಿಯನ್ನೇರಿ ಪರಮಶಿವಯ್ಯರ ಸೀಮೆಬಸರಿ ಮರದಡಿ ಹೋದೆವು.

ಶಿವರಾತ್ರಿ ಬಂದಿತೆಂದು ಚಳಿ ಶಿವ ಶಿವಾ ಎನ್ನುತಿತ್ತು. ಪೂರ್ವದಿಂದ ಬೀಸುವ ಗಾಳಿ ತಣುವೇ; ಆದರೆ ಬಿಸಿಲು ಮೇಲುಗೈಯಾಗುತ್ತಿತ್ತು. ಇದು ತನಗೆ ತಿಳಿಯಿತೆಂಬಂತೆ ಸುತ್ತಣಲೋಕ ತಲೆಯೆತ್ತಿ ನಿಲ್ಲುವುದರಲ್ಲಿದ್ದಿತು. ನಮ್ಮೆದುರಿಗೆ ನಿಂತಿದ್ದ ಅರಳಿ ಮರವೇ ಅದಕ್ಕೆ ಸಾಕ್ಷಿ. ಯಾರೋ ಹಾಕಿದ ಮರದ ಸೊಪ್ಪನ್ನು ಧಾರಾಳವಾಗಿ ಕುಯಿದು ತಮ್ಮ ಅಡಿಗೆ ಮೇಯಿಸುವ ಮಹನೀಯರು ಇದನ್ನು ತರಿತರಿದು ತರಿದಿದ್ದರು. ಆದರೂ ಅದು ಅವಕಾಶ ಇದ್ದ ಕಡೆ ನಾಲ್ಕು ತಳಿರನ್ನು ತೋರಿದ್ದಿತು. ಮರ ಬರಿದಾದರೂ ತಳಿರು ತಳಿರೇ. ಅದರ ತೆಳುವೊ, ಅದರ ಬಣ್ಣವೊ, ಅದರ ಬೆಡಗೊ! ನೆತ್ತಿಯನ್ನು ಸಾರುವುದರಲ್ಲಿದ್ದ ಸೂರ್ಯನ ರಶ್ಮಿ ಅದರ ಮೇಲೆ ಬಿದ್ದು ಅದನ್ನು ತೊಳಗಿಸಿದ್ದಿತು. ಬೆಳಕಿಗೆ ಸಿಕ್ಕಿದ ತಳಿರು ತಂದೆಯ ಕೈಸೇರಿದ ಕೂಸು ನಕ್ಕು ಹಾಲು ಹಲ್ಲನ್ನು ಎದೆಗೂಡನ್ನು ತೋರುವಂತೆ ತನ್ನ ಬೆನ್ನ ಕಾವನ್ನು ಅದರಿಂದ ಒಡೆದು ಅಗಲಕ್ಕೂ ಹರಿದಿರುವ ಕಾವಶಿವುರನ್ನು ಎತ್ತಿ ತೋರಿಸುತ್ತಿದ್ದಿತು. ಮರದ ಒಂದು ಕೊಂಬೆಯ ಮೇಲೆ ಒಂದು ಹದ್ದು ಕುಳಿತು ಕೊಕ್ಕನ್ನು ರೆಕ್ಕೆಗೆ ತೀಡಿ ಕೊಕ್ಕನ್ನೊ, ರೆಕ್ಕೆಯನ್ನೊ ಎರಡನ್ನೂವೊ, ಸರಿಮಾಡಿಕೊಳ್ಳುತ್ತ ಇದ್ದಿತು. ಆಕಾಶ ತಿಳಿನೀಲ; ಬೋರಲು ಹಾಕಿದ ನೀಲಿಯ ಗುಡಾಣದಂತಿದ್ದಿತು. ಮೋಡದಕಲೆ ಇಷ್ಟಿಲ್ಲ; ತುಂಬಿ ಬರುತ್ತಿದ್ದ ಬೆಳಕಿಗೆ ಸ್ಥಳಮಾಡಿಕೊಡಲೆಂದು ಬಾನತಳವನ್ನೇ ಬಿಟ್ಟು ಮರೆಯಾಗಿದ್ದಿತು. ಅಗಲಕ್ಕೂ ಹರಡಿ ಬರಿದಾಗಿ ಕಾಣುತ್ತಿದ್ದ ಈ ಬಟ್ಟಬಯಲಲ್ಲಿ ಒಂದು ಹಕ್ಕಿ ರೆಕ್ಕೆ

ಹರಡಿ ಹಾರುತಿತ್ತು. ಅದರ ಹಾರು ದೊಡ್ಡ ಹಕ್ಕಿಯ ಹಾರು; ಅದು ಇಲ್ಲವೆ ಹದ್ದು ಇರಬೇಕು, ಇಲ್ಲವೆ ಗರುಡ. ಅಷ್ಟು ದೂರವಿದ್ದ ಪಕ್ಷಿ ಹತ್ತಿರ ಬಂದಂತೆ ಸೂರ್ಯನ ರಶ್ಮಿ ಅದರ ರೆಕ್ಕೆಯಲ್ಲಿ ಹಾಯ್ದು ಅದರ ಬಣ್ಣವನ್ನು ತೋರಿಸಿಕೊಟ್ಟಿತು. ಕಾಯ್ದ ಅಪರಂಜಿ ಚಿನ್ನದ ಆ ಬಣ್ಣದಿಂದ ಅದು ಒಂದು ಗರುಡ ಎಂದು ಸ್ಪಷ್ಟವಾಯಿತು. ನಾನು ಹೀಗೆಂದುಕೊಳ್ಳುವ ಹೊತ್ತಿಗೆ ಪಕ್ಷಿ ತಲೆಯನ್ನು ನಮ್ಮ ಕಡೆಗೆ ತಿರುಗಿಸಿಕೊಂಡು ಬಂದಿತು. ಆ ಬಿಳುಪು; ಆ ಕೆಂಪು; ಅದೇನು ಅದರ ಚೆನ್ನ! ನಮ್ಮ ಪೂರ್ವಿಕರು ಇದನ್ನು ದೇವರ ವಾಹನವೆಂದು ಕಲ್ಪಿಸಿಕೊಂಡುದರಲ್ಲಿ ಆಶ್ವರ್ಯವಿಲ್ಲ. ಕ್ಷೇಮಕಾರಿ ಹಾಗೆಯೇ ಸಾವಧಾನವಾಗಿ ದೂರಕ್ಕೆ ಹೋಗಿ ಮತ್ತೆ ಬಂದು ಗಗನದಲ್ಲಿ ಸುತ್ತುಹಾಕಿತು. ದೂರದಲ್ಲಿರುತ್ತ ತನ್ನ ಜೊತೆಯನ್ನು ಕರೆದು ಒಂದು ಕೂಗು ಕೂಗಿತು. ಕ್ಷಣದಲ್ಲಿ ನಮ್ಮ ಅರಳಿಯಮರದ ಮೇಲೆ ಎಲೆಯ ಸದ್ದಾಗಿ ಒಂದು ಹಕ್ಕಿ ಹಾರಿತು. ಅದು ಆ ಹದ್ದಲ್ಲ; ಎಲೆಯ ಮರೆಯಲ್ಲಿ ನನಗೆ ಕಾಣದೆ ಕುಳಿತಿದ್ದ ಒಂದು ಗರುಡ. ಅದು ಮರದಿಂದ ಹಾರಿ ಗಾಳಿಗೆ ಏರಿತು; ರೆಕ್ಕೆ ಬಡಿದು ನಭವನ್ನು ಸೇರಿ ಸಾವಧಾನವಾಗಿ ಹಾಯತೊಡಗಿತು. ಎರಡು ಗರುಡ, ಸ್ವಲ್ಪ ಹೊತ್ತು ದೂರ ದೂರದಲ್ಲಿ, ಸ್ವಲ್ಪ ಹೊತ್ತು ಹತ್ತಿರ ಹತ್ತಿರದಲ್ಲಿ ಹಾರುತ್ತ ಒಂದನ್ನೊಂದು ಕರೆಯುತ್ತ ಇದ್ದವು. ಇವು ಹಾರುವುದನ್ನು ಸ್ವಲ್ಪ ಹೊತ್ತು ನೋಡುತ್ತಿದ್ದ ಮೇಲೆ ಶ್ರೀರಾಮರು ನಮಗೆ ತಮ್ಮ ಅನುಭವದ ಒಂದು ಸಂಗತಿಯನ್ನು ಹೇಳಿದರು.

## ೨

ಕಳೆದವರ್ಷ ಸಂಕ್ರಾಂತಿಯ ಸುಮಾರಿನಲ್ಲಿ ಒಂದು ದಿನ ನಾನು ಈ ಸುತ್ತಿನಲ್ಲಿ ನಡೆದುಬರುತ್ತಿದ್ದೆನು. ಬೋವನಹಳ್ಳಿಯ ತಿಟ್ಟಿನಲ್ಲಿ ನಿಂತು ತಗ್ಗಿನಲ್ಲಿರುವ ಆ ಹಳ್ಳಿಯ ಮುಂದಿನ ಬಸರಿಮರವನ್ನು ನೋಡಲು ತಿರುಗಿದೆನು. ಬೋವನಹಳ್ಳಿಯ ದಾರಿ ಅಲ್ಲಿಂದ ಎಡಕ್ಕೆ ಇರುತ್ತದೆ; ಬಲಕ್ಕೆ ಎಂದೋ ಬರಿದಾದ, ಈಗ ಯಾರೂ ಹೆಸರು ಹೇಳದ, ಸಣ್ಣದೊಂದು ಹಳ್ಳಿಯ ಹಾಳು. ಹಾಳು ಎಂಬ ಮಾತು, ಮನೆಯಿದ್ದು ಅಳಿದ ಸ್ಥಳ ಎಂಬ ಭಾವದ ಸಂಪರ್ಕದಿಂದ, ಈಗ ಒಂದು ಅಶುಭ ವಾಚಕವಾಗಿದೆ. ಆದರೆ ನಿಜವಾದ ಮನೆಯಿಲ್ಲದಿದ್ದರೂ ಈ ಹಾಳಿನಲ್ಲಿ ಅಳಿದ ಊರಿನ ಅವಲಕ್ಷಣವಿಲ್ಲ. ಕಟ್ಟಡ ಸಡಲಿದ ಒಂದು ಕಲ್ಲುಕಟ್ಟಿದ ಭಾವಿ ಇದೆ. ಹತ್ತಿರದಲ್ಲಿ ಪೂರ್ವದಲ್ಲಿ ಮನೆಗಳಿದ್ದ ಸ್ಥಳಗಳಲ್ಲಿ ಅಂದುಹಾಕಿದ ಮರಗಳಿವೆ. ಹಳ್ಳದ ಓರದ ತಿಟ್ಟಿನಲ್ಲಿ ಒಂದು ಕಡೆಗೆ ಒಂದು ಸೇದುವ ಭಾವಿ, ಇನ್ನೊಂದು ಕಡೆ ಅಂದಿನ ದೇವಾಲಯದ ಅವಶೇಷ ಇವೆ. ಸೇದುವ ಭಾವಿಗೆ ಇಳಿಯುವ ಭಾವಿಗೆ ಮಧ್ಯೆ ಹೊಲಗಳ ಮಧ್ಯೆ ಹಾಯ್ದು ದೇವಾಲಯವನ್ನು ಅರ್ಧಸುತ್ತಿ ಹಳ್ಳಕ್ಕೆ ಹೋಗಿ ಸೇರುವ ಸಣ್ಣ ಕಾಲುವೆ ಇದೆ.

ಭಾವಿಯ ಹತ್ತಿರ ದೊಡ್ಡದೊಂದು ದೇವಕಣಿಗಿಲೆ ಮರ. ಅದರ ಪಕ್ಕದಲ್ಲಿ ದಾರಿಗರಿಗಾಗಿ ನಿಲ್ಲಿಸಿರುವ ಹೊರೆ ಇಳಿಸುವ ಕಲ್ಲು. ತಿಟ್ಟಿನಿಂದ ನೋಡಿದರೆ ತುಂಬಿ ಬಾಳುತ್ತಿರುವ ಬೋವನಹಳ್ಳಿ ಒಂದತ್ತ, ಬಾಳು ಮುಗಿದಿದ್ದರೂ ನಗುತ್ತಲೇ ಕಾಣುವ ಈ ಹಳೆಯೂರ ಹಾಳು ಇನ್ನೊಂದತ್ತ, ಕಂಡು ಮನಸ್ಸಿಗೆ ಹರ್ಷವನ್ನು ನೀಡುತ್ತವೆ. ಆ ದಿನ ನಾನು ತಿಟ್ಟಿನಲ್ಲಿ ನಿಂತು ನೋಡಿದಾಗ ಹಳೆಯೂರು ಬೋವನಹಳ್ಳಿಗೂ ಹೆಚ್ಚಿನ ಒಂದು ಕಳೆಯಿಂದ ನಕ್ಕಿತು. ಇದು ಏಕೆ ಎಂದು ನಾನು ನೋಡಿದೆನು. ದೇವಕಣಿಗಿಲೆ ಮರದ ತುಂಬ ತುಂಬಿದ ಎಲೆಯ ಮಧ್ಯೆ ಕೊಂಬೆ ಕೊಂಬೆಯಲ್ಲಿ ಬೆಳ್ಳನೆ ಹೂತಿದ್ದಿತು. ನಾನು ಆ ದಾರಿಯಲ್ಲಿ ನಡೆದು ಮೂರು ದಿನ ಆಗಿದ್ದಿತು. ಮೂರು ದಿನದ ಹಿಂದೆ ಆ ಸಂಭ್ರಮ ಕಂಡಿರಲಿಲ್ಲ. ಮಧ್ಯೆ ಒದಗಿದ ಈ ಪುಷ್ಪಹಾಸದಿಂದ ಹಳೆ ಊರ ಹಾಳಿಗೆ ಹೊಸ ಬೆಳಗು ಬಂದಿದ್ದಿತು.

ಮೊನ್ನೆ ಏನೂ ತಿಳಿಯದಂತೆ ಇದ್ದ ಮರ ಇಷ್ಟು ಬಿನ್ನಾಣ ಮಾಡಿದೆಯಲ್ಲ ಎಂದು ನಾನು ಯೋಚಿಸಿಕೊಂಡೆನು. ಹಿಂದಿನಿಂದ ಯಾವನೋ ತೆಲುಗಿನಲ್ಲಿ ಮಾತಾಡಿಸಿದನು. 'ಸ್ವಾಮಿ ಈ ಹೊರೆ ಸ್ವಲ್ಪ ಇಳಿಸಿಕೊಡಿ'.

ನಾನು ಹಿಂದಿರುಗಿ ನೋಡಿದೆನು. ತೆಳ್ಳಗೆ ಎತ್ತರವಾಗಿ ನಮ್ಮ ಜನರ ವಾಡಿಕೆಯ ಶ್ಯಾಮಲ ವರ್ಣದ ತರುಣ ಒಬ್ಬ ಅವನು. ತಲೆಯ ಮೇಲೆ ಹೊತ್ತು ಹೊರಲಾಗದ ಒಂದು ಸೌದೆಯ ಹೊರೆಯನ್ನು ಹೇರಿಕೊಂಡು ಅದೆಷ್ಟು ದೂರದಿಂದಲೊ ಬಂದಿದ್ದನು. ಅವನ ಮುಖದಿಂದ ಬೆವರು ಸೋರುತ್ತಿತ್ತು. ನಾನು ಅವನ ಹೊರೆಯ ಕೆಳಕ್ಕೆ ಕೈ ಇಟ್ಟು 'ಇಳಿಸು' ಎಂದೆನು. ಅವನೂ ಅದನ್ನು ತನ್ನ ಕೈಯಿಂದ ಎತ್ತಿ ತಲೆಯನ್ನು ಸರಿಸಿಕೊಂಡು 'ಬಿಡಿ' ಎಂದು ಹೇಳಿ ಹೊರೆಯನ್ನು ಕೆಳಕ್ಕೆ ಹಾಕಿದನು.

ಹೊರೆಯನ್ನು ಕೆಳಗೆ ಇಳಿಸಿ ಅವನು ತಾನು ಹಾಕಿಕೊಂಡಿದ್ದ ಷರಟಿನ ಬಲ ಅಂಚಿನಿಂದ ಮುಖದ ಬೆವರನ್ನು ಒರಸಿಕೊಂಡು, 'ಬಹಳ ಕಷ್ಟವಾಗಿಹೋಯ್ತು ಸ್ವಾಮಿ. ದಿನಾ ಆ ಹೊರೆಕಲ್ಲಿನ ಹತ್ತಿರ ಹೋಗಿ ಇಳಿಸ್ತಾ ಇದ್ದೆ. ಈ ಹೊತ್ತು ತಡೆಯಲಿಲ್ಲ. ನಿಮ್ಮಂಥ ದೊಡ್ಡವರಿಗೆ ತೊಂದರೆ ಕೊಡಬೇಕಾಯ್ತು' ಎಂದ.

ನಾನು 'ತೊಂದರೆ ಯಾತರದು? ಅಂಥದೇನೂ ಇಲ್ಲ. ಆದರೆ ಹೀಗೆ ಹೊರಬಾರದ ಹೊರೆಯನ್ನು ಏಕೆ ತಲೆಯ ಮೇಲೆ ಹೇರಿಕೊಂಡೆ?' ಎಂದೆನು. ಅವನು, 'ಅಯ್ಯೋ ಸ್ವಾಮಿ, ಮನುಷ್ಯರಿಗೆ ಆತುರ ಇದೆಯಲ್ಲ. ನಾಲ್ಕು ಕಟ್ಟಿಗೆ ಹೆಚ್ಚಾಗಿದ್ದರೆ ಮೊದಲ ಬೀದೀಲೆ ಖರ್ಚಾಗುತ್ತೆ. ಮೂರು ಕಾಸು ಹೆಚ್ಚಾಗಿ ಬರುತ್ತೆ. ಸೌದೆ ಕೊಳ್ಳುವ ನಿಮ್ಮಂಥವರಿಗೆ ಬೇಕು ಅನ್ನಿಸೋ ಹೊರೆಯನ್ನು ತರಬೇಕು. ಬೇಗನೆ ಕೈಗೆ ಕಾಸು ತಕೊಳ್ಳಬೇಕು,' ಎಂದನು.

ನಾನು ದಾರಿಯ ಪಕ್ಕದ ಒಂದು ಕಲ್ಲಿನ ಮೇಲೆ ಕುಳಿತು ಅವನನ್ನು

ಕುಳಿತುಕೊಳ್ಳಹೇಳಿ ಅವನ ಊರು, ಕೇರಿ ಕಷ್ಟಸುಖವನ್ನು ವಿಚಾರಿಸಿದೆನು. ಚಿಂತಾಮಣಿಯ ಕಡೆಯಿಂದ ಬಂದಿರುವ ನನಗೆ ಇವನೊಂದಿಗೆ ತೆಲುಗಿನಲಿ ಮಾತನಾಡಲು ಕಷ್ಟವೇನೂ ಆಗಲಿಲ್ಲ.

ತರುಣನ ಹೆಸರು ವೆಂಕಟರಮಣ. ಅವನನ್ನು ಸಾಮಾನ್ಯವಾಗಿ 'ವೆಂಕಟಿಗ' ಎಂದು ಕರೆಯುವರು. 'ವೆಂಕಟರಮಣ' ಎನ್ನುವುದು ಸ್ವಲ್ಪ ಉದ್ದ; ಅಲ್ಲದೆ ಬಹು ಮರ್ಯಾದೆಯ ಹೆಸರು; ಇವನಂಥವರ ವಿಷಯಕ್ಕೆ ಅದು 'ವೆಂಕಟಿಗ' ಆಗುತ್ತದೆ. 'ವೆಂಕಟಿಗ' ಜನತೆಯ ಬಾಯಲ್ಲಿ 'ಯಂಗಟಿಗ' ರೂಪವನ್ನು ಪಡೆಯುತ್ತದೆ. ಯಂಗಟಿಗ ತಿರುಪತಿಯ ಬಳಿ ಒಂದು ಹಳ್ಳಿಯ ಹುಡುಗ. ಬೆಂಗಳೂರಿನಲ್ಲಿ ಬಾಳುವೆ ನಡೆಸಬೇಕು ಎಂದು ಬಂದಿದ್ದನು.

'ಯಾಕೆ, ನಿಮ್ಮೂರಿನಲ್ಲಿ ಜೀವನ ಆಗಲಿಲ್ಲವೇನಯ್ಯ?'

'ಆಗುತಿತ್ತು ದೇವರೆ. ಏನೂ ಇಲ್ಲದೆ ಇದ್ದರೂ ಬೆಟ್ಟಕ್ಕೆ ಸಾಮಾನು ಹೊತ್ತು, ಡೋಲಿ ಹೊತ್ತು, ಜೀವನ ಸಂಪಾದಿಸಬಹುದು. ಅದಕ್ಕೇನೂ ಕಷ್ಟ ಇಲ್ಲ.'

'ಹಾಗಾದರೆ ಇಷ್ಟು ದೂರ ಏಕೆ ಬಂದೆ ಮತ್ತೆ?'

'ಏನೋ ಬೇಸರ ಆಯ್ತು ಸ್ವಾಮಿ. ಕೊಂಚ ದಿನ ಊರಿಂದ ದೂರ ಇರೋದು ಒಳ್ಳೆಯದು ಎಂತ ಇತ್ತಲಾಗಿ ಬಂದುಬಿಟ್ಟೆ.'

'ಇಷ್ಟು ಚಿಕ್ಕ ವಯಸ್ಸಿನಲ್ಲಿ ಬೇಸರ ಏಕಯ್ಯ ಬಂದಿತು? ನನಗೆ ಹೇಳಬಹುದೊ?'

'ಹೇಳದಂತೆ ಏನು ಸ್ವಾಮಿ! ನಮ್ಮ ತಂದೆಯಂತೆ ಕೇಳ್ತಿದೀರಿ. ಮಕ್ಕಳು ಮರಿ ಉಳ್ಳವರು. ಹೇಳಿ ಸುಖ ಇಲ್ಲ ಅಷ್ಟೆ'

'ಹೇಳಬಹುದಾದರೆ ಹೇಳು. ನಮ್ಮಿಂದ ಏನಾದರೂ ಮಾಡಲಾಗುತ್ತದೆಯೆ ನೋಡೋಣ.'

'ಅಯ್ಯೋ, ಯಾಕಾಗಬಾರದು ಸ್ವಾಮಿ. ಇಂಥಾದ್ದು ಎಷ್ಟು ಕೇಳಿರುತ್ತೀರೊ. ಪ್ರಪಂಚವನ್ನು ಬಲ್ಲವರು ಒಂದು ಸಮಾಧಾನದ ಮಾತು ಹೇಳಿದರೆ ನನ್ನ ಮನಸ್ಸಿಗೂ ಒಳ್ಳೆಯದು.'

ಹೀಗೆಂದು ಅವನು ತನ್ನ ಕಥೆಯನ್ನು ಹೇಳಿದನು.

## ೩

ವೆಂಕಟಿಗ ತನ್ನ ಹಳ್ಳಿಯ ಕೂಲಿಕಾರರ ಒಬ್ಬ ತರುಣ. ಅವನ ನೆಂಟರಿಷ್ಟರು ಊರಿನ ತುಂಬ ಉಂಟು. ಅತ್ತೆಯ ಮಗಳು ರಂಗಿ ಎಂಬ ಹುಡುಗಿ ಇವನ ಜೊತೆಯಲ್ಲೆ ಬೆಳೆದಳು. ಚಿಕ್ಕಂದೇ ಇವರು ಗಂಡ ಹೆಂಡಿರಾಗತಕ್ಕವರೆಂದು ಹಿರಿಯರು ಗೊತ್ತು ಮಾಡಿದರು. ರಂಗಿ ಒಳ್ಳೆ ಚಲುವೆ. ಅವರ ಜನದಲ್ಲಿ ಆ ಬಣ್ಣ ಆ ಕಣ್ಣು

ಅಪೂರ್ವ. ತಾನು ಎತ್ತರದ ಹುಡುಗ ಆದರೂ ಅವಳು ಎಂದೂ ತನ್ನ ಭುಜದ ಮಟ್ಟಕ್ಕೆ ಕಡಮೆ ಇದ್ದದಿಲ್ಲ. ಅವಳು ನಡೆಯುತ್ತಿದ್ದರೆ ಗುಡಿಯಲ್ಲಿ ನಿಲ್ಲಿಸಿದ್ದ ಕಲ್ಲಿನಮೂರ್ತಿ ಹೊರಗೇನು ನಡೆದು ಬಂದಿತೊ ಎಂಬಂತೆ ಕಾಣುವುದು. ಹುಡುಗ ಹುಡುಗಿ ಎಷ್ಟೋಕಾಲ ಬೆಟ್ಟಕ್ಕೆ ಸಾಮಾನು ಹೊತ್ತು ಕೂಲಿ ಗಳಿಸಿದರು; ಸುಖವಾಗಿ ಜೊತೆಯಲ್ಲಿ ಬೆಳೆಯುತ್ತಿದ್ದರು.

ತಕ್ಕ ವಯಸ್ಸಾಯಿತೆಂದು ಇವರಿಗೆ ಮದುವೆ ಮಾಡಿದರು. ಆದರೆ ಆ ಹೊತ್ತಿಗೆ ಇವರ ಗ್ರಹಚಾರ ಕೆಟ್ಟಿತು. ಊರಿನ ಪುಣ್ಯವಂತ ರೆಡ್ಡಿ ಒಬ್ಬ ಬೀದಿಯಲ್ಲಿ ಕಾಣುತ್ತಿದ್ದ ಈ ಹುಡುಗಿಯನ್ನು ನೋಡಿ ಇವಳಿಗೆ ಒಡವೆ ವಸ್ತ್ರದ ಆಸೆಯನ್ನು ಹುಟ್ಟಿಸಿ ಇವಳನ್ನು ತನ್ನ ಕೈಗೆ ಹಾಕಿಕೊಂಡನು.

"ಬೇಗ ಅನ್ನುತ್ತೀರಿ, ನಾಯನ. ನಮಗೆ ತಿಳಿದಾಗ ಬೇಗ ಅಷ್ಟೆ ಇಂಥ ಪುಣ್ಯವಂತರು ಎಷ್ಟು ದಿನ ಈ ಹೂಟ ಮಾಟ ಮಾಡುತ್ತಾರೆ, ನಮಗೆ ತಿಳಿಯುತ್ತದೆಯೇ? ಅಲ್ಲವೆ ನಾಯನ, ಈ ಹೆಣ್ಣು ಅನ್ನುವುದರ ಮನಸ್ಸು ಹೇಗೆ ಒಲಿದರೂ ಆಯಿತು. ಈ ತಿಟ್ಟು ಯಾವ ಕಡೆಗೆ ಇಳಿದರೆ ಬೇಡ? ಈ ಹೊತ್ತು ನಾನು ಗಂಡ, ನನ್ನ ಕಡೆ ನೋಡುತಿರ್ತಾಳೆ. ನಾಳೆ ಯಾವನೊ ಚೆಲುವ ಎದುರಿಗೆ ಬರ್ತಾನೆ; ಅವನ ಕಡೆ ನೋಡ್ತಾಳೆ. ಬೇಕು ಅಂತ ನೋಡಿದಳೆ? ಕಂಡ ದೊಡ್ಡ ಮನುಷ್ಯ ಸುಮ್ಮನಿದ್ದರೆ ಸರಿಹೋಯಿತು. ಕೆಣಕಿದರೆ? ಎಲ್ಲಾ ಹೆಣ್ಣೂ ಬೇಡ ಎಂತಲೇ ಎನ್ನುತ್ತದೆಯೆ? ಅವನ ಮೀಸೆಯೇನು, ಅವನ ರುಮಾಲೇನು, ಅವನ ಆ ಕುದುರೆಯೇರಿ ಹೋಗ್ತಾ ಅವನ ದರ್ಪ ಏನು? ಗಂಡು ನನಗೇ ಆ ಪದವಿ ಬೇಕು ಎನ್ನಿಸುತ್ತಿರಬೇಕಾದರೆ, ಪದವಿ ಉಳ್ಳಾತ ಕರೆದರೆ ಎಲ್ಲಾ ಹೆಣ್ಣೂ ತಡೆದೀತೆ? ಏನೂ ಅರಿಯದ ಹುಡುಗಿ ಒಪ್ಪಿಕೊಂಡಿತು.

"ತಾಯಿ ತಂದೆ, ಇದು ಬೇಡಮ್ಮ, ಕುಲಕ್ಕೆ ಕೆಟ್ಟ ಹೆಸರು ಎಂದರು. ನಾನು ಬಹಳ ಹೇಳಿದೆ. 'ಬೇಡ ಹೆಣ್ಣೆ' ಎಂದೆ. ಎಂಥ ಒಳ್ಳೆ ಹುಡುಗಿ ಸ್ವಾಮಿ. ಕೂಲಿ ಹೊರೋ ದಿವಸದಲ್ಲಿ ನಂಬಿಕೆ ಅಂದರೆ ಅಂಥ ನಂಬಿಕೆ. ನಾವು ಕದಿಯೋಣ ಎಂದರೆ 'ಜೋಕೆ ದೇವರು ಶಿಕ್ಷೆ ಮಾಡುತ್ತಾನೆ' ಎನ್ನುತ ಇದ್ದಳು. ದೊಡ್ಡವಳಾದ ಮೇಲೆ ಯಾರಾದರೂ ಹುಡುಗರು ಸ್ವಲ್ಪ ಸಲಿಗೆ ಮಾಡಿದರೆ, ಏನೊ ಅದು, ನನ್ನ ಸೂಳೇನ್ನ ಮಾಡಿದ್ಯಾ' ಎನ್ನುತ್ತ ಇದ್ದಳು. ಅದೇನು ಕೆಟ್ಟ ಗಳಿಗೆಯೊ ಸ್ವಾಮಿ, ಕೆಲವು ದಿನ ನನ್ನ ತಪ್ಪಿಸಿ ಅವನ ಹತ್ತಿರ ಹೋದಳು, ಬಂದಳು, ಎಂದೋ ಒಂದು ದಿನ ಅವನ ಮನೆಗೆ ಹೋಗಿ ನಿಂತೂ ಬಿಟ್ಟಳು.

"ನಮ್ಮ ತಾಯಿ, ನನ್ನ ಮಗನ ಸಂಸಾರ ಕೆಡಿಸಿದೆಯಾ, ಎಂದು ಆ ಪುಣ್ಯವಂತನ ಮುಂದೆ ಬಯ್ದಾಡಿ ಬಾಯಿ ಬಡಿದುಕೊಂಡಳು. ನಾನು ಹೋಗಿ ಅವಳನ್ನು ಮನೆಗೆ ಎಳೆದುಕೊಂಡು ಬಂದೆ. ಏನು ಹೇಳಿದರೂ ಮನೆಯ ಸೊಸೆಯ ಮಾತು. ಕೂಗಿದಷ್ಟು

ನಮ್ಮ ಮರ್ಯಾದೆಯೇ ಕೆಡುತ್ತದೆ. ಬಾಳಿದರೆ ಚೆನ್ನಾಗಿತ್ತು, ಬಾಳಲಿಲ್ಲ, ಸುಮ್ಮನಿರೋಣ, ಎಂದು ಅವಳನ್ನು ತಡೆದೆ.

"ನಮ್ಮ ಅತ್ತೆ, 'ನಿನ್ನ ಸಂಸಾರವನ್ನು ಕೆಡಿಸಿದೆನಲ್ಲೊ. ತೆರ ಹಿಂದಕ್ಕೆ ಕೊಡುತ್ತೇನೆ. ಬೇರೆ ಹುಡುಗಿಯನ್ನು ಮದುವೆಯಾಗು,' ಎಂದಳು. ಅವಳೇನೂ ನನಗೆ ದೂರವಲ್ಲವಲ್ಲ. ಸದ್ಯ ನನ್ನ ತಂದೆಗೆ ತಂಗಿ. ನಾನು ಕೆಟ್ಟರೆ ನೋಡಲಾರಳು; ಅಮ್ಮನ ಜೊತೆಗೆ ಅಮ್ಮನಂತೆ ಬೆಂದಳು. ಆದರೆ ನನಗೆ ಬೇರೆ ಮದುವೆ ಬೇಕು ಎನ್ನಿಸಲಿಲ್ಲ. 'ಇರಲಿಬಿಡು' ಎಂದೆ.

"ಏನು ಮಾಡುವುದು ಎಂದು ತೋಚದೆ ಮೂರು ದಿನ ಕಳೆದೆ. ಆ ಪುಣ್ಯವಂತ ನನಗೆ, 'ನಿನ್ನ ಹೆಂಡತಿಯ ತೆರವನ್ನು ನಾನು ಕೊಟ್ಟುಬಿಡುತ್ತೇನೆ. ಬೇಕಾದರೆ ಇನ್ನು ನಾಲ್ಕು ಕಾಸುಕೊಡುತ್ತೇನೆ. ಅವಳನ್ನು ಒಪ್ಪಿ ನನಗೆ ಬಿಟ್ಟುಬಿಡು. ನೀನು ಬೇರೆ ಮದುವೆಯಾಗು,' ಎಂದು ಹೇಳಿ ಕಳುಹಿಸಿದನು.

"ನನಗೆ ತುಂಬ ದುಃಖವಾಯಿತು. ತುಂಬಾ ಕೋಪ ಬಂತು. ಆ ಸಂಜೆ ಯಾರೂ ಕಾಣದಂತೆ ನಾನು ಅವನ ಮನೆಗೆ ಹೋದೆನು. ಸಾಹುಕಾರನೊಂದಿಗೆ ಮಾತನಾಡಬೇಕೆಂದು ಹೇಳಿಕಳುಹಿಸಿದೆನು."

"ನಾನು ತನ್ನನ್ನು ಏನಾದರೂ ಮಾಡಿಯೇನೆಂದು ಅವನಿಗೆ ಭಯ. 'ನಾನು ಬರಿಕೈಯಲ್ಲಿ ಬಂದಿದೇನೆ, ಆಯುಧವೇನೂ ತಂದಿಲ್ಲ' ಎಂದು ಧೈರ್ಯ ಹೇಳಿದ ಮೇಲೆ ಅವನು ನನ್ನನ್ನು ಒಳಕ್ಕೆ ಕರೆಸಿಕೊಂಡನು. ನನ್ನ ಹೆಂಡತಿಯಾದವಳು ಅವನು ಕುಳಿತಿದ್ದ ಕೋಣೆಯ ಹಿಂದಿನ ಕೋಣೆಯಲ್ಲಿ ಇದ್ದದ್ದು ಕಂಡಿತು.

"ನಾನು ಸಾಹುಕಾರನಿಗೆ, 'ಹೆಂಡತಿಗೆ ಬದಲು ಹೆಂಡತಿಯನ್ನು ಕೊಡುತ್ತೀನಿ ಎನ್ನುತ್ತೀಯಲ್ಲ. ಇದು ಮರ್ಯಾದೆಯ ಮಾತೆ? ನೀನು ಮಾಡಿರುವುದು ತಪ್ಪು. ಬೆಟ್ಟದ ಮೇಲಿರುವ ದೇವರು ಎಲ್ಲವನ್ನು ನೋಡುತ್ತಿದ್ದಾನೆ. ಒಳ್ಳೆಯದಾಗಬೇಕೆಂದು ಆಸೆಯಿದ್ದರೆ ನನ್ನ ಹೆಂಡಿರನ್ನು ನನ್ನೊಂದಿಗೆ ಹಿಂದಕ್ಕೆ ಕಳುಹಿಸು. ನೀನೂ ಬದುಕು. ನನ್ನನ್ನೂ ಬದುಕಿಸು. ಅವಳ ಮರ್ಯಾದೆಯನ್ನು ಉಳಿಸು. ಅದನ್ನು ಬಿಟ್ಟು ಹಣದ ಮಾತು ಬೇರೆ ಹೆಂಡಿರ ಮಾತು ಹೇಳಿದರೆ, ಮೂಳೆ ಬಿಡದ ನಾಯಿಯಂತೆ ನೀನು ನಿನ್ನ ದುರಾಶೆಯನ್ನು ಕಟ್ಟಿಕೊಂಡ ಹಾಗಾಯಿತು. ಅರಿಯದ ಹುಡುಗಿಯನ್ನು ಮರುಳು ಮಾಡಿ ಸುಖಪಟ್ಟೇನೆಂದು ತಿಳಿಯಬೇಡ,' ಎಂದೆನು. ಅವನು, 'ನಾನು ನಿನ್ನೊಂದಿಗೆ ಈ ಮಾತನ್ನೆಲ್ಲ ಆಡಲಾರೆ.' ಎಂದನು. ನಾನು, 'ಒಳ್ಳೆಯದು. ನನ್ನ ಹೆಂಡತಿ ನನ್ನೆದುರಿಗೆ ಬಂದು, ನಾನು ತನಗೆ ಬೇಡ ಎಂದು ಒಮ್ಮೆ ಬಾಯಲ್ಲಿ ಹೇಳಲಿ,' ಎಂದೆನು. ಅವನು 'ನಿನಗೆ ತೆರವನ್ನು ಕೊಟ್ಟು ಬೇರೆ ಮದುವೆಮಾಡಿಕೊ ಎಂದು ನಾನು ಹೇಳಿದ್ದು ಅವಳ ಇಷ್ಟದಿಂದಲೇ. ಅವಳು ಹೇಳಿದಿದ್ದರೆ ಈ ಮಾತು ನನಗೇಕೆ

ಬೇಕಿತ್ತು?' ಎಂದನು. ನಾನು, 'ಆ ಮಾತನ್ನೇ ಅವಳು ನನ್ನೆದುರಿಗೆ ಒಮ್ಮೆ ಹೇಳಲಿ,' ಎಂದೆನು. ಅವನು ಹೇಳುತ್ತಾಳೇಳು,' ಎಂದು ನನಗೆ ಹೇಳಿ ಒಳಗಿನ ಕೋಣೆಯ ಕಡೆಗೆ ಮುಖಮಾಡಿ, 'ಒಳಗಿದ್ದೀಯಾ, ಇಲ್ಲಿ ಬಾ, ಹೇಳಿ ಕಳುಹಿಸು ಎಂದ ಮಾತನ್ನು ನೀನೇ ಹೇಳು, ಅವನು ಕೇಳಬೇಕಂತೆ,' ಎಂದನು. ನನ್ನ ಹೆಂಡತಿ ಹೊರಕ್ಕೆ ಬಂದಳು. ಅವಳ ಸೀರೆ, ಅವಳ ಕುಪ್ಪಸ, ಅವಳ ಗೊಲಸು, ಅವಳ ಕಡಗ, ಅದನ್ನೇನು ಹೇಳುವುದು? ಬಡವರ ತೊಡವಿನಲ್ಲಿ ಎಷ್ಟೋ ಚೆನ್ನಾಗಿದ್ದ ಹುಡುಗಿ ಈ ಐಶ್ವರ್ಯದಲ್ಲಿ ನೋಡಬಾರದು ಎನ್ನುವಂತೆ ವಿಕಾರವಾಗಿ ಕಂಡಳು. ಅವಳ ಮುಖ ಅಂಥ ಸಂತೋಷವನ್ನೇನೂ ತೋರಿಸಲಿಲ್ಲ. ನಾನು ಅವಳನ್ನು ಕುರಿತು, 'ಸಾಹುಕಾರರು ನನಗೆ ಹೇಳಿಕಳುಹಿಸಿದ ಮಾತು ನಿನ್ನ ಮಾತು ಎನ್ನುತ್ತಾರೆ. ಅದನ್ನು ನೀನೇ ನನಗೆ ಹೇಳು' ಎಂದೆನು. ಅವಳು ಬಾಯಿತೆರೆಯಲಿಲ್ಲ. ನಾನು, 'ನನ್ನ ತೆರವನ್ನು ಹಿಂದಕ್ಕೆ ತೆಗೆದುಕೊಂಡು ನಾನು ಬೇರೆ ಮದುವೆಯಾಗಬೇಕೆಂದು ನೀನು ಇಷ್ಟಪಡುತ್ತೀಯಾ?' ಎಂದು ಕೇಳಿದೆನು. ಅವಳು ಹೌದು ಎಂಬ ಅರ್ಥಕ್ಕೆ ತಲೆ ಆಡಿಸಿದಳು. ನಾನು, 'ಒಳ್ಳೆಮಾತು ಹೇಳಿದೆ. ಆದರೆ ಇದನ್ನು ದೇವರು ಒಪ್ಪುವುದಿಲ್ಲ. ಎಷ್ಟೋಸಲ ಆ ಹಂತದ ಮೇಲೆ ಜೊತೆಯಾಗಿ ನಡೆದ ನಾವು ಹೀಗೆ ಬೇರೆಯಾಗಿ ಬಾಳುವುದು ಸರಿಯಾಗಲಾರದು. ತಿರುಗಿ ಎಂದೇ ಆಗಲಿ ನನ್ನ ಬಳಿ ಬರಬೇಕು ಎನ್ನಿಸಿದರೆ ಸಂಕೋಚಪಡದೆ ಹೊರಟು ಬಂದು ಬಿಡು. ನಾನು ಅದುವರೆಗೆ ಕಾದಿರುತ್ತೇನೆ.' ಎಂದೆನು. ಹೀಗೆಂದವನೆ ಹೊರಗೆ ಹೊರಟೆನು.

"ಸಾಹುಕಾರನು ನಕ್ಕನು. ತನ್ನ ಮನೆಯಲ್ಲಿ ಸೇರಿದ ಹೆಣ್ಣು ತನಗೆ ಒಲಿದುಬಂದದ್ದು, ಒಲ್ಲದೆಹೋದ ಗಂಡನ ಬಳಿಗೆ ಹಿಂತಿರುಗಿ ಹೋಗುತ್ತದೆಯೆ? ನಾನು ಸಾಹುಕಾರನ ಮನೆಗೆ ಹೋದದ್ದನ್ನು ಹೇಗೋ ತಿಳಿದ ನನ್ನ ತಾಯಿ ಅವನ ಮನೆ ಬಾಗಿಲಲ್ಲಿ ಕಾದಿದ್ದು ನಾನು ಹೊರಗೆ ಬಂದಾಗ ನನ್ನ ಜೊತೆಯಾದಳು. ನಡೆದ ಸಂಗತಿಯನ್ನೆಲ್ಲ ಕೇಳಿ, 'ನೀನು ಏಕೆ ಹೀಗೆ ಮುಟ್ಠಾಳನಂತೆ ಆಡುತ್ತಿದ್ದೀಯೆ?' ಎಂದು ಕೇಳಿದಳು. ನಮ್ಮ ಅತ್ತೆ, 'ಬುದ್ಧಿ ಕೆಟ್ಟ ಹುಡುಗಿ. ಹುಟ್ಟಿದ ಮನೆಗೆ ಕೆಟ್ಟ ಹೆಸರು ತಂದಳು. ಯಾಕೇ ಕೈನೆ ಎಂತ ಜುಟ್ಟು ಹಿಡಿದು ಎಳೆದುಕೊಂಡು ಬಂದು ಆಳುವುದನ್ನು ಬಿಟ್ಟು ಇದು ಏತರದೊ ನೀನು ಮಾಡುತ್ತಿರುವ ಸಾಮ?' ಎಂದಳು.

"ಸಾಹುಕಾರನ ಹಿರಿಯ ಹೆಂಡತಿ ನನ್ನ ಮನೆಗೆ ಒಬ್ಬ ಹೆಂಗಸನ್ನು ಕಳುಹಿಸಿದಳು. ತನ್ನ ಗಂಡ ನನ್ನ ಸಂಸಾರವನ್ನು ಕೆಡಿಸಿದ್ದು ತನಗೆ ಬಹಳ ದುಃಖ. ಇನ್ನೊಬ್ಬಳನ್ನು ಮದುವೆಯಾಗಿದ್ದರೆ ಬೇಡ ಎನ್ನುತ್ತಿರಲಿಲ್ಲ. ಹೀಗೆ ಮದುವೆಯಾದ ಹೆಣ್ಣನ್ನು ಕದ್ದು ತಂದು ಮನೆ ಮುರಿದುಕೊಳ್ಳುತ್ತಿದ್ದಾನೆ. ಗಂಡನಾದ ನಾನು ಹೆಂಡತಿಯನ್ನು ಕರೆದುಕೊಂಡು

ದೂರ ಎಲ್ಲಿಗಾದರೂ ಹೋಗುವುದಾದರೆ ತಾನು ಖರ್ಚುವೆಚ್ಚ ಕೂಡಿ ಎಲ್ಲ ಸಹಾಯವನ್ನು ಮಾಡುವುದಾಗಿ ತಿಳಿಸಿದಳು.

"ನನಗೆ ಇದು ಯಾವುದೂ ಒಪ್ಪಿಗೆಯಾಗಲಿಲ್ಲ. ನಾಯನ. ನನ್ನ ಹೆಂಡತಿ ವಿಷಯಕ್ಕೆ ನಾನು ಹೇಗೆ ನಡೆದುಕೊಳ್ಳಬೇಕು ಎನ್ನುವುದು ಒಂದೇ ನನಗೆ ಯೋಚನೆ. ಜನ ನನ್ನನ್ನು ಏನು ಹೇಳುತ್ತಾರೆ, ಜನ ಅವಳ ತೌರನ್ನು ಏನು ಹೇಳುತ್ತಾರೆ, ಸಾಹುಕಾರನಿಗೆ ಏನಾಗುತ್ತದೆ, ಇದೆಲ್ಲ ಅವಾಂತರದ ಮಾತು. ನಾನು ಕೈಹಿಡಿದ ಹುಡುಗಿ ಮನಚೆದರಿ ಬೇರೆಕಡೆ ಹೋದಳು. ನಾನೇನು ಮಾಡಬೇಕು? ಬೈಯಲಾ? ಹೊಡೆಯಲಾ? ಬಲವಂತ ಮಾಡಲಾ? ಬಿಟ್ಟುಬಿಟ್ಟೆ ಎನ್ನಲಾ? ಏನು ಮಾಡಲಿ? ನನ್ನ ಸ್ವಭಾವಕ್ಕೆ ನಾನು ಏನು ಮಾಡುತ್ತಿದ್ದೆನೊ ಅದೇ ಸಾಧ್ಯ. ಕೈಹಿಡಿದ ಹೆಣ್ಣು ಕೈಬಿಟ್ಟಳು. ನನಗೆ ಬೇಸರವಾಯ್ತು. ಕೋಪ ಬರಲಿಲ್ಲ. ಇನ್ನೊಬ್ಬ ಹೆಂಗಸು ಬೇಕೆನ್ನಿಸಲಿಲ್ಲ. ಇಲ್ಲದಿದ್ದರೆ ಇನ್ನೊಂದು ದಿನ, ಈ ಜನ್ಮಕ್ಕಲ್ಲದೆ ಇದ್ದರೆ ಇನ್ನೊಂದು ಜನ್ಮಕ್ಕಾದರೂ ನಾನು ಇವಳಿಗೆ ದಿಕ್ಕಾಗಿರಬೇಕು ಎಂದೇ ನನ್ನ ತಿಳಿವಳಿಕೆ. ಆದ್ದರಿಂದ ನಾನು ಯಾವ ಮಾತಿಗೂ ಕಿವಿಗೊಡಲಿಲ್ಲ. ಮೂರನೆಯ ದಿನ ಎದ್ದು ಇತ್ತ ಹೊರಟುಬಂದುಬಿಟ್ಟೆ ಇಲ್ಲಿ ಹೊಟ್ಟೆ ಹೊರೆಯುತ್ತಿದ್ದೆನೆ. ನಾಲ್ಕು ಕಾಸು ಉಳಿಯುತ್ತದೆ; ಅದನ್ನು ತಾಯಿಗೆ ಕಳುಹಿಸುತ್ತಾ ಇದ್ದೇನೆ. ಇಲ್ಲಿ ಪಾಳೆಯದಲ್ಲಿ ನಮ್ಮ ಕಡೆಯಿಂದ ಬಂದಿರುವ ಜನ ಇದಾರೆ. ಅವರಲ್ಲಿ ಒಬ್ಬರಿಗೆ ನಾಲ್ಕು ಕಾಸು ಕೊಟ್ಟು ಹಾಕಿದ್ದನ್ನು ತಿಂದುಕೊಂಡು ಕಾಲ ನೂಕುತ್ತಿದ್ದೇನೆ."

೪

ಬಾವಿಯೆಂದು ಇಣಿಕಿದರೆ ಪಾತಾಳ ಕಂಡಂತೆ ಲೋಕಾಭಿರಾಮವಾಗಿ ಕಷ್ಟಸುಖ ವಿಚಾರಿಸಿದರೆ ಒಂದು ವಿಷಾದಾಂತ ನಾಟಕ ಕಂಡಂತಾಯಿತು. ದಾರಿಯಲ್ಲಿ ಹೋಗುವ ಒಬ್ಬ ಸೌದೆ ಹೊರೆಕಾರನ ಜೀವನ ಇಷ್ಟು ದುರಂತವಾಗಿರಬಹುದೆಂದು ಯಾರಿಗೆ ತೋರಬೇಕು? ಅಥವಾ ದುರಂತವಾಗಿತ್ತು; ಹೊಟ್ಟೆಗೆ ಸಾಲದೆಯೊ, ಬಟ್ಟೆಗೆ ಇಲ್ಲದೆಯೊ, ಬಡತನದ ಬವಣೆಯಿಂದ ದುರಂತವಾಗಿರಬಹುದು. ಅದುಬಿಟ್ಟು ಈ ನಾಟಕೀಯ ದುರಂತ ಈ ಬಾಳನ್ನು ಕೆಡಿಸಿರಬೇಕೆ? ಹೀಗೆ ಕೆಟ್ಟ ಬಾಳನ್ನು ಸಹಿಸುತ್ತ ಈ ಸಾಮಾನ್ಯ ಮನುಷ್ಯ ಸೌದೆಯನ್ನು ಹೊರುವಷ್ಟೇ ಕೆಚ್ಚಿನಿಂದ ಈ ಚಿಂತೆಯನ್ನು ಸಹಿಸಬಲ್ಲ ಧೀರನಾಯಕನಾಗಿರಬೇಕೆ? ಧೀರನು ಮಾತ್ರವೊ, ಉದಾತ್ತನೂ ಹೌದೊ? ನನಗೆ ನಿಜವಾಗಿ ವಿಸ್ಮಯವಾಯಿತು. ಆದರೆ ಇಂಥ ದುಃಖಕ್ಕೆ ನಾನು ಸಮಾಧಾನವಾಗಿ ಏನನ್ನು ಹೇಳಬಹುದು? ಅಥವಾ ಇವನು ಆಡಿದ ಮಾತನ್ನು ಕೇಳಿದರೆ ಇವನಿಗೆ ನಾನು ಸಮಾಧಾನ ಹೇಳಬೇಕಾದ ಅವಶ್ಯಕತೆಯೂ ಕಾಣಲಿಲ್ಲ. ಯಾವ ಮಾತೂ

ಆಡದಿದ್ದರೆ ಚೆನ್ನವಲ್ಲ ಎಂದು ನಾನು, 'ಪಾಪ, ನಿನಗೆ ಚಿಕ್ಕ ವಯಸ್ಸಿನಲ್ಲಿ ಇಂಥ ಕಷ್ಟ ಬಂದಿತಲ್ಲೋಪ್ಪ' ಎಂದೆ. 'ಬೆಟ್ಟದ ದೇವರ ಇಷ್ಟ ಸ್ವಾಮಿ. ಅವನು ಬಡಿಸಿದ್ದನ್ನು ಉಣಬೇಕು,' ಎಂದು ಅವನು ಉತ್ತರಕೊಟ್ಟನು. ಇಷ್ಟುಹೊತ್ತಿಗೆ ದಾರಿಯಲ್ಲಿ ಯಾರೊ ಇಬ್ಬರು ನಡೆದುಕೊಂಡು ಬಂದರು. ವೆಂಕಟಿಗ ಅವರನ್ನು ಕರೆದು, 'ಅಪ್ಪಾ ಈ ಹೊರೆಯನ್ನು ಸ್ವಲ್ಪ ತಲೆಗೆ ಏರಿಸಿ,' ಎಂದನು. ಅವರ ಸಹಾಯದಿಂದ ಹೊರೆಯನ್ನು ಮತ್ತೆ ತಲೆಯಮೇಲೆ ತೆಗೆದುಕೊಂಡನು. 'ಕಾಲಿಗೆ ಬಿದ್ದೆ ದೇವರೆ, ನಾ ಬರುತ್ತೇನೆ,' ಎಂದು ಹೊರಟನು. ನಾನೂ ಎದ್ದು ಮನೆಯ ಕಡೆಗೆ ಮುಂದುವರಿದೆನು. ಕ್ಷಣಬಿಟ್ಟು ಈ ವಿವರವನ್ನು ತಿಳಿದುಕೊಳ್ಳಬೇಕೆಂದು ತೋರಿ, 'ವೆಂಕಟಪ್ಪಾ, ನೀ ಊರು ಬಿಟ್ಟು ಎಷ್ಟು ದಿವಸವಾಯಿತು?' ಎಂದು ಕೇಳಿದೆನು. ಅವನು, 'ಆರು ತಿಂಗಳಾಯಿತು ಸ್ವಾಮಿ,' ಎಂದನು.

ಅದಾದಮೇಲೆ ಈ ದಾರಿಯಲ್ಲಿ ನಡೆಯುತ್ತ ನಾನು ಹದಿನೈದು ದಿನಕ್ಕೆ ತಿಂಗಳಿಗೆ ಒಂದು ಸಲ ಇವನನ್ನು ಕಾಣುತ್ತಿದ್ದೆನು. ನಾನು ಎತ್ತಲೋ ದೃಷ್ಟಿಯಿಂದ ಅವನ ಕಡೆ ನೋಡದೆ ಇದ್ದರೂ ವೆಂಕಟಿಗ ತಾನೇ ಹತ್ತಿರ ಬಂದು, 'ಕಾಲಿಗೆಬಿದ್ದೆ ನಾಯನ, ಚೆನ್ನಾಗಿದ್ದೀರಾ,' ಎಂದು ಕೇಳುವನು. ಒಂದೆರಡು ಸಲ ಅವನೇ ಏನೋ ಜ್ಞಾನವಾಗಿದ್ದು ನಾನು ಮಾತನಾಡಿಸಿದ್ದೂ ಉಂಟು. 'ಏನು ವೆಂಕಟಪ್ಪ, ಸೌದೆ ತರಲಿಕ್ಕೆ ಹೊರಟೆಯೊ, ವ್ಯಾಪಾರ ಚೆನ್ನಾಗಿದೆಯೊ, ಹದಿನೈದು ದಿವಸದಿಂದ ಇತ್ತ ಬರಲಿಲ್ಲವೊ,' ಎಂದು ಮುಂತಾಗಿ ನಾನು ಕೇಳುವುದು, ಅವನು ವಿನಯದಿಂದ ತಕ್ಕ ಉತ್ತರ ಕೊಡುವುದು, ಹೀಗೆ ನಮ್ಮ ಪರಿಚಯ ನಿಲ್ಲದೆ ನಡೆಯಿತು.

ಇಂಥ ಅವಿಸಹ್ಯವಾದ ನೋವಿನಿಂದ ಬದುಕು ಮುಗಿದಿದ್ದರೂ ವೆಂಕಟಿಗ ಹರ್ಷವಾಗಿಯೇ ಇರುವುದನ್ನು ನೋಡಿ ನನಗೆ ಒಂದು ದಿನ ಅವನ ಚೇತನ ಆ ಹಳ್ಳಿಯ ಪಾಳಿನಂತೆ ಅಜೇಯ ಎಂದು ಎನ್ನಿಸಿತು. ಅಥವಾ ಎಲೆಯೆಲ್ಲ ಉದುರಿಹೋದರೂ ಕೊಂಬೆಕೊಂಬೆಯ ಕೊನೆಗೆ ಹೂವನ್ನು ಧರಿಸಿ ನಿಲ್ಲುವ ದೇವಕಣಿಗಿಲೆಯಂತೆ ಆತ್ಮವಂತ ಸತ್ವ ಎಂದು ಕಂಡಿತು.

ೞ

ಸಾಮಾನ್ಯವಾಗಿ ಕಥೆ ಇಲ್ಲಿಗೆ ಮುಗಿಯಬೇಕು. ಆದರೆ ಇಷ್ಟೇ ಆಗಿದ್ದರೆ ನಾನು ಇದನ್ನು ಹೇಳಲು ತೊಡಗುತ್ತಿದ್ದೆನೊ ಇಲ್ಲವೊ. ವೆಂಕಟಿಗನ ಚರಿತ್ರೆ ಈ ವರ್ಷ ಮುಂದುವರಿಯಿತು. ಆ ಮುಂದುವರಿದ ಭಾಗವನ್ನು ಹೇಳುವುದು ನನಗೆ ಸಂತೋಷ.

ಈಗ ಒಂದು ತಿಂಗಳ ಹಿಂದೆ ಒಂದು ದಿನ, ನಾನು ಅವನನ್ನು ನಮ್ಮ ವಾಡಿಕೆಯ ದಾರಿಯಲ್ಲಿ ಕಂಡೆನು. 'ಏನು ವೆಂಕಟಪ್ಪ, ಒಳ್ಳೆ ಸೌದೆ ಸಿಕ್ಕಿತೊ,' ಎಂದು ಕೇಳಿದೆನು.

ಅವನು, 'ಸಿಕ್ಕಿತು ನಾಯನ, ನಿಮ್ಮ ಆಶಿಸ್ಸಿನಿಂದ ಅದಕ್ಕೂ ಹೆಚ್ಚಿನ್ನ ಒಳ್ಳೆಯದು ಆಗಿದೆ,' ಎಂದನು.

ಏನು ಆಗಿರಬಹುದು ಎಂದು ನನಗೆ ತೋರಲಿಲ್ಲ ಯಾರಾದರೂ ದಿನವೂ ಕಟ್ಟಿಗೆ ತಾ, ತಿಂಗಳಿಗೆ ಮೂವತ್ತು ರೂಪಾಯಿ ಕೊಡುತ್ತೇವೆ, ಎಂದು ಹೇಳಿದ್ದರೊ? ಇವನ ಹೆಚ್ಚಿನ ಶುಭ ಯಾವುದು? ಆ ಹೆಂಡತಿ ಹಿಂದಕ್ಕೆ ಬಂದಿರಬಹುದೊ? ಇರಲಾರದು; ಇಷ್ಟೆಲ್ಲ ಯೋಚನೆ ಮನಸ್ಸಿನಲ್ಲಿ ಹರಿಯುತ್ತಿರಲಾಗಿ ನಾನು, 'ಏನು ಸಂಗತಿ,' ಎಂದು ಕೇಳಿದೆನು.

"ನಿಮ್ಮನ್ನ ಹದಿನೈದು ದಿವಸದ ಹಿಂದೆ ನೋಡಿದೆನಲ್ಲ ನಾಯನ, ಅದರ ಮಾರನೆಯ ದಿವಸ ನಮ್ಮ ಊರಿಂದ ಕಾಗದ ಬಂತು. ಅದನ ನಮ್ಮ ತಾಯಿ ಬರೆಯಿಸಿದ್ದಳು. ಆ ಸಾಹುಕಾರನಾದವನು ಇನ್ಯಾವಳೊ ಒಬ್ಬ ಹೆಂಗಸನ್ನು ಹೊತ್ತುಕೊಂಡು ಬಂದನಂತೆ. ಅವನ ಮನೆಯಲ್ಲಿ ದೊಡ್ಡ ರಾದ್ಧಾಂತವಾಯಿತು. ಅವನ ಹೆಂಡತಿಯರು ಅವನ ಮನೆಬಿಟ್ಟು ಹೊರಟುಹೋಗುತ್ತೇವೆ ಎಂತ ಹೇಳಿದರಂತೆ. ಈ ಹುಡುಗಿಗೂ ಬಹಳ ಬೇಸರವಾಯ್ತು. ಇವಳು, 'ನಾನು ನಿನ್ನ ಹತ್ತಿರ ಇರೋದಿಲ್ಲ,' ಎಂತ ಹೇಳಿದಳಂತೆ. ಅವನು, 'ನೀನೇನು ತಾಲಿ ಕಟ್ಟಿಸಿಕೊಂಡ ಹೆಂಗಸು ಎಂತ ತಿಳುಕೊಂಡೆಯೊ? ಬಿಸಿ ಹಿಟ್ಟು ಸಿಕ್ಕುತ್ತೆ ಅಂತ ಬಾಯಿ ತೆರೆದು ಬಂದ ನಾಯಿ, ನಿನಗೆಷ್ಟೆ ಅಹಂಕಾರ?' ಎಂದನಂತೆ. ಹುಡುಗಿ, 'ದೇವರಂಥ ಗಂಡನ್ನ ಬಿಟ್ಟು ನಿನ್ನ ಹತ್ತಿರ ಬಂದೆ. ನನ್ನ ಬುದ್ದಿಗೆ ಕತ್ತಲು ಮುಚ್ಚಿತ್ತು. ಆ ಹೊತ್ತು ಒಳ್ಳೆಯ ಮಾತಾಡಿ ನೀನು ನನ್ನನ್ನು ಕೆಡಿಸಿದೆ, ಮಿಂಡನಾದೆ. ಈ ಹೊತ್ತು ಕೆಟ್ಟ ಮಾತನ್ನಾಡಿ ನನ್ನ ಉದ್ಧಾರ ಮಾಡಿದೆ. ನೀನು ನನ್ನ ತಂದೆ' ಎಂದು ಹೇಳಿ ಅವನು ಕೊಟ್ಟಿದ್ದ ಒಡವೆ ವಸ್ತ್ರ ಎಲ್ಲವನ್ನೂ ಅಲ್ಲಿ ಬಿಟ್ಟು ಅವನ ಹೆಂಡತಿಯರ ಕಾಲಿಗೆ ಬಿದ್ದು, 'ನಾನು ನಿಮ್ಮ ಹಾಸಿಗೆ ಕೆಡಿಸಿದೆ, ನನ್ನ ಪಾಪವನ್ನ ಮನ್ನಿಸಿ,' ಎಂದು ಬೇಡಿ ಹೊರಟು ಬಂದಳಂತೆ. ನಮ್ಮ ಮನೆಯ ಹತ್ತಿರ ಬಂದು ನಮ್ಮ ತಾಯಿಗೆ, 'ನೀನು ಹೇಳಿದ ಕೆಲಸ ಮಾಡಿಕೊಂಡು ನೀನು ಹಾಕಿದ್ದನ್ನು ತಿಂದುಕೊಂಡು ಇರುತ್ತೇನೆ,' ಎಂದಳು. ತಾಯಿ ಏನು ಮಾಡುವುದು ಎಂದು ಯೋಚಿಸುತ್ತಿದ್ದಳು. ಅವರಮ್ಮ ಬಂದು, 'ಬೇಕಾದಾಗ ಹೋದೆ, ಬೇಡವಾದಾಗ ಬರ್ತಾ ಇದೀಯ, ನಿನಗೆ ಅನ್ನ ಹಾಕಬಹುದೊ ಕೂಡದೊ ಹೇಳುವ ಯಜಮಾನ ಇಲ್ಲಿಲ್ಲ. ಅವನಿರೋ ಕಡೆಗೆ ಹೋಗು, ಅವನು ಒಪ್ಪಿಕೊಂಡರೆ ಬಾಳು, ಇಲ್ಲದಿದ್ದರೆ ಹಾಳಾಗು,' ಎಂದು ನಿಷ್ಠೂರ ಮಾಡಿದಳಂತೆ. 'ನಾಳೆ ಬೆಂಗಳೂರಿಗೆ ಹೊರಟು ಬರುತ್ತಾಳೆ,' ಎಂದು ಕಾಗದದಲ್ಲಿ ಬರೆದಿತ್ತು. ನನಗೆ ಸಂತೋಷವಾಯ್ತೋ ದುಃಖವಾಯ್ತೋ ನಾನೇ ಕಾಣೆ. ಮಾರನೆಯ ದಿನ ಸೌದೆಗೆ ಎಂತ ಹೊರಕ್ಕೆ ಬರದೆ ಪಾಳೆಯದಲ್ಲೇ ಇದ್ದೆ. ಅವಳ ದಿಟ್ಟ ನೋಡಿ, ನಾಯನ, ಮಗುವನ್ನು ಎತ್ತಿಕೊಂಡು ಒಬ್ಬಳೇ ಅಲ್ಲಿಂದ

ಬಂದುಬಿಟ್ಟಿದ್ದಾಳೆ. ನಾನು ನಮ್ಮವರ ಮನೆ ಮುಂದುಗಡೆ ಕೂತಿದ್ದೆ. ನಾನಿರುವ ಕಡೆಗೆ ಸರಿಯಾಗಿ ಅವಳು ಬರಬೇಕು? ಈ ಪಾಳೆಯ ಎಲ್ಲಿ ಎಂದು ಜನರನ್ನು ಕೇಳಿಕೊಂಡು ಉದ್ದಕ್ಕೆ ನಾನು ಕುಳಿತಿದ್ದ ಜಗಲಿಯವರೆಗೆ ಬಂದಿದ್ದಾಳೆ. ನಾನು ಹಾಗೆ ಎದುರಿಗೆ ಸಿಕ್ಕುತ್ತೇನೆ ಎಂದು ಅವಳು ನಿರೀಕ್ಷಿಸಿರಲಿಲ್ಲ. ನನ್ನನ್ನು ಕಂಡಳು. ಕ್ಷಣ ಮುಖಕೆಟ್ಟಳು. ಮರುಕ್ಷಣ ಬಂದು ಮಗುವನ್ನು ನನ್ನ ಕಾಲ ಮೇಲೆ ಹಾಕಿ ತಾನೂ ಹಣೆಯನ್ನು ನೆಲಕ್ಕೆ ಇಟ್ಟು, 'ನನ್ನ ದೇವರು ತಿರುಗಿ ಸಿಕ್ಕಿದೆ, ಬದುಕಿಸಿದರೆ ಬದುಕಿಸು, ಸಾಯಿಸಿದರೆ ಸಾಯಿಸು,' ಎಂದು ಅತ್ತುಕೊಂಡಳು. ನಾನು ಮಗುವನ್ನು ಎತ್ತಿಕೊಂಡೆ. 'ಹಸುಗೂಸನ್ನು ಹೀಗೆ ಎಸೆಯುವುದೆ? ಏಳು,' ಎಂದೆ. ಅವಳನ್ನು ಎತ್ತಿ ನಿಲ್ಲಿಸಿ ನಾನಿರುವ ಮನೆಯ ಹೆಂಗಸನ್ನು ಕರೆದು, 'ನನ್ನ ಹೆಂಡತಿ ಬಂದಿದ್ದಾಳೆ. ಒಂದು ಮನೆ ಮಾಡುವವರೆಗೆ ಇಲ್ಲಿ ಸ್ವಲ್ಪ ಸ್ಥಳ ಕೊಡವ್ವ,' ಎಂದು ಕೇಳಿದೆ. ಆ ಹೊತ್ತು ಮಾರನೆಯ ದಿನ ಅಲ್ಲಿದ್ದು ಮೂರನೆಯ ದಿನ ಒಂದು ಗುಡಿಸಲಿನಲ್ಲಿ ಅರ್ಧವನ್ನು ಬಾಡಿಗೆಗೆ ಮಾಡಿಕೊಂಡೆವು. ಯಾವ ಹೊತ್ತಿನಲ್ಲಿ ನಾನು ಹೊತ್ತಿದ್ದ ಕಟ್ಟಿಗೆಯನ್ನ ನಿಮ್ಮ ಹಿರಿಯ ಕೈ ಮುಟ್ಟಿತೊ, ಒಣಗಿದ ಮರ ಚಿಗಿತಂತೆ ನನ್ನ ಬದುಕು ಚೆನ್ನವಾಯಿತು."

ನಾನು, "ತುಂಬ ಸಂತೋಷ. ಅಂತು ನಿನಗೆ ನಿನ್ನ ಹೆಂಡತಿಯ ವಿಷಯದಲ್ಲಿ ಕೋಪ ಇಲ್ಲವಲ್ಲ. ಮನಸ್ಸಿನಲ್ಲಿ ಕಲ್ಮಷ ಇಟ್ಟುಕೊಳ್ಳುವುದು ಬುದ್ಧಿ ಅಲ್ಲ," ಎಂದೆನು.

ಅವನು, "ಇಲ್ಲ ನಾಯನ, ಇಲ್ಲ. ತಿಳಿಯದ ಹುಡುಗಿ. ಈಗಲು ಅಷ್ಟೇ, ಅವಳೇನು ತಿಳಿದ ಹೆಂಗಸಲ್ಲ. ಪಾಪ," ಎಂದನು.

ನನಗೆ ಇವನ ದೊಡ್ಡತನವನ್ನು ಕಂಡು ಆಶ್ಚರ್ಯವಾಯಿತು. ನಾನು, "ಮಗುವನ್ನು ಚೆನ್ನಾಗಿ ನೋಡಿಕೊಳ್ಳಬೇಕು," ಎಂದೆನು.

"ನೋಡಿಕೊಳ್ಳುತ್ತೇನೆ ಸ್ವಾಮಿ. ತನ್ನನ್ನೇನೊ ಒಪ್ಪಿಕೊಳ್ಳುತ್ತಾನೆ. ಮಗುವಿಗೆ ಏನು ಎನ್ನುತ್ತಾನೋ ಎಂದು ಅವಳಿಗೆ ಭಯ ಇದ್ದಿರಬೇಕು. ಬಂದ ದಿನ ಸ್ವಲ್ಪ ಹೊತ್ತಿನಮೇಲೆ ಮಗುವನ್ನು ನನ್ನ ಹತ್ತಿರ ತಂದು 'ಇದರ ಮೂಗು ಹುಬ್ಬು ನೋಡು ನಿನ್ನ ಹಾಗೆಯೇ ಇದೆ,' ಎಂದಳು. ಇದು ಹೌದೊ ಅಲ್ಲವೊ ನಾನೇಕೆ ನೋಡಲಿ? ನಾನು, 'ಹೌದು,' ಎಂದೆ. ಅವಳಿಗೆ ಸಮಾಧಾನವಾಯಿತು. ಮಗು ಯಾರದೇನು? ಬಾಲಗೋಪಾಲ. ಸಾಕಿದವರು ಪುಣ್ಯವಂತರು."

"ಈಗ ಮಗುವಿಗೆ ವರ್ಷಅರೆ ಆಗಿದೆಯೊ?" ಎಂದು ನಾನು ಕೇಳಿದೆನು. ವೆಂಕಟಿಗ, "ತಿಂಗಳು ಹೆಚ್ಚು ಕಡಮೆ. ಕೇಳಿ ಆಗುವುದೇನು? ಕೇಳಿದರೆ ವಿಚಾರಣೆ ಮಾಡಿದ ಅಂತ ನೊಂದುಕೊಳ್ಳುತ್ತಾಳೆ. ಅವಳು ಸಂತೋಷವಾಗಿರಲಿ ಸ್ವಾಮಿ, ನನ್ನ ಮಾತೇನು?" ಎಂದನು.

ವೆಂಕಟಿಗನ ಒಂದೊಂದು ಮಾತೂ ಜೀವ ಎಷ್ಟು ಹಿರಿಯದೆಂದು ತೋರುತ್ತಿತ್ತು. ನಾನು ಅವನನ್ನು "ಬರುವ ಕಾಸು ಸಾಕಾಗುತ್ತದೋ," ಎಂದು ಕೇಳಿದೆನು.

"ಬೇಕಾದಷ್ಟು ಆಯ್ತು ನಾಯನ. ಆದರೂ ನನ್ನ ಹೆಂಡತಿ ತಾನೂ ಮೂರುಕಾಸು ಗಳಿಸ್ತೇನೆ, ಅಂತ ದಿನ ಬಿಟ್ಟು ದಿನ ನನ್ನ ಜೊತೆಗೆ ಸೌದೆಗೆ ಬರ್ತಾಳೆ. ಬೇಡ ಎಂದರೆ ಕೇಳ್ತಾ ಇಲ್ಲ. ತಲೆಮೇಲೆ ಹೊರೆ; ಕಂಕುಳಲ್ಲಿ ಮಗು; ನಡೀಲಾರದೆ ನಡೀತಾಳೆ. ಊಟಕ್ಕೆ ಚಿಂತೆಯಿಲ್ಲ."

೬

ರಥಸಪ್ತಮಿ ದಿನ ನಾನು ವೆಂಕಟಿಗನನ್ನು ಮೊದಲ ಸಲ ನೋಡಿದ ತಿಟ್ಟಿನ ಅತ್ತಟ್ಟು ಕಂಡೆನು, "ಎಲ್ಲಾ ಚೆನ್ನಾಗಿದ್ದೀರಾ," ಎಂದು ಕೇಳಿದೆನು. ಅವನು, "ದೊಡ್ಡವರ ಆಶಿಸ್ಸು," ಎಂದು ಹೇಳಿ, "ಊರಿನಿಂದ ಮೊನ್ನೆ ಒಂದು ಕಾಗದ ಬಂತು ನಾಯನ. ಆ ಸಾಹುಕಾರನನ್ನು ಯಾರೋ ಕಡಿದುಹಾಕಿದರಂತೆ. ಪಾಪ, ಅನ್ಯಾಯವಾಗಿ ಕೆಟ್ಟುಹೋದ," ಎಂದನು.

ನಾನು, "ಇದನ್ನು ಮನೆಯಲ್ಲಿ ಹೇಳಿದೆಯಾ?" ಎಂದು ಕೇಳಿದೆನು. ಅವನು ಹೇಳಿದನು; "ಕಾಗದ ಬಂದದ್ದನ್ನು ಅವಳು ಬಲ್ಲಳು. ಅದನ್ನು ಓದಿಸುವುದಕ್ಕೆ ಎಂದು ತೆಗೆದುಕೊಂಡು ಹೋದೆ. ನನ್ನ ಮುಖದಿಂದ ಅವಳಿಗೆ ಮತ್ತೇನೋ ತೋರಿರಬೇಕು. ಅವಳು ನನ್ನನ್ನು ದೃಷ್ಟಿಸಿ ನೋಡಿದಳು. 'ಇನ್ನೇನು ಸಂಗತಿ ಹೇಳು,' ಎಂದಳು. ನಾನು 'ಏನು ಸಂಗತಿ ಎನ್ನುತ್ತೀಯೆ?' ಎಂದೆನು. ಅವಳು, 'ಮತ್ತೆ ಯಾಕೆ ಹಾಗೆ ನನ್ನನ್ನು ನೋಡ್ತಿ? ಅವನಿಗೆ ಏನಾದರೂ ಆಯಿತು ಎಂತಲೆ! ಅವನಿಗೇನಾದರೆ ನನಗೇನು? ತಪ್ಪು ಗಂಟು ಬಿದ್ದಿತ್ತು. ಬಿಡಿಸಿಕೊಂಡಿತು. ಒಳ್ಳೆಯವನಾಗಿ ಬಾಳಿದರೆ ಸಂತೋಷ. ಕೆಟ್ಟರೆ ಮತ್ತಷ್ಟು ಕೆಡುತ್ತಾನೆ,' ಎಂದಳು. ನಾನು, 'ಸರಿ, ಇನ್ನೇನು ಕೆಡ್ತಾನೆ ಅವನು,' ಎಂದೆ. ಅವಳು ತಿಳಿದುಕೊಂಡಳು. 'ಎಲ್ಲರೂ ನಿನ್ನಂತೆ ಒಳ್ಳೆಯವರೇ ಇರ್ತಾರೆಯೇ? ಬೀದಿಗೆ ಬಂದ ಹಾವನ್ನ ಯಾರೋ ಕೊಲ್ಲುವುದೇ ನಿಜ. ಅವನಾಟವೂ ಮುಗಿಯಿತು,' ಎಂದಳು. ನಾನು ಏನು ಹೇಳಲಿಲ್ಲ. ಅವಳ ಕಣ್ಣಿನಲ್ಲಿ ಹನಿಗೂಡಿತ್ತು.

"ಹೆಣ್ಣು ಜೀವ, ಹಗೆ ಸತ್ತರೂ ಅಳಬೇಕು."

ಈ ಮಾತನಾಡುತ್ತ ನಾವು ತಿಟ್ಟಿನ ನೆತ್ತಿಯನ್ನು ಮುಟ್ಟಿದೆವು. ಎದುರಿಗೆ ಹಳೆಯೂರಿನವರೆಗೆ ಇಳಿನೆಲ. ಆ ಕಡೆ ನಾವು ನೋಡುವ ಹೊತ್ತಿಗೆ ವೆಂಕಟಿಗ, 'ಅವಳೂ ಈ ಹೊತ್ತು ನನ್ನ ಜೊತೆಗೆ ಬಂದಳು. ನಾಯನ. ಮಗು ಸ್ವಲ್ಪ ಕಾಡಿತು. ಅದನ್ನ ಸಮಾಧಾನಮಾಡುತ್ತ ಕುಳಿತುಕೊಂಡರೆ ಹೊತ್ತು ಕಳೆಯುತ್ತೆ. ಅಲ್ಲದೆ ಇವಳು

ಒಂದು ದಿನ ಹೊರೆ ಹೊರದೇ ಇದ್ದರೆ ಏನು, ಅಂತ ನಾನು ಅವಳನ್ನ ಈ ಭಾವಿಯ ಹತ್ತಿರ ಬೇವಿನ ಮರದಡಿ ಕುಳ್ಳಿರಿಸಿ ಬಂದೆ. ಅರ್ಕೋ ನೋಡಿ ನಾಯನ, ಅಲ್ಲಿ ಆ ಹೆಂಗಸೂ ಮಗೂ ಕಾಣ್ತಾರಲ್ಲ, ಅದೇ ನನ್ನ ಹೆಂಡತಿ ಮಗು," ಎಂದನು.

ನಾನು ಆ ಕಡೆ ನೋಡಿದೆನು. ಆ ತಾಯಿ ಆ ಮಗು ಆ ಅಳಿದ ಊರಿಗೆ ಒಂದು ಹೊಸಜೀವ ಬಂದಂತೆ ಕಾಣಿಸಿಕೊಂಡರು. ತಾಯಿ ಮಗುವಿಗೆ ನಾಲ್ಕು ದೇವಕಣಗಿಲೆ ಹೂವನ್ನು ಕೊಟ್ಟು ಆಡಿಸುತ್ತಿದ್ದಳು. ಎರಡು ಹೆಜ್ಜೆ ಮುಂದಿಡುವುದರಲ್ಲಿ ವೆಂಕಟಿಗ ನನಗೆ, "ಸ್ವಾಮಿ, ಒಂದು ಮಾತು," ಎಂದನು. ನಾನು, "ಏನು ವೆಂಕಟಪ್ಪ?" "ನಮ್ಮ ಸ್ವಾಮಿಯವರು ಎಂತ ಹೇಳ್ತೇನೆ. ತಾಯೀನ ಮಗೂನ ಹರಸಿ. ಆದರೆ ಊರಿನ ಆ ಸಂಗತಿ ನಿಮಗೆ ತಿಳಿದಿದೆ ಎನ್ನುವುದನ್ನು ತೋರಿಸಿಕೊಡಬೇಡಿ. ಅವಳು ಮನಸ್ಸು ಚಿಕ್ಕದು ಮಾಡಿಕೊಳ್ಳುತ್ತಾಳೆ." ನಾನು, "ಒಳ್ಳೇಮಾತು, ನಾನ್ಯಾಕೆ ಆ ತಂಟೆಗೆ ಹೋಗಲಿ?" ಅವನು, "ಹೋಗೋದಿಲ್ಲ ನಾನು ಬಲ್ಲೆ. ಆದರೂ ಮರೆತೆಲ್ಲಾದರೂ ಅರ್ಧ ಮಾತು ಜಾರಿ ಬಂದೀತು ಎಂತ ಬೇಡಿಕೊಂಡೆ; ಮನ್ನಿಸಬೇಕು," ಎಂದನು.

ನಾವು ಹಳೆಯೂರ ಬಳಿಗೆ ಬಂದೆವು. ವೆಂಕಟಿಗನ ಹೆಂಡತಿ ಎದ್ದು ನಿಂತಳು. ಮಗುವನ್ನು ಕೈಯಿಂದ ಹಿಡಿದು ತನ್ನ ಕಾಲದೆಶೆಗೆ ನಿಲ್ಲಿಸಿಕೊಂಡಳು. ವೆಂಕಟಿಗ ಅವಳಿಗೆ, "ನಮ್ಮ ಅಯ್ಯನೋರು, ನನ್ನನ್ನು ನೋಡಿಕೊಳ್ಳುವವರು. ನಿನಗೆ ಹೇಳಿದ್ದೆನಲ್ಲಾ ಅವರು. ಕಾಲಿಗೆ ಬೀಳು," ಎಂದನು. ಅವಳು ಬಂದು ಮಂಡಿಯೂರಿ ನನಗೆ ನಮಸ್ಕಾರ ಮಾಡಿದಳು. ನಾನು ಹರಸಿದೆನು. ಆಮೇಲೆ ಅವಳು ಬಹು ಸಂಭ್ರಮದಿಂದ ಮಗುವನ್ನು ನನ್ನ ಕಾಲಹತ್ತಿರ ಹಾಕಿದಳು. ಹೊಸಬನೆಂದು ಅದು ಚೀರಿತು. ನಾನು, 'ಮಗುವನ್ನು ಅಳಿಸಬೇಡ ಎತ್ತಿಕೋಮ್ಮ' ಎಂದೆನು. ಅವಳು ಅದನ್ನು ಎತ್ತಿಕೊಂಡಳು. ನಾನು ಅದರ ತಲೆಯನ್ನು ಸವರಿ, 'ನೂರು ವರ್ಷಬದುಕಲಿ,' ಎಂದೆನು.

ಮೊದಲ ಕ್ಷಣ ಮಗು ವೆಂಕಟಿಗನಂತೆ ಇದೆಯೇ ಎಂದು ನೋಡೋಣವೇ ಎನ್ನಿಸಿತು. ಒಡನೆಯೇ, "ಕೈಹಿಡಿದ ಗಂಡ ಮಾಡದಿರುವ ಪರೀಕ್ಷೆಯನ್ನು ನಾನು ಮಾಡಲಿಯೇಕೆ," ಎಂದುಕೊಂಡು ಸುಮ್ಮನಾದೆನು. ಇಂಥ ಸಂದರ್ಭವನ್ನು ಕುರಿತೇ ಹಿರಿಯರು ಮಾತೃಮೂಲವನ್ನು ನೋಡಬೇಡ ಎಂದು ಶಾಸನ ಮಾಡಿರುವುದು.

ನನ್ನ ಹರಕೆಯಿಂದ ವೆಂಕಟಿಗನಿಗೆ ಅವನ ಹೆಂಡತಿಗೆ ತುಂಬ ಸಂತೋಷ ವಾಯಿತು. ಅಲ್ಲಿಂದ ನಾವು ಜೊತೆಯಾಗಿ ಹೊರಟೆವು. ತಾಯಿ ಮಗುವನ್ನು ಮುಂದೆ ಹೋಗಲು ಬಿಟ್ಟು ನಾನೂ ವೆಂಕಟಿಗನನ್ನು "ಹಾಗಾದರೆ ನೀನು ಬೆಂಗಳೂರಿನಲ್ಲಿಯೇ ನಿಲ್ಲುವುದಾಯಿತು," ಎಂದೆನು.

ಅವನು, "ಅದೇ ದೇವರ ಇಷ್ಟ ಅಂತ ಕಾಣ್ತದೆ. ಊರಿಗೆ ಹೋದರೆ ಹೊಟ್ಟೆ

ಹೊರೆಯುವ ನೆಪದಲ್ಲಿ ನನ್ನ ಅಪ್ಪನ ಬೆಟ್ಟವನ್ನ ಹತ್ತಿ ಇಳಿಯಬಹುದಾಗಿತ್ತು. ವಾರದಲ್ಲಿ ತಿಂಗಳಲ್ಲಿ ಅವನ ಮುಖದ ತಿಲಕವನ್ನು ನೋಡಬಹುದಾಗಿತ್ತು. ಇವಳಿಗೆ ಅತ್ತ ಹೋಗುವ ಮನಸ್ಸಿಲ್ಲ. ಜೊತೆಯ ಜೀವಕ್ಕೆ ಒಲ್ಲದ್ದನ್ನು ನಾನೇಕೆ ಬೇಕು ಎನ್ನಲಿ? ದೂರದಲ್ಲೇ ಇರ್ತೇನೆ, ದೇವರೇ ಎನ್ನುತ್ತೇನೆ, ನನ್ನಪ್ಪ ಕಾಪಾಡಿಕೊಳ್ಳುತ್ತಾನೆ," ಎಂದನು.

೭

ಶ್ರೀರಾಮ್ ಕಥನವನ್ನು ಮುಗಿಸಿದರು. ಈ ವೇಳೆಗೆ ಮರದ ಮೇಲೆ ಕುಳಿತಿದ್ದ ಹದ್ದು ಹಾರಿಹೋಯಿತು. ನಾನು ಆ ಗರುಡಪಕ್ಷಿ ಕಾಣುತ್ತದೇನೋ ಎಂದು ಗಗನದತ್ತ ನೋಡಿದೆನು. ಅವು ಕಾಣಲಿಲ್ಲ. ನಾವು ಮೂವರು ಎದ್ದು ಹಿಂದಿರುಗಿ ಬಂದೆವು.

●

# ೨. ಯಾರೂ ಅರಿಯದ ವೀರ

**–ಕುವೆಂಪು**

ಆಷಾಢಮಾಸ, ಸುಮಾರು ರಾತ್ರಿ ಎಂಟು ಗಂಟೆ ಸಮಯ. ಕಗ್ಗತ್ತಲು ಕಣ್ಣು ತಿವಿಯುವಂತಿತ್ತು. ಜಡಿಮಳೆ ಜರ‍್ರೆಂದು ಕರೆಕರೆ ಹುಟ್ಟಿಸುತ್ತಿತ್ತು. ಸುಬ್ಬಣ್ಣಗೌಡರು ಜಗಲಿಯಲ್ಲಿ ಒಂದು ಜಮಖಾನದ ಮೇಲೆ ಕುಳಿತು ಲ್ಯಾಂಪಿನ ಬೆಳಕಿನಲ್ಲಿ ಲೆಕ್ಕಪತ್ರ ನೋಡುತ್ತಿದ್ದರು.

ಲಿಂಗ ಹೊರಗಿನಿಂದ ಕೈಲೊಂದು ಲಾಟೀನು ಹಿಡಿದುಕೊಂಡು ಬಂದು “ಅಯ್ಯಾ ಹೊಳೆ ನೀರು ಏಳನೆ ಮೆಟ್ಟಲಿಗೇರಿದೆ” ಎಂದ.

ಸುಬ್ಬಣ್ಣಗೌಡರು ಗಾಬರಿಯಿಂದ ತಟಕ್ಕನೆ ಎದ್ದು “ಎಲ್ಲಿ ನೋಡೋಣ ಬಾ” ಎಂದು ಕಂಬಳಿಕೊಪ್ಪೆ ಹಾಕಿಕೊಂಡು ಹೊರಟರು.

ಇಬ್ಬರೂ ಹೊಳೆಗೆ ಹೋಗಿ ಐದಾರು ಮೆಟ್ಟಲು ಇಳಿದು ನಿಂತರು. ನೊರೆಯೆದ್ದ ಕೆಂಬಣ್ಣದ ತೆರೆಗಳು ಅವರ ಕಾಲಿಗೆ ಬಂದು ಬಡಿಯುತ್ತಿದ್ದುವು. ತುಂಗಾನದಿಯ ಪ್ರವಾಹ ಉಕ್ಕಿಯುಕ್ಕಿ ನೊರೆನೊರೆಯಾಗಿ ಭೋರೆಂದು ಹರಿಯುತ್ತಿತ್ತು. ಲಾಟೀನಿನ ಬೆಳಕಿನಲ್ಲಿ ಅಲೆಗಳು ಪಳಪಳ ಮಿಂಚುತ್ತಿದ್ದುವು. ಮಳೆ ನಿರಂತರವಾಗಿ ಸುರಿಯುತ್ತಲೇ ಇತ್ತು. ಅವರು ಅಲ್ಲಿ ನಿಂತಹಾಗೆಯೆ ಆರನೆಯ ಮೆಟ್ಟಿಲಿಗೆ ನೀರೇರಿ ಮುಚ್ಚಿತು.

ಐದನೆಯ ಮೆಟ್ಟಿಲಿಗೆ ಹತ್ತಿ ನಿಂತರು.

ಸುಬ್ಬಣ್ಣಗೌಡರು ಲಿಂಗನ ಕಡೆ ತಿರುಗಿ “ನಿನ್ನೆ ಎಲ್ಲಿಯವರೆಗೆ ಏರಿತ್ತೋ ನೀರು?” ಎಂದರು.

“ನಿನ್ನೆ ಇಷ್ಟು ನೀರು ಬಂದಿರಲಿಲ್ಲ. ಎಂಟನೆಯ ಮೆಟ್ಟಲಲ್ಲಿಯೇ ಇತ್ತು. ಆದರೂ ನಿನ್ನೆ ಕೆರೆಹಳ್ಳಿಯೆಲ್ಲಾ ಕೊಚ್ಚಿಕೊಂಡು ಹೋಯಿತಂತೆ. ಕೆಳಮನೆ ಸುಬ್ಬಣ್ಣಗೌಡರು ಮಗ ರಾಮು ಸಿಕ್ಕಲೆ ಇಲ್ಲವಂತೆ ಬಹಳ ಅನಾಹುತ ಆಯಿತಂತೆ” ಎಂದ ಲಿಂಗ.

ಗೌಡರ ಮುಖವು ಭಯದ ಚಿಹ್ನೆ ತೋರಿ ಗಂಭೀರವಾಯಿತು. “ಇಂದು ಮೇಲ್ಮಳೆ ಹೇಗಿದೆಯಂತೆ? ನಿನಗೇನಾದರೂ ಗೊತ್ತೆ?” ಎಂದು ಕೇಳಿ ಕಗ್ಗತ್ತಲಿನ ಕಡೆ ಕುರುಡಾಗಿ ನಿಟ್ಟಿಸುತ್ತಾ ನಿಂತರು.

“ಮೇಲ್ಮಳೆ ಬಹಳ ಜೋರಾಗಿದೆಯಂತೆ. ಶೃಂಗೇರಿ ಆ ಕಡೆಯಂತೂ ಒಂದು

ನಿಮಿಷ ಬಿಡದೆ ಹೊಡೆಯುತ್ತಿದೆಯಂತೆ" ಎಂದು ಹೇಳಿ, ಲಿಂಗನು ಲಾಟೀನಿನ ಬೆಳಕಿನಲ್ಲಿ ಕೆಳಗೆ ನೋಡಿ "ಅಯ್ಯಾ, ಇಲ್ಲಿ ನೋಡಿ! ನೀರು ಐದನೆ ಮೆಟ್ಟಿಲಿಗೇರುತ್ತಾ ಇದೆ" ಎಂದ. ಗೌಡರು ಕೆಳಗೆ ನೋಡಿ, ಎದೆ ನಡುಗಿ, ಮುಖ ಕಪ್ಪಾಗಿ, ಸ್ವಲ್ಪ ಪೆಚ್ಚಾದರು.

ಇಬ್ಬರೂ ಹಿಂತಿರುಗಿ ಮನೆಯೊಳಗೆ ಹೋದರು. ಗೌಡರು ಕಂಬಳಿ ತೆಗೆದುಹಾಕಿ, ಬಿಸಿನೀರಿನಲ್ಲಿ ಕಾಲು ತೊಳೆದುಕೊಂಡು, ಜಮಖಾನದ ಮೇಲೆ ಕುಳಿತು ಕೈಗಳನ್ನು ಹಿಂದಕ್ಕೆ ಹಾಕಿ, ಅವುಗಳ ಮೇಲೆ ಒರಗಿಕೊಂಡು ಆಲೋಚನಾಪರರಾದರು. ಲಿಂಗನು ಲಾಟೀನಿನ ದೀಪವನ್ನು ಸಣ್ಣಗೆ ಮಾಡಿ, ಕಂಬಳಿ ಕೊಡವಿ, ಗಳುವಿನ ಮೇಲಿ ಹರಡಿ, ಅಡಿಗೆ ಮನೆಯೊಳಗೆ ಹೋದನು.

ಸುಬ್ಬಣ್ಣಗೌಡರ ಹೆಂಡತಿ ನಾಗಮ್ಮ "ಅದೇನು ಲಿಂಗ ಲಾಟೀನನ್ನು ತೆಗೆದುಕೊಂಡು ಹೊರಗೆ ಹೋಗಿದ್ದರಲ್ಲಾ ಹೊಳೆ ಬಹಳ ಬಂದಿದೆಯೇನು?" ಎಂದರು. ಸುಬ್ಬಣ್ಣಗೌಡರ ಹನ್ನೆರಡು ವರ್ಷದ ಮಗ ತಿಮ್ಮು, ಎಂಟು ವರ್ಷದ ಮಗಳು ಸೀತೆ, ಇಬ್ಬರೂ ಊಟಕ್ಕೆ ಕುಳಿತಿದ್ದರು. ಹೊಳೆ ಏರುವ ಮಾತು ಕೇಳಿ, ಉಣ್ಣುವುದನ್ನು ಬಿಟ್ಟು, ತೆರೆದ ಬಾಯಿ ಮುಚ್ಚದೆ, ತೆರೆದ ರೆಪ್ಪೆ ಹಾಕದೆ, ನಾಗಮ್ಮ–ಲಿಂಗ ಇವರ ಸಂಭಾಷಣೆ ಕೇಳುತ್ತಾ ಕುಳಿತರು.

"ಹೌದಮ್ಮಾ, ಹೊಳೆ ಯದ್ವಾತದ್ವಾ ಏರುತ್ತಾ ಇದೆ. ಅದರಲ್ಲಿಯೂ ಮೇಲ್ಮಳೆ ಇಪರೀತವಂತೆ... ನಿನ್ನೆಯೇ ಕೆರೆಹಳ್ಳಿಯೆಲ್ಲಾ ತೇಲಿಹೋಯಿತಂತೆ. ಪಾಪ! ಆ ಕೆಳಮನೆ ಸುಬ್ಬಣ್ಣಗೌಡರ ರಾಮು ಇನ್ನೂ ಸಿಕ್ಕಿಲ್ಲವಂತೆ!"

ನಾಗಮ್ಮ ಊಟಕ್ಕೆ ಕುಳಿತ ಮಕ್ಕಳ ಕಡೆ ನೋಡಿದರು. ಏಕೆ ನೋಡಿದರೋ ಯಾರಿಗೆ ಗೊತ್ತು? ಅವರು ಉಣ್ಣದೆ ಕುಳಿತಿದ್ದುದನ್ನು ನೋಡಿ ನಾವೇ ಹೋಗಿ ಅವರ ಹತ್ತಿರ ಕುಳಿತುಕೊಂಡು ಉಣ್ಣಿಸತೊಡಗಿದರು.

ಸೀತೆ ತುತ್ತು ತಿನ್ನುತ್ತಾ "ಅಮ್ಮಾ, ರಾಮು ಏನಾದ?" ಎಂದಳು.

ನಾಗಮ್ಮ "ಏನೂ ಆಗಲಿಲ್ಲ, ನೀ ಉಣ್ಣು ಸುಮ್ಮನೆ" ಎಂದರು.

ತಿಮ್ಮು "ಏನಮ್ಮಾ ಅದು ಲಿಂಗ ಹೇಳಿದ್ದು?" ಎಂದ.

ನಾಗಮ್ಮ "ಏನಿಲ್ಲ ಮಗೂ, ಹೊಳೆಯಲ್ಲಿ ನೀರು ಏರುತ್ತಿದೆಯಂತೆ ಅಷ್ಟೇ... ನೀನು ಊಟ ಮಾಡು" ಎಂದರು. ಲಿಂಗನ ಕಡೆ ನೋಡಿ "ಅಷ್ಟೇ! ಅಲ್ಲವೇನೊ ಲಿಂಗ?" ಎಂದರು.

ಲಿಂಗ ತಲೆದೂಗಿ ಸಮ್ಮತಿಸಿ "ಅಷ್ಟೇ, ಇನ್ನೇನು! ನೀವು ಉಣ್ಣಿ ತಿಮ್ಮಯ್ಯ" ಎಂದ.

ಸುಬ್ಬಣ್ಣಗೌಡರು ಜಗಲಿಯಿಂದ "ಲಿಂಗಾ!" ಎಂದು ಕರೆದರು. ಲಿಂಗನಿಗೆ ಕಿವಿ

ಕೊಂಚ ಮಂದ; ಕೇಳಿಸಲಿಲ್ಲ. ಮತ್ತೆ ಕರೆದರು. ಆಗ ನಾಗಮ್ಮ "ಏ ಲಿಂಗ, ಹೊರಗೆ ಕರೆಯುತ್ತಾರೋ! ಹೋಗೋ!" ಎಂದರು. ಲಿಂಗನು ತಟಕ್ಕನೆ ಎದ್ದು ತನ್ನ ಚೊಟ್ಟು ಕಾಲು ಓರೆಯಾಗಿ ಹಾಕುತ್ತಾ ಹೋದ. ಪಾಪ! ಅವನ ಬಲಗಾಲು ಎಡಗಾಲಿಗಿಂತ ತುಸು ಮೋಟ ಮತ್ತು ಸಣ್ಣ.

ಲಿಂಗನು ಜಗಲಿಗೆ ಹೋಗಿ ಕೇಳಿದನು, "ಯಾಕಯ್ಯ ಕರೆದದ್ದು?"

ಗೌಡರು ಎಂದರು "ಹೋಗಿ ನೋಡಿಕೊಂಡು ಬಾ. ನೀರು ಈಗೆಷ್ಟು ಏರಿದೆ."

ಲಿಂಗನು ಲಾಟೀನಿನ ಬತ್ತಿ ಏರಿಸಿ, ದೀಪ ದೊಡ್ಡದು ಮಾಡಿ, ಕಂಬಳಿ ಕೊಪ್ಪೆ ಹಾಕಿಕೊಂಡು ಹೊಳೆಯ ಕಡೆ ಹೋದನು. ಅವನು ಹೋದ ಸ್ವಲ್ಪ ಹೊತ್ತಿನಲ್ಲಿಯೇ ಗೌಡರು "ನಾಗಾ!" ಎಂದು ಕೂಗಿದರು. ಎಂಟು ವರ್ಷದ ಹುಡುಗನೊಬ್ಬನು ಮುರಬೇಯಿಸುವ ಒಲೆಯ ಕಡೆಯಿಂದ ಓಡಿಬಂದು, ಮುಂಡಿಗೆಯ ಮರೆಯಲ್ಲಿ ನಿಂತು "ಏನ್ರಯ್ಯಾ?" ಎಂದ.

ಗೌಡರು "ದನ ಎಲ್ಲಾ ಕಟ್ಟಿದ್ದೀರೇನೊ?" ಎಂದರು.

"ಹೌದ್ರಯ್ಯಾ, ಎಲ್ಲಾ ಕಟ್ಟಿದ್ದೇನೆ. ತುಂಗೆದನ ಪುಟ್ಟಗುಡ್ಡ ಯಲ್ಡು ಮಾತ್ರ ಕೊಟ್ಟಿಗೆಗೆ ಬರಲೇ ಇಲ್ಲ."

"ಹೋಗಲಿ ಬಿಡು!" ಎಂದು ಗೌಡರು ದಿಂಬಿನ ಮೇಲೆ ಒರಗಿಕೊಂಡರು. ನಾಗ ಮೆಲ್ಲಗೆ ಚಳಿ ಕಾಯಿಸಲು ಮುರುವಿನ ಒಲೆಗೆ ಜಾರಿದ. ಅಷ್ಟು ಹೊತ್ತಿಗೆ ಹೊಳೆಗೆ ಹೋಗಿದ್ದ ಲಿಂಗ ಬಂದ. ಗೌಡರು "ನೀರೇರಿದೆಯೇನೊ?" ಎಂದು ಕೇಳಿದರು.

ಲಿಂಗ ಲಾಟೀನು ಕೆಳಗಿರಿಸಿ, ಕಂಬಳಿ ಕೊಡವುತ್ತಾ "ನಾಲ್ಕನೆ ಮೆಟ್ಟಲಿಗೆ ಮುಟ್ಟ ಮುಟ್ಟ ಬಂದದೆ" ಎಂದನು.

"ಹಾಗಾದರೆ ಕೊಟ್ಟಿಗೆಗೆ ಹೋಗಿ ದನಗಳ ಕೊರಳಕಣ್ಣಿ ಎಲ್ಲಾ ಬಿಚ್ಚಿ ಬಾ" ಎಂದು ಗೌಡರು ಚಿಂತಿಸುತ್ತಾ ಕೂತರು.

ಲಿಂಗ ತನ್ನ ಮಗ ನಾಗನನ್ನೂ ಕರೆದುಕೊಂಡು ಕೊಟ್ಟಿಗೆಗೆ ಹೋದ. ಅಷ್ಟು ಹೊತ್ತಿಗೆ ನಾಗಮ್ಮ ನೀರು ತಂದಿಟ್ಟು "ಬಳ್ಳೆ ಹಾಕಿದೆ" ಎಂದರು. ಸುಬ್ಬಣ್ಣಗೌಡರು ಎದ್ದು ತಂಬಿಗೆ ತೆಗೆದುಕೊಂಡು ಬಾಯಿ ಮುಕ್ಕಳಿಸಿ ಊಟಕ್ಕೆ ಹೋದರು. ತಿಮ್ಮು ಸೀತೆ ಇಬ್ಬರೂ ಹೊರಗೆ ಬಂದು ಜಗಲಿಯ ಮೇಲಿನ ಲ್ಯಾಂಪಿನ ಬೆಳಕಿನಲ್ಲಿ ಮಕ್ಕಳು ಹರಟೆ ಹೊಡೆಯುತ್ತಿದ್ದರು. ತುಸು ಹೊತ್ತಿನಲ್ಲಿ ಲಿಂಗನೂ ಅವರ ಮಗ ನಾಗನೂ ಕೊಟ್ಟಿಗೆಯಿಂದ ಬಂದು, ಕಾಲು ತೊಳೆದುಕೊಂಡು, ಜಗಲಿಯ ಕೆಸರಲಿಗೆಯ ಮೇಲೆ ಕೂತರು. ಲಿಂಗ, ನಾಗ ಇವರೊಡನೆ ತಿಮ್ಮು, ಸೀತೆ ಇಬ್ಬರೂ ತುಂಬಾ ಸಲಿಗೆ.

ತಿಮ್ಮು "ಲಿಂಗ, ಹೊಳೆ ಪೂರಾ ಏರಿದೆಯೇನೋ?" ಎಂದು ಕೇಳಿದ.

ಲಿಂಗ "ಇಲ್ಲಯ್ಯಾ, ಯಾವಾಗಲೂ ಏರಿವಂತೆ" ಎಂದ.

ಲಿಂಗನ ಹತ್ತಿರ ಕುಳಿತಿದ್ದ ಸೀತೆ ಇವರ ಸಂಭಾಷಣೆಗೆ ಗಮನ ಕೊಡಲೇ ಇಲ್ಲ. ಅವಳ ಮನಸ್ಸು ಇನ್ನೇತರ ಮೇಲೋ ಹೋಗಿತ್ತು. ಒಂದು ಸಲ ಲಿಂಗನ ಕಾಲುಗಂಟುಗಳ ಕಡೆ ನೋಡುತ್ತಿದ್ದಳು. ಒಂದು ಸಲ ಕೈಗಂಟುಗಳ ಕಡೆ ನೋಡುತ್ತಿದ್ದಳು. ಆಕೆಗೆ ಬಹಳ ಸೋಜಿಗವಾಯಿತು.

ಕಡೆಗೆ ನಾಚಿಕೆಗಿಂತ ಕುತೂಹಲ ಹೆಚ್ಚಾಗಲು "ಲಿಂಗ, ಇದೇನು ಕಲೆಗಳೋ, ನಿನ್ನ ಕಾಲ್ಗಂಟಿನಲ್ಲಿ ಕೈಗಂಟಿನಲ್ಲಿ" ಎಂದು ಕೇಳಿದಳು.

ಲಿಂಗನ ಮುಖ ಇದ್ದಕ್ಕಿದ್ದ ಹಾಗೆ ಬಾಡಿತು. ಬಾಯಿಯಿಂದ ಮಾತೇ ಹೊರಡಲಿಲ್ಲ. ಕಣ್ಣಿನಲ್ಲಿ ನೀರು ತುಂಬಿತು. ಮರುಕಳಿಸಿದ ಹಿಂದಿನ ದುಃಖ ತಡೆದುಕೊಂಡು ದೈನ್ಯದಿಂದ "ಅದೆಲ್ಲಾ ಕಟ್ಕೊಂಡು ನಿಮಗೇನು ಸೀತಮ್ಮಾ?" ಎಂದ.

ತಿಮ್ಮುಗೆ ಲಿಂಗನ ಆ ಸ್ಥಿತಿ ನೋಡಿ ಕನಿಕರದೊಂದಿಗೆ ಅಚ್ಚರಿಯೂ ಆಯಿತು. ಸೀತೆಗೆ ಬದಲಾಗಿ ಅವನೆ, "ಲಿಂಗ, ಸಂಕೋಚವೇಕೊ, ನಮ್ಮೊಡನೆ ಹೇಳಬಾರದೆ?" ಎಂದ.

"ಹೇಳದೆ ಏನು ತಿಮ್ಮಯ್ಯ ನಿಮ್ಮೊಡನೆ? ಇವು ಜೈಲಿನಲ್ಲಿ ಕೋಳ ಹಾಕಿದ್ದ ಗುರುತು."

ಲಿಂಗನಂಥ ಮುಗ್ಧನಿಗೆ ಜೈಲಾದುದನ್ನು ಕೇಳಿ ತಿಮ್ಮುವಿನ ಹೂವಿನಂಥ ಎದೆಗೆ ಸಿಡಿಲು ಬಡಿದಂತಾಗಿ "ಏನು? ನಿನಗೂ ಜೈಲೆ? ಯಾವ ಪುಣ್ಯಾತ್ಮನಪ್ಪಾ ನಿನಗೂ ಜೈಲು ಮಾಡಿದವನು" ಎಂದು ಕೇಳಿದ.

"ನಾನು ಮೊದಲು ಮಾವಿನಹಳ್ಳಿ ರಂಗೇನಾಯ್ಕರ ಮನೇಲಿದ್ದೆ ಕೆಲಸಕ್ಕೆ. ಅಲ್ಲೇ ಐದಾರು ವರ್ಷ ಜೀತ ಮಾಡಿದೆ. ತಿಮ್ಮಯ್ಯ, ಏನು ಮಾಡೋದು. ಯಾರ್‍ಯಾರ ಜೊತೆಯಲ್ಲೋ ಸೇರಿಕೊಂಡು ಕಳ್ಳು ಕುಡಿಯೋದು ಕಲಿತೆ. ಒಂದು ದಿನ ಬೈಗಿನ ಹೊತ್ತು; ಕಳ್ಳು ಕುಡಿದೆ, ತಲೆಗೇರಿತು. ಕಳ್ಳಿನವನು ಏನು ಸೇರಿಸಿದ್ದನೋ ಅದಕ್ಕೆ, ಅಮಲು ಬರಲಿ ಅಂತ. ದಾರೀಲಿ ಬರ್‍ತಾ ಇದ್ದೆ. ರಂಗೇನಾಯ್ಕರ ಮಗ ಶೇಷೇನಾಯ್ಕು ಅಂತ ಇದಾರೆ. ಅವರಿಗೂ ಕುಡಿದು ತಲೆಗೆ ಅಮಲೇರಿತ್ತು. ಎಲ್ಲಿಂದಲೋ ಹಿಂದಿನಿಂದ ಬಂದು ಬಾಯಿಗೆ ಬಂದಂತೆ ಬೈದರು. ನನಗೂ ಕುಡಿದ ಮತ್ತಿನಲ್ಲಿ ಒಡೇರ ಮಕ್ಕಳು ಅಂತ ಗೊತ್ತಾಗಲಿಲ್ಲ. ಬಾಯಿಗೆ ಬಂದಂತೆ ಬೈದೆ. ಆಮೇಲೆ ಇಬ್ಬರಿಗೂ ಮಾರಾಮಾರಿಯಾಗಿ ಅವರಿಗೆ ಪೂರಾ ಪೆಟ್ಟಾಯ್ತು. ನನ್ನ ಮೇಲೆ ಫಿರ್‍ಯಾದು ಕೊಟ್ಟರು. ನಾನು ಬಡವ, ಅದರಿಂದ ಜೈಲಾಯ್ತು.

ಕಡೆಯ ಎರಡು ಮಾತು ಹೇಳುವಾಗ ಅವನ ಕಂಠ ಗದ್ಗದವಾಯಿತು. ಕಣ್ಣಿನಲ್ಲಿ ನೀರುಕ್ಕಿ ಮಕ್ಕಳಂತೆ ಬಿಕ್ಕಿ ಬಿಕ್ಕಿ ಅತ್ತ. ಅದನ್ನು ನೋಡಿ ಅವನ ಮಗ ನಾಗನೂ ಅಳುತ್ತಿದ್ದ. ಸೀತೆಯ ಕಣ್ಣಿನಲ್ಲಿಯೂ ನೀರು ತುಂಬಿ ತುಳುಕುತ್ತಿತ್ತು. ತಿಮ್ಮು ಏನ್ನೋ

ಯೋಚಿಸುತ್ತಾ ಕುಳಿತಿದ್ದ. ಲಿಂಗನ ಎದೆಯಲ್ಲಿ ಸ್ವಲ್ಪ ತಣಿತ ಮೇಲೆ, ತಿಮ್ಮು ಮಕ್ಕಳಾಡುವ ಮುದ್ದು ಮಾತಿನಿಂದ "ಲಿಂಗಾ, ನಿನಗೆ ಜೈಲಿನಲ್ಲಿ ತುಂಬಾ ಕಷ್ಟ ಕೊಟ್ಟರೆ?" ಎಂದು ಕೇಳಿದ.

"ತಿಮ್ಮಯ್ಯಾ, ಈಗ ಅದನ್ನೆಲ್ಲಾ ಹೇಳಿ ನೆನೆದುಕೊಂಡು ಅತ್ತರೆ ಏನು ಬಂದ ಹಾಗಾಯ್ತು? ನನ್ನ ಜೈಲಿನಿಂದ ಬರಬೇಕಾದರೆ ನನ್ನ ಹೆಂಡತಿ ತೀರಿಕೊಂಡಿದ್ದಳು. ನನ್ನ ಮಗ ಪರದೇಶಿಯಾಗಿ ಯಾರ್‍ಯಾರ ಕೈಗೆಲ್ಲಾ ಹಾರ್‍ಯೆಸಿಕೊಂಡು ಅಲೆದುಕೊಂಡಿದ್ದ."

"ಹಾಗಾದರೆ ಎಷ್ಟು ವರ್ಷ ಜೈಲಿನಲ್ಲಿದ್ದೆಯೊ ಲಿಂಗಾ?"

"ಎರಡು ವರ್ಷ, ತಿಮ್ಮಯ್ಯಾ, ಎರಡು ವರ್ಷ! ಅದರ ಮೇಲಾದರೂ ಸುಖ ಅಂತೀರೋ! ಅದೂ ಇಲ್ಲ. ನೆಂಟರಿಷ್ಟರೆಲ್ಲ ನನ್ನ ದೂರ ಮಾಡಿದರು, ಜೈಲಿಗೆ ಹೋಗಿ ಬಂದವನೆಂದು. ಮಗನನ್ನು ಕಟ್ಟಿಕೊಂಡು ಅಲೆದೂ ಅಲೆದೂ ಸುಟ್ಟು ಸುಣ್ಣಾಗಿದ್ದೆ. ಕಡೆಗೆ ಯಾರೋ ಶಿವನೂರು ಸುಬ್ಬಣ್ಣಗೌಡರಲ್ಲಿಗೆ ಹೋಗು ಎಂದರು. ಇಲ್ಲಿಗೆ ಬಂದೆ. ಮಾರಾಯರು, ನಿಮ್ಮ ತಂದೆ ಅನ್ನ ಬಟ್ಟೆ ಕೊಟ್ಟು ಸತ್ತುಹೋದವನ ಬದುಕಿಸಿದರು."

ಲಿಂಗ ತನ್ನ ಕತೆ ಹೇಳಿ ಮುಗಿಸಲು, ತಿಮ್ಮು ನಿಟ್ಟುಸಿರು ಬಿಟ್ಟು, "ಲಿಂಗಾ, ನೀನಿನ್ನ ನಮ್ಮನೇ ಬಿಟ್ಟು ಹೋಗಲೇಬೇಡ. ನಾಗನೂ ಹಾಗೇ" ಎಂದ.

"ಆಗಲಿ ನನ್ನೊಡೆಯ, ಹಾಗೆ ಆಗಲಿ."

## ೨

ಸಿಡಿಲು ಗುಡುಗು, ಮಿಂಚು, ಗಾಳಿ, ಮಳೆ–ಇವುಗಳಿಂದ ರಾತ್ರಿ ಹುಚ್ಚೆದ್ದ ಭೈರವಿಯಾಗಿತ್ತು. ಮನೆಯಲ್ಲಿ ಎಲ್ಲರೂ ಮಲಗಿದ್ದರು. ಲಿಂಗ, ಸುಬ್ಬಣ್ಣಗೌಡರು ಇಬ್ಬರೇ ಎಚ್ಚರವಾಗಿ ಜಗಲಿಯ ಮೇಲೆ ಕುಳಿತಿದ್ದರು. ಇಬ್ಬರೂ ಆಗಾಗ್ಗೆ ಹೋಗಿ ಹೊಳೆ ನೋಡಿಕೊಂಡು ಬರುತ್ತಿದ್ದರು. ಕೆರೆಯ ನೀರು ಬೇಗ ಬೇಗ ಏರುತ್ತಿತ್ತು.

"ಲಿಂಗಾ, ದೋಣಿ ಎಲ್ಲಿ ಕಟ್ಟಿದ್ದೀಯೆ? ಮನೆ ಬಿಡಬೇಕಾಗಿ ಬರಬಹುದು."

ಲಿಂಗ ಸ್ವಲ್ಪ ಗಾಬರಿಯಾಗಿ "ಹುಳಿಮಾವಿನ ಮರದ ಬೇರಿಗೆ ಕಟ್ಟಿದ್ದೆ! ನೀರೇರಿತೊ ಏನೋ? ಅಲ್ಲಿಗೆ ಹೋಗುವುದಕ್ಕೆ ಆಗುತ್ತೋ ಇಲ್ಲವೋ?" ಎಂದು ಹೇಳುತ್ತಾ ಲಾಟೀನು ತೆಗೆದುಕೊಂಡು ಹೊರಗೆ ಓಡಿದ. ಸುಬ್ಬಣ್ಣಗೌಡರೂ ಅವನ ಹಿಂದೆಯೇ ಓಡಿದರು. ಹೋಗಿ ನೋಡಲು ಲಿಂಗ ಊಹಿಸಿದಂತೆಯೇ ಆಗಿತ್ತು. ನೆರೆ ಮಾವಿನ ಬುಡವನ್ನು ಮುಚ್ಚಿಬಿಟ್ಟಿತ್ತು. ಇಬ್ಬರಿಗೂ ಸ್ವಲ್ಪ ಹೊತ್ತು ಏನೂ ತೋರಲಿಲ್ಲ. ಸುಮ್ಮನೆ ಹೊಳೆಯ ಕಡೆ ನೋಡುತ್ತಾ ನಿಂತರು. ಅಷ್ಟರಲ್ಲಿಯೇ ಮನೆಯ ಹಿಂದುಗಡೆ ಏನೋ ಬಿದ್ದಹಾಗೆ ದೊಡ್ಡ ಶಬ್ದವಾಯಿತು. ಇಬ್ಬರೂ ಅಲ್ಲಿಗೆ ಓಡಿದರು. ಹಿತ್ತಲಕಡೆ ಗೋಡೆ

ಬಿದ್ದು ನೀರು ಅಂಗಳಕ್ಕೆ ನುಗ್ಗುತ್ತಿತ್ತು. ಇನ್ನು ಕಾಲಹರಣ ಮಾಡಿದರೆ ಸರ್ವನಾಶವೆಂದು ಗೌಡರಿಗೆ ತೋರಿತು.

ಕೋಣೆ ಕೋಣೆಗೆ ನುಗ್ಗಿ ಮನೆಯವರನ್ನೆಲ್ಲ ಎಬ್ಬಿಸಿದರು. ಅವರೆಲ್ಲ ಅರೆನಿದ್ದೆಯಲ್ಲಿ ಗಾಬರಿಯಿಂದ ಜಗಲಿಗೆ ನುಗ್ಗಿದರು. ಗೌಡರು ಅವರಿಗೆ ಗಾಬರಿ ಪಡಬೇಡಿರೆಂದು ಸಮಾಧಾನ ಹೇಳಿ ಲಿಂಗನಿಗಾಗಿ ಸುತ್ತಲೂ ನೋಡಿದರು. ಲಿಂಗ ಅಲ್ಲಿರಲಿಲ್ಲ. "ಲಿಂಗಾ! ಲಿಂಗಾ!" ಎಂದು ಕೂಗಿದರು. ಉತ್ತರ ಬರಲಿಲ್ಲ. ಅಷ್ಟು ಹೊತ್ತಿಗೆ ಪ್ರಚಂಡವಾಗಿ ಗಾಳಿ ಬೀಸತೊಡಗಿತು. ಹುಚ್ಚೆದ್ದು ಸರಿ ಸುರಿಯಿತು. ಹೊರ ಅಂಗಳದಲ್ಲಿದ್ದ ತೆಂಗಿನ ಮರ ಮುರಿದ ಮನೆಗೆ ಹೊದಿಸಿದ ಸತುವಿನ ತಡಗುಳ ಮೇಲೆ ಬಿದ್ದು, ಬಹುದೊಡ್ಡ ಶಬ್ದವಾಯಿತು. ತಿಮ್ಮು, ಸೀತೆ, ನಾಗ ಮೂವರೂ ಕಿಟ್ಟನೆ ಕಿರಚಿಕೊಂಡರು. ನಾಗಮ್ಮನವರೂ "ದೇವರೇ" ಎನ್ನುತ್ತಿದ್ದರು. ಗೌಡರು ಅವರಿಗೆಲ್ಲಾ ಧೈರ್ಯ ಹೇಳಿ, ಲಿಂಗನನ್ನು ಹುಡುಕಿಕೊಂಡು ಕರೆಯುತ್ತಾ ಓಡಿದರು. ಹೋಗಿ ನೋಡಲು ಲಿಂಗ ಮಾವಿನ ಬುಡ ಸೇರಿ ದೋಣಿ ಬಿಚ್ಚುತ್ತಿದ್ದ. ಮನೆಯ ಬೆಳಕಂಡಿಗೆ ಒಂದು ಕತ್ತದ ಮಿಣಿ ಕಟ್ಟಿ, ಅದನ್ನು ಹಿಡಿದು ಅದರ ಸಹಾಯದಿಂದ ಮಾವಿನ ಮರದ ಬುಡ್ಕೆ ಸೇರಿದ್ದ. ತುಸು ಹೊತ್ತಿನಲ್ಲಿಯೇ ದೋಣಿ ಬಿಚ್ಚಿ, ಅದರೊಳಗೆ ದಾಟಿದ. ಬೆಳಕಂಡಿಗೆ ಬಿಗಿದ ಹುರಿಯನ್ನು ಮಾತ್ರ ಕೈಯಲ್ಲಿಯೇ ಹಿಡಿದುಕೊಂಡಿದ್ದ.

ಗಾಳಿಯ ಅಬ್ಬರದಲ್ಲಿ ಲಿಂಗ ಗೌಡರನ್ನು ಕುರಿತು "ಅಯ್ಯಾ ಹಗ್ಗ ಹಿಡಿದು ಎಳೆಯಿರಿ" ಎಂದು ಗಟ್ಟಿಯಾಗಿ ಕೂಗಿದ. ಗೌಡರೂ ಹಾಗೆಯೇ ಮಾಡಿದರು. ದೋಣಿ ದಡ ಸೇರಿತು. ಅಷ್ಟರಲ್ಲಿ ಒಳಂಗಳದಿಂದ ಏಳೆಂಟು ಜನ ಕಿಟ್ಟನೆ ಚೀತ್ಕರಿಸಿದಂತಾಯಿತು.

ಗೌಡರು "ಲಿಂಗಾ, ದೋಣಿ ಬಾಗಿಲಿಗೆ ತೆಗೆದುಕೊಂಡು ಬಾ! ಬೇಗ!" ಎಂದು ಹೇಳಿ ಒಳಗೆ ನುಗ್ಗಿದರು. ಹೆಬ್ಬಾಗಿಲು ದಾಟುವುದರೊಳಗಾಗಿಯೇ ಕೆಲಸದ ಹೆಂಗಸು ಸೋಮಕ್ಕ ಬಾಯಿ ಕಳೆದುಕೊಂಡು ಕಣ್ಕಣ್ಣು ಬಿಟ್ಟುಕೊಂಡು ಏದುತ್ತಾ ಓಡಿಬಂದಳು.

ಗೌಡರನ್ನು ಕಂಡೊಡನೆ ಸೋಮಕ್ಕ ಕೂಗಿದಳು: "ಉಪ್ಪರಿಗೆ ಗೋಡೆ ಬಿದ್ದು ಹೋಯ್ತು! ಜಗಲಿಗೆ ನೀರೇರ್ತಾ ಇದೆ."

ಗೌಡರು ಜಗಲಿಗೆ ಬಂದು "ನೀವೆಲ್ಲಾ ಹೆಬ್ಬಾಗಿಲಿಗೆ ಓಡಿ! ಬೇಗ! ಲಿಂಗ ದೋಣಿ ತರ್ತಾನೆ! ಏ, ನಾಗಾ, ನೀನಿಲ್ಲಿ ಬಾರೊ" ಎಂದರು. ನಾಗಗೌಡರ ಸಂಗಡ ಹೋದ.

ನಾಗಮ್ಮ, ತಿಮ್ಮು, ಸೀತೆ, ಲೋಕಮ್ಮ, ಸೋಮಕ್ಕನ ಮಗಳು ದಾಸಮ್ಮ ಎಲ್ಲರೂ ಹೆಬ್ಬಾಗಿಲಿಗೆ ಓಡಿದರು. ಸೋಮಕ್ಕ ಮಾತ್ರ ಮಾಣಿಗೆ ಕೋಣೆಯಲ್ಲಿ ತಾನು ಇಟ್ಟಿದ್ದ "ಪುಟ್ಟ ಗಂಟು" ತರಲು ಓಡಿದವಳು ಹಿಂದಕ್ಕೆ ಬರಲೇ ಇಲ್ಲ. ಗೌಡರು ಜಗಲಿಯ ಮೇಲಿದ್ದ ತಮ್ಮ ದೊಡ್ಡ ಬೀರನ ಬಾಗಿಲೂ ತೆಗೆದು, ಎರಡು ಪೆಟ್ಟಿಗೆಗಳನ್ನು ಈಚೆಗೆ

ತೆಗೆದಿಟ್ಟು, ಬೀರನ ಬಾಗಿಲು ಹಾಕಿ ಬೀಗ ಹಾಕಿದರು. ಅಲ್ಲಿದ್ದ ಕಬ್ಬಿಣದ ಸಂದುಕದ ಬಾಗಿಲನ್ನೂ ತೆರೆದರು. ಆದರೆ ಮತ್ತೇನನ್ನೋ ಯೋಚಿಸಿ ಅದನ್ನು ಪುನಃ ಹಾಗೆಯೇ ಮುಚ್ಚಿ ಬೀಗ ಹಾಕಿದರು.

"ನಾಗಾ, ಈ ಪೆಟ್ಟಿಗೆ ಹೊತ್ತುಕೊಳ್ಳೊ" ಎಂದರು. ನಾಗ ಬಂದು ಹೊತ್ತುಕೊಂಡ; ಗೌಡರು ಮತ್ತೊಂದು ಹೊತ್ತುಕೊಂಡರು. ಲಿಂಗ ಎಲ್ಲರನ್ನೂ ದೋಣಿಗೆ ಹತ್ತಿಸಿ ಅದರ ತುದಿ ಹಿಡಿದುಕೊಂಡು ನಿಂತಿದ್ದ. ಗೌಡರು ಓಡಿಬಂದು ಎರಡು ಪೆಟ್ಟಿಗೆಗಳನ್ನೂ ದೋಣಿಯೊಳಗಿಟ್ಟು, ನಾಗನನ್ನು ಎತ್ತಿ ದೋಣಿಗೆ ಹಾಕಿ, ತಾವೂ ಒಳಗೆ ದಾಟಿ, ಲಿಂಗನಿಗೆ ದೋಣಿ ಹತ್ತುವಂತೆ ಹೇಳಿ, ಒಂದು ಹುಟ್ಟು ತೆಗೆದುಕೊಂಡು ದೋಣಿಯ ತುದಿಯಲ್ಲಿ ಕುಳಿತರು. ಅಷ್ಟು ಹೊತ್ತಿಗೆ ಸೀತೆ ನಾಗಮ್ಮನವರನ್ನು ಕುರಿತು "ಅವ್ವಾ ಸೋಮಕ್ಕೆಲ್ಲಿ?" ಎಂದು ಕೇಳಿದಳು. ಆಗಲೇ ಮನೆ ಮುರಿದು ಬಿದ್ದಂತಾಗಿ ಏನೋ ಒಂದು ಚೀತ್ಕಾರದ ಧ್ವನಿಯೂ ಕೇಳಿಬಂದಿತು. ಸೋಮಕ್ಕನ ಆಸೆಯನ್ನು ಅವಳ ಮಗಳು ದಾಸಮ್ಮ ಕೂಡ ಬಿಟ್ಟಳು.

ದೋಣಿ ಬಹಳ ಸಣ್ಣದು. ಐದಾರು ಜನರು ಕೂರುವಂತಾದ್ದು. ತುಂಬಿದ ನೆರೆಯಲ್ಲಂತೂ ಇಬ್ಬರೇ ಸರಿ. ಆಗಲೇ ಅದರೊಳಗೆ ಏಳು ಜನರಿದ್ದರು. ಸಾಲದಿದ್ದಕ್ಕೆ ಜೊತೆಗೆ ಎರಡು ಪೆಟ್ಟಿಗೆ ಬೇರೆ; ಲಿಂಗನಿಗೆ ಜಾಗವೇ ತೋರದೆ, ಬಗೆಯೇ ಹರಿಯದೆ, ಸುಮ್ಮನೆ ನಿಂತು ದೋಣಿ ಸುರಕ್ಷಿತವಾಗಿ ದಡ ಸೇರುವುದೇ ಎಂದು ಚಿಂತಿಸುತ್ತಿದ್ದ.

ಲಿಂಗ ತಡಮಾಡಿದ್ದನ್ನು ಕಂಡು ಗೌಡರು "ಲಿಂಗಾ ಹೊತ್ತೇಕೊ? ಹತ್ತೋ!" ಎಂದು ಕಳವಳದಿಂದ ಕೂಗಿ ಗದರಿಸಿದರು.

ಲಿಂಗ "ಅಯ್ಯಾ, ಜಾಗವೇ ಇಲ್ಲವಲ್ಲ. ಈಗಾಗಲೇ ದೋಣಿಗೆ ಭಾರ ಹೆಚ್ಚಾಗಿದೆ. ನಾನೂ ಕೂತರೇ ದೋಣಿ ದಡ ಕಾಣುವ ಬಗೆ?" ಎಂದ.

"ಹಾಗಾದರೆ ಈಗ ಮಾಡೋದೇನೋ? ಏನಾದರೂ ಆಗಲಿ ಹತ್ತು ದೇವರು ಮಾಡಿಸಿದ್ದಾಯಿತು" ಎನ್ನುತ್ತಾ ಗೌಡರು ನದಿಯ ಕಡೆ ನೋಡಿದರು. ಅವರ ಮೈ ಸ್ವಲ್ಪ ನಡುಗಿತು.

ಲಿಂಗ "ಹಾಗಾದರೆ ಅಯ್ಯಾ, ಒಂದು ಕೆಲಸ ಮಾಡಿ, ನೀವೆಲ್ಲಾ ದಡ ಸೇರಿದ ಮೇಲೆ ದೋಣಿ ಕೊಟ್ಟು ಯಾರನ್ನಾದರೂ ಕಳ್ಸಿ. ಅಲ್ಲೀ ತನಕಾ ಇಲ್ಲೇ ಇರ್ತೇನೆ. ನಿಮಗೇನೂ ಭಯಬೇಡ" ಅಂದ.

ಗೌಡರಿಗೆ ಸಿಟ್ಟು ಬಂತು. ಲಿಂಗನಿಗೆ ದೋಣಿ ಹತ್ತುವಂತೆ ಗಟ್ಟಿಯಾಗಿ ಕೂಗಿ ಅಪ್ಪಣೆ ಮಾಡಿದರು. ಲಿಂಗ ಮರುಮಾತಾಡದೆ ದೋಣಿಯ ಮತ್ತೊಂದು ತುದಿಯಲ್ಲಿ ಹುಟ್ಟು ಹಿಡಿದು ಕುಳಿತ. ಗೌಡರು ತಮ್ಮ ತೋಟಾಕೋವಿಯಿಂದ ಹತ್ತು ಹನ್ನೆರಡು ಗುಂಡು ಹಾರಿಸಿದರು.

ದೋಣಿ ಹೊರಟಿತು. ಆ ಗಾಳಿ, ಆ ಮಳೆ, ಆ ಕತ್ತಲು ಇವುಗಳ ನಡುವೆ ಬಂದೂಕಿನ 'ಢಂ ಢಂ' ಶಬ್ದಗಳು ಗಂಭೀರವಾಗಿ ಹೊರಟು ಮಲೆನಾಡಿನ ಬೆಟ್ಟ ಗುಡ್ಡಗಳಿಂದ ಗಂಭೀರವಾಗಿ ಮರುದನಿಯಾದುವು. ದೂರದ ಹಳ್ಳಿಗಳಲ್ಲಿದ್ದ ಜನರು ಎಚ್ಚತ್ತು ಗುಂಡಿನ ಶಬ್ದಗಳನ್ನು ಕೇಳಿ ಬೆರಗಾದರು.

ಶಿವನೂರಿಗೆ ಎರಡು ಮೈಲಿ ದೂರದಲ್ಲಿದ್ದ ನುಗ್ಗೇಹಳ್ಳಿಯಲ್ಲಿ ಮನೆಯ ಜಗಲಿಯ ಮೇಲೆ ಮಲಗಿದ್ದ ರಾಮೇಗೌಡರಿಗೂ, ಅವರ ತಮ್ಮ ಸಿದ್ಧೇಗೌಡರಿಗೂ ಈಡಿನ ಶಬ್ದ ಕೇಳಿ ಎಚ್ಚರವಾಗಿ ಬೆರಗಿನಿಂದ ಎದ್ದು ಕುಳಿತರು.

ಸಿದ್ದೇಗೌಡರು ರಾಮೇಗೌಡರನ್ನು ಕುರಿತು, "ಅಣ್ಣಾ, ಅದೇನೋ ಈಡು ಕೇಳಿಸಿದುವಲ್ಲ!" ಎಂದರು.

ರಾಮೇಗೌಡರು "ಎತ್ತ ಮುಖದಿಂದ ಕೇಳಿಸಿದುವೋ" ಎಂದರು.

"ಕೆಮ್ಮಣ್ಣುಬ್ಬಿನ ಕಡೆಯಿಂದ ಅಂತ ಕಾಣ್ತದಪ್ಪಾ."

"ಅಲ್ಲಾ, ನೋಡು, ನಂಗೇಕೋ ಸ್ವಲ್ಪ ಸಂಶಯಾನೆ. ಶಿವನೂರಿನ ಕಡೆಯಿಂದ ಕೇಳಿಸಿದ ಹಾಂಗಾಯ್ತು."

"ಎಲ್ಲಾದರೂ ಹೊಳೇಗಿಳೇ ಏರ್ತೆನೋ?"

"ಏನೋ ಸಂಗತಿ ಇರಬೇಕಪ್ಪಾ, ಏನಾದ್ರಾಗಲಿ, ನಾಲ್ಕೈದು ಜನ ಕರಕೊಂಡು ಹೋಗೋಣ."

ಸಿದ್ಧೇಗೌಡರು ಅವಸರದಿಂದ ಲಾಟೀನು ಹೊತ್ತಿಸಿದರು. ರಾಮೇಗೌಡರು ಮೂಲೆ ಹಿಡಿದು ಮಲಗಿ ಕೊರೆಯುತ್ತಿದ್ದ ರಂಗನನ್ನು ಎಬ್ಬಿಸಿ, ನಾಲ್ಕೈದು ಜನ ಗಟ್ಟದ ಕೆಳಗಿನವವನ್ನು ಕರೆತರುವಂತೆ ಹೇಳಿದರು.

## ೩

"ರಾಮಾ! ರಾಮಾ! ಎಂದು ಹೆಂಗಸರು ಮಕ್ಕಳ ಗೌಳಾಟವು ಪ್ರವಾಹದ ಅಲೆಗಳ ಸೆಳೆವಿನ ನಡುವೆ ಸಿಕ್ಕಿ ಏಳುತ್ತ ಬೀಳುತ್ತ ತೇಲುತ್ತ ದೋಣಿಯಿಂದ ಹೊರಟು ಗಾಳಿಯ ಘೋರಾಟದಲ್ಲಿ ಸೇರುತ್ತಿತ್ತು. ಸುಬ್ಬಣ್ಣಗೌಡರು, ಲಿಂಗ ಇಬ್ಬರೂ ಎದೆಗೆಡದೆ ಹುಟ್ಟು ಹಾಕುತ್ತಿದ್ದರು. ದೋಣಿಯ ನಡುವೆ ಇದ್ದ ಲಾಟೀನಿನ ಬೆಳಕು, ಕಗ್ಗತ್ತಲೆಗೆ ಹೆದರಿ ಮೂಲೆ ಸೇರಿತೋ ಏನೋ ಎನ್ನುವ ಹಾಗೆ, ತನ್ನ ಸುತ್ತಲೂ ಒಂದಡಿಯ ಜಾಗವನ್ನು ಮಾತ್ರ ಬೆಳಗುತ್ತಿದ್ದಿತು. ಭಾರದಿಂದ ದೋಣಿ ಈಗಲೋ ಆಗಲೋ ಮುಳುಗುವಂತೆ ತೋರುತ್ತಿತ್ತು.

ಗೌಡರು ದೋಣಿಯಲ್ಲಿದ್ದ ಎರಡು ಬೆಲೆಯುಳ್ಳ ಪೆಟ್ಟಿಗೆಗಳನ್ನೂ ತೆಗೆದು

ಹೊಳೆಗೆ ಎಸೆದರು. ಆದರೂ ಭಾರ ಕಡಿಮೆಯಾಗಲಿಲ್ಲ. ಎಷ್ಟು ಹೇಳಿದರೂ ಕೇಳದೆ ಹೆಂಗಸರು, ಮಕ್ಕಳು "ರಾಮ, ರಾಮ" ಎಂದು ಕೂಗಿ ಗೋಳಾಡುವುದನ್ನು ಬಿಡಲೇ ಇಲ್ಲ. ದಿಕ್ಕು ಕೆಟ್ಟ ಹುಚ್ಚನಂತೆ ದೋಣಿ ಅಲೆಯತೊಡಗಿತು. ಒಂದು ಸಾರಿ ಅದು ಮುಳುಗುವಂತಾಗಿ ಸ್ವಲ್ಪ ನೀರೂ ಒಳಗೆ ನುಗ್ಗಿತು. ಮತ್ತೆ "ರಾಮಾ, ರಾಮಾ" ಎಂದು ಬೊಬ್ಬೆ ಹಾಕಿದರು.

ಹುಟ್ಟು ಹಾಕುತ್ತಲಿದ್ದ ಲಿಂಗನು ಹೆಂಗಸರು ಮಕ್ಕಳ ಗೋಳನ್ನು ಕಂಡು ಎದೆಮರುಗಿದನು. ದೋಣಿ ಭಾರದಿಂದ ಮುಳುಗುವುದು ಖಂಡಿತವೆಂದೇ ಅವನು ನಿಶ್ಚಯಿಸಿದನು. ಭಾರವನ್ನು ಕಡಿಮೆ ಮಾಡುವ ದಾರಿಯನ್ನು ಯೋಚಿಸಿದನು; ಬಗೆಯಹರಿಯಲಿಲ್ಲ. ಸ್ವಲ್ಪ ಹೊತ್ತಿನ ಮೇಲೆ ಇದ್ದಕ್ಕಿದ್ದ ಹಾಗೆ ಅವನ ಮುಖ ಗಂಭೀರವಾಯಿತು. ಹುಟ್ಟು ಹಾಕುವುದನ್ನು ನಿಲ್ಲಿಸಿದ. ಸುತ್ತಲೂ ನೋಡಿದ. ಮಳೆಯ ಭರದಲ್ಲಿ ಒಬ್ಬರಿಗೊಬ್ಬರು ಕಾಣುತ್ತಲೇ ಇರಲಿಲ್ಲ. ಕಾಣುವ ಹಾಗಿದ್ದರೂ ಯಾರೂ ನೋಡುವ ಸ್ಥಿತಿಯಲ್ಲಿರಲಿಲ್ಲ. ತಾನೂ ಹೊಳೆಗೆ ಹಾರಿದರೆ ಭಾರ ಕಡಮೆಯಾಗಿ, ದೋಣಿ ಸುರಕ್ಷಿತವಾಗಿ ದಡಕ್ಕೆ ಹೋಗುವುದೆಂದು ಹಾರೈಸಿದ. ತನ್ನನ್ನು ಲೋಕವೇ ಕಳ್ಳನೆಂದು ದೂರ ಮಾಡಿದಾಗ, ಅನ್ನ ಬಟ್ಟೆ ಕೊಟ್ಟು ಸಾಕಿದವರ ಬಳಗವನ್ನು ಹೇಗಾದರೂ ಉಳುಹಬೇಕೆಂದು ಮಹಾಯೋಚನೆ ಮಾಡಿದ. ಹುಟ್ಟನ್ನು ದೋಣಿಯ ಒಳಗಿಟ್ಟು, ಹೊಳೆಗೆ ಹಾರಲು ಸಿದ್ಧನಾದ.

ಇನ್ನೇನು ಹಾರಬೇಕು! ಅಷ್ಟರಲ್ಲಿಯೇ ತನ್ನ ಮಗನ ನೆನಪಾಯಿತು. ಎದೆ ನಡುಗಿ ಹಿಂಜರಿಯಿತು. ಹಾಗೆಯೇ ನಿಂತ.

ಅಷ್ಟರಲ್ಲಿಯೇ ದೋಣಿ ಮುಳುಗುವಂತಾಗಿ "ರಾಮ!, ರಾಮ!!" ಎಂದು ಕೂಗಿ ಹೊಳೆಗೆ ಹಾರಿದ.

ಅವನು ಹಾರಿದ್ದು ಆ ಕಗ್ಗತ್ತಲಲ್ಲಿ, ಆ ಗಾಳಿ ಮಳೆ ಹೊಳೆಗಳ ಘೋರಾಟದಲ್ಲಿ, ಯಾರಿಗೂ ತಿಳಿಯಲಿಲ್ಲ. ದೋಣಿಯ ಬಾರ ಕಡಿಮೆಯಾಗಿ ಮೊದಲಿಗಿಗಂತಲೂ ಸ್ವಲ್ಪ ಸರಾಗವಾಗಿ ಹೋಗತೊಡಗಿತು.

ಗೌಡರು, "ಲಿಂಗಾ, ದೋಣಿ ಸ್ವಲ್ಪ ಸರಾಗವಾಗಿ ಹೋಗುತ್ತಿದೆಯೋ, ಭಗವಂತನ ದಯೆಯಿಂದ" ಎಂದರು. ಲಿಂಗನ ದಯೆಯೂ ಜೊತೆಗೆ ಸೇರಿತ್ತೆಂದು ಅವರಿಗೆ ತಿಳಿದಿರಲಿಲ್ಲ.

ಅಷ್ಟರಲ್ಲಿಯೇ ಹೆಂಗಸರು ಮಕ್ಕಳೆಲ್ಲ "ದೀಪ! ದೀಪ!" ಎಂದು ಕೂಗಿದರು. ಸುಬ್ಬಣ್ಣಗೌಡರು ತಿರುಗಿ ನೋಡಲು, ಬಳಿಯಾದ ಹೊಳೆಯ ದಡದಲ್ಲಿ ಐದಾರು ದೀಪಗಳು ಕಂಡುಬಂದುವು. ದೀಪದ ಬೆಳಕಿನಲ್ಲಿ ಹತ್ತು ಹದಿನೈದು ಜನರು

ಸುಳಿದಾಡುತ್ತಿದ್ದುದನ್ನೂ ಕಂಡರು. ಅಂಚಿನಿಂದ ನಾಲ್ಕೈದು ಬಂದೂಕಿನ ಶಬ್ದಗಳೂ ಕೇಳಿಸಿದುವು. ಮೆಲ್ಲಮೆಲ್ಲನೆ ತೇಲುತ್ತಾ ದೋಣಿ ದಡ ಮುಟ್ಟಿತು.

ನುಗ್ಗೇಹಳ್ಳಿಯ ರಾಮೇಗೌಡರೂ ಸಿದ್ದೇಗೌಡರೂ ಓಡಿಬಂದು ಹೆಂಗಸರು ಮಕ್ಕಳನ್ನೆಲ್ಲಾ ಎಚ್ಚರಿಕೆಯಿಂದ ದೋಣಿಯಿಂದ ಇಳಿಸಿದರು. ಸುಬ್ಬಣ್ಣಗೌಡರೂ ಉಸ್ಸೆಂದು ಇಳಿದರು. ಎಲ್ಲರಿಗೂ ದಡ ಸೇರಿದೆವಲ್ಲಾ ಬದುಕಿದೆವಲ್ಲಾ ಎಂಬುದೊಂದೇ ಯೋಚನೆ. ಆ ಆನಂದದ ಸಡಗರದಲ್ಲಿ ಲಿಂಗನ ನೆನಪು ಆಗದಿದ್ದುದು ಏನೂ ಅತಿಶಯವಲ್ಲ. ಆದರೆ ನಾಗ ಮಾತ್ರ ಅಳುತ್ತಿದ್ದ. ಅದನ್ನು ನೋಡಿ ನುಗ್ಗೇಹಳ್ಳಿಯ ಸಿದ್ದೇಗೌಡರು "ಯಾಕಪ್ಪಾ ಅಳ್ತೀಯೆ? ಏನಾಯ್ತೋ?" ಎಂದು ಕೇಳಿದರು.

ಅವನು ಬಿಕ್ಕಿ ಬಿಕ್ಕಿ ಅಳುತ್ತ "ಅಪ್ಪ!" ಎಂದ.

ಸುಬ್ಬಣ್ಣಗೌಡರು "ಏನದು, ಸಿದ್ದೇಗೌಡ್ರೆ?" ಎಂದರು.

"ಈ ಹುಡುಗ ಅಪ್ಪಾ ಎಂದು ಅಳ್ತಾನೆ" ಎಂದರು.

ಸುಬ್ಬಣ್ಣಗೌಡರ ಮುಖ ಬೆಳಗಾಗಿ ತಟಕ್ಕನೆ ಎದ್ದು ನಿಂತ "ಲಿಂಗಾ! ಲಿಂಗಾ!" ಎಂದು ಕರೆದರು. ಕಾಡಿನಿಂದ "ಲಿಂಗಾ! ಲಿಂಗಾ!" ಎಂದು ಮರುದನಿಯಾಯಿತು. ಲಿಂಗ ಎಲ್ಲಿಯೂ ಕಾಣಲಿಲ್ಲ. ದೋಣಿಗೆ ಓಡಿದರು; ಅಲ್ಲಿಯೂ ಇರಲಿಲ್ಲ. ಘೋರವಾದ ಕಗ್ಗತ್ತಲನ್ನು ಹೊದೆದುಕೊಂಡು ಗಂಭೀರವಾಗಿಯೂ ಭೀಕರವಾಗಿಯೂ ವಿಶಾಲವಾಗಿಯೂ ಹರಿಯುವ ಕ್ರೂರನದಿಯನ್ನು ದಿಟ್ಟಿಸಿ ನೋಡಿದರು. ಅವರ ಎದೆ ನಡುಗಿತು. ಕಣ್ಣೀರು ಸುರಿಯಿತು. "ಲಿಂಗಾ! ಲಿಂಗಾ!" ಎಂದು ರೋದಿಸಿದರು. ನಾಗನೂ ಬಿದ್ದು ಬಿದ್ದು ಅಳುತ್ತಿದ್ದನು. ತಿಮ್ಮು, ಸೀತೆ ಇಬ್ಬರೂ ಅಳಲಾರಂಭಿಸಿದರು.

"ನಮ್ಮ ಮನೆಯ ಒಂದು ಬೆಳಕೇ ಹೋಯಿತು" ಎಂದು ಸುಬ್ಬಣ್ಣಗೌಡರು ಅಲ್ಲಿದ್ದವರೊಡನೆ ಹೇಳಿಕೊಂಡು ಗೋಳಿಟ್ಟರು. ಲಿಂಗನ ಆಕಸ್ಮಿಕವಾದ ಅನಿರೀಕ್ಷಿತ ಮರಣಕ್ಕಾಗಿ ಎಲ್ಲರೂ ಶೋಕಿಸಿದರು. ಗೌಡರು ನಾಗನನ್ನು ಬಹಳವಾಗಿ ಸಂತೈಸಿದರೂ ಅವನು ಅಳುವುದನ್ನೂ "ಅಪ್ಪಾ! ಅಪ್ಪಾ!" ಎಂದು ಕರೆಯುವುದನ್ನೂ ಬಿಡಲೇ ಇಲ್ಲ.

ಲಿಂಗ ಹೊಳೆಯ ಪಾಲಾದುದು ಹೇಗೆ ಎಂಬುದು ಮಾತ್ರ ಒಬ್ಬರಿಗೂ ಬಗೆಹರಿಯಲಿಲ್ಲ. ಸುಬ್ಬಣ್ಣಗೌಡರೂ ಲಿಂಗನ ಸುಳಿವು ಎಲ್ಲಾದರೂ ಕಾಣಬಹುದೋ ಎಂಬ ಆಸೆಯಿಂದ ದಡವನ್ನೆಲ್ಲಾ ಹುಡುಕಲು ಕೆಲವು ಆಳುಗಳನ್ನು ಕಳುಹಿಸಿದರು.

ರಾಮೇಗೌಡರು ಎಲ್ಲರನ್ನೂ ನುಗ್ಗೇಹಳ್ಳಿಗೆ ಬರುವಂತೆ ಪ್ರಾರ್ಥಿಸಿದರು.

ದಾರಿಯಲ್ಲಿ ಲಿಂಗನು ಹಠಾತ್ತಾಗಿ ಮರೆಯಾದ ವಿಚಾರವನ್ನೇ ಪ್ರಸ್ತಾಪಿಸಿ ವಿಸ್ಮಯಪಡುತ್ತಾ ಸ್ವಲ್ಪ ಹೊತ್ತಿನಲ್ಲಿಯೇ ಎಲ್ಲರೂ ನುಗ್ಗೇಹಳ್ಳಿಗೆ ಸೇರಿದರು.

ಬೆಳಗಾಯಿತು. ಮಳೆ ಇನ್ನೂ ನಿಂತಿರಲಿಲ್ಲ. ರಾತ್ರಿಯ ಡಿಬಿಡಿಯಿಂದ ಬಳಲಿ

ಬೆಂಡಾದ ಸುಬ್ಬಣ್ಣಗೌಡರು ಹಾಸಿಗೆಯ ಮೇಲೆ ಮಲಗಿಕೊಂಡು ರಾಮೇಗೌಡರು ಸಿದ್ದೇಗೌಡರನೊಡನೆ ಹಿಂದಿನ ರಾತ್ರಿ ನಡೆದ ಸಂಗತಿಗಳನ್ನು ಕುರಿತು ಮಾತಾಡುತ್ತಿದ್ದರು. ಅವರಿಗೆ ಸ್ವಲ್ಪ ದೂರದಲ್ಲಿ ಅಳುತ್ತಿದ್ದ ನಾಗನನ್ನು ತಿಮ್ಮು ಸೀತೆ ಇಬ್ಬರೂ ಸಮಾಧಾನ ಪಡಿಸುತ್ತಿದ್ದರು.

ಸೀತೆ "ಅಳಬೇಡ, ನಾಗ; ಅಪ್ಪ ಬರ್ತಾನೆ" ಎಂದು ಅವನ ಕಣ್ಣೀರು ಒರೆಸಿದಳು.

ನಾಗ ಬಿಕ್ಕಿ ಬಿಕ್ಕಿ ಅತ್ತ. ತಿಮ್ಮು "ಲಿಂಗ ಬರ್ತಾನೋ ನಾಗ; ಅಳೋದ್ಯಾಕೋ? ಸುಮ್ಮನಿರೊ" ಎಂದು ಸಂತೈಸುತ್ತಿದ್ದ.

ಅಷ್ಟರಲ್ಲಿ ಹೊರಂಗಳದಲ್ಲಿ ಏನೋ ಗದ್ದಲವಾಗಿ "ಲಿಂಗ ಬಂದಾ! ಲಿಂಗ!" ಎಂಬ ಕೂಗು ಕೇಳಿಸಿತು.

ಸುಬ್ಬಣ್ಣಗೌಡರು ಎದ್ದು ಹೊರಗೆ ಓಡಿದರು. ರಾಮೇಗೌಡರೇ ಮೊದಲಾದವರು ಅವರ ಹಿಂದೆಯೇ ನುಗ್ಗಿದರು. ತಿಮ್ಮು ಸೀತೆ ಇಬ್ಬರೂ ನಾಗನನ್ನು ಎಳೆದುಕೊಂಡು ಅಲ್ಲಿಗೆ ಓಡಿದರು. ವಾಸ್ತವವಾಗಿಯೂ ಲಿಂಗ ಬಂದಿದ್ದ! ನಾಗ "ಅಪ್ಪಾ" ಎಂದು ಓಡಿಹೋಗಿ ಅವನನ್ನು ತಬ್ಬಿಕೊಂಡ. ಲಿಂಗನ ಬಟ್ಟೆಬರಿಯೆಲ್ಲಾ ಒದ್ದೆಯಾಗಿ ಮೈಯೆಲ್ಲಾ ಕೆಸರಾಗಿತ್ತು. ಬಹಳ ಬಳಲಿ ಕಂಗೆಟ್ಟು ನಡುಗುತ್ತಿದ್ದ ಅವನನ್ನು ಒಳಗೆ ಕರೆದುಕೊಂಡು ಹೋಗಿ ಬೇರೆ ಬಟ್ಟೆ ಉಡಿಸಿ, ಕಾಫೀ ತಿಂಡಿ ಕೊಟ್ಟು, ಬೆಚ್ಚಗೆ ಮಲಗಿಸಿದರು.

ಆಮೇಲೆ ಸುಬ್ಬಣ್ಣಗೌಡರು ಅವನ ಹಾಸಿಗೆ ಬಳಿ ಕುಳಿತು "ಲಿಂಗ, ಇದೇನು ಸಮಾಚಾರ?" ಎಂದರು.

ಲಿಂಗ ಕಿರುದನಿಯಿಂದ: ಹುಟ್ಟು ಹಾಕುತ್ತಾ ಇದ್ದೆ. ಒಂದು ಸಲ ದೋಣಿ ಮೇಲೆ ಕೆಳಗಾಗಲಿಲ್ಲವೆ? ಆಗ ಮುಗ್ಗುರಿಸಿ ಹೊಳೆಗೆ ಬಿದ್ದೆ. ದೋಣಿ ಹಿಡಿಯುವಷ್ಟರಲ್ಲಿಯೇ ಮುಂದಕ್ಕೆ ಹೋಯಿತು. ನಾನು ಸ್ವಲ್ಪ ದೂರ ಈಜಿಕೊಂಡು ತೇಲಿಕೊಂಡು ಹೋದೆ. ಏನೋ ನನ್ನ ಅದೃಷ್ಟದಿಂದ ಕಾಲಿಗೆ ದಿಣ್ಣೆ ಸಿಕ್ಕಿತು. ನಿಂತೆ, ಸೊಂಟದವರೆಗೂ ನೀರಿತ್ತು.ಹಾಗೇ ನಿಂತಿದ್ದೆ. ಬೆಳಗಾದ ಮೇಲೆ ಹೊಳೆ ಇಳಿಯಿತು. ಏನೋ ನಿಮ್ಮನ್ನದ ಋಣ ಇನ್ನೂ ಇತ್ತು."

ಅದಕ್ಕೆ ಗೌಡರು, "ಅಲ್ಲೊ ಹುಟ್ಟುಹಾಕುತ್ತಿದ್ದವನು ಮುಗ್ಗುರಿಸಿ ಬಿದ್ದರೆ ಹುಟ್ಟು ದೋಣಿಗೆ ಬರುವುದು ಹೇಗೋ?"

"ಏನೋ ಅಯ್ಯಾ, ದೇವರಿಗೆ ಗೊತ್ತು!"

ಮಧ್ಯಾಹ್ನ ಊಟ ಆದಮ ೕಲೆ ತಿಮ್ಮು ಸೀತೆ ಇಬ್ಬರೂ ನಾನು ಮೊದಲು ಹೇಳಿದ್ದು ತಾನು ಮೊದಲು ಹೇಳಿದ್ದು ಎಂದು ಚರ್ಚೆ ಮಾಡುತ್ತಿದ್ದರು.

ನಾಗಮ್ಮ ಅಲ್ಲಿಗೆ ಬಂದು "ಏನ್ರೋ ಅದೂ" ಎಂದರು.

ತಿಮ್ಮು "ಮೊದಲು ನಾನು ಹೇಳಿದ್ದಮ್ಮ, ಲಿಂಗ ಬರ್ತಾನೆ ಅಂತಾ" ಎಂದನು.

ಸೀತೆ "ಇಲ್ಲಮ್ಮ! ತಿಮ್ಮಣ್ಣಯ್ಯ ಬರೀ ಸುಳ್ಳು! ನಾನೇ ಮೊದಲು ಹೇಳಿದ್ದು ಬೇಕಾದರೆ ನಾಗನ್ನೇ ಕೇಳಮ್ಮ."

"ಯಾರಾದರೂ ಹೇಳಿದ್ದಾಗಲಿ! ಅಂತೂ ಲಿಂಗ ಬಂದನಲ್ಲ. ಅಷ್ಟೇ ಸಾಕು!" ಎಂದು ಹೇಳಿ ನಾಗಮ್ಮ ಒಳಗೆ ಹೋದರು.

●

# ೩. ಗರ್ಜನೆ

**–ಬೆಸಗರಹಳ್ಳಿ ರಾಮಣ್ಣ**

ತಲೆಯ ಮೇಲೆ ಜೋಳದ ಕಡ್ಡಿಯ ಹೊರೆ ಹೊತ್ತು ಮನೆ ಕಡೆಗೆ ಹೆಜ್ಜೆ ಹಾಕುತ್ತಿದ್ದ ಪಟೇಲರ ಮನೆಯ ಮರಿನಂಜ ಊರ ಮುಂದಿನ ಕೆರೆ ಬಾವಿಯಿಂದ ಸಿಹಿನೀರಿನ ಕೊಡಗಳನ್ನು ಹೊತ್ತುಕೊಂಡು ಕುಲುಕುತ್ತ, ನಡೆಯುತ್ತ ಎದುರು ಬರುತ್ತಿರುವವಳು ಯಾರು? ಎಂದು ಮನಸ್ಸಿನಲ್ಲಿಯೇ ಗುಣಾಕಾರ ಹಾಕುತ್ತಿದ್ದಂತೆಯೇ ಇನ್ನೂ ಹತ್ತಿರ ಹತ್ತಿರ ಬಂದಳು–ನಿಂಗಣ್ಣನ ಮಗಳು ಪಾರ್ವತಿ. ವಯ ಸ್ಸಿನ ಹುಡುಗಿ. ತಿವಿದು ಗಟ್ಟಿಸಿದಂತಹ ಮೈಕಟ್ಟು. ತಲೆಯ ಮೇಲೊಂದು ಸೊಂಟದ ಮೇಲೊಂದು ನೀರು ತುಂಬಿದ ಕೊಡಗಳು. ಹಣೆಯ ಮೇಲೆ ಬೆವರಿನ ಹನಿಗಳ ಸಾಲು. ಎಣ್ಣೆಗೆಂಪು ಬಣ್ಣದ ದುಂಡು ಮುಖಕ್ಕೆ ಒಪ್ಪುವಂಥ ಮೂಗು ತುಟಿಗಳು. ನೋಡುತ್ತ ನಿಂತ ಮರಿನಂಜನ ಎದೆಗೆ ಹದವಾದ ನೆಲಕ್ಕೆ ನೇಗಿಲು ಹೂಡಿ ದಾಗ ಆಗುವಷ್ಟು ಹರ್ಷವಾಯಿತು.

"ಇದೇನು ಹಿಂಗೆ ನೋಡ್ತಿ! ಗುರ್ತು ಸಿಗಲಿಲ್ವೆ ನಂದು?" ಎಂದು ದೃಷ್ಟಿಸಿ ನೋಡಿದಳು. ಇವನು "ಆಂ....ಹೂಂ" ಎನ್ನುವುದರೊಳಗೆ ನಗುತ್ತ ಬಿರುಸಾಗಿ ಮನೆ ಕಡೆ ಸಾಗಿದಳು. ಮುಂದೆ ಮುಂದೆ ಸಾಗಿದಂತೆ ಅವಳ ರೂಪು ಮರಿನಂಜನ ಕಣ್ಣುಗಳಲ್ಲಿ ಹೆಪ್ಪುಕಟ್ಟಿತು.

ಸಂಜೆ: ಹುಲ್ಲು ತಂದು, ದನಗಳನ್ನು ಕೊಟ್ಟಿಗೆಯಲ್ಲೆ ಕಟ್ಟುಹಾಕಿ ಕುರಿಗಳನ್ನು ಲೆಕ್ಕಹಾಕಿ, ಕುರಿಕಾಯುವ ಬೆಣಚನಿಗೆ ಟಗರುಗಳಿಗೆ ಹುರುಳಿ ತಿನ್ನಿಸುವಂತೆ ಆಜ್ಞೆ ಮಾಡಿ ಮನೆ ಬಾಗಿಲಿಗೆ ಬಂದು ನಿಂತ ಮರಿನಂಜನಿಗೆ ಆಶ್ಚರ್ಯವಾಯಿತು. ಪಾರ್ವತಿಯ ಮನೆ ಮುಂದೆ ಜನ; ಜೊತೆಗೆ ಸದ್ದು ಬೇರೆ. ಪಾರ್ವತಿಯ ಅಪ್ಪನಿಗೇನಾದರೂ ಹಿಂದೆ ಮುಂದೆ ಷುರುವಾಯ್ತೋ ಏನು ಅಂತ ಅನುಮಾನದಿಂದಲೇ ಬೀದಿಗಿಳಿದ.

ಪಾರ್ವತಿಯ ಮನೆಕಡೆಗೇ ಹೋಗುತ್ತಿದ್ದ ಗಿರಿಗಕ್ಕನನ್ನು ನೋಡಿ ಕೂಗಿದ–

"ಗಿರಿಗಕ್ಕ....ಗಿರಿಗಕ್ಕೋ ಏನದು?"

"ಏನಾರ ಆಗ್ಲಿ ನಿನಗ್ಯಾಕ್ಲ ಕುರಿ ನಂಜ"

"ಅದೇನು ಹೇಳ್ಮಂತೆ"

"ಪಾರ್ವತಿ ಮೈನೆರೆದವ್ಳೆ. ಗುಡ್ಲು ಕೂಡುತಾ ಅವ್ಳೆ. ಮದುವೆ ಆದೀಯ? ಗಂಡಸುತನ ಇದ್ದಾದ ನಿಂಗೆ? ಥೂ!" ಎಂದು ಬೀದಿಯಲ್ಲೆ ಎಲ್ಲರಿಗೂ ಕಾಣುವಂತೆ ಕೆನ್ನೆಗೆ ತಿವಿದಳು.

"ಕುರಿನಂಜನೋ, ಮರಿನಂಜನೋ ಗೊತ್ತಾಯ್ತದೆ ಆಮ್ಯಾಲೆ; ಹೆಣ್ಣು ಕೊಡ್ಸಿ ಮದುವೆ ಮಾಡಿನೋಡು" ಎಂದೇಬಿಟ್ಟ.

"ಅಂಥ ಚೆಂದುಳ್ಳಿ ಹೆಣ್ಣ ನಿನ್ನಂಥ ಹೆಬಗನಿಗೆ, ಹಿಂದು ಮುಂದು ಇಲ್ಲದ ಹಾದರಕ್ಕೆ ಹುಟ್ಟಿದೋನಿಗೆ" ಎಂದು ಇನ್ನೊಮ್ಮೆ ಬಲವಾಗಿ ಕೆನ್ನೆಗೆ ತಿವಿದುದನ್ನು ಕಂಡು ಪಡಸಾಲೆಗಳಲ್ಲಿ ನಿಂತು ನೋಡುತ್ತಿದ್ದ ದೊಡ್ಡವರು, ಮಕ್ಕಳು ಕಿಸಕ್ಕನೆ ನಕ್ಕರು.

ಯಾವುದನ್ನೂ ಲೆಕ್ಕಿಸದೆ ನಡೆದು ನೋಡಿದ. ಮಡಿಲಿಗೆ ಕೊಬ್ಬರಿ, ಅಕ್ಕಿ, ಚಿಗಳಿ ತುಂಬಿಸಿಕೊಂಡು ಸೊಪ್ಪಿನ ಗುಡಿಸಿಲಿನಲ್ಲೆ ನಾಚಿಕೆಯಿಂದ ತಲೆ ಬಾಗಿಸಿ ಸಂಭ್ರಮದಿಂದ ಕುಳಿತಿದ್ದ ಪಾರ್ವತಿ, ಮರಿನಂಜನಿಗೆ ಹುಚ್ಚು ಹಿಡಿಸಿಬಿಟ್ಟಳು.

ಉಂಡು ಹಿಂದಲ ಹಟ್ಟಿಯ ಕಣಜದ ಗೋಡೆಯನ್ನು ಒರಗಿ ಕುಳಿತು ಬೀಡಿ ಸೇದುತ್ತ ಆಗಲೆ ಮಲಗಲು ತಯಾರಿ ನಡೆಸಿದ್ದ ಬೆಣಚನಿಗೆ:

"ಬಾ ಇಲ್ಲಿ ಬೆಣಚ ಒಸಿ ಬೆನ್ನು ಕೆರಿ" ಎಂದು ಕೂಗಿದ. ಬೆಣಚ "ಎಲ್ಲಣ್ಣ ಬೆನ್ನ ಇತ್ಲಾಗೆ ತಿರುಗಿಸು" ಎಂದು ಕುಳಿತುಕೊಂಡು, ನವಿರಾಗಿ ಬೆನ್ನು ಕೆರೆಯಲು ಪ್ರಾರಂಭಿಸಿ ಮೆಲ್ಲನೆ ಕೇಳಿದ: "ಏನಣ್ಣ ಇವತ್ತು ಪಾರ್ವತಿಯ ಗುಡ್ಲು ಕೂಡಿ ಪದ ಹೇಳಿ, ಕಡ್ಲೆಪುರಿ ಕೊಟ್ರಲ್ಲ ಯಾಕೆ?"

"ಮೈನೆರೆದ್ರೆ ಗುಡ್ಲು ಕೂಡ್ತಾರೆಕಲ, ಬೆಣಚ"

"ಮೈನೆರೆಯೋದು ಅಂದ್ರೆ ಏನಣ್ಣ?" ಮರಿನಂಜನಿಗೆ ನಗು ಬಂತು. ಮೆಲ್ಲಗೆ ನಗುತ್ತ: "ಲೋ! ನಿನ್ನಂಥ ಎಳೇ ಹೈದನಿಗೆ ಅದರ ಸುದ್ದಿ ಬ್ಯಾಡ, ಸರಿಯಾಗಿ ಬೆನ್ನು ಕೆರಿ ಮಂಕೆ" ಎಂದು ಹುಸಿಕೋಪ ತುಂಬಿದ ಧ್ವನಿಯಲ್ಲಿ ಹೇಳಿದುದನ್ನು ಗಮನಿಸಿ ತೆಪ್ಪಗಾದ. "ಸಾಕು ಹೋಗು" ಎನ್ನುತ್ತಲೇ ಹೋಗಿ ಮಲಗಿಕೊಂಡು ಹಳೆಯ ಕಂಬಳಿಯನ್ನು ಕತ್ತಿನವರೆಗೆ ಹೊದ್ದುಕೊಂಡು: "ಅದು ಏನು ಅಂತ ನಾಳಾಕೆ ಹೇಳಿಯ" ಅಂದ. "ಕೊಟ್ರೆ ಮೊಟ್ಟೆ ಇಕ್ಕೋಬೇಕು ನೋಡು" ಎಂದು ಮರಿನಂಜ ಮೇಲೇಳಲು ಹವಣಿಸಿದುದನ್ನು ಕಂಡು "ಇಲ್ಲ, ಇನ್ನೊಂದು ಸಲ ಆ ಮಾತು ಎತ್ತೂದಿಲ್ಲ" ಎಂದು ಗಬಕ್ಕನೆ ತಲೆ ತುಂಬ ಕಂಬಳಿ ಎಳೆದುಕೊಂಡು "ಗೊರ್ ಗೊರ್" ಎಂದು ಗೊರಕೆ ಹೊಡೆಯುವವನಂತೆ ನಟಿಸಲಾರಂಭಿಸಿದ.

ಮರಿನಂಜ ದೀಪ ತುಂಬಿ ಚಾಪೆಯ ಮೇಲೆ ಮೈ ಆನಿಸಿದ. ಇಷ್ಟು ಹೊತ್ತಿನವರೆಗೂ ಇದ್ದ ಖುಷಿ, ಗಿರಿಗಕ್ಕ ಆಡಿದ ಮಾತುಗಳನ್ನು ನೆನೆದುಕೊಂಡೊಡನೆಯೇ ಕರಗಿಹೋಯಿತು. ತನ್ನ ಹುಟ್ಟಿನ ಹಿನ್ನೆಲೆಯ ವಿಷಾದ ಇತಿಹಾಸ ಎದುರು ನಿಂತಿತು.

ತಾನು ಹುಟ್ಟುವುದಕ್ಕೆ ಮುಂಚೆಯೇ ಅವ್ವ ಎನಿಸಿಕೊಂಡವಳು "ಗೊಟಕ್" ಎಂದಿದ್ದರೆ ಚಿಂತೆಯಿರಲಿಲ್ಲ ಎನ್ನಿಸಿತು. ಅವಳು ಇಟ್ಟ ಮರಿನಂಜ ಎನ್ನುವ ಹೆಸರು ಕಳೆದ ಮೂರು ವರ್ಷಗಳವರೆಗೂ ಕುರಿ ಕಾಯುವುದೇ ತನ್ನ ಕೆಲಸವಾಗಿದ್ದುದರಿಂದ "ಕುರಿನಂಜ" ಎಂದು ಬದಲಾದುದು; ಚಿಕ್ಕವರು ದೊಡ್ಡವರು ಎನ್ನದೆ "ಕುರಿನಂಜ, ಕುರಿನಂಜ" ಎಂದು ಕರೆದು, ಜುಟ್ಟು ಹಿಡಿದು ಹಂಗಿಸಿದಾಗ ಊರ ಮುಂದಿನ ಬಸವನಗುಡಿಯ ಕುದುರೆಕಲ್ಲಿನ ಮೇಲೆ ಕುಳಿತು ಬಿಕ್ಕುತ್ತ ಅಳುತ್ತಿದ್ದುದು; ಎಲ್ಲ ನೆನಪಾಯಿತು.

ಗಿರಿಗಕ್ಕನ ಮಾತಿನ ಮೊನೆಯಿಂದ ಬಂದ ಅವ್ವನ ನೆನಪು ಮರಿನಂಜನ ಎದೆಯಲ್ಲಿ ಚಿಟುಕು ಮುಳ್ಳು ಆಡಿಸಿತು. ತನ್ನ ಅಪ್ಪ ಯಾರು ಎಂದು ತಿಳಿದ ರೀತಿಯೂ ಅವನು ಮರೆಯಲಾರದ್ದು.

ಎಂಟು ವರ್ಷದ ಕೆಳಗೆ ಮರಿನಂಜ ಹದಿನೈದು ವರ್ಷದ ಹುಡುಗ. ಕುರಿ ಮೇಯಿಸುತ್ತ ಊರ ಮುಂದೆ ನಿಂತಿದ್ದ ಅಲ್ಲಿಗೆ ಜೇಬಿನ ತುಂಬ ಕಜ್ಜಾಯ ತುಂಬಿಕೊಂಡು ಬಂದ ಕುಳ್ಳ ಇವನಿಗೂ ತೋರಿಸಿ, ಬಾಯಲ್ಲಿ ನೀರೂರಿಸಿದ.

"ನನಗೂ ಕೊಡ್ಲ ಕುಳ್ಳ ಕಜ್ಜಾಯವ"

"ಕೊಡ್ತೀನಿ. ನಾನು ಕೇಳೊದ್ಕೆ ಜವಾಬು ಹೇಳುಮಂತೆ"

"ಅದೇನು? ಕೇಳು"

"ನಿಮ್ಮಪ್ಪ ಯಾರು? ಹೆಸರು ಹೇಳ್ಮಂತೆ"

"ನಮ್ಮಪ್ಪ ಇಲ್ಲ. ಸತ್ತೋದ"

"ಇಲ್ಲ ಅವನೆ! ಯಾರು ಹೇಳುಮಂತೆ" ಎಂದು ಕಜ್ಜಾಯ ತೋರಿಸಿ ಅಣಕಿಸಿ, ಆಸೆ ಹುಟ್ಟಿಸಿದ.

ಮರಿನಂಜನಿಗೆ ಕತ್ತಲೆಯಲ್ಲೆ ಕಣ್ಣುಕಟ್ಟಿ ಬಿಟ್ಟಂತಾಯಿತು. ಅಳು ಒಳಗಿಂದ ಒದ್ದುಕೊಂಡು ಬಂತು.

ಬಸವನ ಗುಡಿಯ ಮುಂದಿನ ಶಿವಶಂಕುವಿನ ಮರದ ಕೆಳಗೆ ಕುಳಿತಿದ್ದ ಸುಬ್ಬಮ್ಮನ ಬಳಿ ಓಡಿದ. ತನಗೂ ಕುಳ್ಳನಿಗೂ ಆದ ಮಾತನ್ನು ಹೇಳಿ; ಅತ್ತ. ಸುಬ್ಬಮ್ಮ "ಸುಮ್ಮನಿರು" ಎಂದಳು. ಮರಿನಂಜ ಅಳು ನಿಲ್ಲಿಸಲಿಲ್ಲ.

"ನಮ್ಮಪ್ಪ ಯಾರು? ಹೇಳು" ಎಂದು ದುಂಬಾಲುಬಿದ್ದ.

"ನಿಮ್ಮವ್ವನ ಮೊದಲನೇ ಗಂಡ ಸತ್ತಮೇಲೆ, ನಿಮ್ಮವ್ವನ ಆಸ್ತಿಪಾಸ್ತಿ ಎಲ್ಲಾ ಪಟೇಲರ ಪಾಲಾಯ್ತು. ಆಮೇಲೆ ನೀನು ಹುಟ್ಟಿದೆ. ನೀನು ನಾಲ್ಕು ವರ್ಷದವನಾಗಿದ್ದಾಗ ನಿಮ್ಮವ್ವ ಕಾಲರ ತಗುಲಿ ಸತ್ತೋದ್ಲು" ಎಂದು ಹೇಳಿದ ಮಾತುಗಳನ್ನು ಕೇಳಿ ಬೆಟ್ಟ ಮೇಲೆ ಬಿದ್ದಂತಾಗಿ ಕಣ್ಣು ಕೆಂಪಗಾಗುವವರೆಗೂ ಅತ್ತಿದ್ದ.

ಪಟೇಲ ಮೊದಲನೇ ಹೆಂಡತಿ ಮಾತುಮಾತಿಗೂ "ಬದುಕಿದ್ದಾಗ ನಿಮ್ಮವ್ವ ನನ್ನ

ಹೊಟ್ಟೆ ಉರಿಸಿದ್ಲು. ಈಗ ನೀನು ನನ್ನ ಒಡ್ಲು ಉರೀಸೀಯ" ಎಂದು ಹೊಡೆಯುತ್ತಿದ್ದುದರ ಹಿನ್ನೆಲೆ ಅರ್ಥವಾಗಿತ್ತು.

ಕಾದ ಕಲ್ಲಿನ ಮೇಲೆ ಮಲಗಿದವನಂತೆ ಮರಿನಂಜ ಹೊರಳಾಡಿದ. ಪಟೇಲರಿಗೆ ಎರಡನೇ ಹೆಂಡತಿ ತಂದರೂ ಮಕ್ಕಳಿಲ್ಲ. ನ್ಯಾಯ ರೀತಿಯಲ್ಲಿ ನೋಡಿದರೆ ತಾನೇ ಅವರ ಮಗ. ಅವರು ತನ್ನನ್ನು ನಡೆಸಿಕೊಳ್ಳುವ ರೀತಿಯನ್ನು ಕಂಡು ಮರಿನಂಜನ ಮೈ ಕೆಂಡವಾಯಿತು. ಮುಖದ ಮಾಂಸ ಖಂಡಗಳು ಬಿಗಿಯಾದುವು. ಹಲ್ಲುಗಳನ್ನು "ನೊರ ನೊರ"ನೆ ಕಡಿದ.

"ನನ್ನ ಅವರಿವರು ಹಾದರಕ್ಕೆ ಹುಟ್ಟಿದೋನೆ ಅಂದ್ರೆ ನಿಮಗೇನೂ ಅನ್ನಿಸೋದೇ ಇಲ್ವೆ? ಮರಿನಂಜ ಅನ್ನೊ ಬದಲು ಕುರಿನಂಜ, ಕುರಿನಂಜ ಅಂತ ಕೂಗಿ ಹಂಗಿಸಿದ್ರೆ ನಿಮ್ಗೆ ಹೊಟ್ಟೆ ತಣ್ಣಗಾದದೇ" ಎಂದು ಪಟೇಲರನ್ನು ಹಿಡಿದು ಜಗ್ಗಿಸಿ ಕೇಳಬೇಕು ಎಂದು ಬಲವಂತವಾಗಿ ಕಣ್ಣು ಮುಚ್ಚಿದ.

* * *

ಮಾರನೆಯ ಬೆಳಿಗ್ಗೆ ಜೋಳದ ಕಡ್ಡಿ ಕುಯ್ದುಕೊಂಡು ಬರಲೆಂದು ಹೊರಟಿದ್ದ ಮರಿನಂಜ, ಊರ ಮುಂದಿನ ಅರಳೀಕಟ್ಟೆ ಬಳಿಯ ತುರಿಕಲ್ಲು ಕಂಬದ ಬಳಿ ಕುಡುಗೋಲನ್ನು "ಚೊರ್ ಥಿರ್" ಎಂದು ಮಸೆಯುತ್ತ, ಆಗಾಗ್ಗೆ ನಿಲ್ಲಿಸಿ ಬಲಗೈ ಬೆಟ್ಟುಗಳಿಂದ ಅದರ ಬಾಯನ್ನು ಸಾಕಷ್ಟು ಹರಿತವಾಗಿದೆಯೇ ಎಂದು ಪರೀಕ್ಷಿಸುತ್ತ, ಸಮಾಧಾನವಾಗದೆಯೇ ಇನ್ನೂ ಹರಿತ ಮಾಡಲು ಮಸೆಯುತ್ತ ನಿಂತಿದ್ದ. ಅಲ್ಲಿಗೆ ತಾನೂ ಕುಡುಗೋಲನ್ನು ಹರಿತ ಮಾಡಲು ಬಂದು "ಕುರುಕ್ಷೇತ್ರ" ನಾಟಕದಲ್ಲಿ ಸದಾ ಭೀಮನ ಪಾರ್ಟು ಮಾಡುವ ಮೀಸೆ ದೊಡ್ಡಣ್ಣ "ಏನ್ಲಾ ಕುರಿನಂಜ; ಬಡ್ಡಿಮಗ್ನೆ ಎಂಥೆಂಥ ಹೆಬಗರೆಲ್ಲ ಮದುವೆ ಆದ್ರು! ನಿಂದು ಯಾವಾಗ್ಲಾ?" ಎಂದು ಕಣ್ಣು ಅಮುಕಿ ಅಣಕಿಸಿ ಕೇಳಿದ.

"ಅಯ್ಯೋ ಸುಮ್ಮನಿರಣ್ಣೋ ನಿಮ್ಮಂಥ ಆಡೋ ಹೈಕಳಿಗೆಲ್ಲ ಯಾಕೆ ಮದುವೆ?" ಮರಿನಂಜ ಪೆದ್ದ ನಗು ನಕ್ಕ.

"ಅಲ್ಲ ಕನ್ಲ ಹಂಗಾದ್ರೆ ನೀನು ಮುಟ್ಠಾಳ ಅನ್ನು! ಪಟೇಲರಿಗೆ ನಾನು ಮೈಸೂರೇಲಿ ಒಂದು ಹೆಣ್ಣು ನೋಡ್ಕೊಂಡು ಬನ್ನಿ ಹೆಂಗಿದ್ರೂ ದ್ರೌಪದಿ ಪಾರ್ಟ್ ಮಾಡೋಕೆ, ಡ್ಯಾನ್ಸ್‌ಗೆ ಹೆಂಗ್ಸ್ರ ಕರ್ಕೊಂಡು ಬರೋಕೆ ಹೋಯ್ತಾಯಿದ್ದೀರಲ್ಲ ಅಂದುಬುಟ್ಟನಲ್ಲಪ್ಪ ನಾನು! ಇನ್ನೇನು ಗತಿಯಪ್ಪ ಅವ್ರು ನೋಡ್ಕೊಂಡೇ ಬಂದ್ರೇ" ಎಂದು ಬಾಯಿಯ ಮೇಲೆ ಕೈ ಮಡಗಿಕೊಂಡ.

"ಹೋ! ಈ ಶಿಖಂಡಿ ನನ್ನಮಗನಿಗೆ ಮದುವೆ ಬ್ಯಾರೆ ಕೇಡು. ಮಾಡುದ್ರೆ ಅವ್ಳು ಕಂಡೋರ ಪಾಲು. ಮೊದಲೇ ಗಾದೇ ಇಲ್ವೆ ಉಳೋನಿಗೆ ಭೂಮಿ; ಆಳೋನಿಗೆ

ಹೆಣ್ಣು ಅಂತ" ಎಂದು ಅಲ್ಲಿಗೆ ಬಂದ ಶಕುನಿ ಪಾರ್ಟುದಾರ ಕುಳ್ಳ ಮರಿನಂಜನ ಜುಟ್ಟನ್ನು ಬಲವಾಗಿ ಹಿಡಿದು ಅಲ್ಲಾಡಿಸಿದ ನೋವಿಗೆ ಪ್ರಾಣವೇ ಹೋದಂತಾಗಿ:

"ಬುಡಣ್ಣೋ ನಿನ್ನ ದಮ್ಮಯ್ಯ ಅಂತೀನಿ"

"ಗಂಡಸಾದ್ರೆ ಬುಡ್‌ಸ್ಕೋ, ಇಲ್ದೇ ಹೋದ್ರೆ ಶಿಖಂಡಿ ಅಂತ ಒಪ್ಕೋ; ಬುಡ್ತೀನಿ" ಹಿಡಿತವನ್ನು ಇನ್ನೂ ಬಲಪಡಿಸಿದ. ಮರಿನಂಜನ ತಲೆಗೆ ಮೊಳೆ ಜಡಿದಂತಾಯಿತು.

"ಅಷ್ಟೇ ಏನ್ಲಾ ಶಕುನಿ" ಎಂದು ಕುಡುಗೋಲನ್ನು ನೆಲಕ್ಕೆ ಹಾಕಿ, ಅಡ್ಡಬಳಸಿ, ಕುಳ್ಳನ ಕಾಲುಗಳಿಗೆ ತನ್ನ ದಢೂತಿ ಕಾಲುಗಳಿಂದ ತೊಡರು ಹಾಕಿ; ಬಲಗೈಯಿಂದ ಅವನ ಕತ್ತನ್ನು ಎಟುಕಿಸಿಕೊಂಡು "ಗೊಟರ್ ಗೊಟರ್" ಎನ್ನುವಂತೆ ಅದುಮಿ ದೊಪ್ಪನೆ ದಾರಿಯ ಮಣ್ಣಲ್ಲಿ ಉರುಳುಸೇವೆ ಮಾಡಿಸಿದ. ಮೀಸೆ ದೊಡ್ಡಣ್ಣ ಬೆಪ್ಪಾಗಿ ಹೋದ. ಕುಳ್ಳನ ತಲೆಗೆ, ಮೈಗೆಲ್ಲ ಧೂಳು ತುಂಬಿಕೊಂಡಿತು. ಬಾಯಿಗೆ ಹೋಗಿದ್ದ ಧೂಳಿನ ಕಣಗಳನ್ನು "ಥೂ! ಥೂ!" ಎಂದು ಉಗುಳುತ್ತ ಮೇಲೆ ಏಳುತ್ತ:

"ಲೇ ಕುರಿನಂಜ ನಿನ್ನ ಹುಟ್ಟಿದ ದಿನ ಕಾಣಿಸ್ತೀನಿ"

"ಇಲ್ಲೇ ಇಲ್ಲಕನ ಏಳ್ಲೇ ಮ್ಯಾಕ್ಕೆ. ಸಿಳ್ಳೇಕ್ಯಾತ"

"ಲೇ ಶಿಖಂಡಿ, ಪಟೇಲ್ರು ಬರ್ಲಿ ಮಾಡಿಸ್ತೀನಿ"

"ಶಿಖಂಡಿ ನೀನು; ನಿಮ್ಮಪ್ಪ" ಎಂದು ಕುಡುಗೋಲನ್ನು ತೆಗೆದುಕೊಂಡು ಕಣ್ಣು ಕೆಂಪಗೆ ಮಾಡಿ ದುರುಗುಟ್ಟಿ ನೋಡುತ್ತ ನಿಂತ ಮರಿನಂಜನನ್ನು ಮೀಸೆ ದೊಡ್ಡಣ್ಣ: "ಲೋ, ಮಗ ಮರಿನಂಜ ಯಾಕೋ ಇವತ್ತು ಕೆಟ್ಟಗಳಿಗೆ, ನೀನು ಹೋಗು, ಎಂದೂ ಬರದ ಕೋಪ ಇವತ್ತು ನಿನಗೆ ಕೊಪ್ಪರಿಗೆ ಅಷ್ಟು ಬಂದದೆ. ನನ್ನ ಮಾತು ಕೇಳು" ಎಂದು ವೈನ ಮಾಡಿ ಬೆನ್ನು ತಟ್ಟಿ ಕಳಿಸಿದ.

* * *

ಬಿರುಸಾಗಿ ಹೆಜ್ಜೆಗಳನ್ನು ಹಾಕುತ್ತ ಹೊಲದ ಕಡೆಗೆ ನಡೆದ ಮರಿನಂಜ.

"ಸದರ ಕೊಟ್ರೆ ಎಲ್ಲ ಹಲ್ಲಿಡಿದು ನೋಡೋಕೆ ಬತ್ತಾರೆ. ನಾಳಾಕೆ ಈ ಹಾಳು ಜುಟ್ಟು ಕತ್ತರಿಸಿಹಾಕಬೇಕು" ಎಂದು ತೀರ್ಮಾನ ಮಾಡಿಕೊಂಡು ಕಾಲುವೆ ಏರಿಯ ಮೇಲೆ ನಡೆಯುವಾಗ ತೋಟದ ಕಡೆಗೆ ನುಗ್ಗಿ ತೆಂಗಿನ ಮರಗಳಿಗೆ ಮುತ್ತಿಗೆ ಹಾಕಲು ಬರುತ್ತಿರುವ ಕೋತಿಯ ಹಿಂಡನ್ನು ಕಂಡು,

"ಲೇ...ಲೇ...ಚುಡೀ...ಚುಡೀ....ಯಾವೂ!" ಎಂದು ಕಿರುಚುತ್ತ ಅವುಗಳತ್ತ ನುಗ್ಗಿದ. ಕೈಗೆ ಕಲ್ಲುಗಳನ್ನೆತ್ತಿಕೊಂಡು ರಭಸದಿಂದ ಬೀರಿದ. "ಕಿರ್, ಕಿರ್ ಗುರ್" ಎಂದು ಕೆಲವು ಹಲ್ಲುಗಿಂಜುತ್ತ ನೋಡಿದುವು. ಇನ್ನೂ ಕಲ್ಲುಗಳು ತಮ್ಮ ಕಡೆಗೆ ಬರುತ್ತಿರುವುದನ್ನು ಕಂಡು: ಒಂದೆರಡಕ್ಕೆ ರುಚಿಯೂ ತಗಲಿ ಅಕ್ಕಪಕ್ಕದಲ್ಲಿದ್ದ ಕೆಲವು ಬಂದ ದಾರಿ ಹಿಡಿದುವು. ಒಂದು 'ಗಡವ' ಕಾಲುವೆ ದಾಟಿ ತೋಟದ ಕಡೆಗೆ ನುಗ್ಗಿಯೇ ಬಿಟ್ಟಿತು.

ಮರಿನಂಜ: "ನಿನ್ನ ಇವತ್ತು ಹುಟ್ಟಿದ ದಿವ್ಸ ಕಾಣಿಸದೇ ಹೋದ್ರೆ ನೋಡು. ತೆಂಗಿನ ಮರ ನೀನ್ ಹತ್ತುಬುಟ್ರೆ ನೀನೇ ಸೈಕಲ ಕೋತಿ" ಎಂದು ತೋಟಕ್ಕೆ ನುಗ್ಗಿದ. ತೆಂಗಿನ ಮರ ಒಂದನ್ನು ಕಾಲುಭಾಗ ಹತ್ತಿದ್ದ ಗಡವನಿಗೆ ಸರಿಯಾಗಿ ಗುರಿಯಿಟ್ಟು ಬಾರಿಸಿದ. ಬಾಲಕ್ಕೆ ಸರಿಯಾಗಿ ಏಟು ಬಿದ್ದುದರಿಂದ ಹತ್ತುವುದನ್ನು ಬಿಟ್ಟು ವಿಕಾರವಾಗಿ ಕಿರುಚುತ್ತ ಏಳುವುದು ಬೀಳುವುದು ಲೆಕ್ಕಿಸದೆ ಹಿಂದೆ ಬರುತ್ತಿದ್ದ ಕಲ್ಲಿನ ಹೊಡೆತಗಳನ್ನು ತಪ್ಪಿಸಿಕೊಳ್ಳಲು ಪೇರಿಕಿತ್ತಿತು.

"ಇವತ್ತು ಬಚಾವಾದೆ ಹೋಗು. ಇನ್ನೊಂದು ದಿನ ತೋಟಕ್ಕೆ ಕಾಲು ಮಡಗಿದ್ರೆ ನಿನ್ನ ಸಿಗ್ದು ಊರಬಾಗಿಲಿಗೆ ತೋರ್ಣ ಕಟ್ತೀನಿ" ಎಂದ. ಠೀವಿಯಿಂದ ತೋಟ ನನ್ನದು ಎನ್ನುವ ಅಧಿಕಾರ ತೋರಿಸುವ ನಡಿಗೆಯಿಂದ ತಿರುಗಾಡಲು ಪ್ರಾರಂಭಿಸಿದ. ಎಲ್ಲ ಮರಗಳನ್ನೂ ಪರೀಕ್ಷಿಸಿದ. ಕುಳ್ಳು ಮರದಲ್ಲೆ ಎರಡು ಗೊನೆಯನ್ನು ರಾತ್ರಿ ಯಾರೋ ಇಳುಕಿಕೊಂಡು ಹೋಗಿರುವ ಗುರುತು ಸಿಕ್ಕಿ: "ಯಾರು ಮಾಡಿರಬೋದು? ಇನ್ನು ಪಟೇಲ್ರು ಬಂದ್ರೆ ನನ್ನ ಮೈ ಕಾದ ತಮಟೆ ಆಯ್ತದಲ್ಲಪ್ಪ! ರಾತ್ರೀಕೆ ಉಂಡಾದಮೇಲೆ ಒಂದು ಸಾರಿ ಬಂದು ನೋಡ್ಕೋ ಹೋಗಬೇಕು" ಎಂದು ನಿರ್ಧರಿಸಿಕೊಂಡು ಜೋಳದ ಹೊಲ ಸಮೀಪಿಸಿ ಜೋಳದ ಕಡ್ಡಿ ಕುಯ್ಯಲು ಕುಳಿತ.

ಮನಸ್ಸಿನಲ್ಲಿ ಉತ್ಸಾಹ ತುಂಬಿ ತುಳುಕುತ್ತಿತ್ತು. ಹೊಲದ ಜೋಳದ ಕಡ್ಡಿಯನ್ನೆಲ್ಲಾ ಧ್ವಂಸ ಮಾಡುವವನಂತೆ ಕುಯ್ಯಲು ಪ್ರಾರಂಭಿಸಿದ. ಕೈಗಳು ಸೋಲುವಂತಾದರೂ ಎಡೆಬಿಡದೆ ಕುಯ್ಯುತ್ತಿರುವಾಗ ಎಡಗೈ ಹೆಬ್ಬೆಟ್ಟನ್ನು ಕುಡುಗೋಲ ಬಾಯಿ ಮುತ್ತಿಕ್ಕಿ ರಕ್ತ ಚಿಲ್ ಎಂದು ಚಿಮ್ಮಿತು.

"ಥೂ! ಸೂಳೆಮಗಂದೆ" ಕುಡುಗೋಲು ಕೆಳಕ್ಕೆಸೆದ.

ಬೆಟ್ಟನ್ನು ಬಾಯಿಗೆ ಹಾಕಿ ಲೊಚ್ ಲೊಚನೆ ಚೀಪಿದ. ಉಪ್ಪು ಉಪ್ಪು ರುಚಿಯ ರಕ್ತ ಹಿತವಾಗಿ ಕಂಡು ನುಂಗಿದ. ಚೌಕವನ್ನು ಪರ್ರೆಂದು ಹರಿದು; ಕಾಲುವೆ ನೀರಿನಲ್ಲಿ ಅದ್ದಿ ಬಿಗಿಯಾಗಿ ಸುತ್ತಿದ. ರಕ್ತ ಬಟ್ಟೆಯನ್ನೂ ತೊಯ್ಸಿತು. ಗಾಯ ಜುಮುಗುಡಲು ಪ್ರಾರಂಭಿಸಿತು. ಕುಯ್ದ ಜೋಳದ ಕಡ್ಡಿಯ ಕಡೆ ನೋಡಿದ. ಆವೇಶದಲ್ಲಿ ಕುಯ್ದುದು ಒಂದು ಭಾರಿ ಹೊರೆ ಆಗುವಷ್ಟಿತ್ತು. ಎಲ್ಲವನ್ನೂ ಸೇರಿಸಿ ಕಟ್ಟಲು ಕಟ್ಟು ತಯಾರಿಸುತ್ತಿದ್ದಂತೆಯೇ ಪಕ್ಕದ ಹೊಲದ ಜವನ ಕೂಗಿದ:

"ಲೋ ಕರಿನಂಜ, ಬಾರ್ಲ ಒಸಿ ಹೊರೆ ಎತ್ತುಕೊಡು."

"..................."

"ಬಾ ಅಂದ್ರೆ...ದೊರೆ ಅಡಿದಂಗಾಡ್ತಿ ಅಲ್ಲ ಕುರಿನಂಜ" ಎಂದು ಮರಿನಂಜನ ಬಳಿ ಬಂದು ನಿಂತ ಜವನನನ್ನು ಕೇಳಿದ:

"ಯಾರ್ಲ ಕುರಿನಂಜ?"

"ನೀನು. ಯಾಕೆ? ಕಾಣ?"

"ಲೇ ಪೀನಾಸಿ; ಕೋಳಿಕಾಲು. ಕುರಿನಂಜ ಅಂತ ನಿಮ್ಮಪ್ಪ ಕಟ್ಟಿದ್ದನೇನೋ ಹುಟ್ಟಿದಾಗ ಬಂದು. ಸದ್ರ ಕೊಟ್ರೆ ಯಾವೋನೋ ಎಲ್ಲಿಗೋ ಕೈ ಹಾಕಿದನಂತೆ"

"ಇನ್ನೇನಂತ ಕರೀಬೇಕು ನಿನ್ನ?"

"ಮರಿನಂಜ ಅಂಥ....."

"ಇಲ್ದೆ ಹೋದ್ರೆ ಏನ್ಮಾಡಿ?"

"ಏನ್ಮಾಡಿ ಅಂದ, ಇವತ್ತು ಶಕುನಿ ಕುಳ್ಳನಿಗೆ ಏನಾಯ್ತು ಹೋಗಿ ಕೇಳ್ಕೋ. ಕೈಲಿ ಏನಿದ್ದಾದು ನೋಡು" ಕುಡುಗೋಲು ತೋರಿಸಿದ. ಮರಿ ನಂಜನ ಅವತಾರ ಕಂಡು ಜವನನಿಗೆ 'ಎಲ್ಲ' ಚಡ್ಡಿಯಲ್ಲೇ ಆಗುವಂತಾಯ್ತು. ಅವನೇ ಮೆಲ್ಲಗಾದ. "ಬಾರೋ ಮಾರಾಯ ನನ್ದು ತಪ್ಪಾಯ್ತು" ಎಂದು ಗೋಗರೆದ. "ಹಂಗ್ ಬಾ ದಾರಿಗೆ, ನ್ಯಾಯಕ್ಕೆ ಬಂದ್ರೆ ನ್ಯಾಯ" ಎಂದು ಹೊರೆ ಕಟ್ಟಿ ಮುಗಿಸಿದ. "ನಡೀ" ಎಂದು ಕರೆದುಕೊಂಡು ಹೋಗಿ ಅವನಿಗೆ ಹೊರೆ ಎತ್ತುಕೊಟ್ಟು; ಅವನು ನೋಡುತ್ತಿದ್ದಂತೆಯೇ ತನ್ನ ದೊಡ್ಡ ಹೊರೆಯನ್ನು ಕುಳಿತುಕೊಂಡು ತಲೆ ಕೊಟ್ಟು ಧಿಗ್ಗನೆ ಮೇಲೇರಿಸಿಕೊಂಡು ಊರಿನ ಕಡೆ ನಡೆದ.

ಊರಿನ ಬಾಗಿಲ ಬಳಿ ಬಂದು ನಿಂತ. ನೆನ್ನೆ ದಿನ ಪಾರ್ವತಿ ಕುಲುಕುತ್ತ ನಡೆದು ಬಂದು ಎದೆಯಲ್ಲಿ ಬಯಕೆಯನ್ನು ಕೆರಳಿಸಿ ನಿಂತು ಮಾತನಾಡಿಸಿದ ಜಾಗವನ್ನೇ ತಿನ್ನುವಂತೆ ನೋಡಿದ. "ನಾ ಕೈ ಹಿಡಿದರೆ ನಿನ್ನೇ ಪಾರ್ವತಿ; ಇಲ್ಲದಿದ್ದರೆ ಇಲ್ಲ. ಯಾರಾದರೂ ಹಿಂದು ಮುಂದು ಇಲ್ಲ, ಹಾದರಕ್ಕೆ ಹುಟ್ಟಿದೋನು ಅಂದ್ರೆ ಪಟೇಲರ ಮುಂದೆ ಕತ್ತಿನ ಪಟ್ಟಿ ಹಿಡಿದು ಎಳೆದುಕೊಂಡು ಹೋಗಿ ನಿಲ್ಲಿಸಿ; ನಾನು ನಿಮಗೆ ಹುಟ್ಟಿದನೋ ಇಲ್ವೋ ಹೇಳಿ ಅಂತೀನಿ" ಎಂದು ಕುಡುಗೋಲ ಬಾಯಮೇಲೆ ಬೆರಳಾಡಿಸಿ ಮುಂದಕ್ಕೆ ನಡೆದಾಗ ಅವನ ಕಾಲುಗಳಲ್ಲಿ ಅಪೂರ್ವ ಕೆಚ್ಚು ತುಂಬಿತ್ತು.

●

# ೪. ಮೃಗ ಮತ್ತು ಸುಂದರಿ

**–ಪಿ. ಲಂಕೇಶ್**

ಆತ ಮೃದು ಸ್ವಭಾವದ ವರ್ತಕನಾಗಿದ್ದ. ಧರ್ಮವಂತನಾಗಿದ್ದ. ಅವನಿಗೆ ಮೂವರು ಹೆಣ್ಣು ಮಕ್ಕಳಿದ್ದರು. ಹಿರಿಯರಾದ ಇಬ್ಬರು ಬಿಂಕ, ಬಡಿವಾರದ ಹುಡುಗಿಯರಾಗಿದ್ದರು. ಅವರಿಗೆ ಇತ್ತೀಚಿನ ಫ್ಯಾಶನ್, ಪಾರ್ಟಿಗಳು, ಗೆಳೆಯರೆಂದರೆ ಪಂಚಪ್ರಾಣ. ತಂದೆ ಶ್ರೀಮಂತ ವರ್ತಕನಾಗಿದ್ದುದರಿಂದ ತೊಂದರೆಯಾಗಿರಲಿಲ್ಲ. ಅವರ ಕಾಟ ತಡೆಯಲಾರದೆ ಹಣ ಕೊಡುತ್ತಿದ್ದ. ಮೂರನೆಯ ಹುಡುಗಿ ಮಾತ್ರ ತಂದೆಯಷ್ಟೇ ಮೃದು ಸ್ವಭಾವದ, ದಾಕ್ಷಿಣ್ಯದ ಹುಡುಗಿಯಾಗಿದ್ದಳು. ಆಕೆಗೆ ತಂದೆಯ ನೆಮ್ಮದಿ ಮುಖ್ಯವಾಗಿತ್ತು. ಅವನಿಗೆ ಬೇಸರವಾದರೆ ಈಕೆ ಬಾಡುತ್ತಿದ್ದಳು. ರೂಪವತಿಯಾಗಿದ್ದ ಆಕೆಯನ್ನು ಎಲ್ಲರೂ ಸುಂದರಿ ಎಂದೇ ಕರೆಯುತ್ತಿದ್ದರು.

ಹೀಗಿದ್ದಾಗ ವರ್ತಕನ ಕಷ್ಟಗಳು ಶುರುವಾದವು. ಅವನ ವ್ಯಾಪಾರ ಕುಸಿದುಬಿತ್ತು. ಬರಬೇಕಾಗಿದ್ದವರಿಂದ ಹಣ ಬರಲಿಲ್ಲ. ಸರಕುಗಳನ್ನು ತರಲು ದೂರದ ದೇಶಕ್ಕೆ ಪ್ರಯಾಣಿಸಿದ್ದ ಹಡಗುಗಳು ಹಿಂದಿರುಗದಷ್ಟು ದಿವಾಳಿಯಾದವು. ತನ್ನ ವ್ಯಾಪಾರ ಜೋರಾಗಿದ್ದಾಗ ಮಾಡಿದ್ದ ಸಾಲಗಳು ಅವನನ್ನು ಬಾಧಿಸತೊಡಗಿದವು. ಇದ್ದಬದ್ದ ಸ್ಥಿರಾಸ್ತಿ, ಚರಾಸ್ತಿಯನ್ನೆಲ್ಲ ಮಾರಿ ಸಾಲ ತೀರಿಸಿ ಉಳಿದ ಪುಟ್ಟ ಮೊತ್ತದಲ್ಲಿ ಹಳ್ಳಿಯ ಕಡೆ ಒಂದು ಮನೆ ಕೊಂಡುಕೊಂಡು ತನ್ನ ಹೆಣ್ಣುಮಕ್ಕಳನ್ನು ಕರೆದು ಹೇಳಿದ, "ಮಕ್ಕಳೆ, ನನ್ನ ಸ್ಥಿತಿ ನಿಮಗೆ ಈಗಾಗಲೇ ತಿಳಿದಿರಬಹುದು. ನಾವಿನ್ನು ನಗರದಲ್ಲಿ ವಾಸಿಸುವುದು ಕಷ್ಟ. ಆದ್ದರಿಂದ ಹಳ್ಳಿಗೆ ಹೋಗಬೇಕಾಗಿದೆ. ದಯಮಾಡಿ ಸಹಕರಿಸಿ. ದೂರದ ದೇಶಕ್ಕೆ ಹೋಗಿರುವ ಅನೇಕ ಹಡಗುಗಳಲ್ಲಿ ಒಂದರ ಬಗ್ಗೆ ಮಾತ್ರ ಸುದ್ದಿ ಬಂದಿಲ್ಲ. ಅದಾದರೂ ಸುರಕ್ಷಿತವಾಗಿ ಬರುವುದೆಂದು ನೆಚ್ಚಿಕೂರಲಾಗುವುದಿಲ್ಲ. ಆದ್ದರಿಂದ ನೀವೆಲ್ಲ ನನ್ನ ದುರಂತದಲ್ಲಿ ಭಾಗಿಗಳಾಗಿ ನನ್ನೊಂದಿಗೆ ಹಳ್ಳಿಗೆ ಬರಬೇಕು" ಎಂದು ಹೇಳಿದ.

ಮೊದಲ ಇಬ್ಬರು ಹುಡುಗಿಯರಿಗೆ ಆಘಾತ, ನಿರಾಶೆ, ಕೋಪವೆಲ್ಲ ಬಂದವು. ಮೊದಮೊದಲು ತಾವು ಹಳ್ಳಿಗೆ ಸುತಾರಾಂ ಬರುವುದಿಲ್ಲವೆಂದು ಹಟ ಹಿಡಿದುಕೂತರು. ಮೂರನೆಯ ಹುಡುಗಿ ಮಾತ್ರ ತನ್ನ ಬಟ್ಟೆ ಬರೆಗಳನ್ನು ತೆಗೆದುಕೊಂಡು ಹೊರಡಲು

ಅಣಿಯಾದಳು. ಆಕೆ ಹೊರಟಿದ್ದು ಕಂಡು ಮತ್ತು ಹೋಗಬೇಕಾದ ಅನಿವಾರ್ಯತೆಯನ್ನು ತಿಳಿದು ಮೊದಲ ಇಬ್ಬರು ಅಳುತ್ತಾ, ಕೂಗಾಡುತ್ತಾ ಹೊರಟರು.

ಬಡತನದಿಂದ ವರ್ತಕನಿಗೆ ಮತ್ತು ಸುಂದರಿಗೆ ಅಷ್ಟೇನೂ ತೊಂದರೆಯಾಗಲಿಲ್ಲ. ಅವರ ಜೀವನ ಸರಳವಾಗಿತ್ತು. ಆದರೆ ಹಿರಿಯ ಹುಡುಗಿಯರಿಗೆ ಬದುಕು ಅಸಹನೀಯ ಅನ್ನಿಸಿತ್ತು. ಶ್ರೀಮಂತರಾಗಿದ್ದಾಗ ಅವರನ್ನು ಮೆಚ್ಚಿ ಹೊಗಳುತ್ತಿದ್ದ, ಅವರೊಂದಿಗೆ ಸರಸವಾಡುತ್ತಿದ್ದ ಹುಡುಗರು ಅವರತ್ತ ಸುಳಿಯಲಿಲ್ಲ; ತಾತ್ಸಾರದಿಂದ ಮಾತಾಡಿಕೊಂಡರು. ಸುಂದರಿ ಮಾತ್ರ ತಂದೆಯ ಅಗತ್ಯಗಳನ್ನ ಪೂರೈಸುತ್ತಾ, ಆತನ ಬೇಸರವನ್ನು ಹೋಗಲಾಡಿಸುತ್ತಾ ಬದುಕಿನಿಂದ ಹೆಚ್ಚೇನನ್ನೂ ಬಯಸದೆ ಜೀವಿಸುತ್ತಿದ್ದಳು.

ಹೀಗಿದ್ದಾಗ ಒಂದು ದಿನ ವರ್ತಕನ ಅಳಿದುಳಿದ ಹಡಗು ಬರುವ ಸುದ್ದಿ ಬಂತು. ಹಿರಿಯ ಹುಡುಗಿಯರು ಹಿಗ್ಗಿ ಕುಣಿದಾಡಿದರು; ವರ್ತಕ ಹಡಗನ್ನು ಸ್ವಾಗತಿಸಲು ನಗರಕ್ಕೆ ಹೊರಟೊಡನೆ ಆತ ತಮಗೆ ತರಲೇಬೇಕಾದ ವಸ್ತುಗಳ ಪಟ್ಟಿಯನ್ನೇ ನೀಡಿದರು. ಬಟ್ಟೆ, ಒಡವೆ, ಅಲಂಕಾರದ ವಸ್ತುಗಳ ಪಟ್ಟಿ ಅದಾಗಿತ್ತು. ತಾನು ಏನನ್ನೂ ಕೇಳದಿದ್ದರೆ ತನ್ನ ಅಕ್ಕಂದಿರು ತನ್ನನ್ನು ತಪ್ಪು ತಿಳಿಯುವರೆಂದು ಸುಂದರಿ ಯೋಚಿಸಿದಳು. ತನ್ನ ತಂದೆ ತನಗೊಂದು ಗುಲಾಬಿ ಹೂಗಳ ಗೊಂಚಲು ತರಬೇಕೆಂದು ಕೇಳಿಕೊಂಡಳು.

ವರ್ತಕ ಹಡಗು ಬರುವ ದಿನ ನಗರಕ್ಕೆ ಹೋಗಿ ಹಡಗಿಗಾಗಿ ಕಾದ. ಆದರೆ ಅದು ಬರಲೇ ಇಲ್ಲ. ಅದು ಮುಳುಗಿಹೋಯಿತೆಂದು ಕೆಲವರೂ, ಅದು ಬರುವ ಬಗ್ಗೆ ವರ್ತಕನಿಗೆ ಯಾರೋ ಪುಂಡರು ಸುಳ್ಳು ಸುದ್ದಿ ನೀಡಿದ್ದಾರೆಂದು ಕೆಲವರೂ ಹೇಳಿದರು. ನಿರಾಶನಾದ ವರ್ತಕ ತನ್ನ ಹಳ್ಳಿಗೆ ಹೊರಟ. ಆತನಲ್ಲಿ ಗಾಡಿಗೆ ಕಾಸು ಇರಲಿಲ್ಲ. ನಡೆದುಕೊಂಡು ಹೊರಟ. ತನ್ನ ಹಿರಿಯ ಮಕ್ಕಳು ಬರಿಗೈಲಿ ಬಂದ ತನ್ನನ್ನು ಛೇಡಿಸಬಹುದೆಂದು ಅವನಿಗೆ ವ್ಯಥೆಯಾಯಿತು. ಚಿಕ್ಕಮಗಳು ಸುಂದರಿಗೆ ಗುಲಾಬಿಯನ್ನು ಕೂಡ ಕೊಳ್ಳಲಾಗದ ತನ್ನ ಸ್ಥಿತಿಗೆ ಮರುಗಿದ.

ಹೀಗೆ ನಡೆದು ಬರುತ್ತ ವರ್ತಕ ದಟ್ಟ ಅರಣ್ಯದಲ್ಲಿ ಸಾಗತೊಡಗಿದ. ಹೊತ್ತು ನೆತ್ತಿಗೇರಿತ್ತು. ಹಸಿವಿನಿಂದ ಬಳಲಿದ್ದ. ಇದ್ದಕ್ಕಿದ್ದಂತೆ ಕಾಡಿನ ನಡುವೆ ಭವ್ಯ ಬಂಗಲೆಯೊಂದು ಗೋಚರಿಸಿತು. ಅದನ್ನವನು ಎಂದೂ ಗಮನಿಸಿರಲಿಲ್ಲ. ಚಕಿತನಾಗಿ ಆ ಬಂಗಲೆಯತ್ತ ಬರುತ್ತ ಅದೊಂದು ಮನೋಹರ ಅರಮನೆಯೆಂಬುದು ತಿಳಿಯತೊಡಗಿತು. ನಿರ್ಜನವಾಗಿತ್ತು, ಮೌನವಾಗಿತ್ತು. ಕಾವಲುಗಾರರು ಕೂಡ ಇರಲಿಲ್ಲ. ಮೊದಲು ಅಂಜಿಕೆಯಾದರೂ ಕುತೂಹಲ ತಾಳಲಾರದೆ ಅರಮನೆಯ ಪುಷ್ಪವನ ನೋಡುತ್ತ ಅರಮನೆ ಪ್ರವೇಶಿಸಿದ. ಅಲ್ಲಿ ಕೂಡ ಯಾರೂ ಇರಲಿಲ್ಲ. ಸುವರ್ಣಖಚಿತ ಸ್ತಂಭಗಳು, ವಿಶಾಲ ಕೋಣೆಗಳು, ಮೊಗಸಾಲೆಗಳು. ಭಯದಿಂದ ತುಂಬಿದ್ದರೂ ವರ್ತಕ ಎಲ್ಲವನ್ನೂ

ನೋಡುತ್ತ ಸಾಗಿದ. ಅಲ್ಲೊಂದು ಕೋಣೆಯಲ್ಲಿ ಭಕ್ಷ್ಯಭೋಜ್ಯಗಳನ್ನು ಇಡಲಾಗಿತ್ತು. ಹೂವು, ಪನ್ನೀರುಗಳ ಸುಗಂಧ ಪ್ರಸರಿಸಿತ್ತು. ಸಂಗೀತ ಹೊಮ್ಮುತ್ತಲೇ ಇತ್ತು. ಈಗತಾನೆ ಭೋಜನಕ್ಕೆ ಅಣಿಮಾಡಿದಂತಿತ್ತು. ಇದನ್ನು ಕಂಡ ವರ್ತಕ ತನ್ನ ಹಸಿವೆ ತಾಳಲಾರದೆ ಉಣ್ಣತೊಡಗಿದ. ಜಿಹ್ವೆಗೆ ಆನಂದ ನೀಡುತ್ತಿದ್ದ ತಿನಿಸುಗಳನ್ನು ತಿಂದು ಸಂಗೀತ ಸವಿದು ಹೊರಬಂದ. ಆಗಲೂ ಯಾರೂ ಕಾಣಿಸಲಿಲ್ಲ. ಪುಷ್ಪವನಕ್ಕೆ ಬಂದು ಗುಲಾಬಿಗಳನ್ನು ನೋಡಿದ. ತನ್ನ ಕಿರಿಯ ಮಗಳು ಸುಂದರಿ ಹೂಗೊಂಚಲು ತರಲು ಹೇಳಿದ್ದು ನೆನಪಾಯಿತು. ನಳನಳಿಸುವ ಒಂದು ಗೊಂಚಲು ಕಿತ್ತುಕೊಂಡ. ಇದ್ದಕ್ಕಿದ್ದಂತೆ ಸಿಡಿಲು ಹೊಡೆದಂಥ ಶಬ್ದವಾಯಿತು. ವರ್ತಕ ಬೆಚ್ಚಿ ನೋಡುತ್ತಾನೆ––ಭೀಕರ ಮೃಗವೊಂದು ಉಗ್ರ ಕೋಪದಿಂದ ಗರ್ಜಿಸುತ್ತ ಅವನನ್ನು ಕೊಲ್ಲಲು ಕುತ್ತಿಗೆಗೆ ಕೈ ಹಾಕಿತು.

"ಅಯ್ಯೋ ದೇವರೇ, ಕಾಪಾಡು! ಅಯ್ಯಾ ನನ್ನನ್ನು ಕೊಲ್ಲಬೇಡ. ನನ್ನ ಮೇಲೆ ಕರುಣೆದೋರು!" ಎಂದು ವರ್ತಕ ಬೇಡಿಕೊಂಡ.

"ನಾನು ಅಯ್ಯೋ ದೇವರೇನು ಅಲ್ಲ, ಅಯ್ಯಾನೂ ಅಲ್ಲ! ನಾನು ಮನುಷ್ಯನಲ್ಲ, ಮೃಗ. ನನ್ನಲ್ಲಿ ಕರುಣೆ ಇಲ್ಲ. ಇರಲು ಸಾಧ್ಯವೂ ಇಲ್ಲ; ನಿನ್ನನ್ನು ಸೀಳಿ ತಿಂದುಹಾಕುತ್ತೇನೆ" ಎಂದು ಕತ್ತು ಹಿಸುಕತೊಡಗಿತು.

"ಕೊಲ್ಲಬೇಡ! ನನ್ನ ಮಗಳಿಗಾಗಿ ಒಂದು ಗೊಂಚಲು ಗುಲಾಬಿ ತಗೊಂಡಿದ್ದು ಅಪರಾಧವೆ?" ಅಂದ.

"ತಿಂದಿದ್ದಿ; ತೇಗಿದ್ದಿ; ಗುಲಾಬಿ ಕಿತ್ತಿದ್ದೀ" ಎಂದು ಅಬ್ಬರಿಸಿತು ಮೃಗ ಉಗ್ರ ಸಿಟ್ಟಿನಿಂದ "ಕೇಳು! ನಿನ್ನ ಬದಲಾಗಿ ನಿನ್ನ ಮುದ್ದುಮಗಳನ್ನು ತಂದು ನನಗೆ ಕೊಟ್ಟರೆ ನಿನ್ನನ್ನು ಕೊಲ್ಲುವುದಿಲ್ಲ" ಅಂದಿತು.

ಭಯದಿಂದ ವರ್ತಕ ಮಾತನಾಡಲಾಗಲಿಲ್ಲ.

"ನೀನು ತಪ್ಪಿಸಿಕೊಳ್ಳಲಾರೆ. ಈ ಬುಟ್ಟಿ ತೆಗೆದುಕೋ. ಇದರೊಂದಿಗೆ ಹೋಗು. ನಾಳೆ ಸಂಜೆಯೊಳಗೆ ನೀನು ನಿನ್ನ ಮಗಳನ್ನು ಕರೆತಂದು ನನಗೆ ಕೊಡಬೇಕು. ಇಲ್ಲದಿದ್ದರೆ ನಿನ್ನನ್ನೂ ನಿನ್ನ ಮಗಳನ್ನೂ ಒಟ್ಟಿಗೇ ಮುಗಿಸುತ್ತೇನೆ!" ಅಂದಿತು.

ಪ್ರಾಣ ಉಳಿದದ್ದಕ್ಕೆ ಸ್ವಲ್ಪ ಸಮಾಧಾನಗೊಂಡ ವರ್ತಕ ಮೃಗ ನೀಡಿದ ಬುಟ್ಟಿಯೊಂದಿಗೆ ಊರಿಗೆ ಹೋಗುತ್ತ ತನ್ನ ಮಗಳು ಮತ್ತು ತನ್ನ ಪ್ರಾಣದ ಬಗ್ಗೆ ಯೋಚಿಸಿ ಚಿಂತಾಕ್ರಾಂತನಾದ. ಬರಿಗೈಲಿ ವಾಪಾಸ್ ಬಂದ ತಂದೆಯನ್ನು ಕಂಡು ಹಿರಿಯ ಮಕ್ಕಳು ಟೀಕಿಸಿ ರಾದ್ಧಾಂತ ಮಾಡಿದರು. ವರ್ತಕನ ತಲೆತುಂಬ ಮೃಗದ ಆಜ್ಞೆ ಇತ್ತು. ಮೂವರು ಹೆಣ್ಣುಮಕ್ಕಳನ್ನು ಕರೆದು ಕೂರಿಸಿಕೊಂಡು ಅರಣ್ಯದಲ್ಲಿ

ನಡೆದದ್ದು ಹೇಳಿದ. ಮೊದಲ ಹೆಣ್ಣುಮಕ್ಕಳಲ್ಲಿ ಒಬ್ಬಳನ್ನು ಮೃಗಕ್ಕೆ ಕೊಡುವ ರೀತಿಯಲ್ಲಿ ಮಾತಾಡಿದ ತಂದೆಯ ಬಗ್ಗೆ ಅವರಿಬ್ಬರೂ ಕೋಪಗೊಂಡು ಪ್ರತಿಭಟಿಸಿದರು. ಚಿಕ್ಕಮಗಳು ಸುಂದರಿ ಮಾತ್ರ "ನಾನು ಹೋಗುತ್ತೇನೆ ಅಂದಳು. ಇದನ್ನು ಕೇಳಿದ ತಂದೆ ಇನ್ನೂ ವ್ಯಥೆಗೊಂಡು ತಾನೇ ಹೋಗುವುದಾಗಿ ಹೇಳಿದ. ಅದಕ್ಕೆ ಒಪ್ಪದ ಸುಂದರಿ ಹೊರಡಲು ಸಿದ್ಧಳಾದಳು; ತಂದೆಗೆ ತನ್ನನ್ನು ಕಳಿಸಿಬರಲು ಒತ್ತಾಯ ಮಾಡಿದಳು.

ವರ್ತಕ ಸುಂದರಿಯನ್ನು ಕಾಡಿಗೆ ಕರೆತಂದು ಮೃಗ ಕೋಪದಿಂದಲೇ ಕಾಯುತ್ತಿರುವುದನ್ನು ನೋಡಿದ. "ಶಾಭಾಸ್" ಎಂದು ವರ್ತಕನನ್ನು ಮೆಚ್ಚಿದ ಮೃಗ "ನೀನಿನ್ನು ಹೋಗು" ಎಂದಿತು. ವರ್ತಕ ಭಾರದ ಎದೆಯೊಂದಿಗೆ ಊರಿಗೆ ಹೋದ. ಅಲ್ಲಿಯವರೆಗೆ ಮೃಗ ಕೊಟ್ಟ ಬುಟ್ಟಿಯನ್ನು ತೆರೆದು ನೋಡಿರಲಿಲ್ಲ. ಈಗ ತೆರೆದರೆ ಅದರಲ್ಲಿ ವಜ್ರ ವೈಢೂರ್ಯಗಳೂ, ಮುತ್ತುರತ್ನಗಳೂ ಇದ್ದವು. ಸುಂದರಿಯ ಬಗ್ಗೆ ಚಿಂತೆಯಲ್ಲಿ ಮುಳುಗಿದ್ದ ವರ್ತಕನಿಗೆ ಸಂತೋಷವೇನೂ ಆಗದಿದ್ದರೂ ಅವುಗಳನ್ನು ಬಳಸಿ ಹಿರಿಯ ಹೆಣ್ಣುಮಕ್ಕಳ ಮದುವೆ ಮಾಡುವುದೆಂದು ತೀರ್ಮಾನಿಸಿದ.

ಇತ್ತ ಸುಂದರಿ ಮೃಗವನ್ನು ಕಂಡು ಕೂತಲ್ಲಿಂದ ಚಲಿಸಲಾರದಷ್ಟು ದಿಗ್ಭ್ರಾಂತಳಾಗಿದ್ದಳು. ಅರಣ್ಯದ ಒಂದೊಂದು ಸದ್ದೂ ಅವಳನ್ನು ಬೆಚ್ಚಿ ಬೀಳಿಸುತ್ತಿತ್ತು. ಮೃಗ ಭೀಕರವಾಗಿತ್ತು. ಕೋರೆಹಲ್ಲು, ಹಂದಿಯ ದೇಹ, ತೋಳದ ಚಲನೆಯನ್ನು ಪಡೆದಿದ್ದ ಮೃಗ ಆಕೆಯ ಎದುರು ಕೂತುಕೊಂಡಿತು. ಆಕೆಯನ್ನೇ ದಿಟ್ಟಿಸಿ ನೋಡುತ್ತ, "ನೀನು ಸ್ವಸಂತೋಷದಿಂದ ಬಂದೆಯೊ?" ಎಂದಿತು. ಏನೆಂದು ಹೇಳುವುದೆಂದು ತಿಳಿಯದೆ ಮೃಗಕ್ಕೆ ಕೋಪ ಬರಿಸದಿರಲು ಭಯವಾಗಿ, "ಹು... ಹು... ಹ್ಞೂ" ಅಂದಳು. "ಒಳ್ಳೆಯದು! ನೀನು ಒಳ್ಳೆಯವಳು!" ಎಂದು ಹೇಳಿದ ಮೃಗ ಒಳಗೆ ಹೋಯಿತು.

ಭಯ ಸ್ವಲ್ಪ ಕಡಿಮೆಯಾಗಿ ಸುಂದರಿ ಅಲ್ಲಿಂದ ಎದ್ದು ಅರಮನೆಯನ್ನು ನೋಡಲು ಚಲಿಸತೊಡಗಿದಳು. ಒಂದು ಕೋಣೆಗಿಂತ ಇನ್ನೊಂದು, ಒಂದು ಕಿಟಕಿಗಿಂತ ಇನ್ನೊಂದು ಚೇತೋಹಾರಿಯಾಗಿದ್ದವು. ಅಲ್ಲೊಂದು ಕೋಣೆಯ ಮೇಲೆ 'ಸುಂದರಿಯ ಗೃಹ' ಎಂದು ಬರೆದಿತ್ತು. ತನ್ನ ಹೆಸರಿರುವುದನ್ನು ಕಂಡ ಸುಂದರಿ ಕ್ಷಣ ಅಚ್ಚರಿಪಟ್ಟು ಗೃಹವನ್ನು ಪ್ರವೇಶಿಸಿದಳು.

ಆಗ ಹಾಡೊಂದು ಕೇಳಿಬಂತು:

ಸುಂದರಿ, ಸುಂದರಿ, ಸುಂದರೀ
ಇದು ನಿನ್ನ ಮನೆ;
ಹೂವೆ, ಫಲವೆ, ಒಡವೆಯೆ

ಬೇಕಾದ್ದೆಲ್ಲವ ನೀನು ನೆನೆ;
ಕ್ಷಣದಲ್ಲಿ ಕೊಡುವೆವು ಸುಂದರಿಯೆ,
ಭೂಮಿಯ ಸೌಭಾಗ್ಯದ ಸಿರಿಯೇ.

ಆ ಗೃಹದಲ್ಲಿ ಸುಂದರಿಯ ನೆಚ್ಚಿನ ಗ್ರಂಥಗಳ ಪುಸ್ತಕ ಭಂಡಾರವಿತ್ತು; ಇಡೀ ಗೃಹ ಸಂಗೀತದ ಇಂಪಿನಿಂದ ತುಂಬಿತ್ತು. "ಅಂದಮೇಲೆ ನನ್ನನ್ನು ಈ ಮೃಗ ಸದ್ಯದಲ್ಲಿ ಬಿಡುವಂತಿಲ್ಲ" ಎಂದುಕೊಂಡು ತನ್ನ ತಂದೆಯ ಬಗ್ಗೆ ಯೋಚಿಸಿದಳು. ಆತ ಈಗ ಏನು ಮಾಡುತ್ತಿರಬಹುದು ಎಂದುಕೊಂಡು ಅಲ್ಲಿದ್ದ ಕನ್ನಡಿಯಲ್ಲಿ ನೋಡಿದೊಡನೆ ಅದರಲ್ಲಿ ತನ್ನ ಮನೆ, ತನ್ನ ತಂದೆ, ಅಕ್ಕಂದಿರು ಕಾಣಿಸಿದರು. ತಂದೆ ದುಗುಡದಲ್ಲಿ ಓಡಾಡುತ್ತಿದ್ದ; ಅಕ್ಕಂದಿರು ತನ್ನ ಬಗ್ಗೆ ದುಃಖಿಸಿದವರಂತೆ ಕಾಣಿಸಿಕೊಂಡು ಆಮೇಲೆ ಆನಂದದಿಂದ ಮಾತಾಡುತ್ತಿದ್ದರು.

ಊಟಕ್ಕೆ ಸಿದ್ಧಪಡಿಸಿ ಸುಂದರಿಯನ್ನು ಆಹ್ವಾನಿಸಲಾಯಿತು. ಮೃಷ್ಟಾನ್ನ ಭೋಜನ ಸವಿಯುತ್ತಿದ್ದಾಗ ಸುಂದರಿಗೆ ಕರ್ಕಶ ಸದ್ದು ಕೇಳಿಸಿತು; ಗೊಗ್ಗುರು ಧ್ವನಿ. ಅದು ಮೃಗದ ಧ್ವನಿಯೆಂದು ಗೊತ್ತಾಯಿತು. ಮರೆಯಿಂದಲೇ ಮೃಗ ಕೇಳಿತು. "ಸುಂದರಿ, ನೀನು ಉಣ್ಣುವುದನ್ನು ನಾನು ನೋಡಬಹುದೆ?" ಎಂದಿತು. ದಿಗಿಲಿನಿಂದಲೇ ಸುಂದರಿ "ನಿನಗೆ ಇಷ್ಟವಾದರೆ" ಎಂದು ತೊದಲಿದಳು. "ಹಾಗೇನಿಲ್ಲ ಸುಂದರಿ, ನೀನು ಈ ಮನೆಯ ಒಡತಿ. ನಿನಗೆ ಇಷ್ಟವಾದರೆ ಮಾತ್ರ ನನಗೆ ನಿನ್ನೊಂದಿಗೆ ಕೂರಲು ಅನುಮತಿ ನೀಡಬಹುದು. ಬೇಡವೆಂದರೆ ನಾನು ಹತ್ತಿರ ಕೂಡ ಸುಳಿಯುವುದಿಲ್ಲ" ಅಂದಿತು. "ನೀನು ತುಂಬ ಒಳ್ಳೆಯವನಂತಿದ್ದೀ" ಅಂದಳು. "ಅದಿರಲಿ, ನಿನಗೆ ನಾನು ತುಂಬ ಕುರೂಪಿ ಅನಿಸುತ್ತದೆಯೆ?" ಅಂದ. ಸುಂದರಿಗೆ ಇನ್ನೂ ಭಯವಾಯಿತು. ಅಂಜುತ್ತಲೇ, "ನಾನು ಸುಳ್ಳು ಹೇಳಲಾರೆ! ನೀನು ಕುರೂಪಿ" ಅಂದಳು. ಸ್ವಲ್ಪಹೊತ್ತು ಸುಮ್ಮನಿದ್ದ ಮೃಗ, "ನನಗೆ ಗೊತ್ತು, ನಾನು ಕುರೂಪಿ. ದಯವಿಟ್ಟು ನೀನು ನನ್ನನ್ನು ಗಮನಿಸಬೇಡ. ಸಂತೋಷವಾಗಿರು" ಅಂದಿತು. "ನೀನು ತುಂಬಾ ಒಳ್ಳೆಯವನಂತಿದ್ದೀ. ನಿನ್ನ ಮಾತುಗಳಿಗೆ ಕೃತಜ್ಞಳಾಗಿದ್ದೇನೆ" ಅಂದಳು. "ನನ್ನ ಹೃದಯ ಒಳ್ಳೆಯದಿರಬಹುದು, ಆದರೂ ನಾನು ಮೃಗ. ಕುರೂಪಿಯಾದ ಮೃಗ" ಅಂದಿತು. ಅದಕ್ಕೆ ಸುಂದರಿ, "ಮೃಗ ಒಳ್ಳೆಯ ಹೃದಯ ಪಡೆದಿದ್ದರೂ ಮೃಗದ ಆಕಾರ ಹೊಂದಿರುವುದು ಸಹಜ–ಆದರೆ ಜಗತ್ತಿನ ಅನೇಕ ಮನುಷ್ಯರು ಸುಂದರ ಆಕಾರ ಪಡೆದು ಮೃಗದ ಹೃದಯ ಹೊಂದಿರುತ್ತಾರೆ" ಅಂದಳು. "ನನಗೆ ಬುದ್ಧಿ ಇದ್ದಿದ್ದರೆ ನಿನಗೆ ಒಳ್ಳೆಯ ಮಾತುಗಳಲ್ಲಿ ಕೃತಜ್ಞತೆ ಹೇಳುತ್ತಿದ್ದೆ–ಆದರೆ ನಾನು ದಡ್ಡ, ರಾಕ್ಷಸ, ಜಡವಾದ ಮೃಗ" ಅಂದಿತು.

ಇಷ್ಟೆಲ್ಲ ಮಾತು ಆಗುವುದರಲ್ಲಿ ಮೃಗ ಸುಂದರಿಯ ಎದುರು ಕೂತಿತ್ತು. ಆತನ ಭಯಾನಕ ಆಕಾರಕ್ಕೆ ನಡುಗತೊಡಗಿದ್ದಳು. ಮೃಗಕ್ಕೆ ಸಿಟ್ಟು ತರಿಸದಿರಲು ಸುಂದರಿ

ಅವನನ್ನೂ ಹೊಗಳಿದ್ದಳು. ಸುಂದರಿ ಊಟ ಮುಗಿಸುತ್ತಿದ್ದಾಗ ಮೃಗ ಕೇಳಿತು, "ಸುಂದರಿ, ನನ್ನನ್ನು ಮದುವೆಯಾಗುವೆಯಾ?"

ಈ ಪ್ರಶ್ನೆಗೆ ಸುಂದರಿ ಮೂರ್ಛೆ ಹೋಗುವುದರಲ್ಲಿದ್ದಳು. ಕಷ್ಟಪಟ್ಟು ಸಾವರಿಸಿಕೊಂಡು ಕಂಪಿಸತೊಡಗಿದಳು. ಮೃಗ ಉತ್ತರಕ್ಕಾಗಿ ಕಾಯುತ್ತಲೇ ಇತ್ತು. ಸುಂದರಿ ತೊದಲಿದಳು, "ಇ–ಇ–ಇಲ್ಲ!" ಆಕೆಯ ಉತ್ತರದಿಂದ ನಿರಾಶನಾದ ಮೃಗ ನಿಟ್ಟುಸಿರಿಟ್ಟಿತು, ಸಿಟ್ಟಿನಿಂದ ಬುಸುಗುಟ್ಟಿದೊಡನೆ ಇಡೀ ಅರಮನೆ ಅದುರತೊಡಗಿತು. ಮೃಗ ಎದ್ದು, "ಸರಿ ಸುಂದರಿ, ನಮಸ್ತೆ" ಎಂದು ಹೇಳಿ ಅಲ್ಲಿಂದ ಹೊರಟಿತು. ತನ್ನ ಕೋಣೆ ತಲುಪುವವರೆಗೆ ಹಿಂದಕ್ಕೆ ತಿರುಗಿ ತಿರುಗಿ ಅವಳನ್ನು ನೋಡುತ್ತಿತ್ತು.

ಮರುದಿನ, ಅದರ ಮರುದಿನ ಸುಂದರಿ ಮೃಗವನ್ನು ಕಾಣಲಿಲ್ಲ. ಊಟ, ಓದು, ಸಂಗೀತದ ರಂಜನೆಯಲ್ಲಿ ಕಳೆದಳು. ಮೂರನೆಯ ದಿನ ಮೃಗ ಬಂತು. ಅವಳಿಗೆ ಸ್ವಲ್ಪವೂ ಬೇಸರವಾಗದಂತೆ ಮಾತಾಡಿತು. ಅವಳು ಏನು ಹೇಳಿದರೂ ಆಸಕ್ತಿಯಿಂದ ಕೇಳಿತು. ಕೊನೆಯಲ್ಲಿ "ಸುಂದರಿ, ನನ್ನ ಮದುವೆಯಾಗುವೆಯಾ?" ಅಂದಿತು. ಸುಂದರಿ "ಸಾಧ್ಯವಿಲ್ಲ" ಅಂದಳು.

ಇದು ಅನೇಕ ದಿನ ನಡೆಯಿತು. ಮೃಗ ಕೊಂಚ ಬಸವಳಿದಂತೆ ಕಾಣಿಸಿತು; ಆದರೆ ಅದರ ಭೀಕರತೆ ಕಡಿಮೆಯಾಗಿರಲಿಲ್ಲ. ಒಂದೊಂದು ದಿನ ಸುಂದರಿಗೆ ತನ್ನ ಮಾತಿನಿಂದ ಬೇಸರವಾದೀತೆಂದು ಅವಳು ಊಟ ಮಾಡುವ ಜಾಗಕ್ಕೂ ಬರುತ್ತಿರಲಿಲ್ಲ. ಇದ್ದಕ್ಕಿದ್ದಂತೆ ಬಂದು ಅವಳ ದಿನಚರಿಯ ಬಗ್ಗೆ, ಅವಳ ಇಷ್ಟದ ಬಗ್ಗೆ ವಿಚಾರಿಸುತ್ತಿತ್ತು. ಹೋಗುವಾಗ ಮರೆಯದೆ "ನನ್ನನ್ನು ಮದುವೆಯಾಗು" ಅನ್ನುತ್ತಿತ್ತು. ಸುಂದರಿ ಕತ್ತು ಅಲ್ಲಾಡಿಸಿ "ಇಲ್ಲ" ಅನ್ನುತ್ತಿದ್ದಳು.

ಹೀಗಿದ್ದಾಗ ಸುಂದರಿಗೆ ಮೋಜೆನ್ನಿಸುತ್ತಿತ್ತು. ಸಂಗೀತ ಹೊಮ್ಮುವ ದಿವಾನಖಾನೆಯಲ್ಲಿ ಒಬ್ಬಳೇ ಕೂತು ಊಟ ಮಾಡುತ್ತಿದ್ದಾಗ ಮೃಗ ಬಾರದಿದ್ದರೆ 'ಏಕೆ ಬರಲಿಲ್ಲ' ಎಂದು ಕುತೂಹಲವಾಗುತ್ತಿತ್ತು. ಒಮ್ಮೊಮ್ಮೆ ನೋಡುವ ಇಷ್ಟವಾಗುತ್ತಿತ್ತು. ಅವನ ಒರಟು ಮಾತು, ತಿಕ್ಕಲು ನಡವಳಿಕೆ ಮನಸ್ಸಿನಲ್ಲೇ ನಗು ತರುತ್ತಿದ್ದವು. ಆತನ ಕಾಳಜಿಯನ್ನು ನೆನೆದು ಮನ ಕರಗುತ್ತಿತ್ತು. ಇಷ್ಟಾದರೂ ಆಕೆಗೆ ತಂದೆಯ ನೆನಪು ಹೆಚ್ಚಾಗುತ್ತಲೇ ಹೋಯಿತು. ಒಂದು ದಿನ ಮೃಗ, "ನಿನಗೆ ಇಷ್ಟವಾದದ್ದು ಕೇಳು–ಕೊಡುತ್ತೇನೆ" ಅಂದಿತು. ಸುಂದರಿ, "ನಾನು ನನ್ನ ತಂದೆಯನ್ನು ಕಂಡು ಮಾತನಾಡಿಸಬೇಕು–ಎರಡು ದಿನ ಕಳಿಸಿದರೆ ಸಂತೋಷವಾಗುತ್ತದೆ" ಅಂದಳು.

ಮೃಗ ಯೋಚಿಸಿತು. ಮೌನ ಮುರಿದು ಹೇಳಿತು, "ನಿನ್ನ ಮುಖ ನೋಡದೆ ನಾನು ಬದುಕಲಾರೆ. ನೀನು ಕೇವಲ ಎರಡು ದಿನ ಹೋಗಬೇಕು. ನಾನೇ ಕಳಿಸಿಕೊಡುತ್ತೇನೆ" ಅಂದಿತು. ಅವಳು ಸಂತೋಷದಿಂದ "ಬರೀ ಎರಡು ದಿನ"

ಅಂದಳು. ಅವಳಿಗೆ ಕಣ್ಣು ಮುಚ್ಚಿಕೊಳ್ಳಲು ಹೇಳಿದ ಮೃಗ ಅವಳನ್ನು ಅವಳಿಗೆ ಬೇಸರವಾಗದಂತೆ ಹೆಗಲ ಮೇಲೆ ಹೊತ್ತು ಮರುಕ್ಷಣದಲ್ಲಿ ಅವಳ ತಂದೆಯ ಮನೆಯ ಹತ್ತಿರ ಇಳಿಸಿ ಮಾಯವಾಯಿತು.

ವರ್ತಕನಿಗೆ ತನ್ನ ಮಗಳನ್ನು ಕಂಡು ಪರಮಾನಂದವಾಯಿತು. ಅಪ್ಪಿಕೊಂಡು ಅಳತೊಡಗಿದನು. ಸಂತೋಷದಿಂದ ಅವಳನ್ನು ನೇವರಿಸಿದನು. ಸುಂದರಿ ಅಕ್ಕಂದಿರನ್ನು ಕರೆದು ಎಲ್ಲರಿಗೆ ತಾನು ಎರಡು ದಿನದ ಮಟ್ಟಿಗೆ ಬಂದಿರುವ ವಿಷಯ ತಿಳಿಸಿದಳು. ಅವಳ ಎರಡು ದಿನದ ಬದುಕು ಶುರುವಾಯಿತು. ತಂದೆ ಶೋಕದಿಂದ ಬಸವಳಿದಿದ್ದ. ಮನೆ ಮಾತ್ರ ಶ್ರೀಮಂತಿಕೆ ತೋರುತ್ತಿತ್ತು. ಅಕ್ಕಂದಿರಿಬ್ಬರೂ ಮದುವೆಯಾಗಿದ್ದರು. ಅವರಲ್ಲೊಬ್ಬಳು ಸ್ಫುರದ್ರೂಪಿಯಾದ ಶ್ರೀಮಂತನಾದ ಹುಡುಗನನ್ನು ಮದುವೆಯಾಗಿದ್ದಳು; ಆದರೆ ಆತ ತನ್ನ ರೂಪು, ಆಕರ್ಷಣೆಯಲ್ಲಿ ಮಗ್ನನಾಗಿದ್ದು ಅಕ್ಕನನ್ನು ಹೀಯಾಳಿಸಿ ಮಾತಾಡಿಸಿ ಗೋಳು ಹೊಯ್ದುಕೊಳ್ಳುತ್ತಿದ್ದ. ಎರಡನೆಯ ಅಕ್ಕ ಚತುರ ಮಾತಿನ ಚಾಣಾಕ್ಷನನ್ನು ಮದುವೆಯಾಗಿದ್ದಳು. ಆತ ತನ್ನ ಬುದ್ಧಿವಂತಿಕೆ ಮೆರೆಯಲು ಮಾತಿನ ಚಕಮಕಿಗಿಳಿದು ಅಕ್ಕನನ್ನು, ಎಲ್ಲರನ್ನು ಅವಮಾನಗೊಳಿಸುವುದರಲ್ಲೇ ಸುಖಿಸುತ್ತಿದ್ದ. ಅಕ್ಕಂದಿರ ಸಣ್ಣತನ ಹೆಚ್ಚಾಗಿತ್ತು; ಭಾವಂದಿರ ಸ್ವಾರ್ಥ ಅಪರಿಮಿತವಾಗಿತ್ತು. ಅವರೆಲ್ಲರ ಸ್ವಾರ್ಥಕ್ಕೆ ತಕ್ಕಂತೆ ಸುಂದರಿ ಮೃಗಕ್ಕೆ ಕೊಟ್ಟಿದ್ದ ಭಾಷೆಯನ್ನು ಮುರಿಸಲು ಅವಳು ಎರಡು ದಿನಕ್ಕಿಂತ ಹೆಚ್ಚುಕಾಲ ಇರುವಂತೆ ಒತ್ತಾಯಿಸಿದರು. ಬಹುದಿನಗಳ ಬಳಿಕ ಮನೆಗೆ ಬಂದಿದ್ದ ಸುಂದರಿ ಕೂಡ ಒಪ್ಪಿ ಮೂರನೆ ದಿನ, ನಾಲ್ಕನೆ ದಿನ ಅರಣ್ಯಕ್ಕೆ ಹಿಂದಿರುಗಲೇ ಇಲ್ಲ.

ಹತ್ತನೆಯ ದಿನ ಆಕೆಗೆ ಅಳುಕು ಶುರುವಾಯಿತು. ಮೃಗ ಎಂದೂ ತನ್ನ ವಚನ ಮುರಿದಿರಲಿಲ್ಲ. ಎಂದೂ ಮನನೋಯಿಸಿರಲಿಲ್ಲ. ತನ್ನ ಭಾವಂದಿರಂತೆ ಕ್ರೂರ ಹೃದಯದ ವ್ಯಕ್ತಿಯಾಗಿರಲಿಲ್ಲ. ತನ್ನನ್ನು ನೆಮ್ಮದಿಯಾಗಿಡುವುದೇ ಅದರ ಸುಖವಾಗಿತ್ತು. ಅದರ ಮುಖ, ಚಲನವಲನ ನೆನಪಾದವು––ಅದನ್ನು ಮತ್ತೆ ನೋಡಬೇಕೆಂಬ ಆಶೆ ತೀವ್ರವಾಯಿತು. ಕೂಡಲೇ ತಂದೆಗೆ ತಿಳಿಸಿ ಅರಣ್ಯಕ್ಕೆ ಹೊರಟಳು. ಅರಣ್ಯದ ಅರಮನೆಯ ಸುಖಕ್ಕಿಂತ ಮೃಗದ ವ್ಯಕ್ತಿತ್ವ ಆಕೆಯ ಮನಸ್ಸು ತುಂಬಿತ್ತು. ಅರಮನೆ ತಲುಪಿ ಮೃಗಕ್ಕಾಗಿ ಹುಡುಕಾಡಿದಳು. ಅದು ಇರಲಿಲ್ಲ. ಪುಷ್ಪವನದಲ್ಲಿ ನೋಡಿದಳು. ಅಲ್ಲಿಯೂ ಇರಲಿಲ್ಲ. ಅದು ತನಗೆ ಬೇಸರವಾಗಬಾರದೆಂದು ದೂರದಲ್ಲಿ, ಅರಮನೆಯ ಆಚೆಗಿದ್ದ ಬಂಡೆಯ ಮೇಲೆ ಕೂರುತ್ತಿದ್ದುದು ನೆನಪಾಯಿತು. ಅಲ್ಲಿಗೆ ಹೋದಳು. ಮೃಗ ನೆಲಕ್ಕೊರಗಿತ್ತು. ಅದು ತೇಲುಗಣ್ಣು ಮೇಲುಗಣ್ಣಾಗಿ ಮಲಗಿತ್ತು. ಅದರ ದೇಹ ಬಡವಾಗಿ ಹೋಗಿತ್ತು. ಆತ ಸತ್ತೇಹೋಗಿರಬಹುದೆಂದು ಭಯವಾಯಿತು. ಮೂಗಿನ ಹತ್ತಿರ ಬೆರಳಿಟ್ಟು ನೋಡಿದಳು. ಉಸಿರು ಹೋಗಿರಲಿಲ್ಲ. ದುಃಖದಿಂದ ಅಪ್ಪಿ, “ನೀನು

ನನ್ನವನು, ನೀನು ಸಾಯಬಾರದು, ನಾನು ನಿನ್ನನ್ನು ಮದುವೆಯಾಗುತ್ತೇನೆ" ಎಂದು ಕಂಬನಿಗರೆದಳು.

ಮೃಗ ಕ್ರಮೇಣ ಉಸಿರಾಡತೊಡಗಿತು. ಕಣ್ಣೀರು ಚಿಮುಕಿಸಿ ಸಂತೈಸಿದ ಸುಂದರಿಯ ಕೈಗಾಗಿ ತಡಕಾಡಿ ಎದ್ದು ಕೂತಿತು. "ಬಂದೆಯಾ?" ಎಂದು ಸಂತೋಷಗೊಂಡಿತು.

"ಬಂದಿದ್ದೇನೆ ಮಾತ್ರವಲ್ಲ, ನಿನ್ನೊಂದಿಗೆ ಇರಲು ಖುಷಿಪಡುತ್ತಿದ್ದೇನೆ" ಅಂದಳು ಸುಂದರಿ.

"ನೀನಿಲ್ಲದೆ ನನಗೆ ಊಟ ಸೇರಲಿಲ್ಲ. ನಿದ್ರೆ ಬರಲಿಲ್ಲ. ನಿನ್ನನ್ನು ನೆನೆದುಕೊಂಡು ಕೂತುಬಿಟ್ಟೆ. ನಿನ್ನ ಮನೆಗೆ ಬಂದು ತೊಂದರೆ ಕೊಡಲೂ ನನಗೆ ಇಷ್ಟವಾಗಲಿಲ್ಲ. ಸುಂದರಿ, ನಿನಗೆ ನಾನು ಇಷ್ಟ ಎಂಬ ಒಂದು ಮಾತನ್ನು ಹೇಳು. ನಿನ್ನ ಪ್ರೀತಿಯ ಒಂದು ಮಾತು ಹೇಳು" ಅಂದಿತು ಮೃಗ.

ಸುಂದರಿ ಕಂಬನಿದುಂಬಿ ನುಡಿದಳು, "ಪ್ರೀತಿಸುವುದು ಮಾತ್ರವಲ್ಲ, ನಿನ್ನನ್ನು ನಾನು ಮದುವೆಯಾಗುತ್ತೇನೆ."

ಮೃಗ ಸಂತೋಷಕ್ಕೆ ಹಿಗ್ಗಿತು. ಅದರ ಆಕಾರವೇ ಬದಲಾಗತೊಡಗಿತು. ಮೃಗ ಕ್ಷಣಾರ್ಧದಲ್ಲಿ ಸುಂದರ ರಾಜಕುಮಾರನಾಗಿ ಬದಲಾಯಿತು. ರಾಜಕುಮಾರ ಹೇಳಿದ, "ದೇವತೆಯೊಬ್ಬಳು ನನ್ನ ಸ್ವಪ್ರತಿಷ್ಠೆ ನೋಡಿ ಮೃಗವಾಗಿಸಿ 'ನಿನ್ನನ್ನು ಕನ್ಯೆಯೊಬ್ಬಳು ಮನಸಾರೆ ಒಪ್ಪಿ ಪ್ರೀತಿಸುವವರೆಗೆ ಮೃಗವಾಗಿಯೇ ಇರು' ಎಂದು ಶಾಪ ಹಾಕಿದ್ದಳು. ನನ್ನ ಮೃಗತ್ವ ನಿನ್ನಿಂದ ಕರಗಿತು. ನಿನ್ನನ್ನು ನನ್ನ ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತೇನೆ" ಅಂದ.

"ಅದು ನಿನ್ನಿಂದಲೇ ಕರಗಿತು" ಎಂದಳು ಸುಂದರಿ. ರಾಜಕುಮಾರ ತನ್ನ ಮಂತ್ರದಂಡದಿಂದ ತನ್ನ ಪ್ರಜೆಗಳನ್ನೆಲ್ಲ ಕರೆದ. ಅರಮನೆ ಇನ್ನೂ ಮೋಹಕವಾಗಿ ಝಗಝಗಿಸತೊಡಗಿತು. ಸುಂದರಿ ಮತ್ತು ರಾಜಕುಮಾರ ಮದುವೆಯಾಗಿ ನೆಮ್ಮದಿಯಿಂದ ರಾಜ್ಯಭಾರ ನಡೆಸತೊಡಗಿದರು.

* * *

ಮೇಲಿನ ಫೇರಿ ಕತೆ ಪಾಶ್ಚಿಮಾತ್ಯ ದೇಶಗಳಲ್ಲಿ–ಮುಖ್ಯವಾಗಿ ಇಂಗ್ಲೆಂಡ್ ಮತ್ತು ಫ್ರಾನ್ಸ್‌ನಲ್ಲಿ–ಸುಮಾರು ಇನ್ನೂರು ವರ್ಷದಿಂದ ಜನಪ್ರಿಯವಾಗಿದೆ. 'ಬ್ಯೂಟಿ ಅಂಡ್ ದಿ ಬೀಸ್ಟ್' ಎಂಬ ಹೆಸರಿನ ಈ ಕತೆ 'ಸಿಂಡರೆಲಾ' ಕತೆಗಿಂತ ಅರ್ಥಪೂರ್ಣವಾಗಿದ್ದು ಹೆಚ್ಚು ಸಂಕೀರ್ಣವೂ, ವಾಸ್ತವತೆಗೆ ಹತ್ತಿರವೂ ಆಗಿದೆ. ನಿಜವಾದ ಪ್ರೇಮದ ಘಟ್ಟಗಳನ್ನು, ಗುಣಗಳನ್ನು ಗುರುತಿಸುವ ಈ ಕತೆಯನ್ನು ನಮ್ಮ ಓದುಗರು ಗಮನಿಸಬೇಕು ಎನ್ನಿಸಿ ಇದನ್ನು ಸರಳವಾಗಿ, ಅಲ್ಲಲ್ಲಿ ಸಂಗ್ರಹಿಸಿ ಹೇಳಲು ಯತ್ನಿಸಿದ್ದೇನೆ.

# ಅನುಬಂಧ–೧

## ತುಮಕೂರು ವಿಶ್ವವಿದ್ಯಾನಿಲಯ

## ಮಾದರಿ ಪ್ರಶ್ನೆ ಪತ್ರಿಕೆ ಸ್ವರೂಪ

**ಬಿ.ಎ. ಐದನೆಯ ಸೆಮಿಸ್ಟರ್ ಸಿ.ಬಿ.ಸಿ.ಎಸ್. ಐಚ್ಛಿಕ ಕನ್ನಡ ಭಾಷಾ ಪತ್ಯ**

## ಸಾಹಿತ್ಯ ಸೌರಭ–೫
## ಪತ್ರಿಕೆ–೫
## ಕಾದಂಬರಿ: ವೈಶಾಖ, ಆಯ್ದ ಸಣ್ಣಕತೆಗಳು ಮತ್ತು ಜೀವನಚರಿತ್ರೆ: ಲೋಹಿಯಾ

ಸಮಯ: ೩ ಗಂಟೆಗಳು  ಅಂಕಗಳು: ೯೦

## ಭಾಗ–೧ ಕಾದಂಬರಿ–ವೈಶಾಖ

೧) ಅ. ಒಂದು ಭಾಗದ ಮಹತ್ವವನ್ನು ವಿವರಿಸಿ. ೧ **x** ೬=೬

೧.

೨ .

ಆ. ಮೂರನ್ನು ಸಂದರ್ಭ ಸಹಿತ ವಿವರಿಸಿ ೩ **x** ೩=೯

೧.

೨.

೩.

೪.

ಇ. ಎರಡಕ್ಕೆ ಟಿಪ್ಪಣಿ ಬರೆಯಿರಿ ೨ **x** ೫=೧೦

೧.

೨.

೩.

೨. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ ೧ **x** ೧೦=೧೦

೧.

೨.

೩.

## ಭಾಗ–೨: ಆಯ್ದ ಸಣ್ಣಕತೆಗಳು

೩. ಅ) ಒಂದು ವಾಕ್ಯದಲ್ಲಿ ಉತ್ತರಿಸಿ ೧ x ೫=೫

೧.
೨.
೩.
೪.
೫.

ಆ) ಎರಡಕ್ಕೆ ಟಿಪ್ಪಣಿ ಬರೆಯಿರಿ ೨ x ೫=೧೦

೧.
೨.
೩.
೪.

ಇ) ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ ೨ x ೧೦=೨೦

೧.
೨.
೩.
೪.

## ಭಾಗ–೩: ಜೀವನಚರಿತ್ರೆ–ಲೋಹಿಯಾ

೪. ಅ) ಒಂದು ವಾಕ್ಯದಲ್ಲಿ ಉತ್ತರಿಸಿ ೧ x ೫=೫

೧.
೨.
೩.
೪.
೫.

ಅ) ಒಂದಕ್ಕೆ ಟಿಪ್ಪಣಿ ಬರೆಯಿರಿ ೧ x ೫=೦೫

೧.
೨.
೩.
೪.

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ ೧ x ೧೦=೧೦

೧.
೨.

# ಅನುಬಂಧ – ೨

## ಬಿ.ಎ. ಐದನೆಯ ಸೆಮಿಸ್ಟರ್ ಐಚ್ಛಿಕ ಕನ್ನಡ ಭಾಷಾ ಪತ್ಯ

## ಸಾಹಿತ್ಯ ಸೌರಭ–೫

## ಪತ್ರಿಕೆ–೬
## ಕಾದಂಬರಿ: ವೈಶಾಖ, ಆಯ್ದ ಸಣ್ಣಕತೆಗಳು ಮತ್ತು ಜೀವನಚರಿತ್ರೆ: ಲೋಹಿಯಾ
## ಪತ್ಯ ಬೋಧನಾ ಅವಧಿ, ಹಾಗೂ ಅಂಕಗಳು

| | | | |
|---|---|---|---|
| ೧. | ಭಾಗ–೧ ಕಾದಂಬರಿ: | | |
| | ವೈಶಾಖ –ಚದುರಂಗ | ೩೦ ಗಂಟೆಗಳು | ಅಂಕಗಳು–೩೫ |
| ೨. | ಭಾಗ–೨ | | |
| | ಆಯ್ದ ಸಣ್ಣಕತೆಗಳು | ೩೦ ಗಂಟೆಗಳು | ಅಂಕಗಳು–೩೫ |
| ೨. | ಭಾಗ–೩ | | |
| | ಜೀವನಚರಿತ್ರೆ | ೧೫ ಗಂಟೆಗಳು | ಅಂಕಗಳು–೨೦ |
| | ಆಂತರಿಕ ಮೌಲ್ಯಮಾಪನ | | ಅಂಕಗಳು–೧೦ |
| | ಪತ್ರಿಕೆಗೆ ನಿಗದಿಯಾದ ಒಟ್ಟು ಅಂಕಗಳು | | ೧೦೦ |
| | ಪರೀಕ್ಷಾ ಅವಧಿ – ೩ ಗಂಟೆಗಳು | | |

## ಅನುಬಂಧ – ೩

# ಪರಾಮರ್ಶನ ಗ್ರಂಥಗಳು


೧. ಕನ್ನಡ ಕಥನ ಸಾಹಿತ್ಯ: ಕಾದಂಬರಿ –ಜಿ.ಎಸ್. ಆಮೂರ

೨. ಕನ್ನಡ ಕಥನ ಸಾಹಿತ್ಯ: ಸಣ್ಣ ಕತೆಗಳು –ಜಿ.ಎಸ್. ಆಮೂರ

೩. ಶತಮಾನದ ಸಣ್ಣ ಕತೆಗಳು – ಎಸ್. ದಿವಾಕರ್

೪. ಕನ್ನಡದ ಸಣ್ಣ ಕತೆಗಳು – ಜಿ. ಎಚ್. ನಾಯಕ್

೫. ಐದು ದಶಕದ ಕತೆಗಳು – ಯು. ಆರ್. ಅನಂತಮೂರ್ತಿ

೬. ಕನ್ನಡ ಕಾದಂಬರಿ ಬೆಳೆದು ಬಂದ ರೀತಿ – ಶಾಂತಿನಾಥ ದೇಸಾಯಿ

೭. ಕನ್ನಡ ಕಾದಂಬರಿ ಬೆಳವಣಿಗೆ – ಜಿ. ಎಸ್. ಆಮೂರ

೮. ಕಾದಂಬರಿ: ವಸ್ತು ಮತ್ತು ತಂತ್ರ – ಡಾ. ಗಿರಡ್ಡಿ ಗೋವಿಂದರಾಜು

೯. ರಾಮಮನೋಹರ ಲೋಹಿಯಾ ಬರಹಗಳು–ಸಂಪುಟಗಳು
ಸಂ.– ಡಾ. ನಟರಾಜ್ ಹುಳಿಯಾರ್ ಮತ್ತು ಕಾಳೇಗೌಡ ನಾಗವಾರ

೧೦. Wheel of History - Ram Manohar Lohiya